ಬುಧವಾರ, ಜುಲೈ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 210 | ಪುಟ 16

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

2.5 ಕೆ.ಜಿ ಚಿನ್ನ ಕಾಣಿಕೆ

ಚೆನ್ನೈನ ಸುದರ್ಶನ ಎಂಟರ್‌ಪ್ರೈಸಸ್ ಕಂಪನಿಯು ತಿರುಪತಿಯ ವೆಂಕಟೇಶ್ವರ ಸ್ವಾಮಿ ದೇಗುಲಕ್ಕೆ ₹2.4 ಕೋಟಿ ಮೌಲ್ಯದ 2.5 ಕೆ.ಜಿ. ತೂಕದ ಚಿನ್ನದ ಶಂಖ ಮತ್ತು ಚಕ್ರವನ್ನು ಕಾಣಿಕೆ ನೀಡಿದೆ



ಸದಸ್ಯತ್ವ ಅಭಿಯಾನ

ತಮಿಳಗ ವೆಟ್ರಿ ಕಳಗಂ ಮುಖ್ಯಸ್ಥ ವಿಜಯ್ ಅವರು ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನವನ್ನು ಬುಧವಾರ ಉದ್ಘಾಟಿಸಲಿದ್ದಾರೆ



ಸೆನ್ಸೆಕ್ಸ್	ನಿಫ್ಟಿ	$/₹	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
81,337	24,821	86.91	₹1,00,100 (ಬೆಂಗಳೂರು)	₹1,17,100 (ಬೆಂಗಳೂರು)

ಪಹಲ್ಗಾಮ್ ಉಗ್ರರ ಹತ್ಯೆ: ಶಾ

‘ದಾಳಿ ನಡೆಸಿದ್ದವರು ಇದೇ ಉಗ್ರರು ಬ್ಯಾಲಿಸ್ಟಿಕ್ ವರದಿಯಿಂದ ದೃಢ’

ಪ್ರಜಾವಾಣಿ ವಾರ್ತೆ



ನವದೆಹಲಿ: ಪಹಲ್ಗಾಮ್‌ನಲ್ಲಿ ಅಮಾಯಕ 26 ಪ್ರವಾಸಿಗರನ್ನು ನಿರ್ದಯವಾಗಿ ಕೊಂದ ಲಷ್ಕರ್‌–ಎ–ತಯಬಾ (ಎಲ್‌ಇಟಿ) ಸಂಘಟನೆಯ ಮೂವರು ‘ಎ’ ವರ್ಗೀಕೃತ ಉಗ್ರರನ್ನು ‘ಆಪರೇಷನ್ ಮಹಾದೇವ’ದ ಮೂಲಕ ಹತ್ಯೆ ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಮಂಗಳವಾರ ಪ್ರಕಟಿಸಿದರು.

‘ಆಪರೇಷನ್ ಸಿಂಧೂರ’ ಕುರಿತ ವಿಶೇಷ ಚರ್ಚೆಯಲ್ಲಿ ಮಧ್ಯಪ್ರವೇಶಿಸಿದ ಅವರು, ‘ಹತರಾದ ಉಗ್ರರನ್ನು ಸುಲೇಮಾನ್ ಅಲಿಯಾಸ್ ಫೈಜಲ್, ಅಫ್ಘಾನಿ ಮತ್ತು ಜಿಬ್ರಾನ್ ಎಂದು ಗುರುತಿಸಲಾಗಿದೆ. ಶ್ರೀನಗರ ಬಳಿ ಸೇನೆ ಸಿಆರ್‌ಪಿಎಫ್ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಅವರನ್ನು ಹತ್ಯೆ ಮಾಡಲಾಗಿದೆ. ಪಹಲ್ಗಾಮ್ ಹತ್ಯಾಕಾಂಡಕ್ಕೆ ಬಳಸಲಾಗಿದ್ದ ಎಂ–9 ಮತ್ತು ಎರಡು ಎಕೆ-47 ರೈಫಲ್‌ಗಳನ್ನು ಅವರಿಂದ ವಶಪಡಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

ಇಬ್ಬರು ಉಗ್ರರ ಬಳಿಯಿದ್ದ ಪಾಕಿಸ್ತಾನದ ಮತದಾರರ ಗುರುತಿನ ಚೀಟಿ ಮತ್ತು ಪಾಕಿಸ್ತಾನದಲ್ಲಿಯೇ ತಯಾರಿಸಿದ ಚಾಕೊಲೇಟ್‌ಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿವೆ ಎಂದು ಶಾ ಬಹಿರಂಗಪಡಿಸಿದರು. ಪಹಲ್ಗಾಮ್ ದಾಳಿಯ ನಂತರ ರಾಷ್ಟ್ರೀಯ ತನಿಖಾ ದಳವು 1055 ಸಾಕ್ಷಿಗಳನ್ನು ವಿಚಾರಣೆ ನಡೆಸಿದೆ ಎಂದು ಅವರು ಹೇಳಿದರು.

ಸುಲೇಮಾನ್ ಎಲ್‌ಇಟಿಯ ಕಮಾಂಡರ್ ಆಗಿದ್ದರೆ, ಅಫ್ಘಾನಿ ಮತ್ತು ಜಿಬ್ರಾನ್ ‘ಎ’ ವರ್ಗೀಕೃತ ಉಗ್ರರು ಎಂದು ಶಾ ಹೇಳಿದರು. ‘ಬೈಸರನ್ ಕಣಿವೆಯಲ್ಲಿ ನಮ್ಮ ನಾಗರಿಕರನ್ನು ಕೊಂದ ಈ ಮೂವರು ಉಗ್ರರನ್ನು ನಿರ್ನಾಮ ಮಾಡಲಾಗಿದೆ’ ಎಂದು ಅವರು ಹೇಳಿದರು. ಈ ವೇಳೆ, ಬಿಜೆಪಿ ಸಂಸದರು ‘ಭಾರತ್ ಮಾತಾ ಕೀ ಜೈ’ ಘೋಷಣೆ ಕೂಗಿದರು.

ಪ್ರವಾಸಿಗರ ಹತ್ಯೆಯಾದ ದಿನವೇ ‘ಆಪರೇಷನ್ ಮಹಾದೇವ’ ಕಾರ್ಯಾಚರಣೆ ಆರಂಭವಾಯಿತು. ಉಗ್ರರು ಪಾಕಿಸ್ತಾನಕ್ಕೆ ಪರಾರಿಯಾಗದಂತೆ ಕಣ್ಗಾವಲು ಇಡಲು ನಿರ್ದೇಶನ ನೀಡಲಾಯಿತು ಎಂದರು.

▶ 9

ಟ್ರಂಪ್ ಸುಳ್ಳುಗಾರನೆಂದು ಮೋದಿ ಹೇಳಲಿ: ರಾಹುಲ್

ಯಾರೂ ಮಧ್ಯಸ್ಥಿಕೆ ವಹಿಸಿರಲಿಲ್ಲ: ಮೋದಿ



‘ಆಪರೇಷನ್ ಸಿಂಧೂರ ಕಾರ್ಯಾಚರಣೆ ಸಂದರ್ಭದಲ್ಲಿ ಭಾರತ ಹಾಗೂ ಪಾಕ್ ನಡುವೆ ಕದನ ವಿರಾಮಕ್ಕೆ ವಿಶ್ವದ ಯಾವುದೇ ನಾಯಕ ಮಧ್ಯಸ್ಥಿಕೆ ವಹಿಸಿರಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟಪಡಿಸಿದರು.

ವಿಶೇಷ ಚರ್ಚೆಯಲ್ಲಿ ಪ್ರತಿಕ್ರಿಯಿಸಿದ ಅವರು, ‘ದೇಶಕ್ಕೆ ಇಡೀ ವಿಶ್ವದಿಂದ ಬೆಂಬಲ ಸಿಕ್ಕಿದ್ದರೂ, ದೇಶದ ಸೈನಿಕರ ಶೌರ್ಯವನ್ನು ಕಾಂಗ್ರೆಸ್ ಬೆಂಬಲಿಸಲಿಲ್ಲ’ ಎಂದು ವಿಷಾದಿಸಿದರು.

‘ಭಾರತದಿಂದ ದಾಳಿಗೊಳಗಾದ ಪಾಕಿಸ್ತಾನಿ ವಾಯುನೆಲೆಗಳು ಇನ್ನೂ ಐಸಿಯುನಲ್ಲಿವೆ ಮತ್ತು ಏಪ್ರಿಲ್ 22 ರ ಭಯೋತ್ಪಾದಕ ದಾಳಿಯ ಸಂಚುಕೋರರು ಇನ್ನೂ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದಾರೆ’ ಎಂದು ಹೇಳಿದರು.



‘ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಂದಿರಾ ಗಾಂಧಿಯವರ ಅರ್ಧದಷ್ಟು ಧೈರ್ಯವಿದ್ದರೆ, ನಾವು ಯಾವುದೇ ವಿಮಾನ ಕಳೆದುಕೊಂಡಿಲ್ಲ ಮತ್ತು ಕದನ ವಿರಾಮ ಘೋಷಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಾರಣರಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸವಾಲು ಎಸೆದರು.

ಲೋಕಸಭೆಯಲ್ಲಿ ‘ಆಪರೇಷನ್ ಸಿಂಧೂರ’ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಭಾರತ-ಪಾಕ್ ನಡುವಿನ ಕದನ ವಿರಾಮಕ್ಕೆ ನಾನೇ ಕಾರಣ ಎಂದು ಟ್ರಂಪ್ 29 ಸಲ ಹೇಳಿದ್ದಾರೆ. ಅವರು ಸುಳ್ಳು ಹೇಳುತ್ತಿದ್ದಾರೆ ಎಂಬುದನ್ನು ಪ್ರಧಾನಿಯವರು ಲೋಕಸಭೆಯಲ್ಲಿ ಹೇಳಬೇಕು’ ಎಂದು ಒತ್ತಾಯಿಸಿದರು.

‘ನಮ್ಮ ರಾಜಕೀಯ ನಾಯಕತ್ವವು ಮಿಲಿಟರಿ ಗುರಿಗಳನ್ನು ನಿರ್ಬಂಧಿಸಿದ್ದರಿಂದ ಅದು ವಿಮಾನಗಳನ್ನು ಕಳೆದುಕೊಂಡಿತು. ಹೋರಾಟದ ಮಧ್ಯದಲ್ಲಿಯೇ ನೀವು ವಾಯುಪಡೆಯ ಕೈಗಳನ್ನು ಕಟ್ಟಿಹಾಕಿದ್ದೀರಿ’ ಎಂದು ವಾಗ್ದಾಳಿ ನಡೆಸಿದರು.

‘ನೀವು ಯಾವುದೇ ತಪ್ಪುಗಳನ್ನು ಮಾಡಿಲ್ಲ ಎಂದು ಸಿಡಿಎಸ್ ಅನಿಲ್ ಚೌಹಾಣ್ ಅವರಿಗೆ ಹೇಳಬಯಸುತ್ತೇನೆ. ಮಿಲಿಟರಿಯ ಕೈಗಳನ್ನು ಕಟ್ಟಿ ಹಾಕಿದ್ದು ರಾಜಕೀಯ ನಾಯಕತ್ವ. ಪ್ರಧಾನಿ ಅವರ ವರ್ಚಸ್ಸು ರಕ್ಷಿಸುವುದೇ ಇಡೀ ಕಾರ್ಯಾಚರಣೆಯ ಗುರಿಯಾಗಿತ್ತು. ಪ್ರಧಾನಿಯವರು ತಮ್ಮ ವರ್ಚಸ್ಸನ್ನು ರಕ್ಷಿಸಲು ಸಶಸ್ತ್ರ ಪಡೆಗಳನ್ನು ಬಳಸುವುದು ದೇಶಕ್ಕೆ ಅಪಾಯಕಾರಿ, ರಾಷ್ಟ್ರೀಯ ಹಿತಾಸಕ್ತಿಗಾಗಿ ಪಡೆಗಳನ್ನು ಬಳಸಬೇಕು’ ಎಂದು ಅವರು ಹೇಳಿದರು.

‘ಸಿಂಧೂರ ಕಾರ್ಯಾಚರಣೆ ಬೆಳಗಿನ ಜಾವ 1.05ಕ್ಕೆ ಆರಂಭವಾಗಿ 22 ನಿಮಿಷ ನಡೆಯಿತು. 1.35ರ ಹೊತ್ತಿಗೆ ಭಾರತವು ಪಾಕಿಸ್ತಾನಕ್ಕೆ ಕರೆ ಮಾಡಿ ನಾವು ಮಿಲಿಟರಿಯೇತರ ನೆಲೆಗಳನ್ನು ಹೊಡೆದಿದ್ದೇವೆ ಹಾಗೂ ಪರಿಸ್ಥಿತಿ ಉಲ್ಬಣಗೊಳ್ಳಲು ಬಯಸುವುದಿಲ್ಲ ಎಂದು ಹೇಳಿದ್ದೇಕೆ? 30 ನಿಮಿಷಗಳಲ್ಲೇ ಶರಣಾಗುವ ಅಗತ್ಯ ಏನಿತ್ತು. ನೀವು ಕೇವಲ ದಾಳಿ ಮಾಡಲಿಲ್ಲ, ನಿಮ್ಮ ಮಿತಿಗಳನ್ನೂ ತೋರಿಸಿದ್ದೀರಿ’ ಎಂದು ಅವರು ಟೀಕಾಪ್ರಹಾರ ನಡೆಸಿದರು.

▶ 9

ಬೀದಿನಾಯಿಗಳ ದಾಳಿ: ವೃದ್ಧ ಸಾವು

ಬೆಂಗಳೂರು: ಬೀದಿನಾಯಿಗಳ ದಾಳಿಗೆ ವೃದ್ಧರೊಬ್ಬರು ಮೃತಪಟ್ಟಿರುವ ಘಟನೆ ಕೊಡಿಗೆಹಳ್ಳಿ ಠಾಣಾ ವ್ಯಾಪ್ತಿಯ ಟೆಲಿಕಾಂ ಲೇಔಟ್‌ನಲ್ಲಿ ಸೋಮವಾರ ತಡರಾತ್ರಿ ನಡೆದಿದೆ.

ವಿವರ ▶ 4

ಇಇ ಬಳಿ 17 ನಿವೇಶನ ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 5 ಅಧಿಕಾರಿಗಳ ಮನೆಗಳ ಮೇಲೆ ‘ಲೋಕಾ’ ದಾಳಿ
- ₹24.46 ಕೋಟಿ ಮೌಲ್ಯದ ಆಸ್ತಿ ಪತ್ತೆ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಹಾಸನ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಆರ್.ಜಯಣ್ಣ ಮತ್ತು ಕುಟುಂಬದವರ ಹೆಸರಿನಲ್ಲಿ ಒಟ್ಟು 17 ನಿವೇಶನ ಮತ್ತು 8 ವಾಸದ ಮನೆಗಳು ಇರುವುದನ್ನು ಲೋಕಾಯುಕ್ತ ಪೊಲೀಸರು ಪತ್ತೆ ಮಾಡಿದ್ದಾರೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದಲ್ಲಿ ವಿವಿಧ ಇಲಾಖೆಗಳ ಐವರು ಅಧಿಕಾರಿಗಳ ಮನೆಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದ್ದು, ಒಟ್ಟು ₹24.46 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿದ್ದಾರೆ.

ರಾಜ್ಯದ ವಿವಿಧ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ದೂರುಗಳ ಆಧಾರದ ಮೇಲೆ ಕಾರ್ಯಾಚರಣೆ ರೂಪಿಸಲಾಗಿತ್ತು. ಐವರು ಅಧಿಕಾರಿಗಳಿಗೆ ಸೇರಿದ ಒಟ್ಟು 25 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧ ದಾಳಿ ನಡೆಸಲಾಯಿತು ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಆರ್.ಜಯಣ್ಣ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಒಟ್ಟು ₹6.28 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ತೋಟಗಾರಿಕೆ ವಿಭಾಗದ ಹಿರಿಯ ಸಹಾಯಕ ನಿರ್ದೇಶಕ ಕೆ.ಓಂಪ್ರಕಾಶ್ ಮತ್ತು ಕುಟುಂಬದವರಿಗೆ ಸೇರಿದ ₹6.26 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.



ಬಿಬಿಎಂಪಿಯ ತೆರಿಗೆ ಮೌಲ್ಯಮಾಪಕ ಎನ್.ವೆಂಕಟೇಶ್ ಅವರ ಬಂಗಲೆ

ಐವರು ಅಧಿಕಾರಿಗಳಿಗೆ ಸೇರಿದ ಸ್ಥಳಗಳಲ್ಲಿ ನಡೆಸಿದ ದಾಳಿಯ ವೇಳೆ ಒಟ್ಟು ₹20.33 ಕೋಟಿ ಮೌಲ್ಯದ ಸ್ಥಿರಾಸ್ತಿ, ₹97 ಲಕ್ಷ ನಗದು, ₹1.58 ಕೋಟಿ ಮೌಲ್ಯದ ಚಿನ್ನಾಭರಣ, ₹1 ಕೋಟಿ ಮೌಲ್ಯದ ವಾಹನಗಳು, ₹1.42 ಕೋಟಿ ಮೌಲ್ಯದ ಗೃಹಬಳಕೆ ವಸ್ತುಗಳು, ಹೂಡಿಕೆ ಪತ್ರಗಳು ಮತ್ತು ಬ್ಯಾಂಕ್ ಠೇವಣಿ ಪತ್ತೆಯಾಗಿವೆ ಎಂದು ಲೋಕಾಯುಕ್ತವು ತಿಳಿಸಿದೆ.

ಅಧಿಕಾರಿಗಳ ಆಸ್ತಿ ವಿವರ ▶ 12

ಕೇಂದ್ರ ಸೇವೆಗೆ ಅರ್ಹತಾ ಪಟ್ಟಿಯಲ್ಲಿ ಪ್ರಣಬ್ ಮೊಹಾಂತಿ

ಬೆಂಗಳೂರು: ರಾಜ್ಯದ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣಬ್ ಮೊಹಾಂತಿ ಅವರು ಕೇಂದ್ರ ಸೇವೆಗೆ ಅರ್ಹತೆ ಪಡೆದ ಡಿಜಿಪಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ತನಿಖೆಗೆ ರಚಿಸಿರುವ ಎಸ್‌ಐಟಿಯನ್ನು ಪ್ರಣಬ್ ಮೊಹಾಂತಿ ಅವರು ಮುನ್ನಡೆಸುತ್ತಿದ್ದಾರೆ.

ಮತ ಕಳ್ಳತನ: ಆ. 4ಕ್ಕೆ ರಾಹುಲ್ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ‘ಮತ ಕಳ್ಳತನ’ ನಡೆದಿದೆ ಎಂದು ಆರೋಪ ಮಾಡಿ, ಚುನಾವಣಾ ಆಯೋಗದ ವಿರುದ್ಧ ತೊಡೆತಟ್ಟಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಆಗಸ್ಟ್ 4ರಂದು ಮಹದೇವಪುರ ವಿಧಾನಸಭಾ ಕ್ಷೇತ್ರದಿಂದ ಶೇಷಾದ್ರಿ ರಸ್ತೆಯಲ್ಲಿರುವ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯವರೆಗೆ ಪಾದಯಾತ್ರೆ ನಡೆಸಲು ನಿರ್ಧರಿಸಿದ್ದಾರೆ.

‘ಕರ್ನಾಟಕದ ಲೋಕಸಭಾ ಕ್ಷೇತ್ರವೊಂದರಲ್ಲಿ ದೊಡ್ಡ ಪ್ರಮಾಣದಲ್ಲಿ ಚುನಾವಣಾ ಅಕ್ರಮ ನಡೆದಿದೆ. ಶೀಘ್ರದಲ್ಲೇ ಈ ಭಯಂಕರ ಮತ ಕಳ್ಳತನದ ‘ಕಾರ್ಯ ವಿಧಾನ’ವನ್ನು ಯಥಾವತ್ತಾಗಿ ಚುನಾವಣಾ ಆಯೋಗ ಮತ್ತು ಜನರ ಮುಂದಿಡುತ್ತೇವೆ’ ಎಂದು ಇತ್ತೀಚೆಗೆ ರಾಹುಲ್ ಗುಡುಗಿದ್ದರು. ಇದೇ ವಿಷಯವನ್ನು ಮುಂದಿಟ್ಟು ಇಡೀ ರಾಷ್ಟ್ರದ ಗಮನಸೆಳೆಯಲು ಕರ್ನಾಟಕದಿಂದಲೇ ಬೃಹತ್ ಪ್ರತಿಭಟನೆ ನಡೆಸಲು ಅವರು ಮುಂದಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ನಡೆಯಲಿರುವ ಈ ಪಾದಯಾತ್ರೆಯಲ್ಲಿ ರಾಹುಲ್ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಶಾಸಕರು, ರಾಜ್ಯ ಕಾಂಗ್ರೆಸ್ ನಾಯಕರು ಹೆಜ್ಜೆ ಹಾಕಲಿದ್ದಾರೆ. ಪಾದಯಾತ್ರೆಯ ತಯಾರಿಗಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬುಧವಾರ ಕೆಪಿಸಿಸಿ ಕಚೇರಿಯಲ್ಲಿ ಪೂರ್ವ ಭಾವಿ ಸಿದ್ಧತಾ ಸಭೆ ನಡೆಸಲಿದ್ದಾರೆ.

ಬೆಂಗಳೂರು ನಗರದ ಐದು ಜಿಲ್ಲಾ ಘಟಕಗಳ ಪ್ರಮುಖರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ದಕ್ಷಿಣ (ರಾಮನಗರ), ಮಂಡ್ಯ ಜಿಲ್ಲೆಯ ಮುಖಂಡರನ್ನು ಸಭೆಗೆ ಆಹ್ವಾನಿಸಲಾಗಿದೆ. ಸಚಿವರು, ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು, ಪರಾಜಿತ ಅಭ್ಯರ್ಥಿಗಳು, ಕೆಪಿಸಿಸಿ ಪದಾಧಿಕಾರಿಗಳು, ಡಿಸಿಸಿ ಅಧ್ಯಕ್ಷರು, ಮುಂಚೂಣಿ ಘಟಕ, ಸೆಲ್, ವಿಭಾಗಗಳ ಅಧ್ಯಕ್ಷರೂ ಸಭೆಯಲ್ಲಿ ಭಾಗ ವಹಿಸಲಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರಿಗಿಲ್ಲ ಚುನಾವಣಾ ಕರ್ತವ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ಕೆಲಸಗಳಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ವಿನಾಯಿತಿ ನೀಡಲು ತೀರ್ಮಾನಿಸಲಾಗಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

ಆ ಮೂಲಕ, ಅಂಗನವಾಡಿ ಕಾರ್ಯಕರ್ತೆಯರ ಹಲವು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ.

‘ಅಂಗನವಾಡಿ ಕೇಂದ್ರಗಳಲ್ಲಿ ಅಕ್ಟೋಬರ್ ತಿಂಗಳಿನಿಂದ ಪೂರ್ವ ಪ್ರಾಥಮಿಕ ಶಿಕ್ಷಣ (ಎಲ್‌ಕೆಜಿ, ಯುಕೆಜಿ) ತರಗತಿಗಳು ಆರಂಭಗೊಳ್ಳಲಿದೆ. ಕಾರ್ಯಕರ್ತೆಯರ ಒತ್ತಡವನ್ನು ಇಳಿಸುವ ಸಲುವಾಗಿ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಅವರು ಹೇಳಿದರು.

‘ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಜೊತೆ ಈ ವಿಚಾರ ಚರ್ಚೆ ನಡೆಸಿ ತೀರ್ಮಾನ ತೆಗೆದುಕೈಗೊಳ್ಳಲಾಗಿದೆ. ಸರ್ಕಾರ ಅಧಿಕೃತ ಆದೇಶ ಹೊರಡಿಸಬೇಕಾಗಿದೆ’ ಎಂದೂ ಅವರು ತಿಳಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಧರ್ಮಸ್ಥಳ: ಹೂತು ಹಾಕಲಾಗಿದೆ ಎನ್ನಲಾದ ಶವಗಳ ಶೋಧ ಕಾರ್ಯ ಶುರು

8 ಅಡಿ ಅಗೆದರೂ ಸಿಗದ ಕುರುಹು

• ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿವೆ ಎಂದು ಆರೋಪಿಸಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿ ಹೂತು ಹಾಕಲಾಗಿದೆ ಎನ್ನಲಾದ ಮೃತದೇಹಗಳ ಕುರುಹು ಪತ್ತೆಗೆ ನೆಲ ಅಗೆಯುವ ಕಾರ್ಯ ಮಂಗಳವಾರ ಆರಂಭವಾಯಿತು.

ಈ ಪ್ರಕರಣದ (ಸಂಖ್ಯೆ 39/2025) ಸಾಕ್ಷಿ ದೂರುದಾರ, ಶವಗಳನ್ನು ಹೂಳಲಾಗಿದೆ ಎಂದು 13 ಜಾಗಗಳನ್ನು ತೋರಿಸಿದ್ದರು. ಧರ್ಮಸ್ಥಳ ಸ್ನಾನಘಟ್ಟ ಬಳಿಯ ಕಾಡಿನ ಪಕ್ಕದಲ್ಲಿ ಆತ ತೋರಿಸಿದ್ದ ಮೊದಲ ಜಾಗದಲ್ಲಿ ಅಂದಾಜು 15 ಅಡಿ ಸುತ್ತಳತೆಯ ಜಾಗದಲ್ಲಿ ಸುಮಾರು 8 ಅಡಿ ಆಳಕ್ಕೆ ಅಗೆಯಲಾಯಿತು. ಮಧ್ಯಾಹ್ನ 12ರಿಂದ ಸಂಜೆ 6 ಗಂಟೆವರೆಗೆ ಅಗೆದರೂ ಮೃತದೇಹದ ಯಾವುದೇ ಕುರುಹು ಪತ್ತೆಯಾಗಲಿಲ್ಲ ಎಂದು ವಿಶೇಷ ತನಿಖಾ ತಂಡದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಸುಮಾರು 10 ಕಾರ್ಮಿಕರನ್ನು ಒಳಗೊಂಡ ತಂಡವು ಹಾರೆ, ಪಿಕಾಸಿ ಬಳಸಿ ಮಧ್ಯಾಹ್ನ 12 ಗಂಟೆ ಸುಮಾರಿಗೆ ಅಗೆಯುವ ಕಾರ್ಯ ಆರಂಭಿಸಿತು. ನೇತ್ರಾವತಿ ನದಿಯಿಂದ 10 ಮೀಟರ್ ದೂರದಲ್ಲಿರುವ ಈ ಜಾಗವನ್ನು ಅಗೆದಂತೆ ನೀರು ಜಿನುಗಲಾರಂಭಿಸಿತು. ಜೊತೆಗೆ ಬಿಟ್ಟು ಬಿಟ್ಟು ಧಾರಾಕಾರ ಮಳೆಯೂ ಸುರಿಯುತ್ತಿತ್ತು, ಇದರಿಂದ ಅಗೆಯುವಿಕೆಗೆ ಅಡಚಣೆಯುಂಟಾಯಿತು. ಎಸ್‌ಐಟಿ ಅಧಿಕಾರಿಗಳು ಸಣ್ಣ ಜೆಸಿಬಿ ಯಂತ್ರವನ್ನು ಸ್ಥಳಕ್ಕೆ ತರಿಸಿಕೊಂಡು ಅಗೆಯಿಸಿದರು. ಕೊನೆಗೆ ಶ್ವಾನದಳ ಕರೆತಂದು ಪರಿಶೀಲನೆ ನಡೆಸಿದರು. ಅಗೆಯುವ ಕಾರ್ಯವನ್ನು ಸಂಜೆ 6ರ ವೇಳೆಗೆ ಸ್ಥಗಿತಗೊಳಿಸಲಾಯಿತು.

ಗುಂಡಿಯನ್ನು ಮುಚ್ಚಲಾಯಿತು. ಇದಕ್ಕೂ ಮುನ್ನ ಸಾಕ್ಷಿ ದೂರುದಾರನ ವಕೀಲರ ತಂಡವನ್ನೂ ಸ್ಥಳಕ್ಕೆ ಕರೆಸಿಕೊಂಡು ಅಗೆಯುವ ಕಾರ್ಯ ನಿಲ್ಲಿಸಲು ಅವರ ಸಮ್ಮತಿಯನ್ನು ಪಡೆದುಕೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ.

▶ 8

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ

ಲಾರ್ವಾ ತಡೆಗೆ ಸ್ವಯಂಸೇವಕರು

ಕಳೆದ ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಡಿದ್ದ ಡೆಂಗಿ ಈ ವರ್ಷ ನಿಯಂತ್ರಣ

• ವರುಣ ಹೆಗಡೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಈಡಿಸ್ ಲಾರ್ವಾ ನಿರ್ಮೂಲನೆಗೆ ಸ್ವಯಂ ಸೇವಕರನ್ನು ನೇಮಿಸಿಕೊಳ್ಳಲಾಗಿದೆ. ಇದರಿಂದಾಗಿ ಕಳೆದ ವರ್ಷ ನಗರದ ಜನರನ್ನು ಕಾಡಿದ್ದ ಡೆಂಗಿ ಸಮಸ್ಯೆ ಈ ವರ್ಷದ ಮೊದಲಾರ್ಧದಲ್ಲಿ ನಿಯಂತ್ರಣದಲ್ಲಿದೆ.

ಕಳೆದ ವರ್ಷ ಮುಂಗಾರು ಅವಧಿಯಲ್ಲಿ ಬಿಸಿಲು–ಮಳೆಯ ವಾತಾವರಣದಿಂದಾಗಿ ರಾಜ್ಯದಲ್ಲಿ 32 ಸಾವಿರಕ್ಕೂ ಅಧಿಕ ಡೆಂಗಿ ಪ್ರಕರಣಗಳು ವರದಿಯಾಗಿದ್ದವು. ಈ ಪ್ರಕರಣಗಳಲ್ಲಿ ಅರ್ಧದಷ್ಟು ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ವರದಿಯಾಗಿದ್ದವು. ಇದರಿಂದಾಗಿ ಆಸ್ಪತ್ರೆಗಳಲ್ಲಿಯೂ ರೋಗಿಗಳ ಸಂಖ್ಯೆ ಹೆಚ್ಚಾಗಿತ್ತು.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ಒಂದು ಲಕ್ಷಕ್ಕೂ ಅಧಿಕ ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿ, 70 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿತ್ತು. ಈ ವರ್ಷ ಆರಂಭದಿಂದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರಿಂದ, ಉತ್ತಮ ಮಳೆಯಿಂದಾಗಿ ಕಳೆದ ವರ್ಷ ಈ ವೇಳೆಗೆ ಹೋಲಿಸಿದರೆ ಪ್ರಕರಣಗಳ ಸಂಖ್ಯೆ ಅರ್ಧಕ್ಕಿಂತ ಕಡಿಮೆ ವರದಿಯಾಗಿದೆ.

ಹಗಲಿನಲ್ಲಿ ಕಚ್ಚುವ ಈಡೀಸ್ ಈಜಿಪ್ಟಿ ಸೊಳ್ಳೆಗಳಿಂದ ಡೆಂಗಿ ಜ್ವರ ಹರಡುತ್ತದೆ. ಕಳೆದ ವರ್ಷ ಈ ವೇಳೆ ಬಿಬಿಎಂಪಿ ವ್ಯಾಪ್ತಿಯಲ್ಲಿ 7 ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದ್ದವು. ಈ ವರ್ಷ ಈವರೆಗೆ 7 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರಲ್ಲಿ, 5 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. 1,772 ಪ್ರಕರಣಗಳು ವರದಿಯಾಗಿವೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಪ್ರಕರಣಗಳ ಸಂಖ್ಯೆ ಶೇ 75ರಷ್ಟು ಇಳಿಕೆಯಾಗಿದೆ.

ಮೂಲದಲ್ಲೇ ಪತ್ತೆ: ಕಳೆದ ವರ್ಷ ಡೆಂಗಿ ಪ್ರಕರಣಗಳು ದಿಢೀರ್ ಏರಿಕೆಯಾದ ಪರಿಣಾಮ, ಇಲ್ಲಿನ ಕೆ.ಸಿ.ಜನರಲ್, ಸರ್.ಸಿ.ವಿ. ರಾಮನ್ ಸೇರಿ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಡೆಂಗಿ ಪೀಡಿತರ ಚಿಕಿತ್ಸೆಗೆ ತಲಾ 25 ಹಾಸಿಗೆಗಳನ್ನು ಮೀಸಲಿಡಲಾಗಿತ್ತು. ಈಡಿಸ್ ಲಾರ್ವಾ ಉತ್ಪತ್ತಿ ತಾಣಗಳನ್ನು ಮೂಲದಲ್ಲಿಯೇ ನಿರ್ಮೂಲನೆ ಮಾಡಲು ಈ ವರ್ಷ ಕ್ರಮಕೈಗೊಳ್ಳಲಾಗಿದ್ದು, ರೋಗ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಲು ಬಿಬಿಎಂಪಿ ವ್ಯಾಪ್ತಿಯಲ್ಲಿ 700 ಸ್ವಯಂ ಸೇವಕರು ಹಾಗೂ 240 ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ನೇಮಿಸಲಾಗಿದೆ.

> ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದ್ದವು. ಪ್ರಕರಣಗಳ ನಿಯಂತ್ರಣಕ್ಕೆ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಲಾಗಿದ್ದು, ಸ್ವಯಂ ಸೇವಕರನ್ನು ನೇಮಿಸಲಾಗಿದೆ
>
> **ದಿನೇಶ್ ಗುಂಡೂರಾವ್**
> ಆರೋಗ್ಯ ಸಚಿವ

ಸ್ವಚ್ಛತೆ ಕಾಯ್ದುಕೊಳ್ಳದಿದ್ದರೆ ದಂಡ

ಡೆಂಗಿ ಜ್ವರವನ್ನು ರಾಜ್ಯ ಸರ್ಕಾರ ಕಳೆದ ವರ್ಷ ಸಾಂಕ್ರಾಮಿಕ ಕಾಯಿಲೆ ಎಂದು ಘೋಷಿಸಿದೆ. ಸಾಂಕ್ರಾಮಿಕ ರೋಗಗಳ ಕಾಯ್ದೆ–2020ರ ಅಡಿಯಲ್ಲಿನ ನಿಯಮಗಳನ್ನು ತಿದ್ದುಪಡಿ ಮಾಡಿ, 'ಕರ್ನಾಟಕ ಸಾಂಕ್ರಾಮಿಕ ರೋಗಗಳು (ತಿದ್ದುಪಡಿ ನಿಯಮಗಳು) 2024' ಎಂಬ ಶೀರ್ಷಿಕೆಯಡಿ ಅಧಿಸೂಚನೆ ಹೊರಡಿಸಲಾಗಿದೆ. ಜಮೀನು, ನಿವೇಶನ, ಕಟ್ಟಡ, ನೀರಿನ ಟ್ಯಾಂಕ್, ಉದ್ಯಾನ, ಆಟದ ಮೈದಾನ ಸೇರಿ ಯಾವುದೇ ಸ್ಥಳದಲ್ಲಿ ಮಾಲೀಕರು ಅಥವಾ ಸಂಬಂಧಪಟ್ಟ ವ್ಯಕ್ತಿಗಳು ಡೆಂಗಿ ಹರಡುವ ಸೊಳ್ಳೆಗಳ ಲಾರ್ವಾ ಉತ್ಪತ್ತಿಯಾಗಲು ಅವಕಾಶ ಮಾಡಿಕೊಟ್ಟರೆ ₹400ರಿಂದ ₹2 ಸಾವಿರದವರೆಗೂ ದಂಡ ವಿಧಿಸಲಾಗುತ್ತದೆ.

ಅಂಕಿ ಅಂಶಗಳು

7,508 ಈ ವರ್ಷ ಗುರುತಿಸಲಾದ ಶಂಕಿತ ಡೆಂಗಿ ಪ್ರಕರಣಗಳು

5,362 ಡೆಂಗಿ ಪತ್ತೆ ಸಂಬಂಧ ರಕ್ತದ ಮಾದರಿ ಒದಗಿಸಿದವರು

ಬಿಬಿಎಂಪಿ ವ್ಯಾಪ್ತಿಯಲ್ಲಿ ವರ್ಷವಾರು ಡೆಂಗಿ ಪ್ರಕರಣ

ವರ್ಷ	ಪ್ರಕರಣಗಳು	ಮರಣ
2021	1,570	00
2022	2,313	00
2023	8,609	04
2024	15,282	03
2025	1,772	00

'ಡೆಂಗಿ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಪ್ರತಿ ಶುಕ್ರವಾರ ಡೆಂಗಿ ತಡೆಗಟ್ಟುವ ದಿನವನ್ನಾಗಿ ಆಚರಿಸಲಾಗುತ್ತಿದೆ. ನಿವೇಶನ, ಕಟ್ಟಡ, ನೀರಿನ ಟ್ಯಾಂಕ್, ಉದ್ಯಾನ, ಆಟದ ಮೈದಾನ ಸೇರಿ ವಿವಿಧೆಡೆ ಸೊಳ್ಳೆಗಳ ಸಂತಾನೋತ್ಪತ್ತಿ ತಡೆಗೆ ಜನರೂ ಕ್ರಮ ಕೈಗೊಳ್ಳಬೇಕು. ನೀರಿನ ಸಂಗ್ರಹದ ಪಾತ್ರೆಗಳು, ಸಂಪ್ ಮತ್ತು ಓವರ್‌ಹೆಡ್ ಟ್ಯಾಂಕ್‌ಗಳನ್ನು ಸುರಕ್ಷಿತವಾಗಿ ಮುಚ್ಚಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಮಳೆಗಾಲ ಮುಗಿಯುವ ತನಕ ಈ ಕ್ರಮ ಅನುಸರಿಸಬೇಕು' ಎಂದು ಆರೋಗ್ಯಾಧಿಕಾರಿಯೊಬ್ಬರು ತಿಳಿಸಿದರು.

ಕಸಾಪಗೆ ಅನುರಾಧ ನಾಮನಿರ್ದೇಶನ


ಅನುರಾಧ ಆನಂದ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಾರ್ಯಕಾರಿ ಸಮಿತಿಯ ಅಲ್ಪಸಂಖ್ಯಾತರ ಪ್ರತಿನಿಧಿಯಾಗಿ ಜೈನ ಸಮುದಾಯದ ಗುಡಿಬಂಡೆ ಅನುರಾಧ ಆನಂದ್ ಅವರನ್ನು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನಾಮನಿರ್ದೇಶನ ಮಾಡಿದ್ದಾರೆ.

ಬರಹಗಾರರಾಗಿರುವ ಅನುರಾಧ ಆನಂದ್ ಅವರು ಎರಡು ಬಾರಿ ಗುಡಿಬಂಡೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು.

ಬೆಂಗಳೂರು ವಿವಿ: ಹೊಸ ಸರ್ಟಿಫಿಕೇಟ್ ಕೋರ್ಸ್

ಬೆಂಗಳೂರು: ವಿದ್ಯಾರ್ಥಿಗಳ ಕೌಶಲವೃದ್ಧಿಗಾಗಿ ಬೆಂಗಳೂರು ವಿಶ್ವವಿದ್ಯಾಲಯವು ಉದ್ಯಮಶೀಲ, ಕೌಶಲ ಆಧಾರಿತ ವೃತ್ತಿಪರ ಸ್ವರೂಪದ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುತ್ತಿದೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೆಕ್ಯುರಿಟೀಸ್ ಮಾರ್ಕೆಟ್ಸ್ (ಎನ್‌ಐಎಸ್‌ಎಂ) ಮತ್ತು ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ಸಹಯೋಗದಲ್ಲಿ ಹೊಸ ಕೋರ್ಸ್‌ಗಳನ್ನು ಆರಂಭಿಸುತ್ತಿದೆ. ಉದ್ಯಮ ಮತ್ತು ಶೈಕ್ಷಣಿಕ ಕ್ಷೇತ್ರಗಳ ನಡುವೆ ಬಾಂಧವ್ಯ ಬೆಸೆಯುವುದು ಹಾಗೂ ವಿದ್ಯಾರ್ಥಿಗಳ ಉದ್ಯಮಶೀಲ ಕೌಶಲಗಳನ್ನು ವೃದ್ಧಿಸಿ ಉದ್ಯೋಗಾರ್ಹತೆ ಹೆಚ್ಚಿಸುವುದು ಹೊಸ ಕೋರ್ಸ್‌ಗಳ ಆರಂಭದ ಹಿಂದಿನ ಉದ್ದೇಶವಾಗಿದೆ.

ಈ ಕೋರ್ಸ್‌ಗಳು ಬಿ.ಕಾಂ, ಬಿಬಿಎ ಮತ್ತು ಇತರೆ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಅಡಿಯಲ್ಲಿ ಬರುವ ಎಲ್ಲಾ ಪದವಿ ಕಾರ್ಯಕ್ರಮಗಳ ಪಠ್ಯಕ್ರಮದ ಭಾಗವಾಗಿ 3, 4 ಮತ್ತು 5ನೇ ಸೆಮಿಸ್ಟರ್‌ಗಳಲ್ಲಿ ತಲಾ 1 ಕ್ರೆಡಿಟ್ ಹೊಂದಿರುವಂತೆ ಜಾರಿಗೆ ತರಲಾಗುತ್ತಿದೆ.

ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯದ ಎನ್‌ಐಎಸ್‌ಎಂ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಐಸಿಎಸ್‌ಐ ಸಂಸ್ಥೆಗಳೊಂದಿಗೆ ವಿಶ್ವವಿದ್ಯಾಲಯವು ಮಾಡಿಕೊಂಡಿರುವ ಒಡಂಬಡಿಕೆಗಳ ಅಡಿಯಲ್ಲಿ ಈ ಕೋರ್ಸ್‌ಗಳನ್ನು ರೂಪಿಸಲಾಗಿದೆ.

ಐಸಿಎಸ್‌ಐ ಕೋರ್ಸ್‌ಗಳು: 1. ಫೈನಾನ್ಷಿಯಲ್ ಅಕೌಂಟಿಂಗ್ ಆ್ಯಂಡ್ ಟ್ಯಾಕ್ಸೇಷನ್(ಎಫ್‌ಎ ಆ್ಯಂಡ್ ಟಿ), 2. ಡಿಜಿಟಲ್ ಮಾರ್ಕೆಟಿಂಗ್, 3. ಬ್ಯುಸಿನೆಸ್ ಅನಾಲಿಟಿಕ್ಸ್ ಆ್ಯಂಡ್ ಡೇಟಾ ವಿಶ್ಯುಯಲೈಸೇಷನ್, 4. ಎಂಟ್ರಪ್ರೆನೆರಿಯಲ್ ಸ್ಕಿಲ್ಸ್ ಆ್ಯಂಡ್ ಸ್ಟಾರ್ಟ್–ಅಪ್ ಮ್ಯಾನೇಜ್‌ಮೆಂಟ್, 5. ಟ್ಯಾಲಿ ಆ್ಯಂಡ್ ಅಕೌಂಟಿಂಗ್ ಸಾಫ್ಟ್‌ವೇರ್, 6. ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ ಪ್ರಾಕ್ಟೀಸಸ್, 7. ಬ್ಯುಸಿನೆಸ್ ಕಮ್ಯುನಿಕೇಷನ್ ಆ್ಯಂಡ್ ನೆಗೋಷಿಯೇಶನ್ ಸ್ಕಿಲ್ಸ್, 8. ಫೈನಾನ್ಷಿಯಲ್ ಮಾರ್ಕೆಟ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್

ಎನ್‌ಐಎಸ್‌ಎಂ ಕೋರ್ಸ್‌ಗಳು: ಫೈನಾನ್ಷಿಯಲ್ ಲಿಟ್ರಸಿ ಫಾರ್ ಭಾರತ್

ಸಂಯೋಜಿತ ವಿಧಾನದಲ್ಲಿ ಕಲಿಕೆ: ಈ ಕೋರ್ಸ್‌ಗಳನ್ನು ಡಿಜಿಟಲ್ ತಂತ್ರಜ್ಞಾನ, ತಜ್ಞರ ಉಪನ್ಯಾಸಗಳು ಮತ್ತು ಆನ್‌ಲೈನ್ ತರಗತಿಗಳ ಮೂಲಕ ಸಂಯೋಜಿತ ವಿಧಾನದಲ್ಲಿ ಕಲಿಸಲಾಗುತ್ತದೆ. ಯಶಸ್ವಿಯಾಗಿ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಎನ್‌ಐಎಸ್‌ಎಂ ಮತ್ತು ಐಸಿಎಸ್‌ಐ ಮಾನ್ಯತೆ ಪಡೆದ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಂ.ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೌಚಗುಂಡಿ: 'ರೊಬೊಟಿಕ್ ತಂತ್ರಜ್ಞಾನ'

ಬೆಂಗಳೂರು: ನಗರದಲ್ಲಿ ಶೌಚಗುಂಡಿ (ಮ್ಯಾನ್‌ಹೋಲ್) ಸ್ವಚ್ಛಗೊಳಿಸಲು ರೊಬೊಟಿಕ್ ತಂತ್ರಜ್ಞಾನ ಬಳಸಲು ಬೆಂಗಳೂರು ಜಲಮಂಡಳಿ ನಿರ್ಧರಿಸಿದೆ.

ಶೌಚಗುಂಡಿ ಸ್ವಚ್ಛಗೊಳಿಸುವ ಪ್ರಕ್ರಿಯೆಯಲ್ಲಿ ಸಾಧ್ಯವಾದಷ್ಟೂ ಮಾನವ ಹಸ್ತಕ್ಷೇಪ ಕಡಿಮೆ ಮಾಡಲು ಈ ಯಂತ್ರಗಳ ಬಳಕೆಗೆ ಮುಂದಾಗಿದೆ.

ರೊಬೊಟಿಕ್ ತಂತ್ರಜ್ಞಾನ ಅಳವಡಿಕೆಗೆ ಮಿನಿ ರೊಬೊಗಳನ್ನು ಖರೀದಿಸಬೇಕಾಗುತ್ತದೆ. ಇದು ಜಲಮಂಡಳಿಗೆ ತುಸು 'ಹೊರೆ'ಯಾಗುವ ಕಾರಣ, ರೊಬೊಟಿಕ್ ತಂತ್ರಜ್ಞಾನದ ಸೇವೆ ನೀಡುವ ಕಂಪನಿಗಳ ಮೊರೆ ಹೋಗಲು ತೀರ್ಮಾನಿಸಿದೆ. ಈ ಸಂಬಂಧ ಶೀಘ್ರದಲ್ಲೇ ಟೆಂಡರ್ ಕರೆಯುವ ನಿರೀಕ್ಷೆ ಇದೆ.

'ಈಗಾಗಲೇ ಕೆಲವು ನಗರಗಳಲ್ಲಿ ಶೌಚಗುಂಡಿಗಳನ್ನು ಸ್ವಚ್ಛಗೊಳಿಸಲು ಈ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ರೊಬೊಟಿಕ್ ಯಂತ್ರ ಖರೀದಿ ಜಲಮಂಡಳಿಗೆ ಆರ್ಥಿಕವಾಗಿ ಹೊರೆಯಾಗುತ್ತದೆ. ಹಾಗೆಯೇ, ಈ ಯಂತ್ರ ಬಳಕೆಗೆ ನಮ್ಮ ಸಿಬ್ಬಂದಿ ಇನ್ನೂ ತಯಾರಾಗಬೇಕಿದೆ. ಹೀಗಾಗಿ ರೊಬೊಟಿಕ್ ತಂತ್ರಜ್ಞಾನ ಸೇವೆ ನೀಡುವ ಕಂಪನಿಗಳ ಸೇವೆಯನ್ನು ಬಳಸಿಕೊಳ್ಳಲು ಯೋಚಿಸಿದ್ದೇವೆ' ಎಂದು ಜಲಮಂಡಳಿಯ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ 'ಪ್ರಜಾವಾಣಿ'ಗೆ ತಿಳಿಸಿದರು.

'ರೊಬೊಟಿಕ್ ಯಂತ್ರಗಳ ಬಳಕೆ ಸುರಕ್ಷಿತವಾಗಿರುವುದರ ಜೊತೆಗೆ, ಜೆಟ್ಟಿಂಗ್ ಯಂತ್ರಗಳು ಸ್ವಚ್ಛಗೊಳಿಸಲು ಸಾಧ್ಯವಾಗದ (ಕಿರಿದಾದ) ಜಾಗಗಳನ್ನೂ ಇವು ಸ್ವಚ್ಛಗೊಳಿಸುತ್ತವೆ. ರೊಬೊಟಿಕ್ ಯಂತ್ರಗಳನ್ನು 25 ಮೀಟರ್ ದೂರದಿಂದಲೇ ನಿರ್ವಹಣೆ ಮಾಡಬಹುದು' ಎಂದು ಮನೋಹರ್ ವಿವರಿಸಿದರು.

ಸದ್ಯ ಶೌಚಗುಂಡಿಗಳನ್ನು ಸ್ವಚ್ಛಗೊಳಿಸಲು 169 ಒಳಚರಂಡಿ ಜೆಟ್ಟಿಂಗ್ ಯಂತ್ರಗಳು ಮತ್ತು ಆರು ಸೂಪರ್ ಸಕ್ಕಿಂಗ್ ಯಂತ್ರಗಳನ್ನು ಜಲಮಂಡಳಿ ಬಳಸುತ್ತಿದೆ. ಇದಲ್ಲದೇ, 1,500 ಕಬ್ಬಿಣದ ಹಾಗೂ ಬಿಗಿಯಾದ ಮ್ಯಾನ್‌ಹೋಲ್ ಮುಚ್ಚಳಗಳನ್ನು (ಡಕ್ಟೈಲ್ ಐರನ್ ಪ್ರೆಷರ್) ಖರೀದಿಸಿದೆ. ಇದು ಮ್ಯಾನ್‌ಹೋಲ್‌ಗಳು ಭರ್ತಿಯಾಗಿ ರಸ್ತೆಗಳಲ್ಲಿ ಕೊಳಚೆ ನೀರು ಹರಿಯುವುದನ್ನು ತಡೆಯುತ್ತದೆ ಎಂದು ಜಲಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

'ಜಾಗತಿಕ ಸಂಬಂಧಗಳಿಗೆ ಬಲ'

ಬೆಂಗಳೂರು: 'ವಿದೇಶಿ ಭಾಷೆಗಳ ಅಧ್ಯಯನದಿಂದ ಅಂತರರಾಷ್ಟ್ರೀಯ ಸಂಬಂಧಗಳು ಬಲಗೊಳ್ಳುವುದರ ಜೊತೆಗೆ, ಜಾಗತಿಕ ವ್ಯಾಪಾರ ಹಾಗೂ ವ್ಯವಹಾರವೂ ಸುಗಮಗೊಳ್ಳುತ್ತದೆ' ಎಂದು ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ ಪ್ರತಿಪಾದಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ(ಬಿಸಿಯು) ಜಾಗತಿಕ ಭಾಷಾ ಕೇಂದ್ರದ 40ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ 'ವಿದೇಶಿ ಭಾಷಾ ಕಲಿಕೆಯಲ್ಲಿ ನವೀನ ಬೋಧನಾ ವಿಧಾನಗಳು' ಎಂಬ ವಿಷಯದ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಜಾಗತಿಕರಣದ ಯುಗದಲ್ಲಿ ಅಂತರಶಿಸ್ತೀಯ ಮತ್ತು ಬಹುಶಿಸ್ತೀಯ ಶಿಕ್ಷಣ ಕಲಿಕೆಯು ಅಗತ್ಯವಾಗಿದೆ' ಎಂದು ತಿಳಿಸಿದರು.

ಬಿಸಿಯು ವಿಶ್ರಾಂತ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಮಾತನಾಡಿ, 'ಸರ್ಕಾರಿ ವಿಶ್ವವಿದ್ಯಾಲಯದಲ್ಲಿ ವಿದೇಶಿ ಭಾಷಾ ಕೋರ್ಸ್‌ಗಳನ್ನು ಆರಂಭಿಸುವುದು ಸವಾಲಿನ ಕೆಲಸ. ಬಿಸಿಯು ಅದನ್ನು ಯಶಸ್ವಿಯಾಗಿ ಸಾಕಾರಗೊಳಿಸಿದೆ' ಎಂದು ಶ್ಲಾಘಿಸಿದರು.

'ಐಚ್ಛಿಕ ಇಂಗ್ಲಿಷ್, ಫ್ರೆಂಚ್ ಮತ್ತು ಪತ್ರಿಕೋದ್ಯಮ ವಿಷಯಗಳೊಂದಿಗೆ ಹೊಸ ಪದವಿ ಕೋರ್ಸ್ ಪ್ರಾರಂಭಿಸುತ್ತಿರುವುದರಿಂದ, ವಿದ್ಯಾರ್ಥಿಗಳ ಕಲಿಕೆಗೆ ಹೊಸ ಅವಕಾಶ ಸಿಕ್ಕಂತಾಗಿದೆ' ಎಂದು ಅವರು ಹೇಳಿದರು.

ಜಾಗತಿಕ ಭಾಷಾ ಕೇಂದ್ರದ ನಿರ್ದೇಶಕಿ ಜ್ಯೋತಿ ವೆಂಕಟೇಶ್ ಅವರು ಐಚ್ಛಿಕ ಇಂಗ್ಲಿಷ್, ಫ್ರೆಂಚ್ ಮತ್ತು ಪತ್ರಿಕೋದ್ಯಮ ವಿಷಯಗಳನ್ನೊಳಗೊಂಡ ಹೊಸ ಪದವಿ ಕೋರ್ಸ್ ಪ್ರಾರಂಭವಾಗುತ್ತಿರುವುದನ್ನು ಘೋಷಿಸಿದರು.

ಈ ಸಂದರ್ಭದಲ್ಲಿ ಸ್ಪ್ಯಾನಿಷ್ ಮತ್ತು ಫ್ರೆಂಚ್ ಭಾಷೆಗಳ ಹೊಸ ಪಠ್ಯ ಪುಸ್ತಕಗಳನ್ನು ಜನಾರ್ಪಣೆಗೊಳಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಬಿಸಿಯು ಹಂಗಾಮಿ ಕುಲಪತಿ ಪ್ರೊ. ಕೆ.ಆರ್. ಜಲಜಾ, ಕುಲಸಚಿವ ಪ್ರೊ. ರಮೇಶ್ ಮತ್ತು ಹಣಕಾಸು ಅಧಿಕಾರಿ ವಿಜಯಲಕ್ಷ್ಮಿ ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಬಿಸಿಯು: ಕಚೇರಿ ಉದ್ಘಾಟನೆ



ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸಬಲೀಕರಣ ಹಾಗೂ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಕೋಶಗಳ ಕಚೇರಿಗಳನ್ನು ಪ್ರಭಾರ ಕುಲಪತಿ ಪ್ರೊ.ಕೆ.ಆರ್.ಜಲಜಾ ಮಂಗಳವಾರ ಉದ್ಘಾಟಿಸಿದರು. ಕುಲಸಚಿವ ಪ್ರೊ.ಬಿ.ರಮೇಶ್ ಪರೀಕ್ಷಾಪೂರ್ವ ತರಬೇತಿ ಕೇಂದ್ರಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ರಮೇಶ್ ಅವರು, 'ಕೇಂದ್ರ, ರಾಜ್ಯ ಸರ್ಕಾರಗಳು ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ದೊರೆಯುವ ವಿವಿಧ ಸೌಲಭ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ಮತ್ತು ನೆರವು ಒದಗಿಸಲು ಈ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ' ಎಂದು ತಿಳಿಸಿದರು.

'ರೋಸ್ಟರ್ ಪದ್ಧತಿ, ಹಾಸ್ಟೆಲ್ ಸೌಲಭ್ಯ ಸೇರಿದಂತೆ ವಿದ್ಯಾರ್ಥಿಗಳ ಕುಂದು ಕೊರತೆಗಳ ನಿವಾರಣೆಗೆ ಈ ಕೋಶಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಲಿವೆ' ಎಂದು ಅವರು ವಿವರಿಸಿದರು.

ಬಿಸಿಯು ಸಿಂಡಿಕೇಟ್ ಸದಸ್ಯರಾದ ಬಿ.ಆರ್. ಸುಪ್ರೀತ್, ಎಚ್. ಕೃಷ್ಣರಾಮ್, ಕೆ.ಪಿ.ಪಾಟೀಲ್, ಶಿಲ್ಪಶ್ರೀ, ಪಿ.ಎಂ.ಚೈತ್ರಾ, ಆಯಿಷಾ ಫರ್ಜಾನಾ ಹಾಗೂ ಪ್ರಾಧ್ಯಾಪಕರು, ಅಧಿಕಾರಿಗಳು ಭಾಗವಹಿಸಿದ್ದರು.

5 ನಗರ ಪಾಲಿಕೆ: ನ.1ಕ್ಕೆ ವಾರ್ಡ್ ಅಂತಿಮ

ಹೊಸ ಪಾಲಿಕೆಗಳ ರಚನೆ ಪ್ರಕ್ರಿಯೆ ಮುಗಿದ ಮೇಲೆ ಚುನಾವಣೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ (ಜಿಬಿಎ) ರಚಿಸಲಾಗಿರುವ ಐದು ಹೊಸ ನಗರ ಪಾಲಿಕೆಗಳ ವಾರ್ಡ್‌ಗಳನ್ನು ಅಂತಿಮಗೊಳಿಸಿ, ನವೆಂಬರ್ 1ರಂದು ಅಧಿಸೂಚನೆ ಹೊರಡಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.


ಶಿವಕುಮಾರ್

ಬಿಬಿಎಂಪಿ, ಬಿಡಿಎ, ಜಲಮಂಡಳಿ ಅಧಿಕಾರಿಗಳೊಂದಿಗೆ ಮಂಗಳವಾರ ದಿನಪೂರ್ತಿ ಸಭೆ ನಡೆಸಿದ ನಂತರ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು.

ಜಿಬಿಎಯಲ್ಲಿ ಐದು ನಗರ ಪಾಲಿಕೆಗಳನ್ನು ರಚಿಸಿ, ಕರಡು ಅಧಿಸೂಚನೆ ಹೊರಡಿಸಲಾಗಿದೆ. ಆಗಸ್ಟ್ 18ರವರೆಗೆ ರಾಜಕೀಯ ಪಕ್ಷಗಳೂ ಸೇರಿದಂತೆ ನಾಗರಿಕರು ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಎಲ್ಲವನ್ನೂ ವಿಲೇವಾರಿ ಮಾಡಿ, ಸೆಪ್ಟೆಂಬರ್ 2ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ಆಗಸ್ಟ್ 3ರಿಂದ ವಾರ್ಡ್ ಮರುವಿಂಗಣೆ ಕಾರ್ಯ ಆರಂಭ
- ಸೆಪ್ಟೆಂಬರ್ 2ಕ್ಕೆ ಐದು ನಗರ ಪಾಲಿಕೆಗಳ ಗಡಿಯ ಅಂತಿಮ ಅಧಿಸೂಚನೆ
- ಆಗಸ್ಟ್ 15ರಿಂದ ಆನ್‌ಲೈನ್‌ನಲ್ಲಿ ಎಲ್ಲರಿಗೂ ಎ ಖಾತಾ

ವಾರ್ಡ್‌ಗಳ ಮರುವಿಂಗಡಣೆಗೆ ಆಯೋಗವನ್ನು ರಚಿಸಲಾಗುತ್ತಿದ್ದು, ಆಗಸ್ಟ್ 3ರಿಂದ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ಆರಂಭವಾಗಲಿದೆ. ಸೆಪ್ಟೆಂಬರ್‌ನಲ್ಲಿ ಕರಡು ಅಧಿಸೂಚನೆ ಪ್ರಕಟಿಸಿ, ನವೆಂಬರ್ 1ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ. ಅದಾದ ನಂತರ ವಾರ್ಡ್‌ಗಳಿಗೆ ಮೀಸಲಾತಿ ನಿಗದಿ ಮಾಡಿ ಆದಷ್ಟು ಬೇಗ ಚುನಾವಣೆ ನಡೆಸಲಾಗುತ್ತದೆ. ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಲಾಗುತ್ತದೆ ಎಂದು ವಿವರ ನೀಡಿದರು.

ಸ್ವಚ್ಛ ಬೆಂಗಳೂರು: ನಗರದ ರಸ್ತೆ ಹಾಗೂ ಖಾಲಿ ಸ್ಥಳಗಳಲ್ಲಿ ಕಸ ಸುರಿದಿರುವುದು ಕಂಡು ಬಂದರೆ ಬಿಬಿಎಂಪಿಗೆ ವಾಟ್ಸ್‌ಆ್ಯಪ್ ಹಾಗೂ ಇ-ಮೇಲ್‌ನಲ್ಲಿ ದೂರು ನೀಡಲು ನಾಗರಿಕರಿಗೆ ತಿಳಿಸಲಾಗಿತ್ತು. 10,394 ದೂರುಗಳು ಬಂದಿದ್ದು, ಅದರಲ್ಲಿ ಒಂಬತ್ತು ಸಾವಿರಕ್ಕೂ ಹೆಚ್ಚು ದೂರುಗಳಿಗೆ ಪರಿಹಾರ ನೀಡಲಾಗಿದೆ. ಸ್ವಚ್ಛತೆ ಇನ್ನೂ ಸಾಲದ್ದಾಗಿದ್ದು, ಹೆಚ್ಚಿನ ರೀತಿಯಲ್ಲಿ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

6.5 ಲಕ್ಷ ಇ- ಖಾತಾ: ಬಿಬಿಎಂಪಿ ವ್ಯಾಪ್ತಿಯಲ್ಲಿರುವ 24 ಲಕ್ಷ ಆಸ್ತಿಗಳಲ್ಲಿ 6.5 ಲಕ್ಷ ಮಾಲೀಕರು ಇ-ಖಾತಾ ಪಡೆದುಕೊಂಡಿದ್ದಾರೆ. ಎಲ್ಲರೂ ಇ-ಖಾತಾ ಪಡೆದುಕೊಳ್ಳಲು ಅಕ್ಟೋಬರ್ 22ರಿಂದ ಬೃಹತ್ ಇ-ಖಾತಾ ಜಾಗೃತಿ ಅಭಿಯಾನ ನಡೆಸಲಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಎಲ್ಲ ಆಸ್ತಿಗಳಿಗೆ ಎ ಖಾತಾ ನೀಡಲು ಪ್ರಮಾಣಿತ ಕಾರ್ಯಾಚಾರಣಾ ವಿಧಾನಗಳು (ಎಸ್‌ಒಪಿ) ರಚನೆಯಾಗಲಿವೆ. ಎಲ್ಲ ಪ್ರಕ್ರಿಯೆಗಳು ಆನ್‌ಲೈನ್‌ನಲ್ಲಿ ಆಗಸ್ಟ್ 15ರಿಂದ ಆರಂಭವಾಗಲಿವೆ ಎಂದು ಹೇಳಿದರು.

ಹೆಬ್ಬಾಳ ಜಂಕ್ಷನ್: ಆ.15ರೊಳಗೆ ಉದ್ಘಾಟನೆ

ಕೆ.ಆರ್.ಪುರ ಕಡೆಯಿಂದ ನಗರದ ಕಡೆಗೆ ಬರುವ ಹೆಬ್ಬಾಳ ಜಂಕ್ಷನ್‌ನ ಪಥವನ್ನು ಆಗಸ್ಟ್ 15ರೊಳಗೆ ಉದ್ಘಾಟಿಸಲಾಗುತ್ತದೆ. ಇದರ ಜೊತೆಗೆ ಶಿವಾನಂದ ಸರ್ಕಲ್ ಜಂಕ್ಷನ್ ಅಭಿವೃದ್ಧಿ ಹಾಗೂ ಗಾಂಧಿ ಬಜಾರ್ ಬಳಿಯ ಬಹುಮಹಡಿ ಪಾರ್ಕಿಂಗ್ ಕಟ್ಟಡವನ್ನು ಬಳಸಲು ಅನುವು ಮಾಡಿಕೊಡಲಾಗುತ್ತದೆ. ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಉದ್ಘಾಟನಾ ದಿನಾಂಕ ನಿಗದಿ ಪಡಿಸಲಾಗುತ್ತದೆ. ಆಗಸ್ಟ್ 6 ಅಥವಾ 15ರೊಳಗೆ ಈ ಉದ್ಘಾಟನಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ರಮ್ಯಾಗೆ ನಮ್ಮ ಬೆಂಬಲ’

‘ನಟಿ ರಮ್ಯಾ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಶಿವರಾಜ್‌ಕುಮಾರ್, ಮಹಿಳಾ ಕಾಂಗ್ರೆಸ್‌ನವರು ಬೆಂಬಲ ನೀಡುತ್ತಿರುವ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ‘ನಮ್ಮ ಪಕ್ಷದವರು ಯಾರಿಗೆ ಬೆಂಬಲ ಕೊಡುತ್ತಾರೋ ಅವರಿಗೆ ನಾವು ಬೆಂಬಲ ಕೊಡುತ್ತೇವೆ’ ಎಂದರು.

‘ರಾಹುಲ್ ಗಾಂಧಿಯವರು ಆಗಸ್ಟ್ ಮೊದಲ ವಾರದಲ್ಲಿ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ ಎಂಬ ಬಗ್ಗೆ ಚರ್ಚೆ ಇದೆ. ಈ ಬಗ್ಗೆ ಮುಖ್ಯಮಂತ್ರಿಯವರ ಬಳಿ ಚರ್ಚಿಸಿ, ಮಾಹಿತಿ ನೀಡುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಮಹೇಶ್ವರ್ ರಾವ್ ಅವರು ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗವನ್ನು ಪರಿಶೀಲಿಸಿದರು. ಬಸವರಾಜ ಕಬಾಡೆ ಜೊತೆಯಲ್ಲಿದ್ದರು

ಬನ್ನೇರುಘಟ್ಟ ಮುಖ್ಯರಸ್ತೆ: ‘ಮಾದರಿ ಪಾದಚಾರಿ ಮಾರ್ಗ ನಿರ್ಮಿಸಿ’

ಬೆಂಗಳೂರು: ಬನ್ನೇರುಘಟ್ಟ ಮುಖ್ಯ ರಸ್ತೆಯ ನಮ್ಮ ಮೆಟ್ರೊ ಮಾರ್ಗದಲ್ಲಿರುವ ಪಾದಚಾರಿ ಮಾರ್ಗವನ್ನು ಮಾದರಿಯಾಗಿ ನಿರ್ಮಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ದಕ್ಷಿಣ ವಲಯ ವ್ಯಾಪ್ತಿಯ ಬನ್ನೇರುಘಟ್ಟ ಮುಖ್ಯ ರಸ್ತೆಯ ಡೇರಿ ವೃತ್ತದಲ್ಲಿ ಪಾದಚಾರಿ ಮಾರ್ಗ, ರಸ್ತೆ ಗುಂಡಿ, ಸ್ವಚ್ಛತೆಯನ್ನು ಅವರು ಪರಿಶೀಲಿಸಿದರು.

ಬಸ್ ಬೇ: ಬನ್ನೇರುಘಟ್ಟ ಮುಖ್ಯ ರಸ್ತೆಯಲ್ಲಿ ರಸ್ತೆ ಅಗಲವಿರುವ ಕಡೆ ಬಸ್ ನಿಲ್ಲಲು ವ್ಯವಸ್ಥೆ ಮಾಡುವುದರ ಜೊತೆಗೆ ಬಸ್ ತಂಗುದಾಣಗಳನ್ನು (ಬಸ್ ಬೇ) ನಿರ್ಮಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವುದನ್ನು ತಡೆಯಲು, ಕಸ ಬಿಸಾಡುವವರಿಗೆ ದಂಡ ವಿಧಿಸಬೇಕು. ಮಳೆ ನೀರು ಸರಾಗವಾಗಿ ಹರಿದು ಹೋಗಲು ರಸ್ತೆ ಬದಿಯ ಗ್ರೇಟಿಂಗ್‌ಗಳ ಬಳಿ ಸ್ವಚ್ಛತೆ ಕಾಪಾಡಬೇಕು ಎಂದರು.

ಬನ್ನೇರುಘಟ್ಟ ಮುಖ್ಯ ರಸ್ತೆಯ ಡೇರಿ ವೃತ್ತದಿಂದ ತಾವರೆಕೆರೆ, ಜಯದೇವ ಆಸ್ಪತ್ರೆ, ಜೆ.ಪಿ ನಗರ 4ನೇ ಹಂತ ಹಾಗೂ ಐಐಎಂಬಿವರೆಗೆ ನಡಿಗೆ ಮೂಲಕ (5.5 ಕಿ.ಮೀ.) ಮಹೇಶ್ವರ್ ರಾವ್ ಪರಿಶೀಲಿಸಿದರು. ದಕ್ಷಿಣ ವಲಯ ಆಯುಕ್ತರಾದ ದಿಗ್ವಿಜಯ್ ಬೋಡ್ಕೆ, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯದ ಅರಿವು ಮೂಡಿಸುವತ್ತ ಕನ್ನಡ ಸಾಹಿತ್ಯ ಪರಿಷತ್ತು, ಗೀತ-ಗಾಯನ: ಉದ್ಘಾಟನೆ: ವಿಜಯಲಕ್ಷ್ಮಿ ಸತ್ಯಮೂರ್ತಿ, ಅತಿಥಿಗಳು: ಲಿಂಗರಾಜು ಎ. ಕಾಳೇನಹಳ್ಳಿ, ಲತಾ ಕುಂದರಗಿ, ಅಧ್ಯಕ್ಷತೆ: ನವೀನ್‌ಕುಮಾರ್ ಎನ್., ಆಯೋಜನೆ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀ ಸಿದ್ಧಗಂಗಾ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕುದುರೆಗೆರೆ, ಬೆಳಿಗ್ಗೆ 10.30

‘ಗಾಂಧಿ ತತ್ವಪ್ರಣೀತ ಕಾರ್ಯಕ್ರಮ, ಪ್ರೊ. ಬಿ.ಆರ್. ರಾಮಚಂದ್ರೇಗೌಡ ಸಂಸ್ಮರಣೆ, ಸಮಾಜ ಸೇವಾ ಪ್ರಶಸ್ತಿ’ ಪ್ರದಾನ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಪ್ರಶಸ್ತಿ ಪ್ರದಾನ: ಡಿ.ಆರ್. ಪಾಟೀಲ, ಪ್ರಶಸ್ತಿ ಸ್ವೀಕರಿಸುವವರು: ಎನ್.ಸಿ. ಪಟೇಲ್, ವಿಶೇಷ ಉಪನ್ಯಾಸ: ಎಸ್.ಜಿ. ಸಿದ್ಧರಾಮಯ್ಯ, ‘ಗೋಪಾಲಕೃಷ್ಣ ಗೋಖಲೆ’ ಭಾವಚಿತ್ರ ಅನಾವರಣ: ಎ. ಮಂಜು, ಪುಟ್ಟಣ್ಣ, ಅತಿಥಿಗಳು: ಸಿ. ನಾರಾಯಣಸ್ವಾಮಿ, ಬಿ.ಆರ್. ಮಮತಾ, ಶ್ರೀನಿವಾಸ ನಾಯಕ ಪಿ.ಟಿ., ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 11


ಎಸ್‌.ಜಿ. ಸಿದ್ಧರಾಮಯ್ಯ

ವಚನ ಶ್ರಾವಣ-2025: ವಚನ ಗಾಯನ: ಈರಯ್ಯ ಚಿಕ್ಕಮಠ, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ಮೃತ್ಯುಂಜಯ, ಅಧ್ಯಕ್ಷತೆ: ಹಂಸ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸಿದ್ಧಗಾಂಗ ಪಬ್ಲಿಕ್ ಸ್ಕೂಲ್, ಚಂದ್ರಾ ಲೇಔಟ್, ಬೆಳಿಗ್ಗೆ 11

‘ಬುಡಕಟ್ಟು ಸಂಸ್ಕೃತಿ, ಪರಂಪರೆ ಮತ್ತು ಸ್ಥಳೀಯ ಆಚರಣೆಗಳ’ ಕುರಿತು ವಿಚಾರಸಂಕಿರಣ: ಅತಿಥಿಗಳು: ಥಾವರಚಂದ್ ಗೆಹಲೋತ್, ಧನಂಜಯ್ ಸಿಂಗ್, ಕೆ.ಆರ್. ಜಲಜಾ, ಜಯಕರ್ ಶೆಟ್ಟಿ ಎಂ., ಆಯೋಜನೆ ಮತ್ತು ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜು, ಬೆಳಿಗ್ಗೆ 11

ಒಡನಾಡಿ ಬಂಧು ಸಿಜಿಕೆ-75 ಮಾಸದ ನೆನಪು ಸರಣಿ ನಾಟಕೋತ್ಸವ ‘ಎರಡು ಕತೆಗಳು.. ಮತ್ತೊಂದು’ ನಾಟಕ ಪ್ರದರ್ಶನ: ನಿರ್ದೇಶನ: ಮಂಜು ಬಡಿಗೇರ್, ‘ಧನಿಯರ ಸತ್ಯನಾರಾಯಣ’ ನಾಟಕ ಪ್ರದರ್ಶನ: ನಿರ್ದೇಶನ: ಸಚಿನ್ ಭದ್ರಾವತಿ, ಸಿಜಿಕೆ ಮಾಸದ ನೆನಪು: ಕೆ.ವೈ. ನಾರಾಯಣಸ್ವಾಮಿ, ಆಯೋಜನೆ: ಅಭಿನಯ ತರಂಗ ನಾಟಕ ಶಾಲೆ, ಸ್ಥಳ: ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6.30

ರೇಶೆಲ್ ಬ್ರೆಟ್ನಿ ಫರ್ನಾಂಡಿಸ್ ಅವರ ‘ಎನ್ವಿರಾನ್‌ಮೆಂಟ್ ಬಾಂಡ್ ಆಫ್ ಕೋಎಕ್ಸಿಸ್ಟೆನ್ಸ್’ ಪುಸ್ತಕ ಬಿಡುಗಡೆ: ಅತಿಥಿಗಳು: ಸತೀಶ್ ಕುಮಾರ್, ವೆಂಕಟೇಶ್ ಮೂರ್ತಿ, ಆಯೋಜನೆ: ಥಿಂಕರ್ಸ್ ಫೋರಂ, ಸ್ಥಳ: ಸುಚಿತ್ರಾ ಫಿಲ್ಮ್ ಸೊಸೈಟಿ, ಬನಶಂಕರಿ ಎರಡನೇ ಹಂತ, ಸಂಜೆ 6.30

ಬದುಕಿನ ಪರೀಕ್ಷೆಗೆ ಸಾಹಿತ್ಯವೇ ಸಾಧನ

ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮದಲ್ಲಿ ಸಾಹಿತಿ ಜಯಂತ ಕಾಯ್ಕಿಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸತಲೆಮಾರಿನ ವಿದ್ಯಾರ್ಥಿಗಳು ಬದುಕಿನ ಸವಾಲುಗಳಿಗೆ ಧೃತಿಗೆಡದೆ, ಅವುಗಳನ್ನು ಸಮರ್ಥವಾಗಿ ಎದುರಿಸಲು ಸಾಹಿತ್ಯವೇ ಪ್ರಮುಖ ಸಾಧನ. ಹಾಗಾಗಿ ಯುವ ಜನರು ಸಾಹಿತ್ಯಾಭ್ಯಾಸವನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಾಹಿತಿ ಜಯಂತ್ ಕಾಯ್ಕಿಣಿ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಂಘ, ಕನ್ನಡ ವಿಭಾಗದ ಸಹಯೋಗದೊಂದಿಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ‘ಅಂಗಳದಲ್ಲಿ ತಿಂಗಳ ಪುಸ್ತಕ’ ಕಾರ್ಯಕ್ರಮದಡಿ ವ್ಯಾಸರಾಯ ಬಲ್ಲಾಳರ ‘ಬಂಡಾಯ’ ಕೃತಿ ಕುರಿತು ಅವರು ಮಾತನಾಡಿದರು.

ವ್ಯಾಸರಾಯ ಬಲ್ಲಾಳರ ‘ಬಂಡಾಯ’ ಕೃತಿಯ ಅಂತರಂಗದ ಆಶಯವೂ ಬದುಕಿನ ನಾನಾ ಸ್ತರಗಳ ವ್ಯವಸ್ಥೆಯೊಂದಿಗೆ ಮನುಷ್ಯರು ಮುಖಾಮುಖಿಯಾಗುವುದೇ ಆಗಿದೆ. ವ್ಯಾಸರಾಯ ಬಲ್ಲಾಳರು ಕನ್ನಡ ಸಾಹಿತ್ಯ ಕಂಡ ಅಪರೂಪದ ಬರಹಗಾರ. ಮೃದು ಧೋರಣೆಯ, ಭಾವ ಪರವಶತೆಯ ಶೈಲಿಯ ಕಾದಂಬರಿಗಳಿಂದ ಗುರುತಿಸಿಕೊಂಡಿದ್ದ ಬಲ್ಲಾಳರು, ಕ್ರಾಂತಿಕಾರಕ ಮನಸ್ಥಿತಿಯ ಕಡೆಗೆ ಹೊರಳಿದ್ದು ಅವರ ಬಂಡಾಯ ಕಾದಂಬರಿಯ ವಿಶೇಷವಾಗಿದೆ ಎಂದು ತಿಳಿಸಿದರು.


ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಜಯಂತ್ ಕಾಯ್ಕಿಣಿ ಅವರನ್ನು ಸನ್ಮಾನಿಸಲಾಯಿತು. ವೂಡೇ ಪಿ. ಕೃಷ್ಣ, ಕೆ.ಬಿ. ಕಿರಣ್ ಸಿಂಗ್, ಮಾನಸ ಇದ್ದಾರೆ

ಸಾಹಿತ್ಯದ ಶಕ್ತಿ ಮತ್ತು ಅದರ ಸೌಂದರ್ಯವನ್ನು ವಿದ್ಯಾರ್ಥಿಗಳು ಅನುಭವಿಸಬೇಕೆಂದರೆ ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಓದು ರೂಢಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮಾತನಾಡಿ, ‘ಪ್ರತಿ ವಿದ್ಯಾರ್ಥಿಯ ಹಸ್ತದಲ್ಲಿ ಪುಸ್ತಕವಿರಬೇಕು. ಪುಸ್ತಕ ಮಕ್ಕಳ ಮಸ್ತಕದಲ್ಲಿ ತುಂಬುವಂತಾಗಬೇಕು. ಆಗ ಮಾತ್ರ ಕನ್ನಡ ಸಾಹಿತ್ಯ ಮತ್ತು ಕನ್ನಡ ಪುಸ್ತಕೋದ್ಯಮವು ಬೆಳೆಯುತ್ತದೆ’ ಎಂದರು.

ಇಂದು ಮುದ್ರಣ ಮಾಧ್ಯಮ ಅತ್ಯಂತ ದೊಡ್ಡರೀತಿಯಲ್ಲಿ ಬೆಳೆದಿದೆ. ಜಗತ್ತಿನಾದ್ಯಂತ ಪ್ರಕಾಶನ ಸಂಸ್ಥೆಗಳು ಆಧುನಿಕ ಸಾಧ್ಯತೆಗಳನ್ನೆಲ್ಲಾ ಬಳಸಿಕೊಂಡು ಪುಸ್ತಕೋದ್ಯಮಕ್ಕೆ ಹೊಸ ಆಯಾಮವನ್ನು ತಂದಿವೆ ಎಂದು ನುಡಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಜಯಂತ್ ಕಾಯ್ಕಿಣಿ ಅವರನ್ನು ಸನ್ಮಾನಿಸಲಾಯಿತು. ವ್ಯಾಸರಾಯ ಬಲ್ಲಾಳರ ಪುತ್ರಿ ಅಂಜಲಿ ಬಲ್ಲಾಳ, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್, ಪ್ರಾಂಶುಪಾಲ ಮೇಜರ್ ಆನಂದಪ್ಪ ಐ., ಕನ್ನಡ ವಿಭಾಗದ ಮುಖ್ಯಸ್ಥೆ ಎಚ್.ಎಂ. ಗೀತಾ, ಕನ್ನಡ ಸಂಘದ ಸಂಚಾಲಕಿ ಎಂ.ಎನ್. ಅರ್ಚನಾ ತೇಜಸ್ವಿ ಹಾಜರಿದ್ದರು.

ಮುಖ್ಯಾಂಶಗಳು

- ಶೇಷಾದ್ರಿಪುರಂ ಕಾಲೇಜಿನಲ್ಲಿ ‘ಅಂಗಳದಲ್ಲಿ ತಿಂಗಳ ಪುಸ್ತಕ’
- ವ್ಯಾಸರಾಯ ಬಲ್ಲಾಳರ ‘ಬಂಡಾಯ’ ಕೃತಿ ಕುರಿತು ಚರ್ಚೆ
- ಸಾಹಿತ್ಯದ ಆಸಕ್ತಿ ಬೆಳೆಸಿಕೊಳ್ಳಲು ಸಲಹೆ

ಕದ್ದ ಹಣ: ಪಾರ್ಟಿ, ಗೋವಾ ಪ್ರವಾಸ

ಚಿಕ್ಕಪ್ಪನ ಮನೆಯಲ್ಲಿ ಕಳವು: ನಾಲ್ವರು ವಿದ್ಯಾರ್ಥಿಗಳ ಬಂಧನ

ಪ್ರಜಾವಾಣಿ ವಾರ್ತೆ



ಆರೋಪಿಗಳಿಂದ ವಶಕ್ಕೆ ಪಡೆದ ನಗದು

ಅಪರಾಧ ಸುದ್ದಿ

ಬೆಂಗಳೂರು: ಸ್ನೇಹಿತನೊಂದಿಗೆ ಸೇರಿಕೊಂಡು ಚಿಕ್ಕಪ್ಪನ ಮನೆಯಲ್ಲಿಯೇ ನಗದು, ಚಿನ್ನಾಭರಣ ಕಳವು ಮಾಡಿ ಬಂದ ಹಣದಿಂದ ಪಾರ್ಟಿ, ಪ್ರವಾಸ ಮಾಡುತ್ತಿದ್ದ ನಾಲ್ವರನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಭೈರತಿ ಗ್ರಾಮದ ರಿಯಲ್ ಎಸ್ಟೇಟ್ ಉದ್ಯಮಿ ಶ್ರೀನಿವಾಸ ರೆಡ್ಡಿ ಅವರ ದೂರು ಆಧರಿಸಿ, ಕೊತ್ತನೂರು ನಿವಾಸಿ ಸಚಿತಾ, ಯಶವಂತ್, ಕಸವನಹಳ್ಳಿಯ ರಾಮಪ್ರಕಾಶ್, ತನುಷ್ ಅವರನ್ನು ಬಂಧಿಸಿ, ₹10 ಲಕ್ಷ ನಗದು, 548 ಗ್ರಾಂ ಚಿನ್ನಾಭರಣ ಹಾಗೂ ಚಿನ್ನದ ಗಟ್ಟಿ ಸೇರಿದಂತೆ ₹65 ಲಕ್ಷ ಮೌಲ್ಯದ ಸ್ವತ್ತುಗಳನ್ನು ವಪಡಿಸಿಕೊಳ್ಳಲಾಗಿದೆ. ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀನಿವಾಸ್ ಅವರ ಮನೆಯ ಕೊಠಡಿಯ ಲಾಕರ್‌ನಲ್ಲಿಟ್ಟಿದ್ದ ಚಿನ್ನಾಭರಣ ಕಳವು ಆಗಿರುವ ಬಗ್ಗೆ ಮನೆಯ ಕೆಲಸಗಾರರ ಮೇಲೆ ಅನುಮಾನ ವ್ಯಕ್ತಪಡಿಸಿ, ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಸಿಸಿಟಿವಿ ಕ್ಯಾಮೆರಾ ಹಾಗೂ ಸ್ಥಳೀಯರ ಮಾಹಿತಿ ಆಧರಿಸಿ, ದೂರದಾರರ ಸಹೋದರನ ಮಗಳನ್ನು ಠಾಣೆಗೆ ಕರೆಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

ಸಚಿತಾ ಮತ್ತು ಯಶವಂತ್ ಪದವಿ ಓದುತ್ತಿದ್ದು, ಪರಸ್ಪರ ಪ್ರೀತಿಸುತ್ತಿದ್ದಾರೆ. ಮೋಜು ಮಸ್ತಿ ಮಾಡಲು ಹಣದ ಕೊರತೆ ಇದ್ದಿದ್ದರಿಂದ ಸ್ನೇಹಿತರ ಅಣತಿಯಂತೆ ಯುವತಿಯು ಜನವರಿಯಿಂದಲೇ ಹಂತ-ಹಂತವಾಗಿ ಮನೆಯಲ್ಲಿದ್ದ ಚಿನ್ನಾಭರಣ ಕಳವು ಮಾಡಿರುವುದನ್ನು ಒಪ್ಪಿಕೊಂಡಿದ್ದಾಳೆ. ಆಭರಣವನ್ನು ಯಶವಂತ್‌ಗೆ ತಂದು ಕೊಡುತ್ತಿದ್ದಳು. ಈತ ಕಾಲೇಜಿನಲ್ಲಿ ಓದುತ್ತಿರುವ ತನ್ನ ಇಬ್ಬರು ಸ್ನೇಹಿತರಿಗೆ ನೀಡಿದ್ದು, ಅವುಗಳನ್ನು ತಮಗೆ ಗೊತ್ತಿರುವ ಅಕ್ಕಸಾಲಿಗನ ಬಳಿ ಕೊಟ್ಟು ಕರಗಿಸಿ, ಚಿನ್ನದ ಗಟ್ಟಿಯಾಗಿ ಮಾರ್ಪಡಿಸಿ ಮಾರಾಟ ಮಾಡಿ ಹಣ ಪಡೆಯುತ್ತಿದ್ದರು. ಆ ಹಣದಲ್ಲಿ ಪಾರ್ಟಿ, ಗೋವಾ ಪ್ರವಾಸಕ್ಕೆ ಹೋಗುತ್ತಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಚಿನ್ನಾಭರಣ ಸ್ವೀಕರಿಸಿದ್ದ ಇಬ್ಬರು ಸ್ನೇಹಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿದ್ದಾರೆ. ನಾಲ್ವರು ಆರೋಪಿಗಳನ್ನು ವಿಚಾರಣೆ ನಡೆಸಿ, ಚಿಕ್ಕಪೇಟೆಯ ಎರಡು ಆಭರಣ ಅಂಗಡಿ ಮತ್ತು ಕೊತ್ತನೂರಿನಲ್ಲಿ ವಾಸವಿರುವ ಇಬ್ಬರು ಆರೋಪಿಗಳ ಮನೆಯಿಂದ ಒಟ್ಟು 548 ಗ್ರಾಂ ಚಿನ್ನಾಭರಣ, ಚಿನ್ನದ ಗಟ್ಟಿ ಮತ್ತು ₹10 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಇವುಗಳ ಒಟ್ಟು ಮೌಲ್ಯ ₹65 ಲಕ್ಷ ಎಂದು ಮಾಹಿತಿ ನೀಡಿದರು.

ಉಳಿದ ಚಿನ್ನಾಭರಣಗಳ ಪತ್ತೆ ಕಾರ್ಯ ಮುಂದುವರಿದಿದ್ದು, ತನಿಖೆ ಪ್ರಗತಿಯಲ್ಲಿದೆ.

ಮಾಜಿ ಕಾರ್ಪೊರೇಟರ್ ಮನೆಯಲ್ಲಿದ್ದ ಚಿನ್ನಕ್ಕೆ ಕನ್ನ


ರಘು


ಮಿಥುನ್


ಜೈದೀಪ್

ಬೆಂಗಳೂರು: ಮಾಜಿ ಕಾರ್ಪೊರೇಟರ್ ಮನೆಯಲ್ಲಿ 1.85 ಕೆ.ಜಿ ಚಿನ್ನಾಭರಣ ದೋಚಿದ್ದ ಮೂವರು ಆರೋಪಿಗಳನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಘುವನಹಳ್ಳಿಯ ರಘು ಅಲಿಯಾಸ್ ಪಪ್ಪಿ ರಘು (25), ತ್ಯಾಗರಾಜನಗರದ ಮಿಥುನ್ ಅಲಿಯಾಸ್ ಮಿಲ್ಕಿ (24), ನಾಯಂಡಳ್ಳಿಯ ಜೈದೀಪ್ (25) ಬಂಧಿತರು.

ಆರೋಪಿಗಳಿಂದ ₹78.50 ಲಕ್ಷ ಮೌಲ್ಯದ 1.85 ಕೆ.ಜಿ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಜಯನಗರ ಐದನೇ ಬ್ಲಾಕ್ ನಿವಾಸಿ, ಬಿಬಿಎಂಪಿ ಮಾಜಿ ಸದಸ್ಯರಾದ ಟಿ.ಎಸ್.ವಸಂತ್ ಕುಮಾರ್ ಅವರ ಮನೆಯಲ್ಲಿ ಜುಲೈ 20ರಂದು ಕಳ್ಳತನ ನಡೆದಿತ್ತು. ಮನೆಯ ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.


ಡೆಲಿವರಿ ಎಕ್ಸಿಕ್ಯುಟಿವ್‌ಗಳ ಸೋಗಿನಲ್ಲಿ ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ಸುತ್ತಾಟ ನಡೆಸುತ್ತಿದ್ದ ಆರೋಪಿಗಳು, ಬೀಗ ಹಾಕಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಆ ಮನೆಗೆ ಬಂದು ಬೀಗ ಮುರಿದು ಕಳ್ಳತನ ಮಾಡಿ ಪರಾರಿ ಆಗುತ್ತಿದ್ದರು ಎಂದು ಪೊಲೀಸರು ಹೇಳಿದರು.

ರೋಲೆಕ್ಸ್ ವಾಚ್ ಕಳವು: ಜುಲೈ 20ರಂದು ಸಂಜೆ ವಿಮಾನ ನಿಲ್ದಾಣಕ್ಕೆ ಪುತ್ರನನ್ನು ಬಿಟ್ಟು ಬರಲು ವಸಂತ್ ಕುಮಾರ್ ತೆರಳಿದ್ದರು. ಅಂದೇ ರಾತ್ರಿ ವಾಪಸ್ ಬಂದು ನೋಡಿದಾಗ ಮನೆಯ ಬೀಗ ಒಡೆದು ₹1 ಕೋಟಿ ಮೌಲ್ಯದ ಚಿನ್ನಾಭರಣ, ರೋಲೆಕ್ಸ್ ವಾಚ್, ನಗದು ದೋಚಿರುವುದು ಕಂಡುಬಂದಿತ್ತು. ವಸಂತ್‌ಕುಮಾರ್ ಅವರು ನೀಡಿದ ದೂರು ಆಧರಿಸಿ ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಯಿತು. ಆರೋಪಿಗಳು ಸ್ಕೂಟಿಯಲ್ಲಿ ಬಂದು ಮನೆಯ ಒಳಗೆ ಹೋಗುತ್ತಿದ್ದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಿ, ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ತುರಹಳ್ಳಿ ಅರಣ್ಯ ವ್ಯಾಪ್ತಿಯಲ್ಲಿ ಚಿನ್ನಾಭರಣ ಸಹಿತ ಆರೋಪಿಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು ಎಂದು ಪೊಲೀಸರು ಹೇಳಿದರು.

ಬೀದಿನಾಯಿಗಳ ದಾಳಿ: ವೃದ್ಧ ಸಾವು

ಪ್ರಜಾವಾಣಿ ವಾರ್ತೆ


ಸೀತಪ್ಪ

ಬೆಂಗಳೂರು: ಬೀದಿನಾಯಿಗಳ ದಾಳಿಗೆ ವೃದ್ಧರೊಬ್ಬರು ಮೃತಪಟ್ಟಿರುವ ಘಟನೆ ಕೊಡಿಗೆಹಳ್ಳಿ ಠಾಣಾ ವ್ಯಾಪ್ತಿಯ ಟೆಲಿಕಾಂ ಲೇಔಟ್‌ನಲ್ಲಿ ಸೋಮವಾರ ತಡರಾತ್ರಿ ನಡೆದಿದೆ.

ನಾಯಿಗಳ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಸೀತಪ್ಪ (68) ಮೃತಪಟ್ಟಿದ್ದಾರೆ. ತಡರಾತ್ರಿ ಮನೆಯಿಂದ ಹೊರಬಂದಿದ್ದ ಸೀತಪ್ಪ ಅವರ ಮೇಲೆ 7-8 ಬೀದಿ ನಾಯಿಗಳು ದಾಳಿ ಮಾಡಿವೆ. ಓಡಲಾರದೆ ನೆಲಕ್ಕೆ ಬಿದ್ದ ಅವರ ಕೈ, ಕಾಲು, ಮುಖಕ್ಕೆ ನಾಯಿಗಳು ಕಚ್ಚಿ ಗಂಭೀರವಾಗಿ ಗಾಯಗೊಳಿಸಿದ್ದವು.

ಸಮೀಪದಲ್ಲಿದ್ದ ಗಸ್ತು ಪೊಲೀಸರು ನಾಯಿಗಳಿಂದ ಸೀತಪ್ಪ ಅವರನ್ನು ರಕ್ಷಿಸಲು ಯತ್ನಿಸಿದ್ದಾರೆ. ಅಷ್ಟರಲ್ಲಿ ಅವರು ಮೃತಪಟ್ಟಿದ್ದಾರೆ.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ರವಾನಿಸಲಾಗಿದೆ. ಮೃತನ ಪುತ್ರ ದೂರು ನೀಡಿದ್ದು, ಕೊಡಿಗೆಹಳ್ಳಿ ಠಾಣೆಯಲ್ಲಿ ಯುಡಿಆರ್ (ಅಸಹಜ ಸಾವು ಪ್ರಕರಣ) ವರದಿಯಾಗಿದೆ.

ವರದಿ ಬಂದ ಬಳಿಕ ಕ್ರಮ

ಮರಣೋತ್ತರ ಪರೀಕ್ಷೆಗಾಗಿ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಶವವನ್ನು ಕಳುಹಿಸಲಾಗಿದ್ದು, ನಾಯಿ ದಾಳಿಯಿಂದ ಸೀತಪ್ಪ ಅವರು ಮರಣ ಹೊಂದಿರುವುದಾಗಿ ದೃಢಪಟ್ಟಲ್ಲಿ ನಿಯಮಾನುಸಾರ ಪರಿಹಾರ ನೀಡಲಾಗುವುದು ಎಂದು ಬಿಬಿಎಂಪಿ ತಿಳಿಸಿದೆ. ಬಿಬಿಎಂಪಿ ಪಶುಪಾಲನಾ ವಿಭಾಗದಿಂದ ಘಟನೆ ನಡೆದ ಸ್ಥಳದಲ್ಲಿರುವ 16 ಬೀದಿನಾಯಿಗಳನ್ನು ಹಿಡಿದು ಯಲಹಂಕ ವಲಯದ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಕೇಂದ್ರ(ಎಬಿಸಿ ಸೆಂಟರ್)ದಲ್ಲಿ ವೀಕ್ಷಣೆಗಾಗಿ ಇರಿಸಲಾಗಿದೆ. ಇನ್ನುಳಿದ ನಾಯಿಗಳನ್ನು ಹಿಡಿಯಲಾಗುತ್ತಿದೆ ಎಂದು ಹೇಳಿದೆ.

ಗಾಂಜಾ ಸಾಗಣೆ: ಅಂತರರಾಜ್ಯದ ಆರು ಆರೋಪಿಗಳ ಬಂಧನ



ಬೆಂಗಳೂರು: ಗಾಂಜಾ ಸಾಗಣೆ ಮಾಡುತ್ತಿದ್ದ ಅಂತರರಾಜ್ಯದ ಆರು ಆರೋಪಿಗಳನ್ನು ಕಾಟನ್‌ಪೇಟೆ ಠಾಣೆಯ ಪೊಲೀಸರು ಬಂಧಿಸಿದ್ದು, ₹42 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ರಾಜಸ್ಥಾನದ ಪಾಳಿ ಜಿಲ್ಲೆಯ ಬಾಸ್ ಗ್ರಾಮದ ಶಂಕರ್‌ಲಾಲ್ (38), ಒಡಿಶಾದ ಬಾಲೇಶ್ವರ ಜಿಲ್ಲೆಯ ಅನಿರುದ್ಧ್ ದಲೈ (38), ಜಾರ್ಖಂಡ್‌ನ ಗಾಟೋತಾಂಡ್ ಗ್ರಾಮದ ಬಸಂತ್ ಕುಮಾರ್(35), ಮಹಾರಾಷ್ಟ್ರದ ಅಜಿತ್‌ಕುಮಾರ್ (43), ದೆಹಲಿಯ ದೀಪಕ್ ಕುಮಾರ್ (27), ಬಿಹಾರದ ವೈಶಾಲಿಯ ಅಮರನಾಥ್ ಜೈಸ್ವಾಲ್ (61) ಬಂಧಿತರು.

ಆರೋಪಿಗಳು ಬೆಂಗಳೂರಿನ ನಾಗಗೊಂಡನಹಳ್ಳಿ, ಚನ್ನಸಂದ್ರ, ಕೆ.ಪಿ. ಅಗ್ರಹಾರ, ಕಾಟನ್‌ಪೇಟೆಯಲ್ಲಿ ವಾಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಬಂಧಿತರಿಂದ 53.5 ಕೆ.ಜಿ ಗಾಂಜಾ, ಒಂಬತ್ತು ಮೊಬೈಲ್, 10 ಸಿಮ್‌ಕಾರ್ಡ್, ಒಂದು ಲ್ಯಾಪ್‌ಟಾಪ್ ಹಾಗೂ ಸರಕು ಸಾಗಣೆ ವಾಹನವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಕಾಟನ್‌ಪೇಟೆಯ ಪಶುವೈದ್ಯ ಆಸ್ಪತ್ರೆಯ ಹಿಂಭಾಗದಲ್ಲಿ ಸರಕು ಸಾಗಣೆ ಆಟೊದಲ್ಲಿ ಆರೋಪಿಗಳು ಡ್ರಗ್ಸ್ ಸಾಗಣೆ ಮಾಡುತ್ತಿದ್ದರು. ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಶಂಕರ್‌ಲಾಲ್ ಹಾಗೂ ಅನಿರುದ್ಧ್ ದಲೈ ಪ್ರಕರಣದ ಸೂತ್ರಧಾರಿಗಳು. ಬಸಂತ್‌ಕುಮಾರ್, ಅಜಿತ್‌ಕುಮಾರ್, ದೀಪಕ್ ಕುಮಾರ್, ಅಮರನಾಥ್ ಜೈಸ್ವಾಲ್ ಎಂಬುವವರನ್ನು ಸೇರಿಸಿಕೊಂಡು ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ಆಂಧ್ರಪ್ರದೇಶದ ವಿಶಾಖಪಟ್ಟಣದಿಂದ ಬಸ್ ಹಾಗೂ ಕಾರ್ಗೊ ಸೇವೆಗಳ ಮೂಲಕ ಬೆಂಗಳೂರಿಗೆ ಗಾಂಜಾವನ್ನು ತರಿಸಿಕೊಂಡು ಮಾರಾಟ ಮಾಡುತ್ತಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ವಿವರಿಸಿದರು.

ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಸಿ.ಎಂ, ಗೃಹ ಸಚಿವ ರಾಜೀನಾಮೆ ನೀಡಲಿ'

ಪ್ರಜಾವಾಣಿ ವಾರ್ತೆ


ಧೀರಜ್ ಮುನಿರಾಜು

ಬೆಂಗಳೂರು: 'ರಾಜ್ಯದಲ್ಲಿ ಮಾದಕ ವಸ್ತು ತಯಾರಿಕಾ ಘಟಕ ತಲೆ ಎತ್ತಿದ್ದರೂ ಅದನ್ನು ಗುರುತಿಸುವಲ್ಲಿ, ತಡೆಯುವಲ್ಲಿ ರಾಜ್ಯ ಸರ್ಕಾರ ಹಾಗೂ ಗೃಹ ಇಲಾಖೆ ವಿಫಲವಾಗಿದೆ. ಇದರ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ.ಪರಮೇಶ್ವರ ಅವರು ರಾಜೀನಾಮೆ ನೀಡಬೇಕು' ಎಂದು ಬಿಜೆಪಿ ಯುವ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಧೀರಜ್ ಮುನಿರಾಜು ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಂದು ವರ್ಷದ ಅವಧಿಯಲ್ಲಿ, ರಾಜ್ಯದಲ್ಲಿ ₹1,300 ಕೋಟಿ ಮೌಲ್ಯದಷ್ಟು ಮಾದಕ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಎಐಸಿಸಿ ಅಧ್ಯಕ್ಷರ ತವರು ಜಿಲ್ಲೆ ಕಲಬುರಗಿ ಯಲ್ಲಿ ಮಾದಕ ವಸ್ತುಗಳ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದ್ದರೆ, ಮುಖ್ಯಮಂತ್ರಿ ತವರು ಜಿಲ್ಲೆ ಮೈಸೂರಿನಲ್ಲಿ ತಯಾರಿಕೆ ನಡೆಯುತ್ತಿತ್ತು. ಆದರೆ ರಾಜ್ಯ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಆರೋಪಿಸಿದರು.

ಸ್ಫೋಟಕ ವಸ್ತುಗಳ ಪತ್ತೆ ಪ್ರಕರಣ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಸಿಪಾಳ್ಯದ ಬಿಎಂಟಿಸಿ ಬಸ್‌ನಿಲ್ದಾಣದ ಶೌಚಾಲಯದ ಬಳಿ ಸ್ಫೋಟಕ ವಸ್ತುಗಳನ್ನು ಇಟ್ಟು ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಪಶ್ಚಿಮ ವಿಭಾಗದ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಕೋಲಾರ ಜಿಲ್ಲೆಯ ಬಂಗಾರಪೇಟೆಯ ಹಂಚಾಲ ಗ್ರಾಮದ ಎಚ್.ಎಂ.ಗಣೇಶ್ (38), ಮುನಿರಾಜ್ (32) ಹಾಗೂ ಕೋಲಾರ ತಾಲ್ಲೂಕು ಬೆಂಜನಹಳ್ಳಿಯ ಶಿವಕುಮಾರ್ (32) ಬಂಧಿತರು. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಜುಲೈ 23ರಂದು ಬಿಎಂಟಿಸಿ ಬಸ್ ನಿಲ್ದಾಣದ ಬಳಿ 22 ಜಿಲೆಟಿನ್ ಕಡ್ಡಿಗಳು ಹಾಗೂ 30 ಡಿಟೊನೇಟರ್‌ಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದರು. ಈ ಸಂಬಂಧ ಕಲಾಸಿಪಾಳ್ಯ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು.

ತನಿಖೆಗೆ ಆರು ತಂಡಗಳನ್ನು ರಚಿಸಲಾಗಿತ್ತು. ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಎಟಿಎಸ್ ಮಲ್ಲಪ್ಪ ಅವರು ದೂರು ನೀಡಿದ್ದರು.


ಜಪ್ತಿ ಮಾಡಿಕೊಳ್ಳಲಾದ ಸ್ಫೋಟಕ ವಸ್ತುಗಳು

ಕಲಾಸಿಪಾಳ್ಯ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ, ಬಾಂಬ್ ಪತ್ತೆದಳ ಹಾಗೂ ಶ್ವಾನ ದಳದಿಂದ ಪರಿಶೀಲನೆ ನಡೆಸಲಾಗಿತ್ತು.

ಹೆದರಿ ಚೀಲ ಬಿಟ್ಟು ಹೋಗಿದ್ದ ಆರೋಪಿಗಳು: 'ಕೋಲಾರದಲ್ಲಿ ಜಿಲೆಟಿನ್ ಕಡ್ಡಿ ಹಾಗೂ ಡಿಟೊನೇಟರ್‌ಗಳನ್ನು ಖರೀದಿಸಿದ್ದ ಆರೋಪಿಗಳು, ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲದ ಕ್ವಾರಿಯಲ್ಲಿ ಕಲ್ಲು ಬಂಡೆ ಸ್ಫೋಟಿಸಲು ಕೊಂಡೊಯ್ಯುತ್ತಿದ್ದರು. ಕಲಾಸಿಪಾಳ್ಯ ಬಸ್ ನಿಲ್ದಾಣಕ್ಕೆ ಬಂದಿದ್ದ ಆರೋಪಿಗಳು, ಶೌಚಾಲಯಕ್ಕೆ ತೆರಳಿದ್ದರು. ಅಲ್ಲಿ ಗೃಹರಕ್ಷಕ ದಳದ ಸಿಬ್ಬಂದಿಯನ್ನು ಗಮನಿಸಿ ಹೆದರಿ ಚೀಲವನ್ನು ಶೌಚಾಲಯದ ಎದುರು ಇಟ್ಟು ಪರಾರಿ ಆಗಿದ್ದರು. ಚೀಲವನ್ನು ಗಮನಿಸಿದ್ದ ಬಿಎಂಟಿಸಿ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಸಂಶೋಧನೆಗೆ ‘ಇ–ಸಂಪನ್ಮೂಲ’

ಬೆಂಗಳೂರು ವಿ.ವಿ ಗ್ರಂಥಾಲಯ ವಿಭಾಗದಿಂದ ಹೊಸ ಸೌಲಭ್ಯ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಬೆಂಗಳೂರು ವಿಶ್ವ ವಿದ್ಯಾಲಯ, ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ಗ್ರಂಥಾಲಯದ ಮೂಲಕ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ ‘ಇ- ಸಂಪನ್ಮೂಲ’ಗಳ ಮೂಲಕ ಉಚಿತವಾಗಿ ಗುಣಮಟ್ಟದ ಆಕರ ಗ್ರಂಥಗಳನ್ನು ಪೂರೈಸಲು ಆರಂಭಿಸಿದೆ.

ವಿಶ್ವವಿದ್ಯಾಲಯದ ಸಂಶೋಧನೆ ಮತ್ತು ಅಧ್ಯಯನಕ್ಕೆ ಡಿಜಿಟಲ್ ಶಕ್ತಿ ತುಂಬುವುದು ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರಿಗೆ ಮತ್ತು ಅತಿಥಿ ಉಪನ್ಯಾಸಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಡಿಜಿಟಲ್ ಅಥವಾ ಎಲೆಕ್ಟ್ರಾನಿಕ್ ಸಂಪನ್ಮೂಲಗಳನ್ನು ದೊರೆಯುವಂತೆ ಮಾಡುವುದು, ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಇರುವ ಶೈಕ್ಷಣಿಕ ಅಂತರವನ್ನು ಕಡಿಮೆ ಮಾಡುವುದು ಈ ಯೋಜನೆಯ ಉದ್ದೇಶ.

ಏನೇನಿವೆ ‘ಸಂಪನ್ಮೂಲಗಳು’?: ‘ಇ–ಸಂಪನ್ಮೂಲ’ದಲ್ಲಿ ಸಮಾಜ ವಿಜ್ಞಾನ, ಮಾನವಿಕ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಡಿಜಿಟಲ್ ಸಂಪನ್ಮೂಲಗಳಿವೆ. ‘ಸ್ಪ್ರಿಂಗರ್ ನೇಚರ್’, ‘ಟೇಲರ್ ಆ್ಯಂಡ್ ಫ್ರಾನ್ಸಿಸ್’, ‘ಪಿಯರ್‌ಸನ್’, ‘ಮ್ಯಾಕ್‌ಗ್ರಾ ಹಿಲ್ ’ನಂತಹ ಅಂತರರಾಷ್ಟ್ರೀಯ ಪ್ರಕಾಶಕರ 50 ಸಾವಿರಕ್ಕೂ ಹೆಚ್ಚು ಇ–ಪುಸ್ತಕಗಳಿವೆ. ವ್ಯಾಕರಣ ಕಲಿಕೆ, ವಿಶ್ವಾಸಾರ್ಹ ದತ್ತಾಂಶ, ಆರ್ಥಿಕತೆ ಮತ್ತು ಹಣಕಾಸು ಸಂಶೋಧನೆಗೆ ಅಗತ್ಯವಿರುವ ದತ್ತಾಂಶಗಳನ್ನು ನೀಡುವ ಪರಿಕರಗಳೂ ಲಭ್ಯವಿವೆ’ ಎಂದು ಯೋಜನೆಯ ರೂವಾರಿ, ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕ ಎಂ.ರಘುನಂದನ್ ‘ಪ್ರಜಾವಾಣಿ’ಗೆ ವಿವರಿಸಿದರು.

ಕೇಂದ್ರ ಸರ್ಕಾರದ ‘ಒನ್ ನೇಷನ್ ಒನ್ ಸಬ್‌ಸ್ಕ್ರಿಪ್ಷನ್’ (ಒಎನ್‌ಒಎಸ್) ಯೋಜನೆಯಡಿ, 13,236 ಅಂತರ ರಾಷ್ಟ್ರೀಯ ಇ-ಜರ್ನಲ್‌ಗಳು ಮತ್ತು 30 ಪ್ರಮುಖ ಪತ್ರಿಕೆಗಳ ಪ್ರಕಾಶಕರಿಂದ ಪರವಾನಗಿ ಪಡೆದುಕೊಂಡಿದೆ. ಈ ಸೌಲಭ್ಯವನ್ನು ವಿಶ್ವವಿದ್ಯಾಲಯಕ್ಕೆ ಸೇರಿರುವ ಸುಮಾರು 300 ಅನುಬಂಧಿತ ಕಾಲೇಜುಗಳಿಗೂ ಉಚಿತವಾಗಿ ಲಭ್ಯವಿರುವಂತೆ ಮಾಡಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

‘ಇ–ಸಂಪನ್ಮೂಲ’ ಪ್ರವೇಶ: ‘ಪುಸ್ತಕಗಳನ್ನು ಬಳಸುವ ಪರವಾನಗಿ ಮತ್ತು ನಿಯತಕಾಲಿಕೆಗಳ ಚಂದಾದಾರಿಕೆಯನ್ನು ವಿಶ್ವವಿದ್ಯಾಲಯ ಪಡೆದುಕೊಂಡು, ಬಳಕೆಗಾಗಿರುವ ಕೋಡ್ (ಐಪಿ) ಗಳನ್ನು ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರಿಗೆ ನೀಡಲಾಗುತ್ತದೆ. ಆ ಕೋಡ್ ಬಳಸಿ ಎಲ್ಲ ಆಕರ ಗ್ರಂಥಗಳನ್ನು ಓದಬಹುದು. ‘ಇ–ಸಂಪನ್ಮೂಲ’ಗಳಿಗಾಗಿಯೇ ಗ್ರಂಥಾಲಯ ವಿಭಾಗವು ಪ್ರತ್ಯೇಕ ಜಾಲತಾಣವನ್ನು ಆರಂಭಿಸಿದೆ. ಇತ್ತೀಚೆಗೆ ‘ಇ–ಸಂಪನ್ಮೂಲ’ ಬಳಕೆಯ ಪುನರ್ ಮನನ ಕಾರ್ಯಾಗಾರದಲ್ಲಿ ಈ ಜಾಲತಾಣವನ್ನು ಉದ್ಘಾಟಿಸಲಾಗಿದೆ’ ಎಂದು ರಘನಂದನ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಂಥ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕಾಗಿ ಆಕರ ಗ್ರಂಥಗಳು ಸಿಗುವುದು ಕಷ್ಟ. ಹೀಗಾಗಿ, ಇ–ಸಂಪನ್ಮೂಲದ ಮೂಲಕ ಗುಣಮಟ್ಟದ ಕೃತಿಗಳು, ನಿಯತ ಕಾಲಿಕೆಗಳು ಅವರಿಗೆ ಸುಲಭವಾಗಿ ಸಿಗುತ್ತವೆ. ಪ್ರಸ್ತುತ, ವಿಶ್ವವಿದ್ಯಾಲ ಯದ 1,500 ವಿದ್ಯಾರ್ಥಿಗಳು ಹಾಗೂ 500 ಅಧ್ಯಾಪಕರಿಗೆ ಈ ಸೌಲಭ್ಯವನ್ನು ಬಳಸಿಕೊಳ್ಳಲಿದ್ದಾರೆ’ ಎಂದು ಅವರು ವಿವರಿಸಿದರು.

ಮುಖ್ಯಾಂಶಗಳು

- ಸಾವಿರಾರು ಪುಸ್ತಕಗಳು, ನಿಯತಕಾಲಿಕೆಗಳು ಲಭ್ಯ
- ಐದು ತರಹದ ಡಿಜಿಟಲ್ ಕಲಿಕಾ ಪರಿಗಳೂ ಇವೆ
- 1500 ವಿದ್ಯಾರ್ಥಿಗಳಿಂದ ಸೌಲಭ್ಯ ಬಳಕೆ



‘ಇ–ಸಂಪನ್ಮೂಲ’, ಜಾಲತಾಣ ಶುರುವಾಗಿ ಒಂದು ತಿಂಗಳಾಗಿದೆ. ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇನ್ನಷ್ಟು ಉನ್ನತೀಕರಿಸುವ ಪ್ರಯತ್ನ ಮಾಡಲಾಗುತ್ತಿದೆ
ಜಯಕರ ಎಂ.ಎಸ್.,
ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

‘ಪೇಟೆಂಟ್’ ಅಧ್ಯಯನಕ್ಕೆ ಅನುಕೂಲ

ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಲ್ಲಿ ಹಲವರು ‘ಬೌದ್ಧಿಕ ಆಸ್ತಿ ಹಕ್ಕು (ಪೇಟೆಂಟ್)’ಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡುತ್ತಿದ್ದಾರೆ. ಅಂಥವರಿಗೆ ‘ಇ–ಸಂಪನ್ಮೂಲ’ ತುಂಬಾ ಸಹಾಯವಾಗುತ್ತದೆ. ಶಿಕ್ಷಕರಿಗಿಂತ, ಉದಯೋನ್ಮುಖ ಸಂಶೋಧಕರಿಗೆ(ಸ್ಕಾಲರ್ಸ್) ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂದು ರಘುನಂದನ್ ವಿವರಿಸಿದರು.



ರಘುನಂದನ್

‘ಇ–ಸಂಪನ್ಮೂಲ’ ವಿರುವ ಜಾಲತಾಣ ದಿಂದ ಸಂಶೋಧನಾ ಪ್ರಬಂಧ ಮತ್ತು ಲೇಖನ ತಯಾರಿಕೆಗಾಗಿ ಬೆರಳ ತುದಿಯಲ್ಲೇ ಭರಪೂರ ಮಾಹಿತಿ ಲಭ್ಯವಾಗುತ್ತಿದೆ
ಸತೀಶ್ ಕೆ.ಆರ್.,
ಸಂಶೋಧನಾ ವಿದ್ಯಾರ್ಥಿ, ಬೆಂವಿವಿ

‘ಇ - ಸಂಪನ್ಮೂಲ’ಗಳಿಂದ ಆಳವಾದ ಮತ್ತು ಸುಧೀರ್ಘ ಅಧ್ಯಯನಕ್ಕೆ ಅನುಕೂಲವಾಗುತ್ತಿದೆ. ಸ್ವ ಕಲಿಕೆಗೆ ಮತ್ತು ಬೋಧನೆಗೂ ಸಹಾಯಕವಾಗುತ್ತಿದೆ
ಸಿ.ಎಸ್.ಗೀತಾ,
ಅತಿಥಿ ಉಪನ್ಯಾಸಕಿ, ಬೆಂವಿವಿ

‘ಕರೀಂಖಾನ್ ಹೆಸರಲ್ಲಿ ಪ್ರಶಸ್ತಿ ಸ್ಥಾಪಿಸಿ’

ರಾಜ್ಯ ಸರ್ಕಾರಕ್ಕೆ ಜಾಣಗೆರೆ ವೆಂಕಟರಾಮಯ್ಯ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾನಪದ ಕಲೆ, ಸಾಹಿತ್ಯದ ಉಳಿವಿಗಾಗಿ ಶ್ರಮಿಸಿದ ಜಾನಪದ ತಜ್ಞ ಎಸ್.ಕೆ. ಕರೀಂಖಾನ್ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಬೇಕು’ ಎಂದು ಕನ್ನಡ ಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ’ ಸರಣಿ ಕಾರ್ಯಕ್ರಮದಲ್ಲಿ ಕರೀಂಖಾನ್ ಅವರ ಬಗ್ಗೆ ಉಪನ್ಯಾಸ ನೀಡಿದರು.

‘ಎಲ್ಲ ಸಾಹಿತ್ಯಕ್ಕೆ ಮೂಲ ಬೇರು ಜಾನಪದ ಸಾಹಿತ್ಯ. ಜಾನಪದ ಸಾಹಿತ್ಯ ಮತ್ತು ಕಲೆಗೆ ಕರೀಂಖಾನ್ ಗೌರವ ತಂದುಕೊಟ್ಟಿದ್ದಾರೆ. ಸಾಗರ ತಾಲ್ಲೂಕಿನಲ್ಲಿ 5 ಸಾವಿರ ಅಡಿ ಎತ್ತರದಲ್ಲಿರುವ ಮೇಘಾನೆ ಎಂಬ ಗ್ರಾಮದಲ್ಲಿ ಕ್ಷೇತ್ರ ಕಾರ್ಯ ಮಾಡಿ, ಅಲ್ಲಿನ ಸಂಸ್ಕೃತಿಯ ಬಗ್ಗೆ ಚಿತ್ರೀಕರಣ ಮಾಡಿದ್ದಾರೆ. ಅವರು ಈ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಜಾನಪದ ಕಲೆಯನ್ನು ರಕ್ಷಣೆ ಮಾಡಿರುವ ಅವರ ಹೆಸರಿನಲ್ಲಿ ಸರ್ಕಾರವು ಪ್ರಶಸ್ತಿ ಸ್ಥಾಪಿಸಿ, ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಶ್ರಮಿಸಿದವರಿಗೆ ಆ ಪ್ರಶಸ್ತಿ ನೀಡಬೇಕು. ಈ ಬಗ್ಗೆ ಸರ್ಕಾರಕ್ಕೆ ಆಗ್ರಹಿಸಲು ಸಾಹಿತಿಗಳ ನಿಯೋಗವನ್ನು ಮುಖ್ಯಮಂತ್ರಿ ಅವರ ಬಳಿ ಕರೆದೊಯ್ಯಬೇಕು’ ಎಂದರು.

ಕನ್ನಡ ಗೆಳಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ, ‘ಅಪಾರ ಪ್ರತಿಭೆ ಹೊಂದಿದ್ದ ಕರೀಂಖಾನ್ ಅವರಿಗೆ ಸೂಕ್ತ ಗೌರವ, ಸ್ಥಾನಮಾನಗಳು ಸಿಗಲಿಲ್ಲ. ಅಜ್ಞಾತ ಕವಿಗಳ ಹಾಡುಗಳು ನಾಶವಾಗಬಾರದೆಂದು ಅವುಗಳನ್ನು ಸಂಗ್ರಹಿಸಿ, ಪ್ರಕಟಿಸಿದ್ದಾರೆ’ ಎಂದು ಹೇಳಿದರು.

ಕರ್ನಾಟಕ ವಿಕಾಸರಂಗದ ಅಧ್ಯಕ್ಷ ವ.ಚ.ಚನ್ನೇಗೌಡ, ‘ಉರ್ದು ಮನೆ ಮಾತಾಗಿದ್ದರೂ ಕನ್ನಡ ಮತ್ತು ಸಂಸ್ಕೃತವನ್ನು ಕರೀಂಖಾನ್ ಅವರು ಅಧ್ಯಯನ ಮಾಡಿದ್ದರು. ಹೆಚ್ಚು ವಿದ್ಯಾಭ್ಯಾಸ ಮಾಡದಿದ್ದರೂ, ಜಾನಪದ ಪ್ರಕಾರ, ಭಗವದ್ಗೀತೆ, ಭಾಗವತ, ಶಿವಪುರಾಣಗಳ ಚಾರಿತ್ರಿಕ ಸಂಗತಿಗಳನ್ನು ನಿಂತಲ್ಲಿಯೇ ಹೇಳುವಷ್ಟು ಪ್ರತಿಭಾವಂತರಾಗಿದ್ದರು’ ಎಂದು ಸ್ಮರಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಹಾಗೂ ಕರೀಂಖಾನ್ ಅವರ ಕುಟುಂಬಸ್ಥರು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಜಾಣಗೆರೆ ವೆಂಕಟರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಮನು ಬಳಿಗಾರ್, ರಾ.ನಂ.ಚಂದ್ರಶೇಖರ, ವ.ಚ.ಚನ್ನೇಗೌಡ ಉಪಸ್ಥಿತರಿದ್ದರು

ಬನ್ನೇರುಘಟ್ಟ ಉದ್ಯಾನ: ಆ. 1ರಿಂದ ಪ್ರವೇಶ ದರ ದುಬಾರಿ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಮೃಗಾಲಯದಲ್ಲಿ ಪ್ರಸ್ತುತ ಪ್ರಾಣಿಗಳ ಪೋಷಣೆ, ಇಂಧನ ವೆಚ್ಚ ಮತ್ತು ಇತರ ಆಡಳಿತ ವೆಚ್ಚಗಳು ಹೆಚ್ಚಳವಾಗಿರುವುದರಿಂದ ಮೃಗಾಲಯದ ಪ್ರವೇಶ ಟಿಕೆಟ್ ದರಗಳನ್ನು ಪರಿಷ್ಕರಿಸಲಾಗಿದೆ.

ಪರಿಷ್ಕತ ದರ ಆಗಸ್ಟ್ 1ರಿಂದ ಜಾರಿಗೆ ಬರಲಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದ್ದಾರೆ.

ಮೃಗಾಲಯ ಪರಿಷ್ಕತ ದರ	
ವಯಸ್ಕರರು	₹120
ಮಕ್ಕಳು	₹60
ಹಿರಿಯ ನಾಗರಿಕರು	₹70
ಚಿಟ್ಟೆಗಳ ಪಾರ್ಕ್ ಪ್ರವೇಶ ದರ	
ವಯಸ್ಕರರು	₹50
ಮಕ್ಕಳಿಗೆ	₹30
ಹಿರಿಯ ನಾಗರಿಕರಿಗೆ	₹30
ಮೃಗಾಲಯ ಮತ್ತು ಚಿಟ್ಟೆ ಪಾರ್ಕ್ ಎರಡೂ ಸೇರಿ	
ವಯಸ್ಕರರು	₹170
ಮಕ್ಕಳಿಗೆ	₹90
ಹಿರಿಯ ನಾಗರಿಕರು	₹100

ಮೈಸೂರು ರೇಸ್

ಸಟಿವರ್ ಗೆಲ್ಲುವ ನಿರೀಕ್ಷೆ

ಅಂಬಾ ವಿಲಾಸ ಪ್ಯಾಲೇಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಟಿವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಿರಾಕಲ್ ಹನಿ 10, ಕೂರ್ಗ್ ಜನರಲ್ 8, ದಿ ಏಂಜೆಲ್ ಪವರ್ 4
2ನೇ ರೇಸ್: ಬೌಂಟಿಫುಲ್ ಬ್ಯೂಟಿ 8, ಸೊರೆಂಟೊ ಸೀಕ್ರೆಟ್ 10, ವಿಕ್ಟೋರಿಯಾನೊ 7
3ನೇ ರೇಸ್: ಅನುಷ್ಟುಭ 10, ಜನ್ನತ್ 12, ಬ್ರೇಕ್ ಅವೇ 8
4ನೇ ರೇಸ್: ಆಶೀರ್ವಾದ್ 3, ನ್ಯಾಚುರಲ್ ಸ್ಪೀಡ್ 2, ಮೇರ್‌ನಾಡ್ ಬ್ಯೂಟಿ 1
5ನೇ ರೇಸ್: ಮೂನ್‌ಲೈಟ್ ಕ್ವೀನ್ 3, ಅಮೇಜಿಂಗ್ ಇಮ್ರಾರಿಫ 4, ಫಾಲ್ಕನ್ ಫ್ಯೂರಿ 10
6ನೇ ರೇಸ್: ಸಟಿವರ್ 5, ಸೀ ದಿ ಸನ್ 4, ರೈಸ್ ಎ ಬಕ್ 3
7ನೇ ರೇಸ್: ಡೆಕಕಾರ್ನ್ 3, ವಂದಿಯಾಥೇವನ್ 8, ಸಿಯೊಲ್‌ಫಾರ್ ಬುಲೆಟ್ 6
8ನೇ ರೇಸ್: ಮ್ಯಾಜಿಕಲ್ ಬೇ 1, ಸೆರ್ರಾನೊ 3, ನ್ಯಾಚುರಲ್ ಲೈಟ್ 8

ಉತ್ತಮ ಬೆಟ್: ಆಶೀರ್ವಾದ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಬುರ್ಖಾ ಗ್ಯಾಂಗ್: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುರ್ಖಾ ಧರಿಸಿ ಪ್ರಯಾಣಿಕರ ಸೋಗಿನಲ್ಲಿ ಬಸ್‌ಗಳಲ್ಲಿ ಬ್ಯಾಗ್‌ಗಳಿಂದ ಚಿನ್ನಾಭರಣ ಕಳವು ಮಾಡುತ್ತಿದ್ದ ಮೂವರು ಮಹಿಳೆಯರನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಲಬುರ್ಗಿ ಜಿಲ್ಲೆಯ ಅನು, ಪ್ರಾರ್ಥನಾ ಮತ್ತು ಪದ್ಮಾ ಅವರನ್ನು ಬಂಧಿಸಿ, ₹16 ಲಕ್ಷ ಮೌಲ್ಯದ 190 ಗ್ರಾಂ ಚಿನ್ನಾಭರಣ ವನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಬಂಧನದಿಂದ ಮೂರು ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿವಾಸಿಯೊಬ್ಬರು 8ನೇ ಮೈಲಿ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ವೇಳೆ ಮೂವರು ಮಹಿಳೆಯರು ಸಹ ತಳ್ಳಿಕೊಂಡು ಹತ್ತಿದ್ದಾರೆ. ಬಸ್ ಸ್ವಲ್ಪ ದೂರ ಹೋಗುತ್ತಿದ್ದಂತೆ ಸೀಟು ಇಲ್ಲವೆಂದು ಹೇಳಿ ಇಳಿದು ಹೋಗಿದ್ದಾರೆ. ಬಸ್ ನೆಲಮಂಗಲದ ಅರಸಿನಕುಂಟೆ ಬಳಿ ಹೋಗುತ್ತಿದ್ದಾಗ ವ್ಯಾನಿಟಿ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿದ್ದ 50 ಗ್ರಾಂ ತೂಕದ ಆಭರಣ ಇರಲಿಲ್ಲ. ಮೂವರು ಮಹಿಳೆಯರ ಮೇಲೆ ಅನುಮಾನ ವ್ಯಕ್ತಪಡಿಸಿ ಮಹಿಳೆ ಪೊಲೀಸರಿಗೆ ದೂರು ನೀಡಿದ್ದರು.

ಪೊಲೀಸರು, ಬಾತ್ಮಿದಾರರ ಮಾಹಿತಿ ಆಧರಿಸಿ 8ನೇ ಮೈಲಿ ಬಸ್ ನಿಲ್ದಾಣ ಬಳಿ ಮೂವರು ಬುರ್ಖಾಧಾರಿ ಮಹಿಳೆಯರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಮಾಡಿರುವುದಾಗಿ ಒಪ್ಪಿಕೊಂಡರು. ಇದೇ ರೀತಿ ಪೀಣ್ಯದಲ್ಲಿ ಮೂರು ಕಡೆ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾರೆ. ಆರೋಪಿಗಳು ನೀಡಿದ ಮಾಹಿತಿ ಆಧರಿಸಿ ಯಶವಂತಪುರ ರೈಲ್ವೆ ಹಳಿ ಬಳಿಯ ಶೆಡ್‌ನಲ್ಲಿ ಬಚ್ಚಿಟ್ಟಿದ್ದ 190 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಂಚಾರ ದಟ್ಟಣೆ: ಬುಧವಾರ ವರ್ಕ್ ಫ್ರಂ ಹೋಂ

ನಿರ್ಧಾರ ಕೈಗೊಳ್ಳದ ಐ.ಟಿ ಕಂಪನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆ ತಡೆಯುವ ನಿಟ್ಟಿನಲ್ಲಿ ಐ.ಟಿ ಕಂಪನಿಗಳ ನೌಕರರಿಗೆ ಪ್ರತಿ ಬುಧವಾರ ವರ್ಕ್ ಫ್ರಂ ಹೋಂಗೆ ಅವಕಾಶ ಹಾಗೂ ಕೆಲಸದ ಅವಧಿಯಲ್ಲಿ ಬದಲಾವಣೆ ಮಾಡಲು ಸಂಚಾರ ಪೊಲೀಸರು ಮತ್ತು ಬಿಎಂಟಿಸಿ ನೀಡಿರುವ ಸಲಹೆ ಬಗ್ಗೆ ಐ.ಟಿ ಕಂಪನಿಗಳು ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಟೆಕ್ ಕಾರಿಡಾರ್‌ನಲ್ಲಿ ದಟ್ಟಣೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಮನ್ವಯ ಸಭೆಯಲ್ಲಿ ಈ ಪ್ರಸ್ತಾವ ಚರ್ಚೆಗೆ ಬಂದಿತ್ತು.

ಬಿಬಿಎಂಪಿ ವಲಯ ಆಯುಕ್ತರು, ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ, ಗ್ರೇಟರ್ ಬೆಂಗಳೂರು ಐಟಿ ಆ್ಯಂಡ್ ಕಂಪನೀಸ್ ಅಸೋಸಿಯೇಷನ್ (ಜಿಬಿಐಸಿಎ) ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಐ.ಟಿ ಕಂಪನಿಗಳಿಗೆ ಕೆಲವು ಸಲಹೆ ನೀಡಿದ್ದ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ, ‘ಐ.ಟಿ ಕಂಪನಿಗಳು ಅತಿ ಹೆಚ್ಚು ಇರುವ ಸಿಲ್ಕ್‌ಬೋರ್ಡ್-ಕೆ.ಆರ್.ಪುರಂ ವರೆಗಿನ ರಸ್ತೆಯಲ್ಲಿ ಗಂಟೆಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಇದೆ. ಹೊರವರ್ತುಲ ರಸ್ತೆಯಲ್ಲಿ ಬೆಳಿಗ್ಗೆ 9 ರಿಂದ 10ರ ದಟ್ಟಣೆ ಅವಧಿಯಲ್ಲಿ ವಾಹನ ಸಂಚಾರ ಹೆಚ್ಚಿರುತ್ತದೆ. ಆದ್ದರಿಂದ ಕೆಲಸದ ಅವಧಿಯನ್ನು ಬೆಳಿಗ್ಗೆ 7.30 ರಿಂದಲೇ ನಿಗದಿಪಡಿಸಬೇಕು. ವಾರದ ಮಧ್ಯದ ಅವಧಿಯಲ್ಲಿ ದಟ್ಟಣೆ ಹೆಚ್ಚಿರುವುದರಿಂದ ಬುಧವಾರ ವರ್ಕ್ ಫ್ರಂ ಹೋಂಗೆ ಅವಕಾಶ ಮಾಡಿಕೊಡಬೇಕು’ ಎಂದು ಹೇಳಿದ್ದರು.

ಟೆಕ್ ಪಾರ್ಕ್‌ಗಳಿಗೆ ಸಂಪರ್ಕ ಕಲ್ಪಿಸಲು ಪೂರಕವಾಗುವಂತೆ ಎಸಿ ಬಸ್ ಸೇವೆ ಒದಗಿಸುವುದಾಗಿ ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಜಿಬಿಐಸಿಎ ಉಪಾಧ್ಯಕ್ಷ ಗಿರೀಶ್, ‘ಸಂಚಾರ ದಟ್ಟಣೆಗೆ ಪರಿಹಾರ ಕಂಡುಕೊಳ್ಳಲೇಬೇಕು. ಕೇವಲ ಬುಧವಾರ ವರ್ಕ್ ಫ್ರಂ ಹೋಂ ಮಾಡಿದರೆ ಉಳಿದ ದಿನಗಳಲ್ಲಿ ಸಂಚಾರ ಸಮಸ್ಯೆ ಇರುವುದಿಲ್ಲವೇ? ಇದಕ್ಕೆ ಎಲ್ಲಾ ಕಂಪನಿಗಳು ಒಪ್ಪಿಕೊಳ್ಳುವುದು ಕಷ್ಟ. ಕೆಲಸದ ಅವಧಿಯನ್ನು ಬೆಳಿಗ್ಗೆ 8 ರಿಂದ 4 ಹಾಗೂ 11ರಿಂದ 7ರವರೆಗೆ ನಿಗದಿ ಮಾಡಬಹುದು.

ಕಂಪನಿಗಳು ಪೇ ಆ್ಯಂಡ್ ಪಾರ್ಕಿಂಗ್ ಜಾರಿಗೊಳಿಸಿದರೆ ಉದ್ಯೋಗಿಗಳು ಕಾರು ತರುವುದನ್ನು ನಿಲ್ಲಿಸಿ, ಸಾರ್ವಜನಿಕ ಸಾರಿಗೆ ಸೇವೆ ಬಳಸುತ್ತಾರೆ. ಪರ್ಯಾಯವಾಗಿ ಕ್ಯಾಬ್ ವ್ಯವಸ್ಥೆ ಮಾಡಬಹುದು. ಕೆಲವು ಕಂಪನಿಗಳು ಈಗಾಗಲೇ ಪೇ ಆ್ಯಂಡ್ ಪಾರ್ಕಿಂಗ್ ಜಾರಿಗೊಳಿಸಿವೆ. ಕಾರ್ ಪೂಲಿಂಗ್ ಅನ್ನು ಪ್ರೋತ್ಸಾಹಿಸಬೇಕು. ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು’ ಎಂದು ಹೇಳಿದರು.

ಟೆಕ್ ಪಾರ್ಕ್‌ಗಳಿಗೆ ಸಂಪರ್ಕ ಕಲ್ಪಿಸಲು ಪೂರಕವಾಗುವಂತೆ ಎ.ಸಿ ಬಸ್ ಸೇವೆ ಒದಗಿಸಲು ಸಿದ್ದ. ಸಂಚಾರ ದಟ್ಟಣೆ ನಿವಾರಣೆಗಾಗಿ ಕೆಲವು ಸಲಹೆಗಳನ್ನು ನೀಡಿದ್ದೇವೆ. ಆದರೆ ಐ.ಟಿ ಕಂಪನಿಗಳ ಪ್ರತಿನಿಧಿಗಳು ಈವರೆಗೂ ಸಂಪರ್ಕಿಸಿಲ್ಲ
ಮುಖ್ಯ ಸಂಚಾರ ವ್ಯವಸ್ಥಾಪಕ, ಬಿಎಂಟಿಸಿ

ಯಡಿಯೂರಪ್ಪಗೆ 'ಬಸವ ಶ್ರೀ' ಪ್ರಶಸ್ತಿ

'ಬಸವಣ್ಣ ನನ್ನ ಬದುಕಿನ ಪ್ರೇರಣ ಶಕ್ತಿ, ಅವರ ತತ್ವಗಳು ಬದುಕನ್ನು ರೂಪಿಸಿವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಬಸವೇಶ್ವರ ಸೇವಾ ಸಮಿತಿ, ಅಕ್ಕನ ಬಳಗ ಮಹಿಳಾ ಸಮಾಜ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾದ ಬೆಂಗಳೂರು ನಗರ ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ 'ಬಸವ ಶ್ರೀ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಯಡಿಯೂರಪ್ಪ, 'ಬಸವಣ್ಣ, ನನ್ನ ಬದುಕಿನ ಪ್ರೇರಣ ಶಕ್ತಿ. ಅವರ ಕಾಯಕ, ದಾಸೋಹ, ಸಮ ಸಮಾಜದ ತತ್ವಗಳು ನನ್ನ ಬದುಕನ್ನು ರೂಪಿಸಿವೆ. ಬಸವಣ್ಣನ ಹೆಸರಲ್ಲಿ ಪ್ರಶಸ್ತಿ ನೀಡಿರುವುದು, ಗೌರವದ ಜೊತೆಗೆ, ಜವಾಬ್ದಾರಿಯನ್ನೂ ನೆನಪಿಸಿದೆ' ಎಂದು ಹೇಳಿದರು.

'ಐವತ್ತು ವರ್ಷಗಳಿಗೂ ಹೆಚ್ಚಿನ ಅವಧಿಯ ನನ್ನ ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದೇನೆ. ಜನರ ಸೇವೆಯೇ ನನ್ನ ಧರ್ಮ ಎಂದುಕೊಂಡು ಜೀವಿಸಿದ್ದೇನೆ. ಈ ಪ್ರಶಸ್ತಿ ಇನ್ನೂ ಹೆಚ್ಚಿನ ರೀತಿಯಲ್ಲಿ ಬಡವರ, ಶೋಷಿತರ, ನಿರ್ಲಕ್ಷ್ಯಿತರ ಸೇವೆ ಮಾಡುವಂತೆ ಪ್ರೇರೇಪಿಸುತ್ತಿದೆ' ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೆ.ವಿ.ವಿ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, 'ರಾಜ್ಯದಲ್ಲಿ ಈವರೆಗೂ ವೀರಶೈವ–ಲಿಂಗಾಯತ ಸಮುದಾಯದ ಯಾವ ಮುಖ್ಯಮಂತ್ರಿಯೂ ಐದು ವರ್ಷ ಅಧಿಕಾರ ಅವಧಿಯನ್ನು ಪೂರ್ಣಗೊಳಿಸಿಲ್ಲ. ಅದಕ್ಕೆ ವೀರಶೈವ–ಲಿಂಗಾಯತರಲ್ಲಿರುವ ಒಳಪಂಗಡಗಳಲ್ಲಿ ಒಗ್ಗಟ್ಟಿನ ಕೊರತೆಯೇ ಕಾರಣ' ಎಂದರು.

'ನಮ್ಮಲ್ಲಿರುವ ಒಳಪಂಗಡಗಳು ಒಗ್ಗಟ್ಟಾದರೆ ರಾಜಕೀಯವಾಗಿ ಅಭಿವೃದ್ಧಿ ಹೊಂದಬಹುದು. ಈ ನಿಟ್ಟಿನಲ್ಲಿ ಒಳಪಂಗಡಗಳನ್ನು ಮರೆತು, ಒಗ್ಗಟ್ಟಿನಿಂದ ಸಂಘಟಿತರಾದರೆ ಸಮುದಾಯವೂ ಬಲವರ್ಧನೆ ಗೊಳ್ಳುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

'ನಮ್ಮ ಸಮುದಾಯದ ಕೆ.ರುದ್ರೇಶ್ ಅವರನ್ನು ಮುಂದಿನ ಚುನಾವಣೆಯಲ್ಲಿ ಯಶವಂತಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿಸುವ ಕುರಿತು ಯಡಿಯೂರಪ್ಪ ಅವರು ಪ್ರಸ್ತಾಪಿಸಿದ್ದಾರೆ. ಅವರಿಗೊಂದು ಅವಕಾಶ ಕೊಡಿ ಎಂದು' ಮನವಿ ಮಾಡಿದರು.

ತುಮಕೂರಿನ ಸಿದ್ಧಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿ ಮಾತನಾಡಿದರು. ಅಕ್ಕನ ಬಳಗ ಮಹಿಳಾ ಸಮಾಜದ ಅಧ್ಯಕ್ಷೆ ಪಂಕಜ ಶಿವಾನಂದ ಮತ್ತಿತರರು ಹಾಜರಿದ್ದರು.



ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಅವರಿಗೆ 'ಬಸವಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. 'ಬಸವೇಶ್ವರ ಸೇವಾ ಸಮಿತಿ'ಯ ಗೌರವ ಅಧ್ಯಕ್ಷ ಎಸ್. ಗುರುಸ್ವಾಮಿ, ಅಧ್ಯಕ್ಷ ವಿಶ್ವನಾಥಯ್ಯ, ತುಮಕೂರಿನ ಸಿದ್ಧಗಂಗಾಮಠದ ಶಿವಸಿದ್ದೇಶ್ವರ ಸ್ವಾಮೀಜಿ ಮತ್ತು ಕೆವಿವಿ ಸಂಸ್ಥೆಯ ಅಧ್ಯಕ್ಷ ಬಿ.ಎಸ್ ಪರಮಶಿವಯ್ಯ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಪ್ರಶಸ್ತಿ ಪ್ರದಾನ

ಅಕ್ಕನ ಬಳಗ ಮಹಿಳಾ ಸಮಾಜ, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಸುಶೀಲಮ್ಮ ಅವರಿಗೆ 'ಅಕ್ಕಮಹಾದೇವಿ ಪ್ರಶಸ್ತಿ', ಶ್ರೀಬಸವೇಶ್ವರ ಸೇವಾ ಸಮಿತಿ, ಡಾ.ದೀಪಕ್ ಶಿವರಾತ್ರಿ ಅವರಿಗೆ 'ಕಾಯಕ ಯೋಗಿ', ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ ಅವರಿಗೆ 'ಕಾಯಕ ರತ್ನ' ಪ್ರಶಸ್ತಿ ನೀಡಿ ಗೌರವಿಸಿತು. ಇದೇ ವೇಳೆ ವಿವಿಧ ಕ್ಷೇತ್ರಗಳ ಒಂಬತ್ತು ಸಾಧಕರಿಗೆ 'ಅತ್ಯುತ್ತಮ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

'ತಳಮಟ್ಟದಲ್ಲಿ ಪಕ್ಷ ಸಂಘಟನೆಗೆ ಒತ್ತು'

ಯಲಹಂಕ: ವಿಧಾನ ಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ ಅವರ ನೇತೃತ್ವದಲ್ಲಿ ಯಲಹಂಕ ಕ್ಷೇತ್ರದ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯನ್ನು ಉಪನಗರದಲ್ಲಿ ಆಯೋಜಿಸಲಾಗಿತ್ತು.

ಸಭೆಯಲ್ಲಿ ಮುಂಬರುವ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷದಿಂದ ಸ್ಪರ್ಧಿಸುವುದು, ಪಕ್ಷದ ಸಂಘಟನೆ ಕುರಿತು ಮುಖಂಡರು ಹಾಗೂ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಣೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ವೇಳೆ ಮಾತನಾಡಿದ ಯಲಹಂಕ ಕ್ಷೇತ್ರದ ಜೆಡಿಎಸ್ ಘಟಕದ ಅಧ್ಯಕ್ಷ ಎ.ವಿ.ವೇಣುಗೋಪಾಲ್, 'ಕ್ಷೇತ್ರದಲ್ಲಿ ಪಕ್ಷವನ್ನು ಬಲಗೊಳಿಸಲು ಪ್ರತಿ ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ಜನರನ್ನು ಸಂಘಟಿಸಲಾಗುತ್ತದೆ' ಎಂದರು.

'ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರ ಸ್ವಾಮಿ ಅವರ ಆಡಳಿತಾವಧಿಯಲ್ಲಿ ಕೈಗೊಂಡಿರುವ ಜನಪರ ಕಾರ್ಯಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲಾಗುವುದು. ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವ ಮೂಲಕ ಯಲಹಂಕ ಕ್ಷೇತ್ರದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸಲಾಗುವುದು' ಎಂದು ತಿಳಿಸಿದರು.

ನಾಗರ ಪಂಚಮಿ ಸಂಭ್ರಮ

ಪ್ರಜಾವಾಣಿ ಚಿತ್ರ: ರಂಜು ಪಿ.



ನಾಗರ ಪಂಚಮಿ ಅಂಗವಾಗಿ ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಭಕ್ತರು ನಾಗರ ಕಲ್ಲಿಗೆ ಹಾಲಿನ ಅಭಿಷೇಕ ಮಾಡಿ ಪೂಜೆ ಸಲ್ಲಿಸಿದರು

ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ಪೀಣ್ಯ ಎರಡನೇ ಹಂತದ ಎನ್‌ಟಿಟಿಎಫ್ ರಸ್ತೆಯಲ್ಲಿ ಮಂಗಳವಾರ ರಾತ್ರಿ ಬಿಎಂಟಿಸಿ ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಯಾದಗಿರಿ ಜಿಲ್ಲೆಯ ದೇವೇಂದ್ರಪ್ಪ (22) ಮೃತಪಟ್ಟ ಸವಾರ. ದೇವೇಂದ್ರಪ್ಪ ಅವರು ಅಂದ್ರಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಬೈಕ್‌ನಲ್ಲಿ ಹೋಗುತ್ತಿದ್ದ ದೇವೇಂದ್ರಪ್ಪಗೆ ಬಸ್ ಡಿಕ್ಕಿ ಹೊಡೆದಿದೆ. ಆಗ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಸ್, ಪೀಣ್ಯ ಎರಡನೇ ಹಂತದಿಂದ ಜಾಲಹಳ್ಳಿ ಕಡೆಗೆ ಚಲಿಸುತ್ತಿತ್ತು. ಚಾಲಕನನ್ನು ಬಂಧಿಸಿ ಬಸ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರದ ಬೇರುಗಳಿಂದ ನೀರು, ಒಳಚರಂಡಿ ಕೊಳವೆಗೆ ಹಾನಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಉಲ್ಲಾಳು ವಾರ್ಡ್ ವಿನಾಯಕ ಲೇಔಟ್‌ನ 1ನೇ ಮುಖ್ಯ ರಸ್ತೆಯಲ್ಲಿ (ಅಮ್ಮ ಆಶ್ರಮದ ಹಿಂಭಾಗ) ಬೃಹದಾಕಾರವಾಗಿ ಬೆಳೆದಿರುವ ಮರದ ಬೇರುಗಳಿಂದ ಒಳಚರಂಡಿಗೆ ತೊಂದರೆಯಾಗುತ್ತಿದೆ' ಎಂದು ಸ್ಥಳೀಯ ನಾಗರಿಕರು ತಿಳಿಸಿದ್ದಾರೆ.

'ಮರದ ಬೇರುಗಳು ಒಳಚರಂಡಿಗೆ ಹಾನಿ ಮಾಡುತ್ತಿರುವ ಕುರಿತು ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿಗಳಿಗೆ ದೂರು ನೀಡಿದ್ದೆವು. ಆದರೂ, ಸಮಸ್ಯೆ ಬಗೆಹರಿದಿಲ್ಲ' ಎಂದು ನಾಗರಿಕರು ದೂರಿದರು.

ಮರದ ಪಕ್ಕದಲ್ಲೇ ಒಳಚರಂಡಿ, ಕುಡಿಯುವ ನೀರಿನ ಕೊಳವೆಗಳು ಹಾದು ಹೋಗಿವೆ. ಬೇರುಗಳು ವಿಸ್ತರಿಸುತ್ತಿರುವುದರಿಂದ ನೀರಿನ ಕೊಳವೆ ಒಡೆದು ಹೋಗುತ್ತಿದೆ. ಸುತ್ತಮುತ್ತಲಿನವರು ಸ್ವಂತ ಹಣ ಖರ್ಚು ಮಾಡಿ ಹಲವಾರು ಬಾರಿ ಕೊಳವೆಯನ್ನು ದುರಸ್ತಿ ಮಾಡಿಸಿದ್ದಾರೆ. ಆದರೂ, ಪದೇ ಪದೇ ಕೊಳವೆ ಒಡೆದು ಹೋಗುತ್ತಿದೆ' ಎನ್ನುತ್ತಾರೆ ಸ್ಥಳೀಯ ನಿವಾಸಿ ಸಿ.ಎಚ್. ಕೃಷ್ಣಮೂರ್ತಿ.

ಮಳೆ ಸುರಿದಾಗ, ಗಾಳಿ ಬೀಸಿದಾಗ ಮರದ ಕೊಂಬೆಗಳು ವಿದ್ಯುತ್ ತಂತಿಗೆ ತಾಕುತ್ತವೆ. ಇದೂ ಕೂಡ ಅಪಾಯವೇ. ಈ ಎಲ್ಲ ವಿಷಯಗಳನ್ನು ಬಿಬಿಎಂಪಿಗೆ ತಿಳಿಸಿದ್ದೇವೆ. ಆದರೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ನಾಗರಿಕರು ದೂರಿದರು.

ಈ ಸಂಬಂಧ ಪ್ರತಿಕ್ರಿಯೆಗಾಗಿ ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿಯನ್ನು ಸಂಪರ್ಕಿಸಿದಾಗ ಅವರು ಲಭ್ಯವಾಗಲಿಲ್ಲ.

ಕಾಲ್ತುಳಿತ: ಎಸ್‌ಒಪಿ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟಂತಹ ಅಹಿತಕರ ಘಟನೆಗಳು ಭವಿಷ್ಯದಲ್ಲಿ ಸಂಭವಿಸದಂತೆ ತಡೆಯುವ ನಿಟ್ಟಿನಲ್ಲಿ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಮಂಗಳವಾರ ನಿರ್ದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಕ್ರೀಡಾಂಗಣದ ಸಾಮರ್ಥ್ಯ ಕೇವಲ 35 ಸಾವಿರ ಮಾತ್ರ. ಆದರೆ, ಘಟನೆ ನಡೆದ ದಿನ 3 ಲಕ್ಷ ಜನ ಜಮಾಯಿಸಿದ್ದರು. ದೊಡ್ಡ ಸಂಖ್ಯೆಯಲ್ಲಿದ್ದ ಜನರು ಒಮ್ಮೆಲೇ ಕ್ರೀಡಾಂಗಣದ ಒಳಗೆ ನುಗ್ಗಲು ಯತ್ನಿಸಿದಾಗ ದುರ್ಘಟನೆ ಜರುಗಿದೆ. ಇಂತಹ ಘಟನೆಗಳನ್ನು ತಡೆಯಲು ಎಸ್‌ಒಪಿ ರೂಪಿಸಲಾಗುತ್ತಿದೆ. ಶೀಘ್ರವೇ ಈ ಎಸ್‌ಒಪಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಇದನ್ನು ಮನ್ನಿಸಿದ ನ್ಯಾಯಪೀಠ, 'ಈ ಪ್ರಕರಣ ಅಮಾಯಕ ಜೀವಗಳು ಮೃತಪಟ್ಟ ಕುರಿತಂತೆ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಪಿಐಎಲ್. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತಿದೆಯೇ, ಭವಿಷ್ಯದಲ್ಲಿ ಇಂತಹ ಘಟನೆಗಳು ಸಂಭವಿಸದಂತೆ ತಡೆಯಲು ಎಸ್‌ಒಪಿ ಅಥವಾ ಶಿಷ್ಟಾಚಾರ ಇದೆಯೇ ಎಂಬುದರತ್ತ ಮಾತ್ರವೇ ಗಮನ ಹರಿಸಲು ಇಚ್ಛಿಸುತ್ತದೆ' ಎಂದು ಮೌಖಿಕವಾಗಿ ನುಡಿಯಿತು. ಸೆಪ್ಟೆಂಬರ್ 1ಕ್ಕೆ ವಿಚಾರಣೆಯನ್ನು ಮುಂದೂಡಿತು.

ಡಿಎನ್‌ಎ ಸಂಸ್ಥೆ ಪರ ಹಿರಿಯ ವಕೀಲರಾದ ಬಿ.ಕೆ.ಸಂಪತ್ ಕುಮಾರ್, ಅಮಿಕಸ್ ಕ್ಯೂರಿ ಹಿರಿಯ ವಕೀಲೆ ಎಸ್. ಸುಶೀಲಾ, ನಂದಕುಮಾರ್ ಮಧ್ಯಂತರ ಅರ್ಜಿದಾರಾಗಿ ಸೇರ್ಪಡೆ ಹೊಂದಲು ಬಯಸಿರುವ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಬಿ.ನರಗುಂದ ಮತ್ತು ಕೆ.ದಿವಾಕರ ಹಾಜರಿದ್ದರು.

ಗಾಳಿ ಆಂಜನೇಯ: ಆದೇಶ ರದ್ದಿಗೆ ನಕಾರ

ನಗರದ ಪ್ರಸಿದ್ಧ ಗಾಳಿ ಆಂಜನೇಯ ಸ್ವಾಮಿ ದೇವಾಲಯವನ್ನು ಮುಜರಾಯಿ ಇಲಾಖೆ ಸುಪರ್ದಿಗೆ ಒಪ್ಪಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಎತ್ತಿಹಿಡಿದಿರುವ ಏಕಸದಸ್ಯ ನ್ಯಾಯಪೀಠದ ಆದೇಶ ರದ್ದುಪಡಿಸಲು ವಿಭಾಗೀಯ ನ್ಯಾಯಪೀಠ ನಿರಾಕರಿಸಿದೆ.

ಇದೇ 17ರಂದು ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ಆದೇಶ ಪ್ರಶ್ನಿಸಿ ದೇವಾಲಯದ ಟ್ರಸ್ಟ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಏಕಸದಸ್ಯ ನ್ಯಾಯ ಪೀಠ ಸದ್ಯ ಮಧ್ಯಂತರ ಆದೇಶವನ್ನಷ್ಟೇ ನೀಡಿದೆ. ಹೀಗಾಗಿ ಮೂಲ ಅರ್ಜಿಯನ್ನು ಹೊಸದಾಗಿ ವಿಚಾರಣೆ ನಡೆಸಿ ನಾಲ್ಕು ತಿಂಗಳಲ್ಲಿ ವಿಲೇವಾರಿ ಮಾಡಬೇಕು' ಎಂದು ಆದೇಶಿಸಿತು.

ಕಬ್ಬನ್ ಉದ್ಯಾನದಲ್ಲಿರುವ ಸಸ್ಯ ಪ್ರಭೇದಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶ

ಪ್ರವಾಸಿ ಮಾರ್ಗದರ್ಶಿ ನಡಿಗೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿರುವ ಸಸ್ಯ ಪ್ರಭೇದಗಳು, ಜೀವವೈವಿಧ್ಯಗಳು ಹಾಗೂ ಐತಿಹಾಸಿಕ ಸ್ಥಳಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆ ಆಯೋಜಿಸಿದ್ದ 'ಕಬ್ಬನ್ ವಾಕ್ಸ್' ಎಂಬ ಪ್ರವಾಸಿ ಮಾರ್ಗದರ್ಶಿ ನಡಿಗೆಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಕಬ್ಬನ್ ಉದ್ಯಾನ ಹಾಗೂ ಲಾಲ್‌ಬಾಗ್‌ನಲ್ಲಿ ಸಾವಿರಾರು ಸಸ್ಯ ಪ್ರಭೇದಗಳಿವೆ. ಇವುಗಳ ವೈಜ್ಞಾನಿಕ ಹೆಸರು, ಧಾರ್ಮಿಕ ಮಹತ್ವ, ಔಷಧೀಯ ಬಳಕೆಯ ಬಗ್ಗೆ ಸಾರ್ವಜನಿಕರಿಗೆ ಗೊತ್ತಿರುವುದಿಲ್ಲ. ಆದ್ದರಿಂದ ತೋಟಗಾರಿಕೆ ಇಲಾಖೆಯು ಕಬ್ಬನ್ ವಾಕ್ಸ್ ಪ್ರಾರಂಭಿಸಿದೆ. ಇಲ್ಲಿ ಪರಿಸರ ಕಾರ್ಯಕರ್ತರು ಆಯಾ ಗಿಡ–ಮರಗಳ ಮಹತ್ವ, ಇತಿಹಾಸ ಹಾಗೂ ಬಳಕೆಯ ಕುರಿತು ಸಂದರ್ಶಕರಿಗೆ ಮಾಹಿತಿ ನೀಡಲಿದ್ದಾರೆ. ಪ್ರತಿಯೊಬ್ಬರೂ ಕಬ್ಬನ್ ಉದ್ಯಾನ ಹಾಗೂ ಲಾಲ್‌ಬಾಗ್‌ನಲ್ಲಿನ ಸಸ್ಯ ಪ್ರಭೇದಗಳು ಹಾಗೂ ಜೀವವೈಧ್ಯಗಳ ಬಗ್ಗೆ ತಿಳಿದುಕೊಳ್ಳಬೇಕು' ಎಂದು ಕರೆ ನೀಡಿದರು.

ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ಮಾತನಾಡಿ, 'ತೋಟಗಾರಿಕೆ ಇಲಾಖೆ ವತಿಯಿಂದ ಪ್ರವಾಸಿ ನಡಿಗೆಯನ್ನು ಪ್ರಾರಂಭಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾಹಿತಿ ನೀಡಲಾಗುತ್ತದೆ. ಪ್ರತಿ ಶನಿವಾರ ಹಾಗೂ ಭಾನುವಾರ ಈ ಪ್ರವಾಸಿ ನಡಿಗೆ ನಡೆಯಲಿದೆ. ಕಬ್ಬನ್ ಉದ್ಯಾನದ ವಿಸ್ತೀರ್ಣ 190 ಎಕರೆಗೂ ಹೆಚ್ಚಿದ್ದು, ಕೇವಲ 90 ನಿಮಿಷಗಳ ಒಂದು ಪ್ರವಾಸಿ ನಡಿಗೆಯಲ್ಲಿ ಎಲ್ಲವನ್ನೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು 7–8 ವಿಭಾಗಗಳಲ್ಲಿ ವಿಂಗಡಿಸುವ ಕುರಿತು ಚಿಂತನೆ ನಡೆದಿದೆ' ಎಂದರು.

ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ್, ಪರಿಸರ ಕಾರ್ಯಕರ್ತರಾದ ಅರುಣ್ ಪೈ, ಕಾರ್ತಿಕ್, ಪ್ರಿಯಾ ವೆಂಕಟೇಶ್ ಉಪಸ್ಥಿತರಿದ್ದರು.



ಕಬ್ಬನ್ ಉದ್ಯಾನದಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿದ್ದ ಕಬ್ಬನ್ ವಾಕ್ಸ್ ಪ್ರವಾಸಿ ಮಾರ್ಗದರ್ಶಿ ನಡಿಗೆಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಎಂ. ಜಗದೀಶ್, ಉಪ ನಿರ್ದೇಶಕಿ ಜಿ. ಕುಸುಮಾ ಪಾಲ್ಗೊಂಡಿದ್ದರು

ಪ್ರಮೋದ್ ಸೇರಿ 43 ಖಾತೆದಾರರ ವಿರುದ್ಧ ಎಫ್‌ಐಆರ್

ರಮ್ಯಾ ಅವರಿಗೆ ಅಶ್ಲೀಲ, ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿದ್ದ ಪ್ರಕರಣ ಸಿಸಿಬಿಗೆ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿದ್ದ ಪ್ರಕರಣದ ತನಿಖೆಯನ್ನು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಸಿಸಿಬಿಗೆ ವರ್ಗಾವಣೆ ಮಾಡಿ ಮಂಗಳವಾರ ಆದೇಶಿಸಿದರು.



ರಮ್ಯಾ

ಜಂಟಿ ಪೊಲೀಸ್ ಕಮಿಷನರ್ ಮೇಲ್ವಿಚಾರಣೆಯಲ್ಲಿ ಎಸಿಪಿ ದರ್ಜೆಯ ಅಧಿಕಾರಿಯನ್ನು ತನಿಖೆಗೆ ನೇಮಿಸಲಾಗಿದೆ. ಇನ್‌ಸ್ಟಾಗ್ರಾಂನಲ್ಲಿ ಬೆದರಿಕೆ ಹಾಕಿದ್ದ ಆರೋಪಿಗಳ ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಸೀಮಂತ್ ಕುಮಾರ್ ಸಿಂಗ್ ಅವರು ಹೇಳಿದರು.

ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾದ ಪ್ರಕರಣದ ಕಡತವನ್ನು ಪಡೆದುಕೊಂಡಿರುವ ಸಿಸಿಬಿ ಪೊಲೀಸರು, ತನಿಖೆ ಆರಂಭಿಸಿದ್ದಾರೆ. ರಮ್ಯಾ ಅವರನ್ನು ಮಂಗಳವಾರ ಭೇಟಿ ಮಾಡಿದ ಸಿಸಿಬಿ ಪೊಲೀಸರು, ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಮಾಹಿತಿ ಕಲೆಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಲವರ ವಿರುದ್ಧ ಎಫ್‌ಐಆರ್: ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರಮ್ಯಾ ಅವರು ಸೀಮಂತ್ ಕುಮಾರ್ ಸಿಂಗ್ ಅವರನ್ನು ಸೋಮವಾರ ಭೇಟಿ ಮಾಡಿ 4 ಪುಟಗಳ ದೂರು ನೀಡಿದ್ದರು. ದೂರಿನ ಪ್ರತಿಯನ್ನು ಪೊಲೀಸ್ ಕಮಿಷನರ್ ಸೈಬರ್ ಠಾಣೆಗೆ ವರ್ಗಾವಣೆ ಮಾಡಿ ತನಿಖೆಗೆ ಆದೇಶಿಸಿದ್ದರು.

ಪ್ರಮೋದ್‌ಗೌಡ, ಡಿ ಬಾಸ್ ಗಂಗಾ, ಆಕಾಶ್, ದೊಣ್ಣೂರು ನಾಗರಾಜ್, ರಾಜು, ಅಪ್ಪು ಬಡಿಗೇರ್, ಡೆವಿಲ್ ಲವ್ವರ್, ಆಕಾಶ್, ಹರೀಶಣ್ಣ, ಹೇಮಂತ್, ಸುಜನ್, ಚಿನ್ಮಯ್, ವಿನು ಸೇರಿದಂತೆ ವಿವಿಧ ಹೆಸರುಗಳಲ್ಲಿರುವ 43 ಖಾತೆಗಳ ವಿರುದ್ಧ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ ಕಾಯ್ದೆಯ ಸೆಕ್ಷನ್‌ಗಳಾದ 351(2) (ಕ್ರಿಮಿನಲ್ ಬೆದರಿಕೆಯ ಉದ್ದೇಶದ ಅಪರಾಧ), 351(3) (ಸಾವು, ತೀವ್ರ ನೋವುಂಟು ಮಾಡುವ ಉದ್ದೇಶದ ಕ್ರಿಮಿನಲ್ ಬೆದರಿಕೆ), 352 (ಉದ್ದೇಶಪೂರ್ವಕ ಅವಮಾನದ ಮೂಲಕ ಶಾಂತಿಭಂಗದ ಯತ್ನ), 75(1) (ಲೈಂಗಿಕ ಕಿರುಕುಳ), 75(1)(IV) (ಲೈಂಗಿಕ ಟೀಕೆ) ಹಾಗೂ 79 (ಮಹಿಳೆಯ ಗೌರವಕ್ಕೆ ಧಕ್ಕೆ) ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತು ಇತರೆ ಆರು ಆರೋಪಿಗಳಿಗೆ ಜಾಮೀನು ನೀಡಿರುವ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಕಳೆದ ವಾರ ಛೀಮಾರಿ ಹಾಕಿತ್ತು. ಜಾಮೀನಿನ ಮೇಲಿನ ಆದೇಶವನ್ನು ಕಾಯ್ದಿರಿಸಿತ್ತು.

ಇದರ ಬೆನ್ನಲ್ಲೇ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದ ರಮ್ಯಾ, 'ಭಾರತದ ಸಾಮಾನ್ಯ ಜನರಿಗೆ ಸುಪ್ರೀಂ ಕೋರ್ಟ್ ಭರವಸೆಯ ಕಿರಣ ಇದ್ದಂತೆ. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿ' ಎಂದು ಅದರಲ್ಲಿ ಉಲ್ಲೇಖಿಸಿದ್ದರು. ಈ ಪೋಸ್ಟ್ ಬಳಿಕ ರಮ್ಯಾ ಅವರ ಇನ್‌ಸ್ಟಾಗ್ರಾಂ ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿದ್ದವು. ಸಂದೇಶಗಳ ಸ್ಕ್ರೀನ್ ಶಾಟ್ ಅನ್ನು ರಮ್ಯಾ ತೆಗೆದುಕೊಂಡು ಪೊಲೀಸರಿಗೆ ದೂರು ನೀಡಿದ್ದಾರೆ.

ಬೆದರಿಕೆ: ದೂರು ನೀಡಿದ ನಟ ಪ್ರಥಮ್

ಬೆಂಗಳೂರು: ನಟ ದರ್ಶನ್ ಅವರ ಅಭಿಮಾನಿಗಳು ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ನಟ ಪ್ರಥಮ್ ಸಹ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸ್‌ಪಿಗೆ ಮಂಗಳವಾರ ಲಿಖಿತ ದೂರು ನೀಡಿದರು.



ಪ್ರಥಮ್

ದೂರು ನೀಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಪ್ರಥಮ್, 'ನನಗೆ ದರ್ಶನ್ ಅಭಿಮಾನಿಗಳು ಬೆದರಿಕೆ ಹಾಕುತ್ತಿದ್ದಾರೆ. ನನಗೆ ಏನಾದರೂ ಆದರೆ ದರ್ಶನ್ ಅವರೇ ಕಾರಣ. ದರ್ಶನ್ ಅವರಿಗೆ ಸಾಮಾನ್ಯ ಜ್ಞಾನ ಇಲ್ವಾ? ಅವರು ತಮ್ಮ ಅಭಿಮಾನಿಗಳಿಗೆ ಬುದ್ಧಿ ಹೇಳಬೇಕು' ಎಂದು ಕೋರಿದರು.

'ಸಾಕಷ್ಟು ಬಾರಿ ಬೆದರಿಕೆ ಬಂದಿದೆ. ಸದ್ಯಕ್ಕೆ ಬೆಂಗಳೂರು ಬಿಟ್ಟು ಸ್ವಂತ ಊರಾದ ಚಾಮರಾಜನಗರಕ್ಕೆ ತೆರಳುತ್ತಿದ್ದೇನೆ. ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತೇನೆ' ಎಂದರು.

ದೂರಿನಲ್ಲಿ ಏನಿದೆ?: 'ಸಿನಿಮಾ ತಂಡವೊಂದರ ಆಹ್ವಾನದ ಮೇರೆಗೆ ಜುಲೈ 22ರಂದು ದೊಡ್ಡಬಳ್ಳಾಪುರದ ಯಲ್ಲಮ್ಮ ದೇವಸ್ಥಾನಕ್ಕೆ ತೆರಳಿದ್ದೆ. ಪೂಜೆ ಮುಗಿಸಿಕೊಂಡು ವಾಪಸ್ ಬರುವಾಗ ಯಶಸ್ವಿ, ಬೇಕರಿ ರಘು ಮತ್ತಿತರರು ನನ್ನ ಕಾರನ್ನು ಸುತ್ತುವರಿದು, ಅಜ್ಞಾತ ಸ್ಥಳಕ್ಕೆ ಕರೆದೊಯ್ದರು. ನಮ್ಮ ಬಾಸ್ ಬಗ್ಗೆ ಮಾತನಾಡುತ್ತೀಯಾ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಡ್ರ್ಯಾಗರ್ ಹಾಗೂ ಚಾಕು ತೋರಿಸಿ ಚುಚ್ಚಲು ಯತ್ನಿಸಿದ್ದರು. ಬಹಳ ಉಪಾಯದಿಂದ ನಾನು ಪ್ರಾಣ ಉಳಿಸಿಕೊಂಡು ಬಂದೆ' ಎಂದು ಪ್ರಥಮ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ದರ್ಶನ್ ಅವರ ಅಧಿಕೃತ ಫ್ಯಾನ್ ಪೇಜ್‌ಗಳಾದ ಡಿ ಡೈನಾಸ್ಟಿ, ಡಿ ಕಿಂಗ್‌ಡಮ್, ಡಿ ಯೂನಿವರ್ಸ್ ಹಾಗೂ ಡೆವಿಲ್ ಕಿಂಗ್‌ಡಮ್ ಜತೆಗೆ 500ಕ್ಕೂ ಹೆಚ್ಚು ಪೇಜ್‌ಗಳಿಂದ ತೇಜೋವಧೆ ಮಾಡಲಾಗುತ್ತಿದೆ' ಎಂದು ದೂರಿನ ಪ್ರತಿಯಲ್ಲಿ ಉಲ್ಲೇಖಿಸಿದ್ದಾರೆ.

'31ರಿಂದ ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮ್ಮೇಳನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನಲ್ಲಿ ನಡೆಯಲಿರುವ ದೇಶದ ಮೊದಲ ಕ್ವಾಂಟಮ್ ವಿಜ್ಞಾನ ಸಮ್ಮೇಳನದಲ್ಲಿ, ವಿಶ್ವದ ಖ್ಯಾತ ವಿಜ್ಞಾನಿಗಳು ಭಾಗಿಯಾಗಲಿದ್ದಾರೆ' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ತಿಳಿಸಿದರು.

ವಿಕಾಸಸೌಧದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮ್ಮೇಳನವು



ಎನ್.ಎಸ್. ಬೋಸರಾಜು

ಜುಲೈ 31 ಮತ್ತು ಆಗಸ್ಟ್ 1ರಂದು ನಡೆಯಲಿದೆ. ನೊಬೆಲ್ ಪುರಸ್ಕೃತ ವಿಜ್ಞಾನಿಗಳಾದ ಪ್ರೊ.ಡಂಕನ್ ಹಲ್ಡಾನೆ ಮತ್ತು ಪ್ರೊ.ಡೇವಿಡ್ ಗ್ರಾಸ್ ಭಾಗಿಯಾಗಲಿದ್ದಾರೆ' ಎಂದರು.

'ಕರ್ನಾಟಕ ರಾಜ್ಯವನ್ನು ಕ್ವಾಂಟಮ್ ಕ್ಷೇತ್ರದ ಜಾಗತಿಕ ಕೇಂದ್ರವಾಗಿ ರೂಪಿಸಲು ನಮ್ಮ ಸರ್ಕಾರವು ಬದ್ಧವಾಗಿದೆ. ಸಮ್ಮೇಳನದಲ್ಲಿ ಭಾಗಿಯಾಗಲಿರುವ ಈ ಇಬ್ಬರು ವಿಜ್ಞಾನಿಗಳ ಜತೆಗೆ ಜುಲೈ 30ರಂದು ಸಮಾಲೋಚನಾ ಸಭೆ ಏರ್ಪಡಿಸಲಾಗಿದೆ' ಎಂದು ಹೇಳಿದರು.

ಮಂತ್ರಾಲಯದ ಹುಂಡಿ ಎಣಿಕೆ ₹5.46 ಕೋಟಿ ಕಾಣಿಕೆ ಸಂಗ್ರಹ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಂಗಳವಾರ ಹುಂಡಿ ತೆರೆದು, ಕಾಣಿಕೆ ಎಣಿಸಲಾಯಿತು. ಒಟ್ಟು ₹5.46 ಕೋಟಿ ನಗದು, ಚಿನ್ನಾಭರಣ ಕಾಣಿಕೆ ಬಂದಿದೆ.

35 ದಿನಗಳಲ್ಲಿ ₹5,30,92,555 ನಗದು, ₹15,14,000 ಮೊತ್ತದ ನಾಣ್ಯಗಳು ಸೇರಿ ₹5,46,06,555 ನಗದು; 127 ಗ್ರಾಂ ಚಿನ್ನ, 1,820 ಗ್ರಾಂ ಬೆಳ್ಳಿ ಕಾಣಿಕೆ ಬಂದಿದೆ.

ಆರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ (ಇಡಿಸಿಎಸ್) ನಿರ್ದೇಶಕಿ ಅಪರ್ಣಾ ರಮೇಶ್ ಅವರನ್ನು ವಾಣಿಜ್ಯ ತೆರಿಗೆ ಇಲಾಖೆ ಸೇವಾ ವಿಭಾಗದ ಹೆಚ್ಚುವರಿ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದ್ದು, ಇ–ಆಡಳಿತ ಕೇಂದ್ರದ ಸಿಇಒ ಟಿ. ಭೂಬಾಲನ್ ಅವರಿಗೆ ಇಡಿಸಿಎಸ್‌ನ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ವಾಣಿಜ್ಯ ತೆರಿಗೆ ಇಲಾಖೆ ಸೇವಾ ವಿಭಾಗದ ಹೆಚ್ಚುವರಿ ಆಯುಕ್ತ ಕಾನಿಷ್ಕ ಅವರನ್ನು ಅದೇ ಇಲಾಖೆಯ ಅನುಷ್ಠಾನ ವಿಭಾಗಕ್ಕೆ, ಸ್ಥಳ ನಿರೀಕ್ಷೆಯಲ್ಲಿದ್ದ ಗಂಗೂಬಾಯಿ ಮಾನಕರ್ ಅವರನ್ನು ಕಾರ್ಮಿಕ ಇಲಾಖೆ ಇಎಸ್‌ಐಎಸ್ ಆಯುಕ್ತರ ಹುದ್ದೆಗೆ, ಎನ್. ಚಂದ್ರಶೇಖರ್ ಅವರನ್ನು ಕರ್ನಾಟಕ ಕೌಶಲ ಮಾರುಕಟ್ಟೆ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ, ಎಸ್.ಜೆ. ಸೋಮಶೇಖರ್ ಅವರನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಪೈಪ್ ತಯಾರಿಕೆ ₹758 ಕೋಟಿ ಹೂಡಿಕೆ

ಬೆಂಗಳೂರು: ಸಿವಿಸಿ ಮತ್ತು ಪಿವಿಸಿ ಪೈಪುಗಳನ್ನು ಉತ್ಪಾದಿಸುವ ಪೊದ್ದಾರ್ ಪ್ಲಂಬಿಂಗ್ ಸಿಸ್ಟಂ ರಾಜ್ಯದಲ್ಲಿ ₹758 ಕೋಟಿ ಹೂಡಿಕೆ ಮಾಡಲು ತೀರ್ಮಾನಿಸಿದ್ದು, ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಎರಡನೇ ಹಂತದ ಉತ್ಪಾದನೆ ಆರಂಭಿಸಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಪೊದ್ದಾರ್, ನಿರ್ದೇಶಕ ವರುಣ್ ಪೊದ್ದಾರ್ ಅವರೊಂದಿಗೆ ಚರ್ಚೆ ನಡೆಸಿದ ಬಳಿಕ ಮಾತನಾಡಿದರು.

ವೇಮಗಲ್ ಕೈಗಾರಿಕಾ ಪ್ರದೇಶದ ಹಂತ-2ರಲ್ಲಿ 33 ಎಕರೆ ಜಮೀನು ನೀಡಲಾಗಿದೆ. 2026ರ ಆಗಸ್ಟ್ ವೇಳೆಗೆ ಉತ್ಪಾದನಾ ಚಟುವಟಿಕೆ ಆರಂಭವಾಗಲಿದೆ. ಯೋಜನೆಯಿಂದ 12 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ. ನಂತರ ವಿಜಯಪುರ ಜಿಲ್ಲೆಯಲ್ಲೂ ಘಟಕವನ್ನು ತೆರೆಯಲಿದೆ ಎಂದರು.

ಉದ್ಯೋಗ ವಾಣಿ

ಮೇಲ್ಮನವಿ ವಿಳಂಬ: ಶಾಸಕಾಂಗದ ವಿವೇಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ (ಎಸ್‌ಸಿ-ಎಸ್‌ಟಿ) ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ, ವಿಶೇಷ (ಸೆಷನ್ಸ್) ಕೋರ್ಟ್‌ಗಳು ಆರೋಪಿಗಳನ್ನು ಖುಲಾಸೆಗೊಳಿಸಿದಾಗ ಅಂತಹ ಆದೇಶಗಳನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಹೆಚ್ಚಿನ ಸಮಯಾವಕಾಶ ನೀಡುವುದು ಶಾಸಕಾಂಗದ ವಿವೇಚನೆಗೆ ಬಿಟ್ಟ ವಿಚಾರ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣವೊಂದರಲ್ಲಿ ಖುಲಾಸೆಗೊಂಡಿದ್ದ ಆರೋಪಿಗಳ ವಿರುದ್ಧ ಸಲ್ಲಿಸಲಾದ ಮೇಲ್ಮನವಿ '381 ದಿನಗಳ ವಿಳಂಬ ಹೊಂದಿದೆ' ಎಂಬ ಕಾರಣಕ್ಕೆ ರಾಜ್ಯ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು (ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 200366/2024) ವಜಾಗೊಳಿಸಿರುವ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ), 'ಕೆಲವು ಪ್ರಕರಣಗಳಲ್ಲಿ ನಿರ್ಲಕ್ಷ್ಯಕ್ಕಿಂತ ಹೆಚ್ಚಾಗಿ, ನಿಜವಾದ ಕಾರಣಕ್ಕೂ ವಿಳಂಬವಾಗಬಹುದು. ಆದರೆ, ಇಂತಹ ಸೂಕ್ಷ್ಮವನ್ನು ಶಾಸಕಾಂಗದ ತಿದ್ದುಪಡಿ ಮೂಲಕವೇ ಪರಿಹಾರ ಕಂಡುಕೊಳ್ಳಲು ಶಕ್ಯ' ಎಂದು ಸ್ಪಷ್ಟಪಡಿಸಿದೆ.

ಪ್ರಕರಣವೇನು?

ಯಾದಗಿರಿ ಜಿಲ್ಲೆ ವ್ಯಾಪ್ತಿಯಲ್ಲಿ ಭೂ ವ್ಯಾಜ್ಯಕ್ಕೆ ಸಂಬಂಧಿಸಿದಂತೆ 2014ರಲ್ಲಿ ಶಹಾಪೂರದಲ್ಲಿ ಗುಂಪು ಗಲಭೆ ನಡೆದಿತ್ತು. ಈ ಪ್ರಕರಣದಲ್ಲಿ ಬಸಲಿಂಗಪ್ಪ ಎಂಬುವರು ಸೇರಿದಂತೆ ಐವರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಹಾಗೂ ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ವಿಚಾರಣೆ ನಡೆಸಿದ್ದ ಸೆಷನ್ಸ್ ನ್ಯಾಯಾಲಯ, 'ಸೂಕ್ತ ಸಾಕ್ಷ್ಯಾಧಾರ ಇಲ್ಲ' ಎಂದು ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿ 2023ರ ಸೆ.7ರಂದು ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಶಹಾಪೂರ ಪೊಲೀಸರು 2024ರ ಅಕ್ಟೋಬರ್‌ನಲ್ಲಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ, 'ಮೇಲ್ಮನವಿ ಸಲ್ಲಿಸಲು ಉದ್ದೇಶಪೂರ್ವಕ ವಿಳಂಬ ಮಾಡಿಲ್ಲ. ಸರ್ಕಾರ ಸಕಾಲದಲ್ಲಿ ಅನುಮತಿ ನೀಡಿತ್ತು. ಆದರೆ, ನ್ಯಾಯಾಲಯದಿಂದ ದಾಖಲೆಗಳನ್ನು ಪಡೆದುಕೊಳ್ಳುವುದೂ ಸೇರಿದಂತೆ ಕೆಲವು ವಾಸ್ತವಿಕ ಅಡಚಣೆಗಳಿಂದಾಗಿ ತಡವಾಗಿದೆ. ಹಾಗಾಗಿ, ತಾಂತ್ರಿಕ ಅಂಶಗಳಿಂದ ವಿಳಂಬವಾಗಿರುವ ಇಂತಹ ಪ್ರಕರಣಗಳಲ್ಲಿ ನ್ಯಾಯದಾನಕ್ಕೆ ತೊಂದರೆ ಆಗಬಾರದು. ಆದ್ದರಿಂದ, ವಿಳಂಬವನ್ನು ಮನ್ನಿಸಿ ಮೇಲ್ಮನವಿಯನ್ನು ವಿಚಾರಣೆಗೆ ಪುರಸ್ಕರಿಸಬೇಕು' ಎಂದು ಕೋರಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ನ್ಯಾಯಪೀಠ, 'ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ–1989ರ ಕಲಂ 14ಎ(3)ರಡಿ ಸೆಷನ್ಸ್ ನ್ಯಾಯಾಲಯ (ವಿಶೇಷ ಕೋರ್ಟ್) ಆರೋಪಿಯನ್ನು ಖುಲಾಸೆಗೊಳಿಸಿದ್ದರೆ ಅಂತಹ ಆದೇಶಗಳನ್ನು ಪ್ರಶ್ನಿಸಲು ಒಟ್ಟು 180 ದಿನಗಳ ಸಮಯಾವಕಾಶ ನೀಡಲಾಗಿದೆ. ವಿಳಂಬವಾದರೆ ಅಂತಹ ಮೇಲ್ಮನವಿಗಳನ್ನು ಪುರಸ್ಕರಿಸಲು ಕಾನೂನಿನಲ್ಲಿ ನಿಖರವಾದ ತಡೆ ಇದೆ. ಆದಾಗ್ಯೂ, ಇದಕ್ಕೆ ಪರಿಹಾರ ಶಾಸಕಾಂಗದ ಬಳಿ ಇದೆ. ಹಾಗಾಗಿ, ಈ ವಿಚಾರವನ್ನು ಸಂಬಂಧಿಸಿದವರ ಗಮನಕ್ಕೆ ತಂದು ಸೂಕ್ತ ತಿದ್ದುಪಡಿಗೆ ಸಲಹೆ ಮಾಡಬಹುದು' ಎಂದು ಸೂಚಿಸಿ ಮೇಲ್ಮನವಿ ವಜಾಗೊಳಿಸಿದೆ. ಪ್ರತಿವಾದಿಗಳ ಪರ ಹೈಕೋರ್ಟ್ ವಕೀಲ ಸಿ.ಎಂ.ಚೈತನ್ಯ ಕುಮಾರ್ ವಾದ ಮಂಡಿಸಿದ್ದರು.



ರೋಬೊ ವ್ಯಾಕ್ಯುಮ್ ಕ್ಲೀನರ್‌ಗಳು ಪ್ರೋಗ್ರಾಮಿಂಗ್ ಮಾಡಲಾದ ಸಾಧನಗಳು. ನೆಲವನ್ನು ಇವು ಚೆನ್ನಾಗಿ ಶುಚಿಗೊಳಿಸುತ್ತವೆ. ಆಟೊಚಾರ್ಜಿನ ಸೌಲಭ್ಯವೂ ಇವುಗಳಲ್ಲಿದೆ



ಬಾಹ್ಯಾಕಾಶಯಾನದಲ್ಲಿ ನೊಣ


• ಎಸ್.ಎನ್. ಹೆಗಡೆ

ಯೂರಿ ಗಗಾರಿನ್, ನೀಲ್ ಆರ್ಮ್‌ಸ್ಟ್ರಾಂಗ್, ಸುನೀತಾ ವಿಲಿಯಮ್ಸ್ ಮುಂತಾದ ಗಗನ-ಯಾತ್ರಿಗಳು ಬಾಹ್ಯಾಕಾಶ ನೌಕೆಗಳಲ್ಲಿ ಪ್ರಯಾಣಿಸಿ ಬಾಹ್ಯಾಕಾಶ ಪರಿಶೋಧನೆ ಕ್ಷೇತ್ರದಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಬಾಹ್ಯಾಕಾಶ ಸಂಶೋಧನೆ 1940ರ ದಶಕದಲ್ಲಿಯೇ ಆರಂಭವಾಯಿತಾದರೂ ಮಾನವರು ಮೊದಲು ಬಾಹ್ಯಾಕಾಶಯಾನಕ್ಕೆ ತಯಾರಾದುದು 1960ರ ದಶಕದಲ್ಲಿ. ಅದಕ್ಕೆ ಮೊದಲು ಮಾನವಸಹಿತ ಗಗನನೌಕೆಗಳನ್ನು ಆಗಸಕ್ಕೆ ಕಳಿಸಲು ಬಾಹ್ಯಾಕಾಶ ವಿಜ್ಞಾನಿಗಳಿಗೆ, ಮಾನವಭೂಮಿಯ ವಾತಾವರಣವನ್ನು ಬಿಟ್ಟು ಬಾಹ್ಯಾಕಾಶಕ್ಕೆ ಪ್ರಯಾಣ ಮಾಡಿದರೆ ಅಲ್ಲಿ ಬದುಕಲು ಸಾಧ್ಯ ಎಂಬ ಭರವಸೆ ಹಾಗೂ ಧೈರ್ಯ ಬೇಕಿತ್ತು. ಈ ಭರವಸೆ ದೊರೆತ ನಂತರವೇ ಮಾನವನನ್ನು ಬಾಹ್ಯಾಕಾಶಕ್ಕೆ ಕಳಿಸಲು ವ್ಯವಸ್ಥೆ ಮಾಡಲಾಯಿತು. ಈ ಎಲ್ಲ ಗಗನ-ಯಾತ್ರಿಗಳಿಗೆ ಭರವಸೆ ನೀಡಿದ ಜೀವಿ ಒಂದು ಚಿಕ್ಕ ಕೀಟ.

ಅದುವೇ 'ಡ್ರೊಸಾಫಿಲಾ ಮೆಲನೊಗ್ಯಾಸ್ಟರ್' ಎಂಬ ಪುಟ್ಟ ನೊಣ. ಅಡುಗೆಮನೆಯಲ್ಲಿಟ್ಟ ಕೊಳೆತ ಹಣ್ಣು-ತರಕಾರಿಗಳ ಮೇಲೆ ಕಾಣಿಸಿಕೊಳ್ಳುವ ಕೇವಲ ಮೂರು ಮಿ.ಮೀ. ಉದ್ದದ ಈ ಕೀಟ ಬಾಹ್ಯಾಕಾಶಯಾನ ಮಾಡಿದ ಮೊದಲ ಜೀವಿ.

ಅದು ಮೊದಲು ಬಾಹ್ಯಾಕಾಶಯಾನದಿಂದ ಬದುಕುಳಿದು ಹಿಂದಿರುಗಿದ ನಂತರವೇ ಜೀವಿಗಳು ಬಾಹ್ಯಾಕಾಶ ಪ್ರಯಾಣ ಮಾಡಲು ಸಾಧ್ಯ ಎಂದು ತಿಳಿದು ಬಂತು. ಅನಂತರ ನಾಯಿ, ಕೋತಿ, ಚಿಂಪಾಂಜಿಗಳನ್ನು ಆಗಸಕ್ಕೆ ಕಳಿಸಲಾಯಿತಾದರೂ, ಮೊದಲು ಬಾಹ್ಯಾಕಾಶಕ್ಕೆ ಕಳಿಸಲಾದ ಜೀವಂತಪ್ರಾಣಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ಜೀವಿ ಈ ಚಿಕ್ಕ ಕೀಟ. ಅಂದಿನ ಆ ಪ್ರಯೋಗಗಳು ಡ್ರೊಸಾಫಿಲಾ ನೊಣವನ್ನು ಖಗೋಳ ಜೀವವಿಜ್ಞಾನದ ಸಂಶೋಧನೆಯ ಪ್ರವರ್ತಕವನ್ನಾಗಿಸಿದವು. ನಾಯಿ, ಕೋತಿ, ಚಿಂಪಾಂಜಿ ಹೀಗೆ ಹೆಚ್ಚು ಸಂಕೀರ್ಣ ಜೀವಿಗಳನ್ನು ಬಾಹ್ಯಾಕಾಶ ನೌಕೆಗಳಲ್ಲಿ ಕಳಿಸಲಾಯಿತಾದರೂ ಅವೆಲ್ಲವುಗಳಿಗಿಂತ ಹೆಚ್ಚು ಬಾರಿ ಬಾಹ್ಯಾಕಾಶಯಾನ ಮಾಡಿರುವ ಜೀವಿ ಡ್ರೊಸಾಫಿಲಾ ಕೀಟ. ಮೊದಲು ಅಮೆರಿಕ ತನ್ನ ಬಾಹ್ಯಾಕಾಶ ಯೋಜನೆಗಳಲ್ಲಿ ಡ್ರೊಸಾಫಿಲಾವನ್ನು ಸೇರಿಸಿತಾದರೂ ಮುಂದಿನ ದಿನಗಳಲ್ಲಿ ಬಾಹ್ಯಾಕಾಶ ಸಂಶೋಧನೆಯಲ್ಲಿ ಮುಂಚೂಣಿಯಲ್ಲಿರುವ ಅನೇಕ ದೇಶಗಳು ತಮ್ಮ ಬಾಹ್ಯಾಕಾಶಯಾನದಲ್ಲಿ ಅದನ್ನು ಸೇರಿಸಿದವು.

ಬಾಹ್ಯಾಕಾಶಯಾನಕ್ಕೆ ಈ ಕೀಟವನ್ನೇ ಏಕೆ ಆಯ್ಕೆ ಮಾಡಲಾಯಿತು? ಈ ಆಯ್ಕೆಗೆ ಹಲವು ಕಾರಣಗಳಿವೆ. ಈ ನೊಣವು ಚಿಕ್ಕದಾಗಿದ್ದು ನಿಸರ್ಗದಲ್ಲಿ ಹಾಗೂ ಪ್ರಯೋಗಾಲಯದಲ್ಲಿ ಸುಲಭವಾಗಿ ಅವುಗಳನ್ನು ಬೆಳೆಸಬಹುದು. ಚಿಕ್ಕ ಬಾಟಲಿಯಲ್ಲಿ ನಾಲ್ಕೈದು ಗ್ರಾಂ ಕೊಳೆತ ಹಣ್ಣು ಅಥವಾ ರವೆ ಪಾಯಸದಂತಹ ಆಹಾರವನ್ನು ಹಾಕಿ ಅದರಲ್ಲಿ ಈ ನೊಣಗಳನ್ನು ಸೇರಿಸಿದರೆ ಮುಗಿಯಿತು. ಅಲ್ಲಿ ಅವು ಸಂತಾನಾಭಿವೃದ್ಧಿ ಮಾಡಿ ಮೂರು ನಾಲ್ಕು ತಿಂಗಳವರೆಗೆ ಪೀಳಿಗೆಯನ್ನು ಮುಂದುವರಿಸುತ್ತವೆ. ಗಗನನೌಕೆಯಲ್ಲಿ ಇಂತಹ ಒಂದೆರಡು ಪ್ರನಾಳಗಳನ್ನು ಇರಿಸಿದರಾಯಿತು. ಅವುಗಳ ಅಲ್ಪಾವಧಿಯ ಜೀವನಚಕ್ರದಿಂದಾಗಿ (10ರಿಂದ 12 ದಿನ) ವಿಜ್ಞಾನಿಗಳಿಗೆ ಆಗಸದಲ್ಲಿ ಬೆಳವಣಿಗೆಯ ಸಾಧ್ಯತೆ ಮತ್ತು ಪರಿಣಾಮಗಳನ್ನು ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಈ ಕೀಟದ ಆನುವಂಶೀಯತೆಯ ಕುರಿತ ಸಾಕಷ್ಟು ಮಾಹಿತಿ ಲಭ್ಯವಿರುವುದರಿಂದ ಅವುಗಳ ಆನುವಂಶೀಯ ವಸ್ತುವಿನ (ಡಿಎನ್‌ಎ ಅಥವಾ ಆರ್‌ಎನ್‌ಎ) ಮೇಲೆ ಬಾಹ್ಯಾಕಾಶದಲ್ಲಿ ಹರಡಿರುವ ವಿಕಿರಣಗಳ ಪರಿಣಾಮಗಳ ಅಧ್ಯಯನ ಸಾಧ್ಯವಾಗುತ್ತದೆ. ಬಾಹ್ಯಾಕಾಶ ಪ್ರಯಾಣದಿಂದ ಗಗನಯಾತ್ರಿಗಳ ಶಾರೀರಿಕ ಕ್ರಿಯೆಗಳ ಮೇಲೆ ಉಂಟಾಗಬಹುದಾದ ಒತ್ತಡದಿಂದ ಚೇತರಿಸಿಕೊಳ್ಳುವ ಸಾಧ್ಯತೆಯ ಕುರಿತು ಅಧ್ಯಯನ ಮಾಡಬಹುದು.





ಮನುಷ್ಯ ಅಥವಾ ಇನ್ನಾವುದೇ ಜೀವಿಯನ್ನು ಬಾಹ್ಯಾಕಾಶಕ್ಕೆ ಕಳಿಸುವ ಮೊದಲು ಅಂದರೆ 1947ರ ಫೆಬ್ರುವರಿ 20ರಂದು ಅಮೆರಿಕದ ವಿ-2 ರಾಕೆಟ್ಟಿನಲ್ಲಿ ಡ್ರೊಸಾಫಿಲಾ ಕೀಟವನ್ನು ಬಾಹ್ಯಾಕಾಶಕ್ಕೆ ಕಳಿಸಲಾಯಿತು. ತಿಂಗಳ ನಂತರ ಗಗನನೌಕೆ ಹಿಂತಿರುಗಿದಾಗ ಅವು ಬದುಕುಳಿದಿದ್ದವು! ಈ ಪ್ರಯೋಗವು ಹೆಚ್ಚು ಸಂಕೀರ್ಣ ಜೀವಿಗಳನ್ನು ಬಾಹ್ಯಾಕಾಶಕ್ಕೆ ಕಳಿಸುವುದಕ್ಕೆ ಪ್ರೇರಣೆ ನೀಡಿತು. ಆ ಪ್ರಯೋಗಗಳು ಯಶಸ್ವಿಯಾದ ನಂತರ ಮುಂದಿನ ಪ್ರಯತ್ನ ನಡೆಸಲಾಯಿತು. ಮುಂದಿನ ಗಗನಯಾನಗಳಲ್ಲಿ ಗಗನಯಾತ್ರಿಗಳಿಗೆ ಅಗತ್ಯವಾದ ವಸ್ತುಗಳ ಜೊತೆಗೆ ಈ ನೊಣಗಳನ್ನೂ ಸೇರಿಸಲಾಯಿತು!.

ಅವುಗಳ ಮೊದಲ ಹಾರಾಟದ ನಂತರ ಈ ನೊಣಗಳನ್ನು ಪದೇ ಪದೇ ಬಾಹ್ಯಾಕಾಶಕ್ಕೆ ಕಳುಹಿಸಲಾಗಿದೆ. ನಾಸಾದ ಬಾಹ್ಯಾಕಾಶ ನೌಕೆಗಳಲ್ಲಿ, ರಷ್ಯಾದ ಸೂಯೇಜ್ ಯಾತ್ರೆಗಳಲ್ಲಿ ಡ್ರೊಸಾಫಿಲಾ ನೊಣಗಳ ಪ್ರಯಾಣಕ್ಕೆ ಸೀಟು ಸಿಕ್ಕಿತು! ಈ ಪ್ರಯಾಣದಲ್ಲಿ ಸೂಕ್ಷ್ಮ ಗುರುತ್ವಾಕರ್ಷಣೆಯಲ್ಲಿ ಸ್ನಾಯುಕ್ಷೀಣತೆ, ಬಾಹ್ಯಾಕಾಶದಲ್ಲಿ ಅಸ್ಥಿಸ್ನಾಯುಗಳ ನಷ್ಟ, ರೋಗ ನಿರೋಧಕಶಕ್ತಿಯ ಸಾಮರ್ಥ್ಯ, ವಿಕಿರಣದಿಂದ ಆನುವಂಶೀಯ ಬದಲಾವಣೆಗಳು ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು ಪಡೆಯಲಾಯಿತು. ಬಾಹ್ಯಾಕಾಶ ನಿಲ್ದಾಣಗಳಲ್ಲಿ ಇವು ಎಷ್ಟು ಕಾಲ ಬದುಕಬಹುದು, ಎಷ್ಟು ಕಾಲ ಪ್ರಜನನ ನಡೆಸಿ ತಮ್ಮ ಪೀಳಿಗೆಯನ್ನು ಮುಂದುವರಿಸಬಹುದು ಮುಂತಾದ ವಿಷಯಗಳ ಕುರಿತು ಮಾಹಿತಿ ಸಂಗ್ರಹಿಸಲಾಯಿತು. ಇಂದಿಗೂ ಸಹ, ಬಾಹ್ಯಾಕಾಶ ಜೀವವಿಜ್ಞಾನ ಪ್ರಯೋಗಾಲಯಗಳಲ್ಲಿ ಅವು ಪ್ರಧಾನವಾಗಿದ್ದು ಹೊಸ ಹೊಸ ಮಾಹಿತಿ ನೀಡುತ್ತಿವೆ.

ಈಗ ನಾಸಾ ಈ ನೊಣಗಳಿಗಾಗಿಯೇ ಪ್ರಯೋಗಾಲಯವೊಂದನ್ನು (ಸ್ಪೇಸ್ ಎಕ್ಸ್ – 14) ಸ್ಥಾಪಿಸಿದೆ. ಅಲ್ಲಿ ಆ ಸಂಸ್ಥೆ ನಡೆಸುವ ಎಲ್ಲ ಬಾಹ್ಯಾಕಾಶ ಸಂಶೋಧನಾಯಾನಗಳಲ್ಲಿಯೂ ಈ ಕೀಟಗಳನ್ನು ಕಳಿಸಿ, ಈ ಪ್ರಯಾಣದಿಂದ ಅವುಗಳಲ್ಲಿ ಉಂಟಾಗುವ ಆನುವಂಶೀಯ ಪರಿಣಾಮಗಳು, ನಿರೋಧಕ ಶಕ್ತಿ, ಜೈವಿಕ ಕ್ರಿಯೆಗಳ ಮೇಲೆ ಪ್ರಯಾಣದ ಪರಿಣಾಮ – ಹೀಗೆ ಹಲವು ವಿಷಯಗಳ ಕುರಿತು ಸಂಶೋಧನೆಗಳನ್ನು ನಡೆಸಲಾಗುತ್ತದೆ. ಭಾರತದ ಇಸ್ರೊ ಕೂಡ ತನ್ನ ಗಗನಯಾನ ಯೋಜನೆಗಳಲ್ಲಿ ಈ ಕೀಟವನ್ನು ಸೇರಿಸಿದೆ. ಕೆಲವು ಖಾಸಗಿ ಕಂಪನಿಗಳು ಬಾಹ್ಯಾಕಾಶ ಟೂರಿಸಂ ಆರಂಭಿಸುವ ತವಕದಲ್ಲಿವೆ. ಡ್ರೊಸಾಫಿಲಾದ ಮೂಲಕ ನಡೆಯುವ ಶೋಧಗಳಿಂದ ಮುಂದೊಂದು ದಿನ ಯಾವುದಾದರೂ ಗ್ರಹ ಅಥವಾ ಆಕಾಶಕಾಯದಲ್ಲಿ ಹನಿಮೂನ್‌ನಂತಹ ಬಾಹ್ಯಾಕಾಶ ಪ್ರವಾಸ ಮತ್ತು ಮಾನವನ ವಸಾಹತನ್ನು ಸೃಷ್ಟಿಸುವುದು ಸಾಧ್ಯವೇ ಎಂದು ಪರೀಕ್ಷಿಸಲಾಗುತ್ತಿದೆ. ❖

ಮನುಷ್ಯ ತುಂಬಾ ಸುಲಭವಾಗಿ ಮಾಡಬಹುದಾದ ಕೆಲಸವೊಂದನ್ನು ಹ್ಯೂಮನಾಯ್ಡ್‌ಗಳಿಂದ ಮಾಡಿಸಬೇಕಾದರೆ ಅವಕ್ಕೆ ಅಪಾರ ಪ್ರಮಾಣದಲ್ಲಿ ಸೂಚನೆಗಳನ್ನು ಕಲಿಸಿಕೊಡಬೇಕಾಗುತ್ತದೆ. ಆದರೆ ಇವು ಫ್ಯಾಕ್ಟರಿಗಳಲ್ಲಿ ಮಾಡುವ ಸಣ್ಣ ಸಣ್ಣ ಪುನರಾವರ್ತಿತ ಕೆಲಸಗಳನ್ನು ಮಾಡಲು ಅತ್ಯಂತ ಶಕ್ತವಾಗಿವೆ.

ಹ್ಯೂಮನಾಯ್ಡ್‌ಗಳ ಬೆಲೆಯ ಜಗಳ!

• ಕೃಷ್ಣಭಟ್


ನೂರಿನ್ನೂರು ವರ್ಷಗಳ ಹಿಂದೆ ದೇಶಗಳು ಪರಕೀಯರ ಆಳ್ವಿಕೆಯಲ್ಲಿದ್ದಾಗ ಕೂಲಿಯಾಳುಗಳ ಮಾರುಕಟ್ಟೆ ಭಾರಿ ಪ್ರಚಲಿತದಲ್ಲಿತ್ತು. ಹೆಚ್ಚು ದಕ್ಷ ಮತ್ತು ಕಡಿಮೆ ದರದ ಮಾನವ ಕೂಲಿಗಳನ್ನು ಹೊಂದಿರುವ ದೇಶವನ್ನು ವಶಪಡಿಸಿಕೊಳ್ಳಲು ಇಂಗ್ಲಿಷರು, ಪೋರ್ಚುಗೀಸರು ಮುಂತಾದವರಲ್ಲಿ ಪೈಪೋಟಿ ನಡೆಯುತ್ತಿತ್ತು. ಆದರೆ, ಈಗ ಸನ್ನಿವೇಶ ಸ್ವಲ್ಪ ಭಿನ್ನವಾಗಿದೆ.

ಮಾನವರಂತೆ ಕೆಲಸ ಮಾಡುವ, ಕಡಿಮೆ ದರದ ಹಾಗೂ ಹೆಚ್ಚು ದಕ್ಷವಾದ ಹ್ಯೂಮನಾಯ್ಡ್‌ಗಳನ್ನು ಎಷ್ಟು ಬೇಗ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತವೆಯೋ ಆ ದೇಶಗಳು ಮಾರುಕಟ್ಟೆಯನ್ನು ಆಳುತ್ತವೆ! ಈ ಸಮರ ಅದಾಗಲೇ ಶುರುವಾಗಿವೆ.

ಕೆಲವೇ ದಿನಗಳ ಹಿಂದೆ ಬರಿ ಆರು ಸಾವಿರ ಡಾಲರ್ ಅಂದರೆ, ಸುಮಾರು ₹ 5.5 ಲಕ್ಷಗೆ ಚೀನಾದ 'ಯುನಿಟ್ರೀ ರೋಬೊಟಿಕ್ಸ್' ಒಂದು ಅತ್ಯಂತ ಸಶಕ್ತ ಹ್ಯೂಮನಾಯ್ಡ್ ಅನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ. ಇದು ಇಡೀ ಹ್ಯೂಮನಾಯ್ಡ್ ಮಾರುಕಟ್ಟೆಯಲ್ಲಿ ಸಂಚಲನವನ್ನೇ ಸೃಷ್ಟಿಸಿದೆ. ಏಳು ವರ್ಷದ ಒಂದು ಮಗುವಿನಷ್ಟು ಎತ್ತರವಿರುವ ಈ ಹ್ಯೂಮನಾಯ್ಡ್ ಯುರೋಪಿಯನ್ ಹಾಗೂ ಅಮೆರಿಕದ ಸಂಸ್ಥೆಗಳು ತಯಾರಿಕೆ ಮಾಡುತ್ತಿರುವ ಹ್ಯೂಮನಾಯ್ಡ್‌ಗಳ ದರಕ್ಕೆ ಹೋಲಿಸಿದರೆ ಅತಿ ಕಡಿಮೆ ದರದಲ್ಲಿ ಸಿಗುತ್ತವೆ.

ಈ ಯುನಿಟ್ರೀ ಸಂಸ್ಥೆ ಸ್ಥಾಪನೆಯಾಗಿದ್ದೇ ಒಂಬತ್ತು ವರ್ಷಗಳ ಹಿಂದೆ 2016ರಲ್ಲಿ. 2021ರಲ್ಲಿ ಮೊದಲ ಬಾರಿಗೆ ನಾಲ್ಕು ಕಾಲಿನ ರೋಬೊ ಅನ್ನು ಬಿಡುಗಡೆ ಮಾಡಿತ್ತು. ಅದು ಆಗಿನ ಟ್ರೆಂಡ್. ಆಗ ಅದಕ್ಕೆ ಮೂರು ಸಾವಿರ ಡಾಲರ್ ದರ ನಿಗದಿ ಮಾಡಿತ್ತು. ಆಗಲೂ ಇದೇ ರೀತಿಯ ನಾಲ್ಕು ಕಾಲಿನ ರೋಬೊಗಳನ್ನು ತಯಾರಿಸುತ್ತಿದ್ದ ಬೋಸ್ಟನ್ ಡೈನಾಮಿಕ್ಸ್ ಬಿಡುಗಡೆ ಮಾಡಿದ್ದ ರೋಬೊಗಳಿಗೆ ಹೋಲಿಸಿದರೆ ದರ ಅತಿ ಕಡಿಮೆ ಇತ್ತು. ನಂತರ ಯುನಿಟ್ರೀ ಸಂಸ್ಥೆ ಹ್ಯೂಮನಾಯ್ಡ್‌ಗಳ ಟ್ರೆಂಡ್‌ಗೆ ಹೊರಳಿಕೊಂಡಿತು.

ಇದಕ್ಕೆ ಪೂರಕವಾಗಿ ಚೀನಾ ಸರ್ಕಾರ ರೋಬೊಟಿಕ್ಸ್‌ನಲ್ಲಿ ಹೊಸ ನೀತಿ ತಂದು, 2025ರಲ್ಲಿ ನಾವು ದೊಡ್ಡ ಮಟ್ಟದಲ್ಲಿ ಹ್ಯೂಮನಾಯ್ಡ್‌ಗಳನ್ನು ಉತ್ಪಾದಿಸುವಂತಾಗಬೇಕು ಮತ್ತು 2027ರಲ್ಲಿ ನಾವು ಮಾರುಕಟ್ಟೆಯಲ್ಲಿ ಮುಂಚೂಣಿ ಸ್ಥಾನದಲ್ಲಿರಬೇಕು ಎಂದು ತಾಕೀತು ಮಾಡಿತು. ಅದೇ ಹೊತ್ತಿಗೆ ಯುನಿಟ್ರೀ ಸಂಸ್ಥೆ 'ಎಚ್1' ಎಂಬ ಹ್ಯೂಮನಾಯ್ಡ್ ಬಿಡುಗಡೆ ಮಾಡಿತು. ಆದರೆ, ಅದರ ಬೆಲೆ 90 ಸಾವಿರ ಡಾಲರ್ ಇತ್ತು. ಇದು ಸಾಮಾನ್ಯ ಜನರ ಕೈಗೆ ನಿಲುಕದಂತಾಯಿತು. ಇನ್ನೊಂದೇ ವರ್ಷದಲ್ಲಿ ಅಂದರೆ 2024ರಲ್ಲಿ ಅದೇ ಸಂಸ್ಥೆ 'ಜಿ1' ಎಂಬ ಇನ್ನಷ್ಟು ಸುಧಾರಿತ ಹ್ಯೂಮನಾಯ್ಡ್ ಬಿಡುಗಡೆ ಮಾಡಿತು. ಇದರ ಬೆಲೆ 16 ಸಾವಿರ ಡಾಲರ್ ಎಂದು ನಿಗದಿಯಾಯಿತು. ಕಳೆದ ವರ್ಷ ಇಡೀ ಹ್ಯೂಮನಾಯ್ಡ್ ಮಾರುಕಟ್ಟೆಯನ್ನೇ ಇದು ಅಲ್ಲಾಡಿಸಿತು. ಇಷ್ಟು ಕಡಿಮೆ ದರಕ್ಕೆ ಇಷ್ಟು ದಕ್ಷವಾದ ಹ್ಯೂಮನಾಯ್ಡ್ ತಯಾರಿಕೆ ಸಾಧ್ಯವಾಗಿದ್ದು, ಯುರೋಪಿಯನ್ ದೇಶಗಳು ಹಾಗೂ ಅಮೆರಿಕದ ರೋಬೊಟಿಕ್ಸ್ ಕಂಪನಿಗಳನ್ನು ಬೆಚ್ಚಿಬೀಳಿಸಿತು. ಬೆಲೆಯ ವಿಷಯದಲ್ಲಿ ಚೀನಾವನ್ನು ಹೊರತುಪಡಿಸಿ ಇತರ ದೇಶಗಳ ಕಂಪನಿಗಳು ಇನ್ನೂ ತುಂಬಾ ಹಿಂದಿವೆ.



ಕಳೆದ ವರ್ಷ ಯುನಿಟ್ರೀ ಜಿ1 ಬಿಡುಗಡೆ ಮಾಡಿದ ಮೇಲೆ ಚೀನಾದ್ದೇ ಇತರ ಕಂಪನಿಗಳೂ ಪೈಪೋಟಿಗೆ ಬಿದ್ದವು. ಎಂಜಿನ್ ಎಐ, ನಿಯೋಟಿಕ್ಸ್ ಮತ್ತು ಅಜಿಬೋಟ್ ಎಂಬ ಸಂಸ್ಥೆಗಳೆಲ್ಲ ಸ್ಪರ್ಧಾತ್ಮಕ ದರದಲ್ಲಿ ಮಾರುಕಟ್ಟೆಗೆ ಲಗ್ಗೆಯಿಟ್ಟವು. ಇದರ ಜೊತೆಗೆ, ಸಿಲಿಕಾನ್ ವ್ಯಾಲಿಯ ಕೆ-ಸ್ಕೇಲ್ ಲ್ಯಾಬ್ಸ್ ಕೂಡ ಸ್ವಲ್ಪ ಸ್ಪರ್ಧೆಗಿಳಿಯುವ ಸಾಹಸ ಮಾಡಿದೆ. ಆದರೆ, ಚೀನಾ ಕಂಪನಿಗಳ ಹ್ಯೂಮನಾಯ್ಡ್ ಹೋರಾಟದಲ್ಲಿ ಇತರ ದೇಶದ ಕಂಪನಿಗಳು ಆಘಾತ ಕ್ಕೊಳಗಾಗಿ ನಿಂತಿವೆ.

ಒಂದು ವರ್ಷದಲ್ಲಿ 16 ಸಾವಿರ ಡಾಲರ್ ಇದ್ದ ಹ್ಯೂಮನಾಯ್ಡ್‌ಗಳ ದರ ಈಗ ಆರು ಸಾವಿರ ಡಾಲರ್‌ಗೆ ಕುಸಿದಿದೆ. ಯುನಿಟ್ರೀಯ ಈ ಹೊಸ ಮಾಡೆಲ್ ಆರ್1 ಬರಿ 25 ಕಿಲೋ ತೂಕದ್ದು ಮತ್ತು ಹಳೆಯ ಮಾದರಿಗೆ ಹೋಲಿಸಿದರೆ 10 ಕಿಲೋ ಕಡಿಮೆ ತೂಕ ಹೊಂದಿದೆ. ಏಳು ವರ್ಷದ ಮಗುವಿನಷ್ಟು ಎತ್ತರ ಮತ್ತು ತೂಕ ಇದೆ. ಸಂಸ್ಥೆ ಹೇಳಿಕೊಂಡ ಪ್ರಕಾರ ಮಲ್ಟಿಮೋಡಲ್ ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ ಅನ್ನು ಬಳಸಿಕೊಂಡು ಇದು ಜನರು ಏನು ಹೇಳುತ್ತಾರೆ ತನಗೆ ಏನು ಕಾಣಿಸುತ್ತದೆ ಎಂಬುದನ್ನು ಇದು ಅರ್ಥ ಮಾಡಿಕೊಳ್ಳುತ್ತದೆ. ಇದರಲ್ಲಿ ಬೈನಾಕ್ಯುಲರ್ ಕ್ಯಾಮೆರಾ ಸಿಸ್ಟಮ್ ಹಾಗೂ ಅಲ್ಟ್ರಾ ವೈಡ್ ಕೋನದಲ್ಲಿ ನೋಡಬಹುದಾದ ಸಾಮರ್ಥ್ಯವನ್ನು ಹೊಂದಿದೆ. ದೇಹದ ನಾಲ್ಕು ಕಡೆಗಳಲ್ಲಿ ಕ್ಯಾಮೆರಾ ಇದೆ. ಬೇರೆ ಬೇರೆ ದಿಕ್ಕಿನಿಂದ ಬರುವ ಧ್ವನಿಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದು ಮಾತನಾಡುತ್ತದೆ. ಡ್ಯೂಯೆಲ್ ಸ್ಪೀಕರ್‌ಗಳ ಮೂಲಕ ಧ್ವನಿಯನ್ನು ಪ್ಲೇ ಮಾಡುತ್ತದೆ. ಇದರಲ್ಲಿ ಪ್ರತಿ ಕಾಲಿನಲ್ಲೂ ಆರು ಜಾಯಿಂಟ್‌ಗಳು ಮತ್ತು ಕೈಗಳಲ್ಲಿ ಐದು ಜಾಯಿಂಟ್‌ಗಳಿರುವುದರಿಂದ ನಡೆಯುವುದು ಮತ್ತು ಕೈಗಳನ್ನು ಬಳಸಿ ಕೆಲಸ ಮಾಡುವುದಕ್ಕೆ ಸುಲಭವಾಗುತ್ತದೆ. ಸಂಸ್ಥೆ ಹೇಳಿಕೊಂಡ ಪ್ರಕಾರ, ಒಂದು ಬಾರಿ ಚಾರ್ಜ್ ಮಾಡಿದರೆ ಏಳು ಗಂಟೆಗಳವರೆಗೆ ಇವು ಕೆಲಸ ಮಾಡುತ್ತವೆ. ರಿಮೋಟ್ ಕಂಟ್ರೋಲ್ ಹಾಗೂ ವಾಯ್ಸ್ ಕಮಾಂಡ್‌ಗಳನ್ನು ಬಳಸಿ ಈ ಹ್ಯೂಮನಾಯ್ಡ್‌ಗಳನ್ನು ನಿರ್ವಹಿಸಬಹುದು. ಆದರೆ, ಇವೆಲ್ಲ ನೋಡುವುದಕ್ಕೆ ಆಕರ್ಷಕವಾಗಿ ಕಂಡರೂ ಈ ಹ್ಯೂಮನಾಯ್ಡ್‌ಗಳಿಗೆ ಬಹಳ ಮಿತಿಗಳಿವೆ ಎಂದು ಎನ್‌ವಿಡಿಯಾ ಸಂಸ್ಥೆ ರೋಬೊಟಿಕ್ಸ್ ನಿರ್ದೇಶಕ ಜಿಮ್ ಫ್ಯಾನ್ ಹೇಳುತ್ತಾರೆ. ಸಂಸ್ಥೆಗಳು ಬಿಡುಗಡೆ ಮಾಡುವ ವಿಡಿಯೊಗಳಲ್ಲಿ ತಲೆಕೆಳಗಾಗಿ ನಿಲ್ಲುವುದು ಹಾಗೂ ನೆಗೆಯುವುದೆಲ್ಲ ಆಕರ್ಷಕವಾಗಿ ಕಂಡರೂ, ತಮ್ಮ ಸುತ್ತಲಿನ ಪರಿಸರವನ್ನು ಅರ್ಥ ಮಾಡಿಕೊಳ್ಳುವಲ್ಲಿ ಇವು ವಿಫಲವಾಗುತ್ತವೆ. ಇದನ್ನು ಸಾಮಾನ್ಯವಾಗಿ 'ಮೊರಾವೆಕ್ಸ್ ಪ್ಯಾರಾಡಾಕ್ಸ್' ಎಂದು ಕರೆಯಲಾಗುತ್ತದೆ. ಅಂದರೆ, ಸಾಮಾನ್ಯವಾಗಿ ಮನುಷ್ಯ ತುಂಬಾ ಸುಲಭವಾಗಿ ಮಾಡಬಹುದಾದ ಕೆಲಸವೊಂದನ್ನು ಹ್ಯೂಮನಾಯ್ಡ್ ಅಥವಾ ಎ.ಐ. ಬಳಿ ಮಾಡಿಸಬೇಕು ಎಂದರೆ ನಾವು ಅದಕ್ಕೆ ಅಪಾರ ಪ್ರಮಾಣದಲ್ಲಿ ಸೂಚನೆಗಳು ಮತ್ತು ಲೆಕ್ಕಾಚಾರಗಳನ್ನು ಕಲಿಸಿಕೊಡಬೇಕಿರುತ್ತದೆ.

ಈ ಹ್ಯೂಮನಾಯ್ಡ್‌ಗಳನ್ನು ನಮ್ಮ ಮನೆಯಲ್ಲಿ ತಂದಿಟ್ಟುಕೊಂಡು, 'ಟೇಬಲ್ ಮೇಲೆ ಇಟ್ಟಿರುವ ಬಟ್ಟೆಯನ್ನು ಮಡಚಿಕೊಡು' ಎಂದರೆ ಅಥವಾ ಮನೆಯಲ್ಲಿರುವ 'ಡೈನಿಂಗ್ ಟೇಬಲ್ ಮತ್ತು ಕುರ್ಚಿಗಳನ್ನು ನೀಟಾಗಿ ಇರಿಸು' ಎಂದು ಸೂಚನೆ ನೀಡಿದರೆ ಇವುಗಳಿಗೆ ತಲೆಬುಡ ಅರ್ಥವಾಗುವುದಿಲ್ಲ. ಯಾಕೆಂದರೆ, ಪ್ರತಿ ಬಟ್ಟೆಯನ್ನೂ ಮಡಚುವುದು ಹೇಗೆ ಎಂದು ನಾವು ಅದಕ್ಕೆ ಕಲಿಸಿಕೊಡಬೇಕು. ಒಂದು ಟವೆಲ್ ಅನ್ನು ಮಡಚುವ ರೀತಿಗೂ, ಪ್ಯಾಂಟನ್ನು ಮಡಚುವ ರೀತಿಗೂ, ಸೀರೆಯನ್ನು ಮಡಚುವ ರೀತಿಗೂ ವ್ಯತ್ಯಾಸವಿದೆ. ಈ ಪ್ರತಿಯೊಂದನ್ನೂ ಅವುಗಳಿಗೆ ಕಲಿಸಿಕೊಟ್ಟರೆ ಮಾತ್ರ ಅವು ಕೆಲಸ ಮಾಡುತ್ತವೆಯಷ್ಟೆ!

ಆದರೆ ಇವು ಫ್ಯಾಕ್ಟರಿಗಳಲ್ಲಿ ಮಾಡುವ ಸಣ್ಣ ಸಣ್ಣ ಪುನರಾವರ್ತಿತ ಕೆಲಸಗಳನ್ನು ಮಾಡಲು ಅತ್ಯಂತ ಶಕ್ತವಾಗಿವೆ. ಉದಾಹರಣೆಗೆ, ಪಿಸಿಬಿಗಳನ್ನು ಸೋಲ್ಡರ್ ಮಾಡುವುದರಂಥ ಕೆಲಸಗಳನ್ನು ಮನುಷ್ಯನಿಗಿಂತ ದಕ್ಷತೆಯಿಂದ ಮಾಡಬಲ್ಲವು.

ಬಹುಶಃ ಇನ್ನು ಒಂದೆರಡು ವರ್ಷಗಳಲ್ಲಿ ಈ ಹ್ಯೂಮನಾಯ್ಡ್‌ಗಳ ಬೆಲೆ ಇನ್ನೂ ಇಳಿದು ಮುನಷ್ಯನ ಒಂದು ವರ್ಷ ಮಾಸಿಕ ಸಂಬಳದ ದರಕ್ಕೆ ಸಿಗುವಂತಾದರೆ, ಕಂಪನಿಗಳಲ್ಲಿ ಇವುಗಳೇ ಬಳಕೆಯಲ್ಲಿರಬಹುದು! ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಜೀವ ಕ್ರಿಯೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು ಈ ಕೆಳಗಿನವುಗಳನ್ನು ಏನನ್ನಾಗಿ ಪರಿವರ್ತಿಸುತ್ತವೆ?

ಅ) ಪ್ರೋಟೀನ್ (ಬ) ಸಂಕೀರ್ಣ ಕಾರ್ಬೋಹೈಡ್ರೇಟ್ (ಕ) ಕೊಬ್ಬು

ಉತ್ತರ:– ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು

ಅ) ಪ್ರೋಟೀನ್‌ಗಳನ್ನು ಅಮಿನೋ ಆಮ್ಲಗಳಾಗಿ ಪರಿವರ್ತಿಸುತ್ತದೆ

ಬಿ) ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್‌ಗಳಾಗಿ ಪರಿವರ್ತಿಸುತ್ತವೆ

ಕ) ಕೊಬ್ಬನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

2) ಯಾವುದಕ್ಕೆ ವಾಯುವಿಕೆ ಉಸಿರಾಟ ಎನ್ನುವರು?

ಉತ್ತರ:– ಮೈಟ್ರೋಕಾಂಡ್ರಿಯಾದಲ್ಲಿ ಆಕ್ಸಿಜನ್ ಬಳಸಿ ಪೈರುವೇಟ್ ಅಣುವನ್ನು ವಿಭಜಿಸಿ ಮೂರು ಕಾರ್ಬನ್ ಡೈ ಆಕ್ಸೈಡ್ ಅಣುವನ್ನು ಉಂಟು ಮಾಡಲಾಗುತ್ತದೆ ಅಲ್ಲದೇ ನೀರನ್ನು ಬಿಡುಗಡೆ ಮಾಡಲಾಗುತ್ತದೆ. ಈ ಪ್ರಕ್ರಿಯೆ ಗಾಳಿಯ(ಆಕ್ಸಿಜನ್) ಉಪಸ್ಥಿತಿಯಲ್ಲಿ ನಡೆಯುವುದರಿಂದ ಇದನ್ನು ವಾಯುವಿಕೆ ಉಸಿರಾಟ

3) ಬೆಳಗಿನ ಸಮಯದಲ್ಲಿ ಸಸ್ಯಗಳು ಯಾಕೆ ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಮಾಡುವುದಿಲ್ಲ?

ಉತ್ತರ:– ಸಸ್ಯಗಳು ಬೆಳಗಿನ ಉಸಿರಾಟ ಕ್ರಿಯೆ ಸಮಯದಲ್ಲಿ ಕಾರ್ಬನ್ ಡೈ ಆಕ್ಸೈಡ್ ಅನ್ನು ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬಳಸಿಕೊಳ್ಳುತ್ತವೆ ಹೀಗಾಗಿ ಆ ಹೊತ್ತಿನಲ್ಲಿ ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಮಾಡುವುದಿಲ್ಲ. ಇದರ ಬದಲು ಆಕ್ಸಿಜನ್ ಬಿಡುಗಡೆ ಮಾಡುತ್ತವೆ.

4) ಗಾಳಿಯಲ್ಲಿರುವ ಆಕ್ಸಿಜನ್ ಅನ್ನು ನಮ್ಮ ದೇಹದಲ್ಲಿ ಎಲ್ಲಿರುವ ರಕ್ತವು ದೇಹದ ಎಲ್ಲಾ ಜೀವ ಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ?

ಉತ್ತರ:– ಅಲ್ವಿಯೋಲಾರ್ ರಕ್ತನಾಳದಲ್ಲಿರುವ ರಕ್ತವು ಗಾಳಿಯಲ್ಲಿರುವ ಆಕ್ಸಿಜನ್ ಅನ್ನು ದೇಹದ ಎಲ್ಲಾ ಜೀವ ಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ

5) ನಮ್ಮ ಜಠರದಲ್ಲಿ ಲೋಳೆಯ ಪಾತ್ರವೇನು?

ಉತ್ತರ: ಲೋಳೆಯು ಹೈಡ್ರೋಕ್ಲೋರಿಕ್ ಆಮ್ಲದಿಂದ ಜಠರಕ್ಕೆ ಆಗುವ ಹಾನಿಯನ್ನು ತಡೆಯುತ್ತದೆ.

6) ಎಟಿಪಿಯನ್ನು ವಿಸ್ತರಿಸಿ

ಉತ್ತರ:– ಅಡಿನೋಸೈನ್ ಟ್ರೈ ಫಾಸ್ಫೇಟ್

7) ಆಹಾರದ ಜೀರ್ಣಕ್ರಿಯೆಯಲ್ಲಿ ಲಾಲಾರಸದ ಪಾತ್ರವೇನು?

ಉತ್ತರ:– ಲಾಲಾರಸ ಗ್ರಂಥಿಗಳು ಸ್ರವಿಸುವ ಲಾಲಾರಸದಿಂದ ಆಹಾರವು ತೇವಗೊಳ್ಳುವುದು. ಲಾಲಾರಸದಲ್ಲಿರುವ ಸಲಿವರಿ ಅಮಲೈಸ್ ಎಂಬ ಕಿಣ್ವವು ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸುವುದು.

8) ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಯಾವುವು?

ಉತ್ತರ:– ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಎಂದರೆ


* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಕಚ್ಚವಸ್ತುಗಳಾದ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಲಭ್ಯವಿರಬೇಕು
* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಸೂರ್ಯನ ಬೆಳಕು ಮತ್ತು ಕ್ಲೋರೋಫಿಲ್ ಇರಬೇಕು

9) ಸ್ವಪೋಷಕ ಮತ್ತು ಪರಪೋಷಕಗಳಿರುವ ವ್ಯತ್ಯಾಸವನ್ನು ಬರೆಯಿರಿ

ಉತ್ತರ:– ತಮ್ಮ ಆಹಾರವನ್ನು ತಾವೇ ತಯಾರಿಸುವ ಜೀವಿಗಳನ್ನು ಸ್ವಪೋಷಕಗಳು ಎನ್ನುವರು ಆದರೆ ಆಹಾರಕ್ಕಾಗಿ ಇತರ ಜೀವಿಗಳನ್ನು ಅವಲಂಬಿಸಿರುವವರನ್ನು ಪರಪೋಷಕ ಜೀವಿಗಳು ಎನ್ನುವರು

10) ಎಲೆಯ ಅಡ್ಡ ಸೀಳಿಕೆಯ ನೋಟವನ್ನು ತೋರಿಸುವ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ

ಉತ್ತರ:–



11) ಮಾನವನ ಜೀರ್ಣಾಂಗ ವ್ಯವಸ್ಥೆಯ ಬಗ್ಗೆ ಬರೆಯಿರಿ

ಉತ್ತರ:– ನಾವು ಅನೇಕ ವಿವಿಧ ಆಹಾರವನ್ನು ಸೇವಿಸುತ್ತೇವೆ. ಆ ಆಹಾರವು ನಮ್ಮ ಹಲ್ಲಿನಿಂದ ನುರಿಸುವ ಮೂಲಕ ಇದನ್ನು ನುಣ್ಣಗೆ ಮಾಡಲಾಗುತ್ತದೆ. ನಾಳದ ಒಳಗೋಡೆಗಳ ಪದರ ಮೃದುವಾಗಿರುವುದರಿಂದ ಆಹಾರವು ನಯವಾಗಿ ಹಾದು ಹೋಗಲು ಅದು ತೇವಾಂಶದಿಂದ ಕೂಡಿರಬೇಕು. ಅದಕ್ಕೆ ಲಾಲಾರಸ ಗ್ರಂಥಿಯಿಂದ ಸ್ರವಿಸಲ್ಪಡುವ ಲಾಲಾರಸ ಸಹಾಯ ಮಾಡುತ್ತದೆ

ಲಾಲಾರಸವು ಲಾಲಾರಸದ ಅಮೈಲೇಸ್ ಎಂಬ ಕಿಣ್ವವನ್ನು ಹೊಂದಿದ್ದು ಅದು ಪಿಷ್ಟ ಎಂಬ ಸಂಕೀರ್ಣ ಅಣುವನ್ನು ವಿಭಜಿಸಿ ಸಕ್ಕರೆಯನ್ನು ಬಿಡುಗಡೆ ಮಾಡುತ್ತದೆ. ಆಹಾರವು ಲಾಲಾರಸದೊಂದಿಗೆ ಚೆನ್ನಾಗಿ ಮಿಶ್ರಣಗೊಂಡು ಸ್ನಾಯುವಿನಿಂದಾದ ನಾಲಿಗೆಯ ಸಹಾಯದಿಂದ ಮೆಲ್ಲುವಾಗ ಬಾಯಿಯ ತುಂಬಾ ಚಲಿಸುತ್ತದೆ. ಆಹಾರವು ಜೀರ್ಣನಾಳದ ಪ್ರತಿಯೊಂದು ಭಾಗದಲ್ಲಿ ಸರಿಯಾಗಿ ಸಂಸ್ಕರಿಸಲು ಅದು ಜೀರ್ಣನಾಳದಲ್ಲಿ ಒಂದು ನಿಯಂತ್ರಿತ ರೀತಿಯಲ್ಲಿ ಚಲಿಸುತ್ತದೆ. ಜೀರ್ಣನಾಳದ ಒಳಸ್ತರಿಯು ಸ್ನಾಯುಗಳನ್ನು ಹೊಂದಿದ್ದು ಅದು ಆಹಾರವನ್ನು ಮುಂದಕ್ಕೆ ತಳ್ಳಲು ಲಯಬದ್ಧವಾಗಿ ಸಂಕುಚಿಸುತ್ತದೆ. ಈ ಪರಿಕ್ರಮಣ ಸಂಕುಚನ ಚಲನೆಗಳು ಕರುಳಿನ ಉದ್ದಕ್ಕೂ ಉಂಟಾಗುತ್ತವೆ.

ಆಹಾರವು ಬಾಯಿಯಿಂದ ಜಠರಕ್ಕೆ ಆಹಾರ ನಾಳ ಅಥವಾ ಅನ್ನನಾಳದ ಮೂಲಕ ಒಯ್ಯಲ್ಪಡುತ್ತದೆ. ಜಠರವು ಒಂದು ದೊಡ್ಡ ಅಂಗವಾಗಿದ್ದು ಆಹಾರ ಪ್ರವೇಶಿಸಿದಾಗ ಹಿಗ್ಗುತ್ತದೆ. ಜಠರದ ಸ್ನಾಯುಕ ಗೋಡೆಗಳು ಹೆಚ್ಚಿನ ಪಚನ ರಸಗಳೊಂದಿಗೆ ಆಹಾರವು ಚೆನ್ನಾಗಿ ಮಿಶ್ರಣವಾಗಲು ಸಹಾಯ ಮಾಡುತ್ತವೆ. ಈ ಪಚನ ಪ್ರಕ್ರಿಯೆಗಳು ಜಠರದ ಗೋಡೆಯಲ್ಲಿ ಕಂಡುಬರುವ ಜಠರ ಗ್ರಂಥಿಗಳಿಂದ ನಿರ್ವಹಿಸಲ್ಪಡುತ್ತವೆ. ಇವು ಹೈಡ್ರೋಕ್ಲೋರಿಕ್ ಆಮ್ಲ, ಪ್ರೋಟೀನನ್ನು ಜೀರ್ಣಿಸುವ ಪೆಪ್ಸಿನ್ ಮತ್ತು ಲೋಳೆಯನ್ನು ಸ್ರವಿಸುತ್ತವೆ. ಹೈಡ್ರೋಕ್ಲೋರಿಕ್ ಆಮ್ಲವು ಪೆಪ್ಸಿನ್ ಕಿಣ್ವದ ಕ್ರಿಯೆಯನ್ನು ಉತ್ತೇಜಿಸುವ ಆಮ್ಲೀಯ ಮಾಧ್ಯಮವನ್ನು ಉಂಟುಮಾಡುತ್ತದೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಲೋಳೆಯು ಜಠರದ ಗೋಡೆಗಳನ್ನು ಆಮ್ಲದ ಕ್ರಿಯೆಯಿಂದ ರಕ್ಷಿಸುತ್ತದೆ (ಮುಂದುವರಿಯುವುದು)

CHEMISTRY

CHEMICAL KINETICS

27. How does the concentration of the reactants influence the rate of a reaction?

Ans:- The concentration of the reactants is maximum at the start of the reaction and therefore, the rate of change of concentration is also maximum. As the concentration of the reactants decreases, it brings about the corresponding decrease in the rate of the reaction. This means that the rate of the reaction is directly proportional to the concentration of the reactants. *Eg:-* The rate of the burning of the wood depends upon the concentration of oxygen, a piece of wood burns slowly in air containing about 20% of oxygen but burns rapidly in pure oxygen (100% oxygen)

28. How does the temperature of the system influence the rate of a reaction?

Ans:- An increase in temperature increases the rate of almost all the chemical reactions and a decrease in temperature decreases the rate. The effect is observed in both the exothermic and endothermic reactions. Generally the reaction rate for most of the chemical reactions becomes almost double, for every 10^0C rise in the temperature.

29. How does the nature of the reactants and the products influence the rate of a reaction?

Ans:- A chemical reaction involves the breaking of old bonds and formation of the new bonds. The reactivity of the substance can, therefore, be related to the ease with which the specific bonds are broken or formed and the number of such bonds involved.

Eg:- The oxidation of nitric oxide to nitrogen dioxide takes place rapidly while the oxidation of carbon monoxide to carbon dioxide takes place slowly.

$$2NO + O_2 \rightarrow 2NO_2 \quad (fast)$$

$$2CO + O_2 \rightarrow 2CO_2 \quad (slow)$$

30. How does the surface area influence the rate of a reaction? Explain with an example.

Ans:- The larger the surface area of the reactants, the faster is the rate of the reaction.

Eg:- The log of wood burns slowly but if it is cut into small wooden chips, the burning takes place rapidly.

This is due to the fact that the total surface area of the smaller particles is greater than the large particles and this permits more molecules of the reactants to come in contact and form products.

31. How does the Intensity of light in the case of photosensitive reactions influence the rate of a reaction?

Ans:- The rate of the chemical reaction is considerably increased by the use of certain radiations. The photons of these radiations having frequencies (ν) possess sufficient energies ($E = h\nu$) to break certain bonds in the reactants.

Eg:- The reaction of hydrogen and chlorine takes place very slowly in the absence of light. However in the presence of light, the reaction takes place very rapidly.

32. What is meant by the order of the reaction?

Ans:- The sum of the powers to which the concentration of the terms are raised in the rate law expression is known as the order of the reaction.

Eg:- The rate of the reaction $aA + bB + cC \rightarrow products$; is given by the rate law as

$$Rate = -\frac{dx}{dt} = k[A]^p[B]^q[C]^r$$

then the order of the reaction, n, is $n = p + q + r$. Where, p, q, r are the orders with respect to individual reactants and overall order of the reaction is the sum of these exponents that is, $p + q + r$. The order of the reaction cannot be directly obtained from the balanced chemical equation. It is always obtained from the experimentally determined rate equation.

33. What is first order reaction?

Ans:- A chemical reaction in which the rate is directly proportional to the first power of the molar concentration of the reactant is a first order reaction.

Eg:- (a) Decomposition of nitrogen pentoxide

$$2N_2O_5 \rightarrow 4NO_2 + O_2$$

The experimental rate equation is -

$v = k[N_2O_5]^1$. Hence the order = 1

(b) The decomposition of ammonium nitrite in the aqueous solution.

$$NH_4NO_2 \rightarrow 2H_2O + N_2\uparrow$$

The experimental rate equation is -

$v = k[NH_4NO_2]^1$. Hence the order = 1

34. Show that the order of a reaction can be a fraction.

Ans:- Consider formation of hydrogen bromide,

$$H_2 + Br_2 \rightarrow 2HBr$$

Experimental rate equation for this reaction is

$$v = k[H_2]^1[Br_2]^{1/2}.$$

Hence, order of reaction is $1 + \frac{1}{2} = \frac{3}{2}$

(b) Consider the decomposition of acetaldehyde into methane and carbon monoxide.

$$CH_3CHO \rightarrow CH_4 + CO$$

Experimental rate equation is

$v = k[CH_3CHO]^{3/2}$. Hence, order $= \frac{3}{2}$

From the above illustrations it is proved that the order can be a fraction.

35. Give some examples for the second order reactions.

Ans:- Some examples for 2^{nd} order reactions are (a) Saponification of ethyl acetate

$$CH_3COOC_2H_5 + NaOH \rightarrow CH_3COONa + C_2H_5OH$$

The rate of the reaction is -

$v = k[CH_3COOC_2H_5][NaOH]$.

Hence the order = 1 + 1 = 2

(b) Formation of hydrogen iodide

$$H_2 + I_2 \rightarrow 2HI$$

The rate of the reaction is -

$v = k[H_2][I_2]$. Hence the order = 1 + 1 = 2

36. Give some examples for the third order reactions. *(Contd……..)*

ಮಲೆಯಾಳ ಲೇಖಕಿ ಕೆ.ಆರ್. ಮೀರಾಗೆ 'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ'

ಪ್ರಜಾವಾಣಿ ವಾರ್ತೆ



ಕೆ.ಆರ್. ಮೀರಾ

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆ ನೀಡುವ 2025ನೇ ಸಾಲಿನ 'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ'ಕ್ಕೆ ಮಲೆಯಾಳ ಲೇಖಕಿ ಕೆ.ಆರ್. ಮೀರಾ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಈ ಪುರಸ್ಕಾರವು ₹2 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ'ವು ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಆಗಸ್ಟ್ 8ರಿಂದ 10ರವರೆಗೆ ನಡೆಯಲಿದೆ. ಸಮಾರಂಭದ ಕೊನೆಯ ದಿನದಂದು ಈ ಪುರಸ್ಕಾರವನ್ನು ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿ ಪ್ರದಾನದ ಬಳಿಕ ಮೀರಾ ಅವರ ಜತೆಗೆ ವಿಶೇಷ ಸಂವಾದ ಕಾರ್ಯಕ್ರಮ ನಡೆಯಲಿದೆ.

ದಕ್ಷಿಣ ಭಾರತೀಯ ಭಾಷಾ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ನೀಡುವ ಪುರಸ್ಕಾರ ಇದಾಗಿದೆ. ಕೇರಳದ ಕೊಟ್ಟಯಂನ ಕೆ.ಆರ್. ಮೀರಾ ಅವರು ಕಥೆಗಾರ್ತಿ ಮತ್ತು ಪತ್ರಕರ್ತೆ. ಈವರೆಗೆ ಅವರು ಐದು ಕಥಾ ಸಂಕಲನಗಳು, ಎರಡು ನೀಳ್ಗತೆಗಳ ಸಂಕಲನ ಮತ್ತು ಐದು ಕಾದಂಬರಿಗಳನ್ನು ರಚಿಸಿದ್ದಾರೆ. ಅವರ 'ಆರಾಚ್ಚಾರ್' (ಆಂಗ್ಲ ಭಾಷೆಯಲ್ಲಿ 'ಹ್ಯಾಂಗ್‌ವುಮನ್') ಕಾದಂಬರಿ ಮಲೆಯಾಳ ಸಾಹಿತ್ಯದ ಪ್ರಸಿದ್ಧ ಕೃತಿಗಳಲ್ಲಿ ಒಂದಾಗಿದೆ.

ಈ ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿ ಲೇಖಕ ವಿವೇಕ ಶಾನಭಾಗ, ಅನುವಾದಕ ಸುಧಾಕರನ್ ರಾಮಂತಳ್ಳಿ ಹಾಗೂ ಬುಕ್ ಬ್ರಹ್ಮ ಸಾಹಿತ್ಯೋತ್ಸವದ ನಿರ್ದೇಶಕ ಸತೀಶ್ ಚಪ್ಪರಿಕೆ ಇದ್ದರು ಎಂದು ಪ್ರಕಟಣೆ ತಿಳಿಸಿದೆ.

ಆ. 1ರಂದು ದೆಹಲಿಗೆ ಸಿ.ಎಂ

ಬೆಂಗಳೂರು: ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ 1ರಂದು ದೆಹಲಿಗೆ ತೆರಳಲಿದ್ದಾರೆ.

ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯು ದೆಹಲಿಯ ಐಟಿಸಿ ಮೌರ್ಯ ಹೋಟೆಲ್‌ನಲ್ಲಿ ಆಗಸ್ಟ್ 1ರಂದು ಸಂಜೆ ಆರು ಗಂಟೆಗೆ ಆಯೋಜಿಸಿರುವ 'ಬ್ರಿಡ್ಜ್ ಟು ಬೆಂಗಳೂರು' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭಾಗವಹಿಸಲಿದ್ದಾರೆ. ವಿವಿಧ ದೇಶಗಳ ರಾಯಭಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.

web:http://www.hassancity.mrc.gov.in Email: commn_hassan@yahoo.com ದೂರವಾಣಿ: 08172– 268276 ಸಹಾಯವಾಣಿ: 08172–233702 ಫ್ಯಾಕ್ಸ್: 08172–234792

ನಂ:ಪೌಆ/ಸಹಾಆ/ಇಇ(ಪರಿಸರ)/ಪಾರದರ್ಶಕತ್ವಾ/ಸಿಆರ್29/2024–25 ದಿನಾಂಕ: 28.07.2025

ಮರು ಟೆಂಡರ್ ಪ್ರಕಟಣೆ :ಇ ಪ್ರೊಕ್ಯೂರ್‌ಮೆಂಟ್ ಮೂಲಕ

ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಕಾಮಗಾರಿ/ ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧಿನಿಯಮ 2000ದ ಅನ್ವಯ ಐಟಂವಾರು ದರಗಳ ಟೆಂಡರನ್ನು ಇ– ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ ಪೋರ್ಟಲ್ (http://www.kppp.karnataka.gov.in) ಮೂಲಕ 1)DMA/2023-24/OW/WORK INDENT7488/CALL-3 ರೂ:1012.78 ಲಕ್ಷಗಳ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:01/09/2025ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಕ್ಕಾಗಿ ಹಾಸನ ಮಹಾನಗರ ಪಾಲಿಕೆಯ ಟೆಂಡ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಸನ ಮಹಾನಗರ ಪಾಲಿಕೆ, ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ:08172–268276. ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/–ಆಯುಕ್ತರು, ಹಾಸನ ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/392/ಕೆಎಸ್ಎಂಸಿಎ/2025–26

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

Mysore Silk

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

3ನೇ ಮತ್ತು 4ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು–560 001. ಫೋನ್: 080–2558 6550/2558 6399 ಫ್ಯಾಕ್ಸ್: 080–2558 7020 ಇ–ಮೇಲ್: info@ksicsilk.com

ಸಂಖ್ಯೆ: ಕೆಎಸ್ಐಸಿ/ಸಿಆರ್/ಎಸ್ಐ, ಎಪಿ & ಎಸ್‌ಡಬ್ಲ್ಯೂ/01/2025–26 ದಿನಾಂಕ: 25.07.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಶಾಪಿಂಗ್ ಕ್ಯಾರಿ ಬ್ಯಾಗ್‌ಗಳು, ಸ್ಯಾರಿ ಬಾಕ್ಸ್‌ಗಳು ಹಾಗೂ ಸ್ಯಾರಿ ರ್‍ಯಾಪಿಂಗ್ ಪೇಪರ್‌ಗಳ ಮುದ್ರಣ ಹಾಗೂ ಪೂರೈಸುವುದಕ್ಕಾಗಿ ಅರ್ಹ ತಯಾರಕರು/ಮುದ್ರಕರು/ಮುದ್ರಣ ಘಟಕಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಐಟಂ ಹೆಸರು	ಪ್ರಮಾಣ (ಸಂಖ್ಯೆಗಳಲ್ಲಿ)	ವಿತರಣಾ ಸ್ಥಳ	ಇಎಂಡಿ (ರೂ.)
1.	ಶಾಪಿಂಗ್ ಕ್ಯಾರಿ ಬ್ಯಾಗ್‌ಗಳು	1,00,000	ಕೆಎಸ್ಐಸಿ ರೇಷ್ಮೆ ಉಗ್ರಾಣ ಗೋಡೌನ್, ಬೆಂಗಳೂರು & ಸಿದ್ಧವಸ್ತ್ರ ಉಗ್ರಾಣ ಗೋಡೌನ್, ಮೈಸೂರು	26,200/-
2.	ಸ್ಯಾರಿ ಬಾಕ್ಸ್‌ಗಳು	1,00,000		15,800/-
3.	ಸ್ಯಾರಿ ರ್‍ಯಾಪಿಂಗ್ ಪೇಪರ್	1,00,000		2,900/-

ಟೆಂಡರ್ ದಸ್ತಾವೇಜು, ಟೆಂಡರ್ ಪ್ರಕಟಣೆಯ ವಿವರಗಳು, ವೇಳಾಪಟ್ಟಿ, ನಿಯಮಗಳು ಮತ್ತು ಷರತ್ತುಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದಾಗಿದೆ. ಇ.ಎಮ್.ಡಿ.ಯೊಂದಿಗೆ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **29.08.2025ರ ಅಪರಾಹ್ನ 3:00 ಗಂಟೆವರೆಗೆ.** ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 30.08.2025ರ ಅಪರಾಹ್ನ 3:30 ಗಂಟೆಗೆ** ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ – 080–46010000/68948777 ಯಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ)

ವಾಸಾಸಂಇ/ವಾ.ಪ್ರ/2027/ಎಂಎಎ/2025–26

ನವೋದಯ ವಿದ್ಯಾಲಯ ಸಮಿತಿ

ಶಿಕ್ಷಣ ಸಚಿವಾಲಯದ ಅಡಿಯಲ್ಲಿನ ಒಂದು ಸ್ವಾಯತ್ತ ಸಂಸ್ಥೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಭಾರತ ಸರ್ಕಾರ

ಜವಾಹರ್ ನವೋದಯ ವಿದ್ಯಾಲಯ ಆಯ್ಕೆ ಪರೀಕ್ಷೆ –2026ರ (6ನೇಯ ತರಗತಿಗೆ ಪ್ರವೇಶ ಪಡೆಯ ಬಯಸುವ ಅಭ್ಯರ್ಥಿಗಳಿಗೆ) ಅಪ್ಲಿಕೇಶನ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಗೆ ಅಧಿಸೂಚನೆ

ಆಯ್ಕೆ ಪರೀಕ್ಷೆಯ ಮೂಲಕ ಜವಾಹರ್ ನವೋದಯ ವಿದ್ಯಾಲಯದಲ್ಲಿ 6ನೇ ತರಗತಿ (2026–27ನೆಯ ಸಾಲಿಗೆ) ಪ್ರವೇಶಕ್ಕಾಗಿ ಆನ್‌ಲೈನ್ ನೋಂದಣಿ ಪ್ರಗತಿಯಲ್ಲಿದೆ. ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ದಿನಾಂಕವನ್ನು ಆಗಸ್ಟ್ 13, 2025ರ ವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಈ ಕೆಳಗಿನ ಲಿಂಕ್ ಬಳಸಿಕೊಂಡು ಉಚಿತವಾಗಿ ಅರ್ಜಿ ಸಲ್ಲಿಸಬಹುದು.

https://cbseitms.rcil.gov.in/nvs ಇವರಿಂದ: ನವೋದಯ ವಿದ್ಯಾಲಯ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆರೆಗಳು (ಪೂರ್ವ ವಲಯ ಮತ್ತು ಕೆ.ಆರ್. ಪುರಂ ಮತಕ್ಷೇತ್ರ), ಕೊಠಡಿ ಸಂ. 309, 3ನೇ ಮಹಡಿ, ಅನೆಕ್ಸ್–3 ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ:ಕಾಅ/ಕೆರೆಗಳು/ಪೂರ್ವ&ಕೆಆರ್‌ಪಿಸಿ/ಟಿಎನ್–05/ಕರೆ–3/2025–26 ದಿನಾಂಕ: 29–07–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆರೆಗಳು (ಪೂರ್ವ ವಲಯ ಮತ್ತು ಕೆ.ಆರ್. ಪುರ ಮತಕ್ಷೇತ್ರ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ಹಲಸೂರು ಕೆರೆಯಲ್ಲಿ ಹೂಳು ಮತ್ತು ಕೆಸರು ತೆಗೆಯುವ ಮೂಲಕ ನೀರು ಸಂಗ್ರಹ ಸಾಮರ್ಥ್ಯ ಹೆಚ್ಚಿಸುವುದು ಹಾಗೂ ಇತರೆ ಸಂಬಂಧಿತ ಕೆಲಸಗಳ ಅಭಿವೃದ್ಧಿ ಕಾಮಗಾರಿ. **(3ನೇ ಕರೆ) (ಸಾಮಾನ್ಯ) – ಕಾಮಗಾರಿ ಮೊತ್ತ (ರೂ. ಲಕ್ಷಗಳಲ್ಲಿ): 400.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,80,000/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **30–07–2025 ರ 16.00 ಗಂಟೆ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **04–08–2025 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಎಫ್‌ಇಸಿಸಿ, ನಂ. 308, 3ನೇ ಮಹಡಿ, ಅನೆಕ್ಸ್–2 ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು – 560002 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **11–08–2025 ರಂದು 15.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **12–08–2025 ರಂದು 15.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆ ನಂತರ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಕೆರೆಗಳು (ಪೂರ್ವ ವಲಯ ಮತ್ತು ಕೆ.ಆರ್. ಪುರಂ ಮತಕ್ಷೇತ್ರ), ಬಿಬಿಎಂಪಿ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು – 560002. ಫೋನ್: 080–22870060, ಫ್ಯಾಕ್ಸ್: 080–22875798 ಇ–ಮೇಲ್: dmekarnataka@yahoo.com

No: ME/Tender/06/2024-25 Date: 28-07-2025

ಇ–ಟೆಂಡರ್ ಅಧಿಸೂಚನೆ – ಎರಡು ಕವರ್ ಪದ್ಧತಿ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ **ಸರ್ಕಾರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಲ್ಲಿ PMABHIM ಯೋಜನೆಯಡಿ ನೂತನವಾಗಿ ಅನುಷ್ಠಾನಗೊಳಿಸಿರುವ ಕ್ರಿಟಿಕಲ್ ಕೇರ್ ಘಟಕದ ಸ್ಥಾಪನೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು** ಟೆಂಡರ್‌ನ್ನು ಪ್ರತಿಷ್ಠಿತ ತಯಾರಕರು / ಅಧಿಕೃತ ಪ್ರತಿನಿಧಿಗಳಿಂದ ಟೆಂಡರ್‌ನ್ನು ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇಎಂಡಿ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವೀಕ್ಷಿಸಿ, ಡೌನ್‌ಲೋಡ್ ಮಾಡಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 30–07–2025.
ಪೂರ್ವಭಾವಿ ಸಮಿತಿ ಸಭೆ ದಿನಾಂಕ: 13–08–2025 ಪೂರ್ವಾಹ್ನ 11.30 ಗಂಟೆಗೆ.
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 30–08–2025 ಅಪರಾಹ್ನ 4.30 ಗಂಟೆಗಿಂತಲೂ ಮುಂಚಿತವಾಗಿ.
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 01–09–2025 ಪೂರ್ವಾಹ್ನ 11.30 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು – 560002 ಇವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

ವಾಸಾಸಂಇ/ವಾ.ಪ್ರ/2080/ಅಡ್ವರ್ಟೋರ್/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ, ವಿಭಾಗ, ಭದ್ರಾವತಿ –577301

ಫೋನ್: 08282-271063 ಫ್ಯಾಕ್ಸ್ : 08282-271063

E-mail : eeknnlbdvt@yahoo.co.in

ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/ ಟೆಂಡರ್ ಪ್ರಕಟಣೆ ಸಂಖ್ಯೆ: 07/2025-26/ ದಿನಾಂಕ: 28.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 02 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರ–ರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್. ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

(1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : **29.07.2025 ರಿಂದ 07.08.2025 ರವರೆಗೆ 17.30 ಗಂಟೆಗೆ.** (2) ಆರ್ಥಿಕ ಬಿಡ್ ತೆರೆಯುವ ದಿನಾಂಕ : **08.08.2025 ರಂದು 17.30 ಗಂಟೆಗೆ.** (3) ಕಾಲಾವಧಿ : **4 ತಿಂಗಳು (ಮಳೆಗಾಲ ಸಹಿತ)** (4) ಟೆಂಡರಿಗಿಟ್ಟ ಮೊತ್ತ : **ರೂ.20.14 ಲಕ್ಷ ದಿಂದ ರೂ.41.42 ಲಕ್ಷಗಳವರೆಗೆ** (5) ಇ.ಎಂ.ಡಿ ಮೊತ್ತ : **ರೂ. 40,500/- ಮತ್ತು ರೂ.83,000/-**

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಪೋನ್ : 8660573513.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕ.ನೀ.ನಿ.ನಿ., ನಂ.4 ಬಿ.ಆರ್.ಎಲ್.ಬಿಸಿ. ವಿಭಾಗ,
ಭದ್ರಾವತಿ

ವಾ.ಸಾ.ಸಂ.ಇ./ಶಿ/ನಂ.174-07 ಝೇಂಕಾರ್/2025-26

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ನಂ. 55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.
ದೂರವಾಣಿ: 23460085, 23468949, 23462436, 23563506

E-mail: ksdb.ho@gmail.com, kscb_blr@rediffmail.com, Website: http://karnataka.gov.in/ksdb

No.KSDB/EE/No1.div/STT/IFT-4/2025-26/322 Date: 24.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರ ಕಛೇರಿಯಿಂದ Sinking of Borewells, Providing Pumping Machinery, Raising Main, Providing CC Road, RCC Drain, UGD Work, Other Development Works at Chamundinagara Slums and Other Different Slums of Basavanagudi Constituency, Bangalore City. ಸದರಿ ಕಾಮಗಾರಿಗೆ KW-4ನಂತೆ ಕಾಮಗಾರಿಯ ಅಂದಾಜು ಮೊತ್ತ ರೂ. 200 ಲಕ್ಷಗಳು. ಟೆಂಡರ್‌ಗಿಟ್ಟ ಮೊತ್ತ ರೂ.164.87ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). ಇಎಂಡಿ ಮೊತ್ತ 2,47,350.00/–ರೂಗಳು ಸದರಿ ಕಾಮಗಾರಿಗಳಿಗೆ ದ್ವಿ–ಲಕೋಟಿ ಪದ್ಧತಿಯಲ್ಲಿ ಟೆಂಡರ್‌ಅನ್ನು ಕೆ.ಪಿ.ಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದ್ದು, ಕಾಮಗಾರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.08.2025 ಸಂಜೆ 4:00 ಗಂಟೆಗಳು, ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಪ್ರೀ ಬಿಡ್ ಮೀಟಿಂಗ್ ದಿನಾಂಕ: 30.07.2025 ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.08.2025 ಬೆಳಿಗ್ಗೆ 11:00 ಗಂಟೆಗಳು ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ:06.08.2025 ಬೆಳಿಗ್ಗೆ 11:00 ಗಂಟೆಗಳು. ಸದರಿ ಕಾಮಗಾರಿಗೆ/ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ದಿನಾಂಕ: 02.08.2025 ಸಂಜೆ 4:00 ಗಂಟೆಯೊಳಗೆ https://www.kppp.karnataka.gov.in ರಲ್ಲಿ ವೀಕ್ಷಿಸಬಹುದಾಗಿರುತ್ತದೆ. ಹಾಗೂ ಕಛೇರಿ ಸಮಯದಲ್ಲಿ ನಂ.1ನೇ ವಿಭಾಗ, ಕಕೊಅಮ, ಬೆಂಗಳೂರು ಕಛೇರಿಗೆ ಭೇಟಿ ನೀಡಿ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಕ.ಕೊ.ಅ.ಮ, ಬೆಂಗಳೂರು

ಡಿಐಪಿಆರ್/ಸಿಪಿ/2088/ಸಿಸಿಎಲ್/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ+ ಮಾನ್ಯತೆ

ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065
ದೂರವಾಣಿ : GKVK: 2330153-250, Direct : 23332765
Email : eo@uasbangalore.edu.in, Website: www.uasbangalore.edu.in

ಸಂಖ್ಯೆ: ಆಅ/ಟಿ.ಎನ್/4/2025–26 ದಿನಾಂಕ: 21–7–2025

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ **ನವೆಂಬರ್ 2025ರಲ್ಲಿ (ದಿನಾಂಕ: 13 ರಿಂದ 16 ರವರೆಗೆ, 4 ದಿನಗಳು) ನಡೆಯುವ ಕೃಷಿ ಮೇಳಕ್ಕೆ ವಸ್ತು ಪ್ರದರ್ಶನ ಮಳಿಗೆ ಮತ್ತು ಇತರೆ ಕೆಲಸಗಳನ್ನು ಮಾಡಲು** ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4ರ ಮುಖಾಂತರ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ ಗುತ್ತಿಗೆದಾರರುಗಳಿಂದ / ಅನುಮೋದಿತ ಸಂಸ್ಥೆಯಿಂದ ಈ ಕೆಳಕಂಡ ಕೆಲಸಕ್ಕೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕೆಲಸದ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4ರಂತೆ ಅಪ್‌ಲೋಡ್ ಮಾಡಲಾಗಿದೆ.

ಪ್ರಿ–ಬಿಡ್ ಮೀಟಿಂಗ್ ಅನ್ನು ದಿನಾಂಕ: **20.08.2025 ರಂದು ಬೆಳಿಗ್ಗೆ 10.30 ಗಂಟೆಗೆ** ನಡೆಸಲಾಗುವುದು, ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: **22.08.2025 ರಂದು ಅಪರಾಹ್ನ 4.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ ಅನ್ನು ದಿನಾಂಕ: **25.08.2025 ರಂದು ಬೆಳಿಗ್ಗೆ 10.30 ಗಂಟೆಗೆ** ತೆರೆಯಲಾಗುವುದು. ಹಣಕಾಸಿನ ಬಿಡ್ ಅನ್ನು ದಿನಾಂಕ: **29.08.2025 ರಂದು ಬೆಳಿಗ್ಗೆ 10.30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 080–23332765 ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ ಸಂಖ್ಯೆ: 8046010000/ 8068948777, support@ eprochelpdesk.com ನ್ನು ಸಂಪರ್ಕಿಸುವುದು.

ಸಹಿ/–
ಆಸ್ತಿ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜೆಎ/2085/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ದಕ್ಷಿಣ ವಲಯ), 9ನೇ ಅಡ್ಡ ರಸ್ತೆ, 9ನೇ ಮೇನ್, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011.

ಸಂಖ್ಯೆ: ಹಿಸತೋನಿ(ದ)/ಟೆಂಡರ್/ಪಿಆರ್/11/2025–26 ದಿನಾಂಕ: 29.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ (ದಕ್ಷಿಣ), (ಈ ದಾಖಲಾತಿಗಳಲ್ಲಿ ಉದ್ಯೋಗದಾತರು ಎಂದು ಉಲ್ಲೇಖಿಸಲಾಗಿದೆ) ಇವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ಅಡಿಯಲ್ಲಿ ಅನುಷ್ಠಾನಗೊಳಿಸಲು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಮತ್ತು ಅನುಭವಿ ವ್ಯಕ್ತಿ/ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲಾತಿಗಳಲ್ಲಿ ಟೆಂಡರ್‌ದಾರರು ಎಂದು ಉಲ್ಲೇಖಿಸಲಾಗಿದೆ) ಉದ್ಯಾನವನಗಳ ಅಭಿವೃದ್ಧಿಗಾಗಿ ಸ್ಟಾಂಡರ್ಡ್ ಟೆಂಡರ್ ದಾಖಲಾತಿ ಕೆಡಬ್ಲ್ಯೂ–4 ರ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಕೆಲಸದ ಹೆಸರು
1.	ಬಸವನಗುಡಿ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳ ಸೌಂದರ್ಯೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರು ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳು. **ಒಟ್ಟು ಅಂದಾಜು ಮೊತ್ತ:** ರೂ.1,25,00,000/–. **ಇಎಂಡಿ:** ರೂ.2,00,000/–.
2.	ವಿಜಯನಗರ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳ ಸೌಂದರ್ಯೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರು ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳು. **ಒಟ್ಟು ಅಂದಾಜು ಮೊತ್ತ:** ರೂ.1,25,00,000/–. **ಇಎಂಡಿ:** ರೂ.2,00,000/–.

ವೇಳಾ ಪಟ್ಟಿ : 1) ಪ್ರಕಟಣೆ ದಿನಾಂಕ: 29.07.2025. 2) ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು: 01.08.2025 ರಿಂದ. 3) ಬಿಡ್ ಪೂರ್ವಭಾವಿ ಸಭೆ: 08.08.2025 ರಂದು ಸಂಜೆ 4.00 ಗಂಟೆಗೆ. 4) ಟೆಂಡರ್ ಮುಕ್ತಾಯದ ದಿನಾಂಕ: 11.08.2025 ರಂದು ಸಂಜೆ 4.00 ಗಂಟೆಗೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.08.2025 ರಂದು ಸಂಜೆ 4.30 ಗಂಟೆಗೆ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆ ನಂತರ.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ದಕ್ಷಿಣ ವಲಯ)

GOVERNMENT OF INDIA
PRINCIPAL CHIEF COMMISSIONER OF INCOME TAX KARNATAKA & GOA REGION, BENGALURU

Central Revenue Building, No.1, Queen's Road, Bengaluru-01.

F.No.3/SPP/PCIT(J)/BLR/2025-26 Date: 30-07-2025

NOTICE FOR EMPANELMENT OF SPECIAL PUBLIC PROSECUTORS

The Pr. Chief Commissioner of Income Tax, Karnataka & Goa, **proposes to engage the services of 16 (Sixteen) Special Public Prosecutors to represent the Department before the "Economic Offence Court"/"Courts of Session and its Subordinate Courts in the state of Karnataka & in the state of Goa.**

2. The terms of engagement are governed by the Instruction No.2/2023 dated 30/11/2023 of the Central Board of Direct Taxes (CBDT).The Advocates willing to be empanelled should send their application in the Prescribed Proforma "P1". The above instruction, proforma and a checklist for submitting the application can be downloaded from **www.incometaxkarnatakagoa.gov.in** or can be collected from the address given below. *The eligibility conditions is as per para 2.1 of the said instruction, which is "The advocates who are eligible to appear before the Court and having minimum experience of 7 years as a practicing Advocate in criminal matters. Adequate experience of handling trials relating to Direct Taxes is desirable"* may apply to be empanelled as Special Public Prosecutors.
3. The applicants are requested to follow the checklist before submission of their application. If any of the documents required to be filed is not enclosed with the application, such application will be treated as defective and liable to be rejected.
4. The present requirement is as under:

Stations where Session Courts are located	No. of SPPs required
Bengaluru & Tumkur	6
Belgaum	1
Bellary & Chitradurga	1
Dharwad, Hubli, Gadag & Karwar	3
Mangalore & Udupi	2
Mysore & Mandya	1
Panaji & Margao	2
Total	**16**

Plus 4 Special Public Prosecutors for extended panel

5. It is preferable if the applicants are stationed at the specified stations mentioned above for the sake of better representation of the case and coordination.
6. The number of Special Public Prosecutors proposed to be engaged can be increased depending upon further requirement.
7. The applicants should furnish their email-ID, Phone/Mobile numbers for contact and further communication.
8. **The applicants may contact the following Officers for any clarification in this matter.**

Smt. Bandana Deori Joint Commissioner of Income Tax (Judicial), Room No.112, 1st Floor, C.R. Building Bengaluru. Phone No. 080-22860788	**Sri. S. R. Arun Kumar** Income Tax Officer (HQ)(Judicial), Room No.120, 1st Floor, C.R. Building Bengaluru. Phone No. 080-22868904

9. **The application in duplicate in a sealed envelope should reach the following address on or before 25-08-2025 by 6.00 p.m. The application should be in hard copy only.** The application filed through any other mode like email, fax, etc., will not be considered as valid application.

The Pr.Commissioner of Income Tax(Judicial),
Central Revenue Building, 1st Floor, Queen's Road, Bengaluru-560001, Karnataka, Email: bangalore.pcit.judicial@incometax.gov.in

---

ಕರ್ನಾಟಕ ಸರಕಾರ
ಜಂಟಿ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ

ಮಿನಿ ವಿಧಾನ ಸೌಧ, ಐವಾನ್–ಶಾಹಿ–ಇ ರಸ್ತೆ, ಕಲಬುರಗಿ–585102
ದೂರವಾಣಿ ಸಂಖ್ಯೆ :08472–278621, ಇ–ಮೇಲ್ ವಿಳಾಸ: dswoglb@gmail.com

ಸಂ:ಜನಿ:ಸಕಇಕ:ಟೆಂಡರ್:ಸಿಆರ್–01:2025–26 ದಿನಾಂಕ: 28–07–2025

:: ಅಲ್ಪಾವಧಿ ಇ–ಟೆಂಡರ್ ತಿದ್ದುಪಡಿ ಪ್ರಕಟಣೆ ::

ದಿನಾಂಕ: **19–07–2025 ರಂದು** ಈ ಕಛೇರಿಯಿಂದ ನೀಡಲಾದ ಅಲ್ಪಾವಧಿ ಇ–ಟೆಂಡರ ಪ್ರಕಟಣೆಯಂತೆ ಸದರಿ ಇ–ಟೆಂಡರ್‌ನ ಷರತ್ತುಗಳಲ್ಲಿ ತಿದ್ದುಪಡಿ ಮಾಡಿರುವ ಷರತ್ತುಗಳು ಈ ಕೆಳಕಂಡಂತಿದೆ.

:: ತಿದ್ದುಪಡಿ ಮಾಡಲಾದ ಷರತ್ತುಗಳು ::

S. No	RFP Clause/ Data sheet	Description of the Clause	Clarification/ Amendment
1	Duration of the contract	10 months	The duration of the training institute can be extended to maximum period of 3 years, in case of satisfactory service and the approval of the tender acceptance authority.
2	5.4 Eligibility Criteria for Technical Evaluation	Coaching Institution should have a turnover of minimum Rs 10 Crore for each and every year during the last three financial years, i.e., 2021-22, 2022-23, 2023-24. (If the turnover below 10 crore the bidder will be considered as ineligible)	Coaching Institution should have a average turnover of minimum Rs 10 Crore during the last three financial years, i.e., 2021-22, 2022-23, 2023-24. (If the turnover below 10 crore the bidder will be considered as ineligible)
3	Tender Due Date/ last date for Submission of the RFP	28.07.2025	05-08-2025 Time: 5:00pm
4	Opening of Technical bid	29.07.2025	06-08-2025
5	PPT presentation by all bidders	-	07-08-2025
6	Opening of Financial bid	31.07.2025	08-08-2025

ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/335/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.

ಮುಖ್ಯ ಅಭಿಯಂತರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817,
E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ಹೆಚ್.ಪಿ.ಟಿ–ನೀ.ಸ /2025–26/462 ದಿನಾಂಕ: 28–07–2025

–: ಟೆಂಡರ್ ಆಹ್ವಾನಿಸುವ ಸೂಚನೆ :–

1) ಕಾಮಗಾರಿ ವಿವರ : "ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ–4) ಯೋಜನೆಯಡಿ ಹೊಸಪೇಟೆ ನಗರದ ಆಕಾಶವಾಣಿಯ ಸರ್ವೆ ನಂ. 277 ಈಶ್ವರ ನಗರದಲ್ಲಿ 10.00 ಲಕ್ಷ ಲೀಟರ್ ಸಾಮರ್ಥ್ಯದ 15 ಮೀ ಎತ್ತರದ ಮೇಲ್ಮಟ್ಟ ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿ (ಲಮ್ ಸಮ್) (ವೇರಿಯೆಷನ್ ಇರುವುದಿಲ್ಲ)". (ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ /2025–26/ಸಿ.ಟಿ/ ವರ್ಕ_ಇಂಡೆಂಟ್362), 2) ಕಾಮಗಾರಿ ಅಂದಾಜು ಮೊತ್ತ : **ರೂ. 204.86 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ),** 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ. 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 3,07,000/–, 5) ಕಾಮಗಾರಿಯ ಅವಧಿ: 12 ತಿಂಗಳು (ಮಳೆಗಾಲ ಸೇರಿ), 6) ಇ–ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: 30–07–2025 ಸಮಯ : 17:00 ಗಂಟೆಯ ನಂತರ, 7) ಪೂರ್ವ ಟೆಂಡರ್ ಸಭೆ ದಿನಾಂಕ: 14–08–2025 ಸಮಯ 11:30 ಗಂಟೆಯವರೆಗೆ, 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 30–08–2025 ಸಮಯ 17:30 ಗಂಟೆಯವರೆಗೆ, 9) ಟೆಂಡರ್ ತೆರೆಯುವ ದಿನಾಂಕ: 01–09–2025 ಸಮಯ 11:00 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ : ಮುಖ್ಯ ಅಭಿಯಂತರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472–220817 E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/– ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/338/ಕೆ.ಎಸ್.ಎಂ.ಸಿ.&ಎ/2025–26

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು

ಐ.ಡಿ.ಎಸ್.ಎಮ್.ಟಿ. ಲೇಔಟ್, ಮಂತ್ರಾಲಯ ರಸ್ತೆ, ರಾಯಚೂರು Email: rudaraichur@gmail.com

ಸಂಖ್ಯೆ: ನಪ್ರಾರಾ/ತಾಂತ್ರಿಕ/ಸಿ.ಎ.ನಿ/ಹಂಚಿಕೆ/10/2025–26/470 ದಿನಾಂಕ: 23–07–2025

ನಾಗರೀಕ ಸೌಲಭ್ಯ(ಸಿ.ಎ.) ನಿವೇಶನಗಳ ಹಂಚಿಕೆ ಪ್ರಕಟಣೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 1991ರ ನಿಯಮ 3(3) ರನ್ವಯ:

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿತ ಖಾಸಗಿ ಬಡಾವಣೆಗಳಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ (Civic Amenity Site) ನಿವೇಶನಗಳನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ನಿಗಮಗಳು ಮತ್ತು ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಗಳಿಗೆ ಹಾಗೂ ಅರ್ಹ ಸಂಘ ಸಂಸ್ಥೆಗಳಿಗೆ ವಿವಿಧ ಉದ್ದೇಶಗಳಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿದೆ.

ನಿಗದಿತ ಅರ್ಜಿ ನಮೂನೆಯನ್ನು ಪ್ರಾಧಿಕಾರದ ಕಛೇರಿ ವೇಳೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ರೂ. 1,000/– (ಒಂದು ಸಾವಿರ ಮಾತ್ರ) ಗಳನ್ನು ಪಾವತಿ ಮಾಡಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಖುದ್ದಾಗಿ ಇಲ್ಲವೇ ನೋಂದಾಯಿತ ಅಂಚೆ ಮುಖಾಂತರ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು ಇವರಿಗೆ ದಿನಾಂಕ:05–08–2025 ಸಂಜೆ 05:30 ಗಂಟೆ ಒಳಗಾಗಿ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಇಲ್ಲವೇ ಸರಿಯಾಗಿ ಭರ್ತಿ ಮಾಡದೆ ಇರುವ ಅರ್ಜಿಗಳನ್ನು ಪರಿಗಣಿಸದೇ ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿ/ವಿವರಗಳಿಗೆ ಕಚೇರಿಯ ವೇಳೆಯಲ್ಲಿ ಪ್ರಾಧಿಕಾರದ ಕಚೇರಿಯನ್ನು ಸಂಪರ್ಕಿಸಬಹುದು ಮತ್ತು ಸೂಚನಾಫಲಕಕ್ಕೆ ಪ್ರಕಟಿಸಲಾಗಿದೆ.

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು,

ಸಹಿ/– ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು,

DIP/RCR/288/KSMCA/289/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–5/2025–26/2297 ದಿನಾಂಕ:25–07–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗೆ ದ್ವಿ ಲಕೋಟೆ ಪದ್ದತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಯನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https:kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2025-26/RD/WORK_INDENT22407	645.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **04–08–2025 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **06–08–2025 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **11–08–2025 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **12–08–2025 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/310/ಕೆಎಸ್ಎಂಸಿಎ/2025–26

1ಕ್ಕೆ ಕೊಪ್ಪಳ ಬಂದ್

ಹುಬ್ಬಳ್ಳಿ: 'ರಾಜ್ಯದಲ್ಲಿ 2.50 ಲಕ್ಷ ಟನ್ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟವಾಗಿದ್ದು, ಕೋಟ್ಯಂತರ ರೂಪಾಯಿ ಭ್ರಷ್ಟಾಚಾರ ನಡೆದಿದೆ. ಇದನ್ನು ಖಂಡಿಸಿ ಆಗಸ್ಟ್ 1ರಂದು ಕೊಪ್ಪಳ ಬಂದ್ ಮಾಡಲಾಗುವುದು ಮತ್ತು ಇತರ ಜಿಲ್ಲೆಗಳಲ್ಲೂ ಪ್ರತಿಭಟಿಸಲಾಗುವುದು' ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ತಿಳಿಸಿದರು.

'ಎನ್.ಚಲುವರಾಯಸ್ವಾಮಿ ಅವರು ಕೃಷಿ ಸಚಿವರಾಗಲು ಅರ್ಹರಲ್ಲ. ಅವರಿಗೆ ರಾಜ್ಯದ ಯಾವ ಭಾಗದಲ್ಲಿ ಎಷ್ಟು ಮಳೆ ಯಾಗುತ್ತದೆ? ಯಾವ ಬೆಳೆ ಬೆಳೆಯುತ್ತಾರೆ? ಎಂಬ ಕನಿಷ್ಠ ಜ್ಞಾನವೂ ಇಲ್ಲ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ತೋಟಗಾರಿಕೆ ಬೆಳೆಗಳಿಗೆ ಯೂರಿಯಾ ಗೊಬ್ಬರ ಹೆಚ್ಚು ಬೇಡ. ಅಗತ್ಯ ಇಲ್ಲದಿರುವ ಜಿಲ್ಲೆಗಳಲ್ಲಿ ಶೇಖರಣೆಯಾದ ಯೂರಿಯಾ ಗೊಬ್ಬರವನ್ನು ಪಡೆದು ಅವಶ್ಯವಿರುವ ಉತ್ತರ ಕರ್ನಾಟಕ ಭಾಗದ 10 ಜಿಲ್ಲೆಗಳ ರೈತರಿಗೆ ವಿತರಿಸಬೇಕು' ಎಂದು ಅವರು ಆಗ್ರಹಿಸಿದರು.

ಯೂರಿಯಾ ವಿತರಣೆಗೆ ಬಿಗಿ ಭದ್ರತೆ

ಗದಗ, ಕೊಪ್ಪಳ ಜಿಲ್ಲೆಗಳಲ್ಲಿ ಸಮಸ್ಯೆ ಮುಂದುವರಿಕೆ; ರಾತ್ರಿಯಲ್ಲೂ ಸರತಿ ಸಾಲು

ಪ್ರಜಾವಾಣಿ ವಾರ್ತೆ

ಮುಳಗುಂದ (ಗದಗ ಜಿಲ್ಲೆ): ಇಲ್ಲಿನ ಕೃಷಿ ಸಹಕಾರ ಸಂಘದಲ್ಲಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮಂಗಳವಾರ ರೈತರಿಗೆ ಯೂರಿಯಾ ವಿತರಿಸಲಾಯಿತು.

ಯೂರಿಯಾಗೆ ಅಭಾವ ಇರುವುದರಿಂದ ರೈತರು ಪರದಾಡು-ವಂತಾಗಿದೆ. ಮಂಗಳವಾರ ಸ್ಥಳೀಯ ಸಹಕಾರ ಸಂಘಕ್ಕೆ 55 ಟನ್ ಗೊಬ್ಬರ ಬಂದಿದೆ. ನಸುಕಿನ 4ರಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಖರೀದಿಗೆ ಬಂದಿದ್ದರು. ಅಹಿತಕರ ಘಟನೆಗೆ ಆಸ್ಪದ ವಾಗದಂತೆ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಒಬ್ಬರಿಗೆ ತಲಾ 2 ಚೀಲದಂತೆ ರಸಗೊಬ್ಬರ ವಿತರಿಸಲಾಯಿತು.

'ಬೆಳೆಗಳ ರಕ್ಷಣೆಗೆ ಯೂರಿಯಾ ಬೇಕು. ಒಬ್ಬೊಬ್ಬರಿಗೆ ಎರಡು ಚೀಲ ಕೊಡಲಾಗುತ್ತಿದೆ. 4 ಎಕರೆಗೂ ಹೆಚ್ಚಿನ ಜಮೀನು ಇದ್ದಲ್ಲಿ ಇದು ಸಾಕಾಗುವುದಿಲ್ಲ. ಯೂರಿಯಾ ಸಮರ್ಪಕ ಪೂರೈಕೆಗೆ ಸರ್ಕಾರ ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ರೈತ ಬಸವರಾಜ ಕರಿಗಾರ ತಿಳಿಸಿದರು.

ಮುಖ್ಯಾಂಶಗಳು

- ಒಬ್ಬರಿಗೆ ತಲಾ 2 ಚೀಲ ರಸಗೊಬ್ಬರ ವಿತರಣೆ
- ಕಡಿಮೆ ಗೊಬ್ಬರ ವಿತರಣೆಗೆ ರೈತರ ಅಸಮಾಧಾನ



ಯೂರಿಯಾ ರಸಗೊಬ್ಬರಕ್ಕಾಗಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ರಾಜ್ಯದಲ್ಲಿ ಪ್ರತಿಭಟನೆ ಮಾಡುವ ಬದಲು ದೆಹಲಿಗೆ ಹೋಗಿ ಪ್ರಧಾನಿ ನರೇಂದ್ರ ಮೋದಿ ಮನೆ ಮುಂದೆ ಪ್ರತಿಭಟಿಸಲಿ
ಶಿವರಾಜ ತಂಗಡಗಿ
ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ



ಮುಳಗುಂದದ ಕೃಷಿ ಸಹಕಾರ ಸಂಘದ ಆವರಣದಲ್ಲಿ ಪೊಲೀಸ್ ಬಂದೋಬಸ್ತ್‌ನಲ್ಲಿ ರೈತರಿಗೆ ಯೂರಿಯಾ ವಿತರಿಸಲಾಯಿತು

ರಸಗೊಬ್ಬರಕ್ಕಾಗಿ ಸೊಸೈಟಿ ಮುಂದೆ ಮಲಗಿದರು

ಕೊಪ್ಪಳ: ಯೂರಿಯಾ ರಸಗೊಬ್ಬರಕ್ಕಾಗಿ ತಾಲ್ಲೂಕಿನ ಮುದ್ದಾಬಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಎದುರು ಐದು ಗ್ರಾಮಗಳ ಹಲವು ರೈತರು ಸೋಮವಾರ ರಾತ್ರಿಯಿಂದಲೇ ಮಲಗಿದ್ದರು. ಅವರಲ್ಲಿ ಕೆಲವರಿಗೆ ಗೊಬ್ಬರ ಲಭಿಸಿದರೆ, ಉಳಿದವರು ಬರಿಗೈಯಲ್ಲಿ ವಾಪಸ್ ಹೋದರು.

ಸೋಮವಾರ ರಾತ್ರಿ 11 ಗಂಟೆಯಿಂದಲೇ ಗೊಂಡಬಾಳ, ಹೊಸಳ್ಳಿ, ಬಹದ್ದೂರ್ ಬಂಡಿ, ಮುದ್ದಾಬಳ್ಳಿ ಹಾಗೂ ಹ್ಯಾಟಿ ಗ್ರಾಮದ ರೈತರು ಮಲಗಿದ್ದರು. ಕೆಲವರು ಪ್ಲಾಸ್ಟಿಕ್ ಚೀಲದಲ್ಲಿ ಆಧಾರ್ ಕಾರ್ಡ್ ಹಾಗೂ ಇಟ್ಟಿಗೆ ಸರತಿಗೆ ಇಟ್ಟಿದ್ದರು. ಮಂಗಳವಾರ ಬೆಳಗಿನ ಜಾವ ರೈತರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಸೊಸೈಟಿಗೆ ಯೂರಿಯಾದ 450 ಚೀಲಗಳಷ್ಟೇ ಬಂದಿದ್ದರಿಂದ ಎಲ್ಲರಿಗೂ ಸಿಗಲಿಲ್ಲ.

'ಪ್ರತಿ ಆಧಾರ್ ಕಾರ್ಡ್‌ಗೆ ಎರಡು ಚೀಲ ಮಾತ್ರ ಯೂರಿಯಾ ಕೊಡಲಾಗುತ್ತದೆ. ಸರ್ಕಾರ ಕಡಿಮೆ ಗೊಬ್ಬರ ಕೊಟ್ಟು ರೈತರ ನಡುವೆಯೇ ಜಗಳ ಹಚ್ಚುತ್ತಿದೆ' ಎಂದು ಕೆಲ ರೈತರು ಬೇಸರ ವ್ಯಕ್ತಪಡಿಸಿದರು.

ಯೂರಿಯಾ ಅಭಾವ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಅಧಿಕಾರಿಗಳ ಜೊತೆ ಸಭೆ ನಡೆಸಿದರು. 'ಕೃತಕ ಅಭಾವ ಸೃಷ್ಟಿಸಿ ಹೆಚ್ಚುವರಿ ಬೆಲೆಗೆ ಮಾರಾಟ ಮಾಡಿದರೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸುದ್ದಿ 2 ನಿಮಿಷ

ಕಾಂಗ್ರೆಸ್ಸೊ, ಬಿಜೆಪಿಯೊ..: 3 ವರ್ಷ ಕಾಯೋಣ: ಶಾಸಕಿ ನಯನಾ

ಮೂಡಿಗೆರೆ (ಚಿಕ್ಕಮಗಳೂರು): 'ಹಿಂದೂವಾಗಿ, ದಲಿತೆಯಾಗಿ ಮೂಡಿಗೆರೆಯಲ್ಲಿ ಜನಿಸಿದ್ದೇನೆ. ಮುಂದೆ ಬಿಜೆಪಿಗೆ ಹೋಗ್ತಿನೊ, ಕಾಂಗ್ರೆಸ್ಸಿ-ನಲ್ಲೇ ಉಳಿತಿನೋ, ಬಿಎಸ್‌ಪಿ ಅಥವಾ ಎಸ್‌ಡಿಪಿಐ ಸೇರುತ್ತೇನೋ ಎಂಬ ಪ್ರಶ್ನೆಗೆ ಮೂರು ವರ್ಷ ಕಾಯೋಣ' ಎಂದು ಕಾಂಗ್ರೆಸ್ ಶಾಸಕಿ ನಯನಾ ಮೋಟಮ್ಮ ಹೇಳಿದರು.

ಮೂಡಿಗೆರೆಯಲ್ಲಿ ಹಿಂದೂ ಮಹಾಸಭಾ ಗಣಪತಿ ಲಾಂಛನ ಬಿಡುಗಡೆ ಸಮಾರಂಭದಲ್ಲಿ ಅವರು, 'ಇಂದು ಕೇಸರಿ ಶಾಲು ಹಾಕಿ ಬಂದಿದ್ದೇನೆ. ಪಕ್ಷದ ಕಾರ್ಯಕರ್ತರೂ ಬಂದಿದ್ದಾರೆ. ಈ ಬಗ್ಗೆ ಹಲವರಿಗೆ ಪ್ರಶ್ನೆಗಳಿವೆ. ನದಿ ಎಂದರೆ ಕಾಂಗ್ರೆಸ್ಸಾ, ದಡ ಎಂದರೆ ಬಿಜೆಪಿಯಾ ಎಂಬ ಶಂಕೆ ಬೇಡ' ಎಂದರು.

'ನಾನು ಗಣಪತಿಗಾಗಿ, ಧರ್ಮಕ್ಕಾಗಿ ಬಂದಿದ್ದೇನೆ. ಶಾಸಕಿಯಾಗಿ ಪಕ್ಷ ಪ್ರತಿನಿಧಿಸುವುದು ಆ ನಂತರ, ಈಗ ಗಣಪತಿ ಸಮಿತಿಯ ಕಾರ್ಯಾಧ್ಯಕ್ಷೆ-ಯಾಗಿ ಇಲ್ಲಿಗೆ ಬಂದಿದ್ದೇನೆ. ಆದ್ದರಿಂದ ಯಾವ ಪಕ್ಷದವರಿಗೂ ಪ್ರಶ್ನೆಗಳು ಉಳಿಯಬಾರದು' ಎಂದು ಸ್ಪಷ್ಟಪಡಿಸಿದರು.

'ಕಾಂಗ್ರೆಸ್ ಶಾಸಕಿಯಾಗಿಯೂ ನಿಂತಿದ್ದೇನೆ. ಅದನ್ನು ಗುರುತಿಸಿ-ಕೊಳ್ಳಲೇಬೇಕು. ಅದರ ಜೊತೆಗೆ ಸಾಕಷ್ಟು ಅಸ್ತಿತ್ವಗಳು ಇವೆ. ಅದನ್ನೆಲ್ಲಾ ಸೇರಿಸಿಕೊಂಡು ನಯನಾ ಮೋಟಮ್ಮ ಆಗಿದ್ದೇನೆ' ಎಂದರು.

ವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ.ಪ್ರಾಣೇಶ್, ಶ್ರೀರಾಮ ಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಭಾಗವಹಿಸಿದ್ದರು.



ಹಣ ದ್ವಿಗುಣ ವಂಚನೆ: ಪಿಎಸ್‌ಐ ಸೇರಿ ನಾಲ್ವರ ಅಮಾನತು

ಚಾಮರಾಜನಗರ: ತಮಿಳುನಾಡು ಮೂಲದ ವ್ಯಕ್ತಿಯೊಬ್ಬರಿಗೆ ಹಣ ದುಪ್ಪಟ್ಟು ಮಾಡಿಕೊಡುವುದಾಗಿ ನಂಬಿಸಿ ಲಕ್ಷಾಂತರ ರೂಪಾಯಿ ವಂಚನೆ ಎಸಗಿದ ಆರೋಪ ಪ್ರಕರಣದಲ್ಲಿ ಪಿಎಸ್‌ಐ ಹಾಗೂ ಮೂವರು ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ.

ಚಾಮರಾಜನಗರ ಠಾಣೆ ಪಿಎಸ್‌ಐ ಅಯ್ಯನಗೌಡ, ಹೆಡ್ ಕಾನ್‌ಸ್ಟೆಬಲ್ ಬಸವಣ್ಣ, ಕಾನ್‌ಸ್ಟೆಬಲ್‌ಗಳಾದ ಮೋಹನ್, ಮಹೇಶ್ ಅಮಾನತುಗೊಂಡವರು. ನಾಲ್ವರು ತಲೆಮರೆಸಿಕೊಂಡಿದ್ದು, ಅವರಿಗಾಗಿ ಶೋಧ ಕಾರ್ಯ ನಡೆದಿದೆ. ಇತರೆ ಆರೋಪಿಗಳಾದ ಫೈರೋಜ್, ಇಮ್ರಾನ್, ಅಶ್ರಫ್ ಅವರನ್ನು ಬಂಧಿಸಲಾಗಿದೆ.

ವಿವರ: ಆರೋಪಿಗಳು ಈಚೆಗೆ ತಮಿಳುನಾಡಿನ ಉದ್ಯಮಿ ಸಚ್ಚಿದಾನಂದ ಅವರಿಗೆ ಹಣ ದ್ವಿಗುಣ ಆಮಿಷವೊಡ್ಡಿ ಲಾಡ್ಜ್‌ಗೆ ಕರೆಸಿಕೊಂಡು ₹ 3.70 ಲಕ್ಷ ಪಡೆದು ಪರಾರಿಯಾಗಿದ್ದರು. ಇವರಿಗೆ ಪೊಲೀಸರು ಸಹಕರಿಸಿದ್ದರು. ಉದ್ಯಮಿ ಈ ಬಗ್ಗೆ ದೂರು ನೀಡಿದ್ದರು ಎಂದು ಎಸ್‌ಪಿ ಬಿ.ಟಿ.ಕವಿತಾ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಮಾವಿನ ಮರದಲ್ಲಿ ಸ್ವಾಮೀಜಿ ವ್ರತ



ಕಾರಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಮುಷ್ಟೂರು ಗ್ರಾಮದ ಬರಗಾಲ ಸಿದ್ದಪ್ಪ ಮಠದ ಆವರಣದಲ್ಲಿ ಸ್ವಾಮೀಜಿಯೊಬ್ಬರು ಐದು ದಿನದಿಂದ ಮಾವಿನ ಮರದ ಮೇಲೆ ಮೌನಾನುಷ್ಠಾನ ವ್ರತಕ್ಕೆಗೊಂ-ಡಿದ್ದಾರೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಬಾದ್ಯಾಪುರದ ಸಚ್ಚಿದಾನಂದ ಸ್ವಾಮೀಜಿ 101 ದಿನ, ಲೋಕ ಕಲ್ಯಾಣಕ್ಕಾಗಿ ವ್ರತ ಕೈಗೊಂಡಿದ್ದಾರೆ ಎಂದು ಭಕ್ತರು ತಿಳಿಸಿದರು. ಇವರು ಎಂಜಿನಿಯರ್ ಪದವೀಧರರು.

ದಿನಕ್ಕೆ ಒಂದು ಲೋಟ ಹಾಲು ಕುಡಿಯುವುದು ಮಾತ್ರ ಇವರ ಆಹಾರ. 2012ರಲ್ಲೂ ಆಲದಮರ-ದಲ್ಲಿ ಇವರು ಅನುಷ್ಠಾನ ಕುಳಿತಿದ್ದರು ಎಂದು ಭಕ್ತರು ಸ್ಮರಿಸುತ್ತಾರೆ.

ಬಾಳೆಹೊನ್ನೂರು ಬಳಿ ಪುಂಡಾನೆ ಸೆರೆ



ಬಾಳೆಹೊನ್ನೂರು (ಚಿಕ್ಕಮಗಳೂರು): ಕಾಡಾನೆ ದಾಳಿಯಿಂದ ನಾಲ್ಕು ದಿನದಲ್ಲಿ ಇಬ್ಬರು ಮೃತಪಟ್ಟ ಬಳಿಕ ಅರಣ್ಯ ಇಲಾಖೆ ನಡೆಸಿದ ಕಾರ್ಯಾಚರಣೆಯಲ್ಲಿ ಮೊದಲ ದಿನ ಪುಂಡಾನೆ ಸೆರೆ ಸಿಕ್ಕಿದೆ.

ನರಸಿಂಹರಾಜಪುರ ತಾಲ್ಲೂಕಿನ ಎಲೆಕಲ್ಲು ಬಳಿ 14 ವರ್ಷ ವಯಸ್ಸಿನ ಆನೆ ಸೆರೆ ಹಿಡಿಯುವಲ್ಲಿ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ನಾಲ್ಕು ಸಾಕಾನೆಗಳ ನೆರವಿನಲ್ಲಿ ಕಾರ್ಯಾಚರಣೆ ನಡೆಯಿತು.

ಅರಿವಳಿಕೆ ಚುಚ್ಚುಮದ್ದು ನೀಡಿದ ಬಳಿಕ ಆನೆ ಕಾಡಿನ ಕಣಿವೆಯಲ್ಲಿ ಬಿದ್ದಿತ್ತು, ಹಗ್ಗ ಬಿಗಿದಿದ್ದು, ಎಚ್ಚರವಾದ ಬಳಿಕ ರಸ್ತೆಗೆ ಕರೆ ತರಲು ಸಾಕಾನೆಗಳು ಮತ್ತು ಸಿಬ್ಬಂದಿ ಹೈರಾಣಾದರು. ಚಿಕ್ಕಮಗಳೂರು ವೃತ್ತದ ಸಿಸಿಎಫ್ ಯಶಪಾಲ್ ಕ್ಷೀರಸಾಗರ ಸ್ಥಳದಲ್ಲಿದ್ದು, ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು.

ಆನೆ ಸೆರೆ ಸಿಕ್ಕ ವ್ಯಾಪ್ತಿಯಲ್ಲಿ ನಾಲ್ಕು ದಿನಗಳಲ್ಲಿ ಇಬ್ಬರು ಆನೆ ದಾಳಿಗೆ ಮೃತ-ಪಟ್ಟಿದ್ದರು. ರೊಚ್ಚಿಗೆದ್ದಿದ್ದ ಸ್ಥಳೀಯರು ಸೋಮವಾರ ಬಾಳೆಹೊನ್ನೂರು ಬಂದ್ ನಡೆಸಿದ್ದರು.

ಚಿನ್ನಾಟ.. ಚೆನ್ನಾಟ...

ಪ್ರಜಾವಾಣಿ ಚಿತ್ರ: ಅನೂಪ್ ರಾಘ .ಟಿ.



ವಿಶ್ವ ಹುಲಿ ದಿನವಾದ ಮಂಗಳವಾರ ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಯ ದಮ್ಮನಕಟ್ಟೆಯಲ್ಲಿ ತಾಯಿ ಹುಲಿ ಗಂಭೀರ ನೋಟ ಹರಿಸಿದ ದಿಕ್ಕಿಗೇ ಒಂದು ಮರಿ ನೋಡುತ್ತಿದ್ದರೆ, ಮತ್ತೊಂದು ಮರಿಯು ತಾಯಿ ಹುಲಿಯ ನೆರಳಲ್ಲಿ ನಿಂತಿತ್ತು

ಮೊದಲ ಸುತ್ತಿಗೆ ಲಭ್ಯವಿಲ್ಲ ಆಯುರ್ವೇದ ಸೀಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುರ್ವೇದ ಕೋರ್ಸ್ ಹೊರತುಪಡಿಸಿ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಇತರೆ ಎಲ್ಲ ಕೋರ್ಸ್‌ಗಳ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿದ್ಧತೆ ನಡೆಸಿದೆ.

ಮೊದಲ ಸುತ್ತಿನ ಸೀಟು ಹಂಚಿಕೆಗೆ ಕೋರ್ಸ್ ಹಾಗೂ ಕಾಲೇಜುಗಳ ಆಯ್ಕೆ ದಾಖಲಿಸಲು ಜುಲೈ 29ರವರೆಗೆ ಅವಕಾಶ ನೀಡಲಾಗಿತ್ತು. ಅವಧಿ ಮುಗಿದರೂ ಆಯುರ್ವೇದ ಕೋರ್ಸ್‌ನ ಸೀಟು ಲಭ್ಯತಾ ಪಟ್ಟಿ ಸಿಕ್ಕಿಲ್ಲ. ಹಾಗಾಗಿ, ಅದೊಂದು ಕೋರ್ಸ್ ಹೊರತುಪಡಿಸಿ, ಉಳಿದ ಎಲ್ಲ ಕೋರ್ಸ್‌ಗಳ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತಿದೆ. ಎರಡನೇ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ ಎಂದು ಕೆಇಎ ಹೇಳಿದೆ.

ಡಿಸಿಇಟಿ ಎರಡನೇ ಸುತ್ತಿನ ಸೀಟು ಹಂಚಿಕೆ: ಎರಡನೇ ಸುತ್ತಿನ ಡಿಸಿಇಟಿ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಂಗಳವಾರ ಪ್ರಕಟಿಸಿದೆ.

ಮೊದಲ ಮತ್ತು ಎರಡನೇ ಸುತ್ತಿನ ಕೌನ್ಸೆಲಿಂಗ್‌ನಲ್ಲಿ 12,282 ಮಂದಿಗೆ ಸೀಟು ಹಂಚಿಕೆ ಮಾಡಲಾಗಿದೆ. ಜು.30ರಿಂದ 31ರವರೆಗೆ ಚಲನ್ ಡೌನ್‌ಲೋಡ್ ಮಾಡಿಕೊಂಡು ಆ.1ರೊಳಗೆ ಶುಲ್ಕ ಪಾವತಿಸಬೇಕು. ಆ.2ರೊಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಪ್ರಾಧಿಕಾರ ಹೇಳಿದೆ.

ಬೆಂಗಳೂರೇ ಕೇಂದ್ರ: ಹೆದ್ದಾರಿ 'ರಾಜಮಾರ್ಗ'

ಡ್ರಗ್ಸ್ ತಯಾರಿಕೆ ಘಟಕವಿದ್ದ ಸ್ಥಳದ ಮಾಲೀಕನ ವಿರುದ್ಧವೂ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮೈಸೂರು: 'ಡ್ರಗ್ಸ್ ಮಾರಾಟಕ್ಕೆ ಆರೋಪಿಗಳಿಗೆ ರಾಜಧಾನಿ ಬೆಂಗಳೂರೇ ಗುರಿ. ಯಾವ ತಪಾಸಣೆಯೂ ನಡೆಯದ ಮೈಸೂರು–ಬೆಂಗಳೂರು ಹೆದ್ದಾರಿಯೇ ಡ್ರಗ್ಸ್ ಸಾಗಿಸಲು ಅವರಿಗೆ ಸುಲಭ ಮಾರ್ಗವಾಗಿತ್ತು. ಹೀಗಾಗಿಯೇ ಹೆದ್ದಾರಿಗೆ ಸಮೀಪವಿರುವ ಬನ್ನಿಮಂಟಪದ ವರ್ತುಲ ರಸ್ತೆಯ ಉನ್ನತಿ ನಗರದ ಗ್ಯಾರೇಜ್‌ನಲ್ಲಿ ಘಟಕ ತೆರೆದಿದ್ದರು' ಎಂಬ ಅಂಶವನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ.

'ಹೊರರಾಜ್ಯಗಳ ಘಟಕಗಳ ಮೇಲೆ ದಾಳಿ ನಡೆದಾಗ ದಂಧೆಕೋರರು, ಹೊಸ ಸ್ಥಳ ಅರಸಿ ಮೈಸೂರಿಗೆ ಬಂದಿದ್ದರು. ಬೆಂಗಳೂರಿಗೆ ಮಾದಕವಸ್ತು ರವಾನೆಗೆ ಹತ್ತಿರವಿರುವ ಜಾಗ ಗುರುತಿಸಿದ್ದರು. ಮುಂಬೈನಲ್ಲಿ ಮಹಾರಾಷ್ಟ್ರ ಪೊಲೀಸರು ಬಂಧಿಸಿದ ಸಲೀಂ ನೀಡಿದ ಮಾಹಿತಿಯಿಂದ ಆತನ ಸಹಚರರನ್ನು ಪತ್ತೆಹಚ್ಚಲು ಸಾಧ್ಯವಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಮಾನತಿಗೆ ತಡೆ: ಕರ್ತವ್ಯ ಲೋಪದ ಆರೋಪದಲ್ಲಿ ಅಮಾನತುಗೊಂಡಿದ್ದ ನರಸಿಂಹರಾಜ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ ಕೆ.ತಳವಾರ್ ಸೋಮವಾರ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಪೊಲೀಸ್ ಆಯುಕ್ತರು ಹೊರಡಿಸಿದ್ದ ಅಮಾನತು ಆದೇಶವನ್ನು ಇಲಾಖೆ ಸೂಚನೆ ಆಧರಿಸಿ ತಡೆಹಿಡಿಯಲಾಯಿತು.

5.7 ಕೆ.ಜಿ ಗಾಂಜಾ ವಶ: ಮಾದಕ ವ್ಯಸನಿಗಳ ಪತ್ತೆಗಾಗಿ ನಡೆಸುತ್ತಿರುವ ಕಾರ್ಯಾಚರಣೆ ವೇಳೆ ಪೊಲೀಸರು ಸೋಮವಾರ ರಾತ್ರಿ 5.7 ಕೆ.ಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಮಂಡಿ ಮೊಹಲ್ಲಾ, ಉದಯಗಿರಿ, ಎನ್‌ಆರ್ ಮೊಹಲ್ಲಾ, ನಜರಬಾದ್, ಕೆ.ಆರ್.ಮೊಹಲ್ಲಾದಲ್ಲಿ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ 26 ಜನ ಗಾಂಜಾ ಸೇವಿಸಿದವರನ್ನು ಹಾಗೂ 6 ಪೆಡ್ಲರ್‌ಗಳನ್ನು ವಶಕ್ಕೆ ಪಡೆದಿದ್ದಾರೆ. 12 ಆರೋಪಿಗಳ ವಿಚಾರಣೆ ನಡೆಸಿದ್ದಾರೆ. ಮಂಗಳವಾರ ಪೆಡ್ಲರ್‌ಗಳನ್ನು ಗುರಿಯಾಗಿಸಿ ಶೋಧ ನಡೆಯಿತು.

'ಕಾರ್ಯಾಚರಣೆಗೆ ಡಿಸಿಪಿ ಹಾಗೂ ಎಸಿಪಿ ನೇತೃತ್ವದ ಏಳು ಹಾಗೂ ಎಸ್‌ಐಗಳ ನೇತೃತ್ವದಲ್ಲಿ ಏಳು ತಂಡ ರಚಿಸಲಾಗಿದೆ' ಎಂದು ಆಯುಕ್ತೆ ಸೀಮಾ 'ಪ್ರಜಾವಾಣಿ'ಗೆ ತಿಳಿಸಿದರು.

ಅಮಾನತು: ಕರ್ತವ್ಯ ಲೋಪ ಆರೋಪದಲ್ಲಿ ನರಸಿಂಹರಾಜ ಠಾಣೆಯ ಬೀಟ್ ಪೊಲೀಸ್ ಅನಿಲ್ ಹಾಗೂ ಸ್ಪೆಷಲ್ ಬ್ರ್ಯಾಂಚ್‌ನ ಆಂಜನೇಯ ಅವರನ್ನು ಅಮಾನತುಗೊಳಿಸಲಾಗಿದೆ.

ಸ್ಥಳದ ಬಾಡಿಗೆ ತಿಂಗಳಿಗೆ ₹2 ಲಕ್ಷ

ಮಾದಕ ವಸ್ತು ತಯಾರಿಕಾ ಘಟಕವಿದ್ದ ಸ್ಥಳದ ಮಾಲೀಕರ ವಿರುದ್ಧ ನರಸಿಂಹರಾಜ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕುಂಬಾರಕೊಪ್ಪಲಿನ ಕೇಬಲ್ ಮಹೇಶ್ ಅವರಿಗೆ ಸೇರಿದ ಜಾಗ ಇದಾಗಿದ್ದು, ತಿಂಗಳಿಗೆ ₹ 20 ಸಾವಿರಕ್ಕೆ ಸ್ಥಳೀಯ ಅಜ್ಮಲ್ ಅವರಿಗೆ ಬಾಡಿಗೆಗೆ ನೀಡಿದ್ದರು. ಅಲ್ಲಿ ಶೆಡ್ ನಿರ್ಮಿಸಿ ಅಜ್ಮಲ್ ಕಾರು ರಿಪೇರಿ ಮಾಡುತ್ತಿದ್ದು, ಉಳಿದ ಅರ್ಧ ಭಾಗವನ್ನು ತಿಂಗಳಿಗೆ ₹ 2 ಲಕ್ಷಕ್ಕೆ ಮುಂಬೈನ ರಿಯಾನ್ ಎಂಬುವವರಿಗೆ ಬಾಡಿಗೆಗೆ ನೀಡಿದ್ದರು.

'ಆರೋಪಿಗಳು ಎಂಡಿ (ಮಫೆ ಡ್ರೋನ್) ಎಂಬ ಡ್ರಗ್ಸ್ ತಯಾರಿಸುತ್ತಿದ್ದರು. ಅಕ್ರಮವಾಗಿ ಘಟಕ ತೆರೆಯಲು ನೆರವಾದ ಆರೋಪದಡಿ ಸ್ಥಳದ ಮಾಲೀಕರ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ' ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಪ್ರತಿಕ್ರಿಯೆಗೆ ಸ್ಥಳದ ಮಾಲೀಕ ಕೇಬಲ್ ಮಹೇಶ್ ಸಂಪರ್ಕಕ್ಕೆ ಲಭ್ಯರಾಗಿಲ್ಲ.

8 ಅಡಿ ಅಗೆದರೂ ಸಿಗದ ಕುರುಹು...

ಒಂದನೇ ಪುಟದಿಂದ...

ಜಾಗಗಳನ್ನು ಅಗೆಯುವ ದೃಶ್ಯವನ್ನು ಎಸ್‌ಐಟಿಯ ಸಿಬ್ಬಂದಿ ವಿಡಿಯೊ ಚಿತ್ರೀಕರಣ ಮಾಡಿಕೊಂಡರು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಗಿಡ ಗಂಟಿಗಳಿಂದ ತುಂಬಿರುವ ಜಾಗವನ್ನು ಸುರಿಯುವ ಮಳೆಯ ನಡುವೆಯೇ ಅಗೆಯುವುದು ನಿಜಕ್ಕೂ ಸವಾಲಿನ ಕೆಲಸ. ನೇತ್ರಾವತಿ ನದಿಯ ಸಮೀಪದಲ್ಲೇ ಇರುವ ಈ ಜಾಗದಲ್ಲಿ ಮರಳು ಮಿಶ್ರಿತ ಮಣ್ಣೇ ಜಾಸ್ತಿ ಇತ್ತು. ನಡು ನಡುವೆ ಕೆಲವು ಬಟ್ಟೆ ಬರೆಗಳು ಸಿಕ್ಕವು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ನೆಲ ಅಗೆಯುವ ಕಾರ್ಯ ನಡೆಯುವಾಗ ಸಾಕ್ಷಿ ದೂರುದಾರ ಮುಸುಕು ಧರಿಸಿ ಸ್ಥಳದಲ್ಲಿ ಹಾಜರಿದ್ದರು. ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್, ಬೆಳ್ತಂಗಡಿ ತಹಶೀಲ್ದಾರ್ ಪೃಥ್ವಿ ಸಾನಿಕಂ, ಎಸ್‌ಐಟಿಯ ಡಿಐಜಿ ಎಂ.ಎನ್.ಅನುಚೇತ್, ಎಸ್.ಪಿಗಳಾದ ಜಿತೇಂದ್ರ ಕುಮಾರ್ ದಯಾಮ ಹಾಗೂ ಸಿ.ಎ.ಸೈಮನ್ ಸ್ಥಳದಲ್ಲಿ-ದ್ದು ಮಾರ್ಗದರ್ಶನ ಮಾಡಿದರು. ವಿಧಿವಿಜ್ಞಾನ ತಂಡದ ಅಧಿಕಾರಿಗಳು, ಕೆಎಂಸಿಯ ತಜ್ಞ ವೈದ್ಯರು ಸ್ಥಳದಲ್ಲಿದ್ದರು.

ಅಗೆಯುವ ಕಾರ್ಯ ಆರಂಭಿಸುವ ಮುನ್ನ ಬೆಳ್ತಂಗಡಿ ಎಸ್‌ಐಟಿ ಕಚೇರಿಯಲ್ಲಿ ಡಿಐಜಿ ಎಂ.ಎನ್. ಅನುಚೇತ್ ನೇತೃತ್ವದಲ್ಲಿ ಸಭೆ ನಡೆಸಿದ ಅಧಿಕಾರಿಗಳು ಮುಂದಿನ ತನಿಖೆ ಬಗ್ಗೆ ಚರ್ಚಿಸಿದರು.

ಸಾಕ್ಷಿ ದೂರುದಾರ ತೋರಿಸಿದ್ದ 13 ಜಾಗಗಳ ಜಿಪಿಎಸ್ ಗುರುತುಗಳನ್ನು ದಾಖಲಿಸಿಕೊಂಡ ಎಸ್‌ಐಟಿ ಅಧಿಕಾರಿಗಳು ಅಲ್ಲಿ ಕೆಂಪು ರಿಬ್ಬನ್ ಕಟ್ಟಿ, ಅಲ್ಲಿಗೆ ಸಾರ್ವಜನಿಕರ ಪ್ರವೇಶ ನಿರ್ಬಂ-ಧಿಸಿದ್ದಾರೆ. ಪ್ರತಿ ಜಾಗವನ್ನೂ ನಿರ್ದಿಷ್ಟ ಸಂಖ್ಯೆ ಮೂಲಕ ಗುರುತಿಸಿದ್ದಾರೆ. ಅಲ್ಲಿ ಪೊಲೀಸ್ ಕಾವಲು ಹಾಕಲಾಗಿದೆ.

ಧರ್ಮಸ್ಥಳದ ಪ್ರಕರಣದಲ್ಲಿ ಎಸ್‌ಐಟಿ ತನಿಖೆ ಪ್ರಗತಿಯಲ್ಲಿದೆ. ಸಾಕ್ಷ್ಯಗಳು ಸಿಕ್ಕರೆ, ಯಾರು, ಎಷ್ಟೇ ಪ್ರಭಾವಿಗಳಿದ್ದರೂ ಸರ್ಕಾರ ಕಾನೂನು ಕ್ರಮಕೈಗೊಳ್ಳಲಿದೆ
ಪ್ರಿಯಾಂಕ್ ಖರ್ಗೆ, ಸಚಿವ

ಹೈರಾಣಾದ ಸಿಬ್ಬಂದಿ- ಶೋಧ ಮುಂದುವರಿಕೆ

ಮೃತದೇಹ ಹೂಳಲಾಗಿದೆ ಎನ್ನಲಾದ ಜಾಗಗಳ ಪತ್ತೆಗೆ ಸೋಮವಾರ ಕಾಡಿನಲ್ಲಿ ಅಲೆದಾಡಿದ್ದ ಸಿಬ್ಬಂದಿ, ಮಂಗಳವಾರ ಅಗೆಯುವ ಕಾರ್ಯದ ಬಳಿಕ ಸುಸ್ತಾದಂತೆ ಕಂಡು ಬಂದರು. ಮಧ್ಯಾಹ್ನದ ಊಟಕ್ಕೆ ಸ್ನಾನಘಟ್ಟದಲ್ಲೇ ವ್ಯವಸ್ಥೆ ಮಾಡಲಾಗಿತ್ತು. ನಡುವೆ ಊಟಕ್ಕಾಗಿ ಒಂದು ಗಂಟೆ ವಿಶ್ರಾಂತಿ ಪಡೆದರು. ಮಳೆಯಲ್ಲೇ ನಿಂತುಕೊಂಡೇ ಇದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೈರಾಣಾಗಿ ಹೋದರು.

ಶೋಧ ಮುಂದುವರಿಕೆ: 'ಸಾಕ್ಷಿ ದೂರುದಾರ ತೋರಿಸಿದ ಒಂದು ಜಾಗವನ್ನಷ್ಟೇ ಇಂದು ಅಗೆದಿದ್ದೇವೆ. ಆತ ತೋರಿಸಿದ ಇನ್ನೊಂದು ಜಾಗವನ್ನು ಬುಧವಾರ ಅಗೆಯುತ್ತೇವೆ. ಈ ಪ್ರಕ್ರಿಯೆ ಮುಂದುವರಿಯಲಿದೆ ' ಎಂದು ಎಸ್‌ಐಟಿಯ ಅಧಿಕಾರಿಯೊಬ್ಬರು ಹೇಳಿದರು.

'ಖರ್ಗೆ ಭಾವನೆ ಹೇಳಿಕೊಂಡರೆ ತಪ್ಪೇನು?'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮಗೆ ಮುಖ್ಯಮಂತ್ರಿ ಸ್ಥಾನ ತಪ್ಪಿದ್ದರ ಬಗ್ಗೆ ಹೇಳಿಕೊಂಡಿರುವು-ದರಲ್ಲಿ ತಪ್ಪೇನಿದೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಸ್ಥಾನ ತಪ್ಪಿದ್ದರ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, 'ಖರ್ಗೆ ಅವರು ತಮ್ಮ ಭಾವನೆಯನ್ನು ಹೇಳಿಕೊಂಡಿದ್ದಾರೆ' ಎಂದರು.

'ಕಾಂಗ್ರೆಸ್‌ನ ಹಿರಿಯ ನಾಯಕರಾದ ಅವರು, ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದಾರೆ. ತಮ್ಮ ಭಾವನೆಗಳನ್ನು ಅವರು ಹೇಳಿಕೊಂಡಿದ್ದಾರೆ' ಎಂದರು.

ರಾಜ್ಯ ರಾಜಕಾರಣಕ್ಕೆ ಖರ್ಗೆ ಅವರು ಮರಳಿ ಬರುತ್ತಾರೆ ಎಂಬ ಚರ್ಚೆ ಬಗ್ಗೆ ಕೇಳಿದಾಗ, 'ಈ ಬಗ್ಗೆಯೂ ಚರ್ಚೆ ಮಾಡುವುದರಲ್ಲಿ ತಪ್ಪೇನಿದೆ. ಅವರವರ ಅಭಿಪ್ರಾಯ ಅವರು ತಿಳಿಸುತ್ತಾರೆ' ಎಂದರು.

'ಖರ್ಗೆ ಹೇಳಿಕೆ ತಪ್ಪಾಗಿ ಅರ್ಥೈಸಬಾರದು'



'ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯ ರಾಜಕಾರಣಕ್ಕೆ ಬಂದರೆ ತಪ್ಪೇನಿಲ್ಲ. ಅವರು ನಮ್ಮ ಪಕ್ಷದಲ್ಲಿ ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಯಾರನ್ನು ಮುಖ್ಯಮಂತ್ರಿ ಮಾಡಬೇಕೆಂದು ತೀರ್ಮಾನ ಮಾಡುವವರು ಅವರು. ಅವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಬಾರದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಪಾರ ಅನುಭವ ಹೊಂದಿರುವ ಅವರು ಎಲ್ಲ ಹುದ್ದೆಗಳಿಗೆ ಸಮರ್ಥರಿದ್ದಾರೆ. 'ಖರ್ಗೆ ಅವರ ಬಗ್ಗೆ ಈವರೆಗೆ ಮಾತನಾಡಿರುವವರು ಯಾರೂ ಅವರ ಹಂತಕ್ಕೆ ತಲುಪಿಲ್ಲ' ಎಂದರು.

'ಅಧಿಕಾರಕ್ಕಾಗಿ ಕಣ್ಣೀರು ಹಾಕಿದವರಲ್ಲ'



ಕಲಬುರಗಿ: 'ಮಲ್ಲಿಕಾರ್ಜುನ ಖರ್ಗೆ ಅವರು ಎಂದಿಗೂ ರಾಜಕೀಯ ಹುದ್ದೆಗಳಿಗೆ ಕಣ್ಣೀರು ಹಾಕಿದವರಲ್ಲ; ಹಾಕುವವರೂ ಅಲ್ಲ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಇಲ್ಲಿ ಹೇಳಿದರು.

'ಸಿ.ಎಂ. ಹುದ್ದೆ ಸಿಗದಿರುವ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ' ಎಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದರು.

'ವಿಜಯೇಂದ್ರ ಅವರ ತಂದೆ ಮುಖ್ಯಮಂತ್ರಿ ಆದಾಗಲೆಲ್ಲ ಕಣ್ಣೀರು ಹಾಕಿದ್ದಾರೆ. ಅದರ ಬಗ್ಗೆ ವಿಜಯೇಂದ್ರ ಮೊದಲು ಮಾತನಾಡಲಿ' ಎಂದರು.

ಬಾಗಲಕೋಟೆ, ಬೆಳಗಾವಿ, ಬಳ್ಳಾರಿ: ನದಿಗಳಲ್ಲಿ ಹೆಚ್ಚಿದ ಹರಿವು

ಬ್ಯಾರೇಜ್, ದೇಗುಲ ಜಲಾವೃತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಾಗಲಕೋಟೆ, ಬೆಳಗಾವಿ ಮತ್ತು ಬಳ್ಳಾರಿ ಜಿಲ್ಲೆಯ ವಿವಿಧೆಡೆ ನದಿಗಳು ಉಕ್ಕಿ ಹರಿಯುತ್ತಿವೆ. ಬಹುತೇಕ ಕಡೆ ಸೇತುವೆಗಳು ಜಲಾವೃತಗೊಂಡಿದ್ದು, ವಾಹನಗಳ ಸಂಚಾರ ಸ್ಥಗಿತಗೊಂಡಿದೆ. ಕೆಲ ಕಡೆ ದೇಗುಲಗಳು ಮುಳುಗಡೆಯಾಗಿವೆ. ಗ್ರಾಮಗಳಿಗೂ ನೀರು ಆವರಿಸುವ ಆತಂಕ ಎದುರಾಗಿದೆ.


ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ 8 ಬ್ರಿಜ್ ಕಂ ಬ್ಯಾರೇಜ್‌ಗಳು ಘಟಪ್ರಭಾ ನದಿ ಪ್ರವಾಹದಿಂದ ಮುಳುಗಿವೆ. ಐದು ಗ್ರಾಮಗಳಿಗೆ ಜಲಾವೃತ ಭೀತಿ ಎದುರಾಗಿದೆ.

ಮಾಚಕನೂರ ಗ್ರಾಮದ ಹೊಳೆಬಸವೇಶ್ವರ ದೇವಸ್ಥಾನ ಜಲಾವೃತವಾಗಿದೆ. ಭಕ್ತರು ನೀರಿನಲ್ಲೇ ದೇವಸ್ಥಾನದವರೆಗೆ ನಡೆದು, ದೇವರ ದರ್ಶನ ಪಡೆದರು.

ರಾಯಬಾಗ ವರದಿ: ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಚಿಂಚಲಿ-ಭಿರಡಿ ಕೂಡುವ ರಸ್ತೆ, ರಾಯಬಾಗದ ಕುಡಚಿ–ಉಗಾರ ಸೇತುವೆ ಮುಳುಗಿವೆ.

ಕಂಪ್ಲಿ ವರದಿ: ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದ್ದು, ಕಂಪ್ಲಿ-ಗಂಗಾವತಿ ಸೇತುವೆ ಮುಳುಗಡೆಯಾಗಿ ಸಂಪರ್ಕ ಕಡಿತಗೊಂಡಿದೆ. ಕೋಟೆ ಗಂಗಮ್ಮನ ಕಟ್ಟೆ, ಕೋಟೆ ಮಾಧವ ತೀರ್ಥರ ವೃಂದಾವನ ಮತ್ತು ಕೋಟೆ ಹೊಳೆ ಆಂಜನೇಯ ದೇವಸ್ಥಾನ ಜಲಾವೃತವಾಗಿವೆ. ಕಂಪ್ಲಿ-ಸಿರುಗುಪ್ಪ ಹೆದ್ದಾರಿಯ ನಾರಿಹಳ್ಳ ಸೇತುವೆ ಮುಳುಗಿದೆ.

ಮಡಿಕೇರಿಯಲ್ಲಿ ಬಿರುಸಿನ ಮಳೆ (ಮಡಿಕೇರಿ ವರದಿ): ನಗರದಲ್ಲಿ ಬಿರುಸಿನಿಂದ, ಜಿಲ್ಲೆಯ ಇತರೆಡೆ ಹಗುರ ಮಳೆಯಾಗಿದೆ. ಮಡಿಕೇರಿಯಲ್ಲಿ 4 ಸೆಂ.ಮೀ ಮಳೆಯಾಗಿದೆ.



ಮುಧೋಳ ತಾಲ್ಲೂಕು ಮಾಚಕನೂರ ಗ್ರಾಮದ ಹೊಳೆಬಸವೇಶ್ವರ ದೇವಸ್ಥಾನ ಘಟಪ್ರಭಾ ನದಿಯ ಪ್ರವಾಹದಿಂದ ಜಲಾವೃತ ಆಗಿತ್ತು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	121.50	51,001	83,358
ಹಾರಂಗಿ	2,859	2,853.95	6,416	5,516
ಕಬಿನಿ	2,284.00	2281.69	20,567	20,000
ಹೇಮಾವತಿ	2,922	2,920.85	14,935	13,915
ಲಿಂಗನಮಕ್ಕಿ	1,819	1,810.85	21,928	8967
ಸೂಪಾ (ಮೀ)	564	550.75	13,481.20	859.72
ಮಾಣಿ	595	590.19	3,458	0
ತುಂಗಭದ್ರಾ	1,633	1,624.62	1,27,810	1,24,487
ಮಲಪ್ರಭಾ	2,079.5	2,074.65	7,286	2,894
ಘಟಪ್ರಭಾ	2,175	2,170.75	15,880	21,001
ಭದ್ರಾ *	186	180.3	18,546	22,007
ಆಲಮಟ್ಟಿ (ಮೀ)	519.6	517.87	1,26,974	1,40,000
ನಾರಾಯಣಪುರ (ಮೀ)	492.25	491.23	1,40,000	1,50,950

* ನೆಲಮಟ್ಟದಿಂದ

ನಿಧನ ವಾರ್ತೆ

ಡಾ.ಮುದ್ರಜೆ ರಾಮಚಂದ್ರ ಭಟ್



ಉಪ್ಪಿನಂಗಡಿ (ದಕ್ಷಿಣ ಕನ್ನಡ): ಇಲ್ಲಿನ ವೈದ್ಯ, ಕೆಲ ದಿನಗಳ ಹಿಂದೆ 100ನೇ ವರ್ಷಕ್ಕೆ ಕಾಲಿರಿಸಿದ್ದ ಡಾ . ಮು ದ್ರ ಜೆ ರಾಮಚಂದ್ರ ಭಟ್ ಹೃದಯಾಘಾತದಿಂದ ಸೋಮವಾರ ರಾತ್ರಿ ನೆಕ್ಕಿಲಾಡಿಯ ಅವರ ಮನೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರರು, ಪುತ್ರಿ ಇದ್ದಾರೆ.

1952ರಿಂದ ವೈದ್ಯಕೀಯ ಸೇವೆ ನೀಡುತ್ತಿದ್ದರು. ಉಪ್ಪಿನಂಗಡಿ ಹಳೇ ಬಸ್ ನಿಲ್ದಾಣ ಕಟ್ಟಡದ ಮೊದಲ ಮಹಡಿಯಲ್ಲಿ ಕ್ಲಿನಿಕ್ ತೆರೆದು ಸೇವೆ ನೀಡುತ್ತಿದ್ದ, ಕಾರಣಕ್ಕೆ 'ಮಾಳಿಗೆ ಡಾಕ್ಟರ್' ಎಂದೇ ಹೆಸರಾಗಿದ್ದರು. ಬಡವರಿಗೆ ಉಚಿತ ಔಷಧೋಪಚಾರ ನೀಡುತ್ತಿದ್ದರು. ಕಾಂಚನ ಲಕ್ಷ್ಮೀನಾರಾಯಣ ಸಂಗೀತ ಶಾಲೆ, ಲಯನ್ಸ್ ಕ್ಲಬ್, ಉಪ್ಪಿನಂಗಡಿಯ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಾಲಯದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಯೂಟ್ಯೂಬರ್‌ಗಳಿಗೆ ಹೈಕೋರ್ಟ್ ಪ್ರಶ್ನೆ

ಧರ್ಮಸ್ಥಳ ಪ್ರಕರಣ: ಆದೇಶ ಉಲ್ಲಂಘನೆ ಏಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಾಲಯದ ಆದೇಶಗಳನ್ನು ಏಕೆ ಪದೇ ಪದೇ ಉಲ್ಲಂಘನೆ ಮಾಡುತ್ತಿದ್ದೀರಿ' ಎಂದು ಯೂ ಟ್ಯೂಬರ್‌ಗಳನ್ನು ಪ್ರಶ್ನಿಸಿರುವ ಹೈಕೋರ್ಟ್, 'ಪ್ರತಿಬಂಧಕ ಆದೇಶ ನೀಡಿದ ಮೇಲೂ ಒಂದರ ನಂತರ ಮತ್ತೊಂದು (ಯೂ ಟ್ಯೂಬ್) ಚಾನಲ್ ಆರಂಭಿಸುತ್ತಿರುವುದೇಕೆ' ಎಂದು ಮೌಖಿಕವಾಗಿ ಪ್ರಶ್ನಿಸಿದೆ.

'ಕೊಲೆಯಾದ ನೂರಾರು ಶವಗಳನ್ನು ಧರ್ಮಸ್ಥಳ ಗ್ರಾಮದ ವ್ಯಾಪ್ತಿಯಲ್ಲಿ ಹೂಳಲಾಗಿದೆ' ಎಂಬ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ 'ಕ್ಷೇತ್ರದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಸಹೋದರ ಡಿ.ಹರ್ಷೇಂದ್ರ ಕುಮಾರ್ ವಿರುದ್ಧ ಯಾವುದೇ ಮಾನಹಾನಿ ವಿಷಯ ಪ್ರಸಾರ ಅಥವಾ ಪ್ರಕಟ ಮಾಡಬಾರದು' ಎಂದು ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿರುವ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿದ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಮಂಗಳೂರಿನ ಕೋಡಿಬೈಲ್ ವಿಳಾಸ ಹೊಂದಿರುವ ಯೂ ಟ್ಯೂಬ್ ಚಾನಲ್ 'ಕುಡ್ಲ ರ್‍ಯಾಂಪೇಜ್' ಮುಖ್ಯ ಸಂಪಾದಕ ಅಜಯ್ ಬಿನ್ ರಾಮಕೃಷ್ಣ ಪೂಜಾರಿ (32) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, 'ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿರುವ ವ್ಯಕ್ತಿಯ ಅರ್ಜಿಯನ್ನು ಪರಿಗಣಿಸಬೇಕು ಎಂದು ನೀವು ಹೇಗೆ ನಿರೀಕ್ಷಿಸುತ್ತೀರಿ' ಎಂದು ಅರ್ಜಿದಾರರನ್ನು ಪ್ರಶ್ನಿಸಿತು.

ವಿಚಾರಣೆ ವೇಳೆ ಕುಡ್ಲ ರ್‍ಯಾಂಪೇಜ್ ಪರ ಸುಪ್ರೀಂ ಕೋರ್ಟ್ ವಕೀಲ ಎ.ವೇಲನ್, 'ಹರ್ಷೇಂದ್ರ ಕುಮಾರ್ ಅವರು ಮಾಧ್ಯಮಗಳ ವಿರುದ್ಧ ನಿರಂತರವಾಗಿ ಸಾಕಷ್ಟು ಪ್ರತಿಬಂಧಕ ಆದೇಶಗಳನ್ನು ಪಡೆದುಕೊಂಡಿ-ದ್ದಾರೆ. ಈ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ಮಾನಹಾನಿಯ ಅಂಶಗಳನ್ನು ಪರಿಶೀಲನೆಗೆ ಒಳಪಡಿಸದೆಯೇ ಮಾಧ್ಯಮಗಳನ್ನು ನಿರ್ಬಂಧಿಸಿದೆ. ಹೀಗಾದರೆ, ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪುಗಳಿಗೆ ಅಡಿಗಲ್ಲಾಗಿರುವ ತನಿಖಾ ಪತ್ರಿ-ಕೋದ್ಯಮದ ಪ್ರಶ್ನೆ ಏನಾಗಬೇಕು? ಮಾಧ್ಯಮಗಳ ವರದಿಯನ್ನೇ ಆಧರಿಸಿ ರಾಜ್ಯ ಸರ್ಕಾರ ಧರ್ಮಸ್ಥಳದಲ್ಲಿ ಕೊಲೆ ಮಾಡಿ ಹೂತಿರುವ ಶವಗಳ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಿದೆ' ಎಂದರು.

ಇದನ್ನು ಅಲ್ಲಗಳೆದ ಪ್ರತಿವಾದಿ ಹರ್ಷೇಂದ್ರ ಕುಮಾರ್ ಪರ ಪದಾಂಕಿತ ಹಿರಿಯ ವಕೀಲ ಉದಯ್ ಹೊಳ್ಳ ಅವರು, 'ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಉಲ್ಲೇಖಿಸಿಯೇ ವಿಚಾರಣಾ ನ್ಯಾಯಾಲಯವು ಮಾಧ್ಯ-ಮಗಳನ್ನು ನಿರ್ಬಂಧಿಸಿ ಏಕಪಕ್ಷೀಯ ಪ್ರತಿಬಂಧಕಾದೇಶ ನೀಡಿದೆ. ಸಂವಿಧಾನದ 21ನೇ ವಿಧಿಯ ಮತ್ತೊಂದು ಮುಖವೇ ವ್ಯಕ್ತಿಯೊ-ಬ್ಬನ ಘನತೆಯ ಹಕ್ಕು. ಮಾನಹಾನಿ ಸಾವಿಗಿಂತಲೂ ಕನಿಷ್ಠ ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಪುನರುಚ್ಚರಿಸಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಕೆಲಕಾಲ ವಾದ-ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು 'ಈ ಅರ್ಜಿ ಊರ್ಜಿತ ಹೌದು ಅಲ್ಲವೋ ಎಂಬುದರ ಮೇಲೆ ಆಗಸ್ಟ್ 1ರಂದು ಆದೇಶ ಪ್ರಕಟಿಸಲು ಪ್ರಯತ್ನಿ-ಸಲಾಗುವುದು' ಎಂದು ಮೌಖಿಕವಾಗಿ ತಿಳಿಸಿದರು.

ಚಿಟಿಕೆ ಸುದ್ದಿ

ಅನುಮಾನಾಸ್ಪದ ಚಲನವಲನ: ಶೋಧ

ಜಮ್ಮು (ಪಿಟಿಐ): ಮೂವರು ಅನುಮಾನಾಸ್ಪದ ವ್ಯಕ್ತಿಗಳ ಚಲನ ವಲನಗಳನ್ನು ಅನುಸರಿಸಿ ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯಲ್ಲಿ ಮಂಗಳವಾರ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಜ್‌ಬಾಗ್ ಪ್ರದೇಶದಲ್ಲಿ ಸೋಮವಾರ ತಡರಾತ್ರಿ ಮೂವರು ಅನುಮಾನಾಸ್ಪದ ವ್ಯಕ್ತಿಗಳನ್ನು ಮಹಿಳೆಯೊಬ್ಬರು ಕಂಡ ನಂತರ ಶೋಧ ಪ್ರಾರಂಭಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಭಾರತೀಯ ಸೇನೆ, ಪೊಲೀಸ್ ಮತ್ತು ವಿಶೇಷ ಕಾರ್ಯಾಚರಣಾ ಪಡೆ (ಎಸ್‌ಒಜಿ)ಯ ಜಂಟಿ ತಂಡಗಳು ಶೋಧಕಾರ್ಯದಲ್ಲಿ ನಿರತವಾಗಿದ್ದು, ಪ್ರದೇಶದಲ್ಲಿ ಮತ್ತು ಹೆದ್ದಾರಿಯಲ್ಲಿ ಕಣ್ಗಾವಲು ಹೆಚ್ಚಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಎನ್‌ಪಿಆರ್ ಪರಿಷ್ಕರಣೆ ನಿರ್ಧಾರ ಕೈಗೊಂಡಿಲ್ಲ: ಕೇಂದ್ರ



ನವದೆಹಲಿ (ಪಿಟಿಐ): ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ಪರಿಷ್ಕರಣೆ ಬಗ್ಗೆ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಗಳವಾರ ತಿಳಿಸಿತು.

ಲಿಖಿತ ಪ್ರಶ್ನೆಗೆ ಗೃಹ ಇಲಾಖೆಯ ರಾಜ್ಯ ಖಾತೆ ಸಚಿವ ನಿತ್ಯಾನಂದ ರಾಯ್ ಅವರು ಉತ್ತರಿಸಿದರು.

‘ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತದೆ. ಮೊದಲ ಹಂತದಲ್ಲಿ ಮನೆಪಟ್ಟಿ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ. ಇಲ್ಲಿ ದೇಶದ ಪ್ರತಿಯೊಂದು ಕಟ್ಟಡಕ್ಕೆ ಭೇಟಿ ನೀಡಿ, ಕಟ್ಟಡಗಳು ಮತ್ತು ಮನೆಗಳ ಗುಣಲಕ್ಷಣಗಳನ್ನು ದಾಖಲಿಸಲಾಗುತ್ತದೆ ಮತ್ತು ಪ್ರತಿ ಮನೆಯಲ್ಲಿರುವ ಸ್ವತ್ತುಗಳ ದತ್ತಾಂಶ ಸಂಗ್ರಹಿಸಲಾಗುತ್ತದೆ’ ಎಂದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣ: ಆದೇಶ ಮುಂದೂಡಿಕೆ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ದೋಷಾರೋಪ ಪಟ್ಟಿ ಪರಿಗಣಿಸಿ ಹೊರಡಿಸಬೇಕಿದ್ದ ಆದೇಶವನ್ನು ದೆಹಲಿ ನ್ಯಾಯಾಲಯವು ಮುಂದೂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಸ್ಪಷ್ಟೀಕರಣಗಳನ್ನು ಪಡೆಯುವುದಕ್ಕಾಗಿ ಆಗಸ್ಟ್ 7 ಮತ್ತು 8ಕ್ಕೆ ಮುಂದಿನ ವಿಚಾರಣೆ ನಿಗದಿಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿದ್ದಾರೆಂದು ಇ.ಡಿ ತನ್ನ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ.

ಎಲ್ಲಕ್ಕೂ ‘ನಿರ್ಭಯಾ’ ಅನ್ವಯ ಸಲ್ಲ

ಲಖನೌ: ಎಲ್ಲ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರನ್ನು ವಯಸ್ಕರಂತೆ ವಿಚಾರಣೆಗೆ ಒಳಪಡಿಸಲು ಆಗುವುದಿಲ್ಲ ಎಂದು ಹೇಳಿರುವ ಅಲಹಾಬಾದ್ ಹೈಕೋರ್ಟ್, ಈ ನಿಟ್ಟಿನಲ್ಲಿ ‘ನಿರ್ಭಯಾ’ ಪ್ರಕರಣ ಒಂದು ವಿನಾಯಿತಿ ಎಂದು ಹೇಳಿದೆ.

ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರ ಮನಸ್ಸಿನ ಮೇಲಿನ ಸಾಮಾಜಿಕ ಮತ್ತು ಮಾನಸಿಕ ಪರಿಣಾಮಗಳನ್ನು ಸರಿಯಾಗಿ ಪರಿಗಣಿಸದೇ ವಯಸ್ಕರಂತೆ ವಿಚಾರಣೆಗೆ ಒಳಪಡಿಸಲು ಆಗುವುದಿಲ್ಲ ಎಂದು ಹೈಕೋರ್ಟ್ ತಿಳಿಸಿದೆ. ಈ ನಿಟ್ಟಿನಲ್ಲಿ ‘ನಿರ್ಭಯಾ’ ಪ್ರಕರಣ ಒಂದು ಅಪವಾದವೇ ಹೊರತು, ಸಾಮಾನ್ಯ ನಿಯಮವಲ್ಲ ಎಂದು ನ್ಯಾಯಮೂರ್ತಿ ಸಿದ್ಧಾರ್ಥ ಅವರ ಏಕ ಸದಸ್ಯ ಪೀಠ ಹೇಳಿದೆ.

ತಮಿಳುನಾಡು ಸರ್ಕಾರಕ್ಕೆ ತರಾಟೆ

ನವದೆಹಲಿ: ತಮಿಳುನಾಡು ಮಾಜಿ ಸಚಿವ ವಿ.ಸೆಂಥಿಲ್ ಬಾಲಾಜಿ ಅವರ ವಿರುದ್ಧದ ‘ಉದ್ಯೋಗಕ್ಕಾಗಿ ಹಣ’ ಹಗರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರವನ್ನು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆ ತೆಗೆದುಕೊಂಡಿದೆ.

ಪ್ರಕರಣದಲ್ಲಿ 2000 ಮಂದಿಯನ್ನು ಆರೋಪಿಗಳನ್ನಾಗಿ ಮಾಡುವ ಮೂಲಕ ತಮಿಳುನಾಡು ಸರ್ಕಾರವು ನ್ಯಾಯಾಂಗ ವ್ಯವಸ್ಥೆಗೆ ವಂಚನೆ ಎಸಗಿದೆ ಎಂದು ನ್ಯಾಯಾಲಯ ಚಾಟಿ ಬೀಸಿದೆ.

ಸೆಂಥಿಲ್ ಬಾಲಾಜಿ ಅವರು ಸಾರಿಗೆ ಸಚಿವರಾಗಿದ್ದ ಸಂದರ್ಭದಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆ 2 ಪ್ರಕರಣಗಳು ದಾಖಲಾಗಿವೆ. ವಂಚನೆಗೀಡಾದ 2000 ಜನರನ್ನೂ ಲಂಚ ನೀಡಿದ್ದಾರೆ ಎಂಬ ಕಾರಣಕ್ಕೆ ಈ ಪ್ರಕರಣಗಳಲ್ಲಿ ಆರೋಪಿಗಳನ್ನಾಗಿ ಮಾಡಲಾಗಿದೆ.

‘ಪಾಕ್ ರಿಮೋಟ್ ಕಂಟ್ರೋಲ್‌ನಿಂದ ‘ಕೈ’ ಕೆಲಸ’

‘ಆಪರೇಷನ್ ಸಿಂಧೂರ’ ಕುರಿತ ಚರ್ಚೆಗೆ ಪ್ರಧಾನಿ ಮೋದಿ ಪ್ರತಿಕ್ರಿಯೆ • ಕಾಂಗ್ರೆಸ್ ವಿರುದ್ಧ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ದುರದೃಷ್ಟವಶಾತ್ ಪಾಕಿಸ್ತಾನದ ವಿಷಯಗಳ ಪ್ರಚಾರ ವಕ್ತಾರರಾಗಿ ಬದಲಾಗಿವೆ. ಒಂದು ಕುಟುಂಬವನ್ನು ಓಲೈಸಲು ಹಾಗೂ ಒತ್ತಡಕ್ಕೆ ಮಣಿದು ಕಾಂಗ್ರೆಸ್ ನಾಯಕರು ಪಾಕಿಸ್ತಾನಕ್ಕೆ ಕ್ಲೀನ್‌ಚಿಟ್ ನೀಡುವ ಕೆಲಸ ಮಾಡುತ್ತಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಾಪ್ರಹಾರ ನಡೆಸಿದರು.

ಲೋಕಸಭೆಯಲ್ಲಿ ‘ಆಪರೇಷನ್ ಸಿಂಧೂರ’ ಕುರಿತ ಚರ್ಚೆಗೆ ಸುಮಾರು ಒಂದು ಗಂಟೆ ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್ ನಾಯಕರು ಆ ಕುಟುಂಬದ ಒತ್ತಡಕ್ಕೆ ಒಳಗಾಗಬಾರದು ಮತ್ತು ರಾಷ್ಟ್ರೀಯ ಹೆಮ್ಮೆಯ ಕ್ಷಣವನ್ನು ಅಪಹಾಸ್ಯದ ವಿಷಯವನ್ನಾಗಿ ಪರಿವರ್ತಿಸಬಾರದು’ ಎಂದು ಕಿವಿಮಾತು ಹೇಳಿದರು. ತಮ್ಮ ಭಾಷಣದ ಬಹುತೇಕ ಸಮಯವನ್ನು ನೆಹರೂ ನೀತಿ ಹಾಗೂ ಕಾಂಗ್ರೆಸ್ ವಿರುದ್ಧ ಟೀಕೆಗೆ ಮೀಸಲಿಟ್ಟರು.

‘ಕಾಂಗ್ರೆಸ್ ಈಗ ಪಾಕಿಸ್ತಾನದ ರಿಮೋಟ್ ಕಂಟ್ರೋಲ್ ಮೂಲಕ ಕಾರ್ಯನಿರ್ವಹಿಸುತ್ತಿದೆ. ಯುವ ನಾಯಕರು ಆಪರೇಷನ್ ಸಿಂಧೂರ ಕಾರ್ಯಾಚರಣೆಯನ್ನು ‘ತಮಾಷಾ’ ಎಂದು ಕರೆಯುವಂತೆ ಮಾಡುತ್ತಿದೆ. ಕಾಂಗ್ರೆಸ್ ಪಕ್ಷವು ಹತಾಶೆಯ ಪರಮಾವಧಿಗೆ ತಲುಪಿದೆ. ಪಹಲ್ಗಾಮ್ ಉಗ್ರರನ್ನು ಹತ್ಯೆಗೈದ ಆಪರೇಷನ್ ಮಹಾದೇವ ಕಾರ್ಯಾಚರಣೆಯ ಸಮಯವನ್ನೂ ಪ್ರಶ್ನಿಸಿದೆ. ಪಾಕಿಸ್ತಾನಕ್ಕೆ ಕ್ಲೀನ್‌ಚಿಟ್ ನೀಡಿರುವುದನ್ನು ನೋಡಿ ಇಡೀ ದೇಶವೇ ಆಶ್ಚರ್ಯಚಕಿತವಾಗಿದೆ’ ಎಂದರು.



ಕೇಂದ್ರ ಸಚಿವ ನಿತಿನ್ ಗಡ್ಕರಿ (ಬಲ) ಮತ್ತು ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಸಂಸತ್ ಅಧಿವೇಶನಕ್ಕೆ ಜೊತೆಯಾಗಿ ಬಂದರು – ಪಿಟಿಐ ಚಿತ್ರ

‘ಪಾಕಿಸ್ತಾನದಲ್ಲಿ ಭಯೋತ್ಪಾದಕರು ಮತ್ತು ಅವರ ಯಜಮಾನರು ಕಣ್ಣೀರು ಸುರಿಸುತ್ತಿದ್ದಾರೆ ಮತ್ತು ಅವರು ಹಾಗೆ ಮಾಡುವುದನ್ನು ನೋಡುತ್ತಾ ಇಲ್ಲಿಯೂ ಕೆಲವರು ಅಳುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ:

- ಭಾರತಕ್ಕೆ ಇಡೀ ವಿಶ್ವದಿಂದ ಬೆಂಬಲ ಸಿಕ್ಕಿತು. ಆದರೆ, ಕಾಂಗ್ರೆಸ್ ನಮ್ಮ ಸೈನಿಕರ ಶೌರ್ಯವನ್ನು ಬೆಂಬಲಿಸದಿರುವುದು ದುರದೃಷ್ಟಕರ. ಕಾಂಗ್ರೆಸ್ ನಾಯಕರು ರಾಜಕೀಯ ಲಾಭಕ್ಕಾಗಿ ನನ್ನನ್ನು ಗುರಿಯಾಗಿಸಿಕೊಂಡರು. ಅವರ ಕ್ಷುಲ್ಲಕ ಹೇಳಿಕೆಗಳು ನಮ್ಮ ಧೈರ್ಯಶಾಲಿ ಸೈನಿಕರನ್ನು ನಿರುತ್ಸಾಹಗೊಳಿಸಿದವು
- ದೇಶವನ್ನು ದಶಕಗಳ ಕಾಲ ಆಳಿದವರು ನಮ್ಮ ರಕ್ಷಣಾ, ವಿದೇಶಾಂಗ ಮತ್ತು ಗೃಹ ಸಚಿವರನ್ನು ನಂಬದಿರುವುದು ದುರದೃಷ್ಟಕರ
- ಸಶಸ್ತ್ರ ಪಡೆಗಳ ಬಗ್ಗೆ ನಕಾರಾತ್ಮಕ ಧೋರಣೆ ಹೊಂದುವುದು ಕಾಂಗ್ರೆಸ್‌ನ ಹಳೆಯ ಚಾಳಿಯಾಗಿದೆ. ಕಾರ್ಗಿಲ್ ವಿಜಯವನ್ನು ಕಾಂಗ್ರೆಸ್ ಇನ್ನೂ ಒಪ್ಪಿಕೊಂಡಿಲ್ಲ
- ಭಾರತೀಯ ಸಶಸ್ತ್ರ ಪಡೆಗಳು ಸರ್ಜಿಕಲ್ ಸ್ಟ್ರೈಕ್ ನಡೆಸಿದವು. ಕಾಂಗ್ರೆಸ್ ಪಕ್ಷವು ಸಶಸ್ತ್ರ ಪಡೆಗಳಿಂದ ಪುರಾವೆ ಕೇಳಿತು. ಈ ಕಾರ್ಯಾಚರಣೆಗೆ ಜನರಿಂದ ಅಪಾರ ಬೆಂಬಲ ಸಿಕ್ಕಿರುವುದು ಗೊತ್ತಾದಾಗ ನಾವು ಸಹ ಸರ್ಜಿಕಲ್ ಸ್ಟ್ರೈಕ್ ನಡೆಸಿದ್ದೆವು ಎಂದು ರಾಗ ಬದಲಾಯಿಸಿತು
- ಆದಂಪುರ ವಾಯುನೆಲೆ ನಾಶವಾಗಿದೆ ಎಂದು ಪಾಕಿಸ್ತಾನ ಸುಳ್ಳುಗಳನ್ನು ಹರಡಲು ಪ್ರಯತ್ನಿಸಿತು. ನಾನು ಮರುದಿನ ಅಲ್ಲಿಗೆ ಹೋಗಿ ಪಾಕಿಸ್ತಾನದ ಸುಳ್ಳುಗಳನ್ನು ಬಹಿರಂಗಪಡಿಸಿದೆ
- ಪಾಕ್ ಸೇನೆಯು ಭಾರತದ ಕಡೆಗೆ 1,000 ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಹಾರಿಸಿತು. ಆದರೆ, ನಮ್ಮ ಸಶಸ್ತ್ರ ಪಡೆಗಳು ಅವುಗಳನ್ನು ಆಕಾಶದಲ್ಲಿಯೇ ನಾಶಪಡಿಸಿದವು
- ಕಾಂಗ್ರೆಸ್ ಓಲೈಕೆ ಮತ್ತು ಮತಬ್ಯಾಂಕ್ ರಾಜಕೀಯಕ್ಕಾಗಿ ದೇಶದ ಭದ್ರತೆಯೊಂದಿಗೆ ರಾಜಿ ಮಾಡಿಕೊಂಡಿದೆ
- ಸಿಂಧೂ ನದಿ ನೀರು ಒಪ್ಪಂದದ ಬಗ್ಗೆ ನೆಹರೂ ಮಾಡಿದ ತಪ್ಪನ್ನು ನಂತರ ಯಾವುದೇ ಸರ್ಕಾರಗಳು ಸರಿಪಡಿಸಲಿಲ್ಲ. ರಕ್ತ ಹಾಗೂ ನೀರು ಒಟ್ಟಿಗೆ ಹರಿಯಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ನಾವು ರವಾನಿಸಿದ್ದೇವೆ

‘ಶಾ ಇನ್ನೂ ಕುರ್ಚಿಗೆ ಅಂಟಿಕೊಂಡಿರುವುದೇಕೆ’

ನವದೆಹಲಿ: ‘ಮಣಿಪುರವು ಎರಡು ವರ್ಷಗಳಿಂದ ಹೊತ್ತಿ ಉರಿಯುತ್ತಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮೂಗಿನ ಅಡಿಯಲ್ಲೇ ದೆಹಲಿ ಗಲಭೆಗಳು ನಡೆದವು. ಪಹಲ್ಗಾಮ್‌ನಲ್ಲಿ ಅಮಾಯಕರ ಹತ್ಯೆ ಮಾಡಲಾಯಿತು. ಆದರೂ ಶಾ ಅವರು ಇನ್ನೂ ಕುರ್ಚಿಗೆ ಅಂಟಿ ಕುಳಿತಿರುವುದೇಕೆ’ ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಪ್ರಶ್ನಿಸಿದರು.

ಲೋಕಸಭೆಯಲ್ಲಿ ‘ಆಪರೇಷನ್ ಸಿಂಧೂರ’ ಕುರಿತ ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧವೂ ಟೀಕಾಪ್ರಹಾರ ನಡೆಸಿದರು. ‘ನಾಯಕತ್ವ ಎಂದರೆ ಕೇವಲ ಕ್ರೆಡಿಟ್ ತೆಗೆದುಕೊಳ್ಳುವುದು ಅಲ್ಲ, ಹೊಣೆ ಹೊತ್ತುಕೊಳ್ಳಬೇಕು’ ಎಂದು ಛೇಡಿಸಿದರು.

‘ಭಾರತ ಹಾಗೂ ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಗೆ ತಾವು ಕಾರಣ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ಹೇಳಿಕೆ ನೀಡಿದ್ದಾರೆ. ನಮ್ಮ ದೇಶದಲ್ಲಿ ಮೊದಲ ಬಾರಿಗೆ ಯುದ್ಧವನ್ನು ಹಠಾತ್ ನಿಲ್ಲಿಸಲಾಯಿತು. ಇದು ಮೋದಿ ಅವರ ಬೇಜವಾಬ್ದಾರಿತನಕ್ಕೆ ಸಾಕ್ಷಿ. ಆಪರೇಷನ್ ಸಿಂಧೂರ ಕಾರ್ಯಾಚರಣೆಯನ್ನು ಏಕಾಏಕಿ ನಿಲ್ಲಿಸಿದ್ದು ಏಕೆ’ ಎಂದು ಅವರು ಪ್ರಶ್ನಿಸಿದರು.

ಭಯೋತ್ಪಾದಕರ ದಾಳಿಯಲ್ಲಿ ಮೃತಪಟ್ಟ 25 ಮಂದಿಯ ಹೆಸರನ್ನು ಅವರು ಓದಿ ‘ಅವರೆಲ್ಲ ಭಾರತೀಯರು’ ಎಂದರು. ಕಾಂಗ್ರೆಸ್ ಸಂಸದರು ಸಹ ‘ಭಾರತೀಯರು’ ಎಂದು ಹೇಳಿದರು. ಆಗ ಬಿಜೆಪಿ ಸಂಸದರು ‘ಹಿಂದೂ’ ಎಂದು ಕೂಗಿದರು.



‘ಪಹಲ್ಗಾಮ್‌ನಲ್ಲಿ ಆ ದಿನ 26 ಜನರು ತಮ್ಮ ಕುಟುಂಬ ಸದಸ್ಯರ ಎದುರೇ ಕೊಲ್ಲಲ್ಪಟ್ಟರು. ಆ ದಿನ ಬೈಸರನ್ ಕಣಿವೆಯಲ್ಲಿದ್ದ ಯಾರಿಗೂ ಯಾವುದೇ ಭದ್ರತೆ ವ್ಯವಸ್ಥೆ ಇರಲಿಲ್ಲ. ನೀವು ಎಷ್ಟೇ ಕಾರ್ಯಾಚರಣೆಗಳನ್ನು ನಡೆಸಿದರೂ ಸತ್ಯದ ಹಿಂದೆ ಅಡಗಿಕೊಳ್ಳಲು ಸಾಧ್ಯವಿಲ್ಲ’ ಎಂದು ಅವರು ಹೇಳಿದರು. ‘ಸಾವಿರಾರು ಪ್ರವಾಸಿಗರು ಬೈಸರನ್ ಕಣಿವೆಗೆ ಹೋಗುತ್ತಾರೆಂದು ಸರ್ಕಾರಕ್ಕೆ ತಿಳಿದಿರಲಿಲ್ಲವೇ, ಅಲ್ಲಿ ಏಕೆ ಭದ್ರತೆ ಇರಲಿಲ್ಲ? ಇಂತಹ ಭೀಕರ ಭಯೋತ್ಪಾದಕ ದಾಳಿ ನಡೆಯಲಿದೆ ಮತ್ತು ಪಾಕಿಸ್ತಾನದಲ್ಲಿ ಸಂಚು ರೂಪಿಸಲಾಗುತ್ತಿದೆ ಎಂಬುದು ಯಾವುದೇ ಸರ್ಕಾರಿ ಸಂಸ್ಥೆಗೆ ತಿಳಿದಿರಲಿಲ್ಲವೇ? ಇದು ನಮ್ಮ ಸರ್ಕಾರ ಮತ್ತು ಗುಪ್ತಚರ ಸಂಸ್ಥೆಗಳ ದೊಡ್ಡ ವೈಫಲ್ಯ. ಇದಕ್ಕೆ ಯಾರು ಹೊಣೆ ಹೊರುತ್ತಾರೆ? ಯಾರಾದರೂ ರಾಜೀನಾಮೆ ನೀಡಿದ್ದಾರೆಯೇ’ ಎಂದು ಅವರು ಪ್ರಶ್ನಿಸಿದರು.

‘ನೀವು ಇತಿಹಾಸದ ಬಗ್ಗೆ ಮಾತನಾಡುತ್ತೀರಿ. ನಾನು ವರ್ತಮಾನದ ಬಗ್ಗೆ ಮಾತನಾಡಲು ಬಯಸುತ್ತೇನೆ. ಕಳೆದ 11 ವರ್ಷಗಳ ಹೊಣೆಯನ್ನು ನೀವು ಹೊತ್ತುಕೊಳ್ಳಬೇಕು’ ಎಂದರು. 2005 ಮತ್ತು 2011ರ ಅವಧಿಯಲ್ಲಿ 27 ಭಯೋತ್ಪಾದಕ ದಾಳಿಗಳು ನಡೆದಿವೆ ಎಂಬ ಅಮಿತ್ ಶಾ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘2020 ಮತ್ತು 2025ರ ನಡುವೆ ಕಾಶ್ಮೀರದಲ್ಲಿ 25 ಭಯೋತ್ಪಾದಕ ದಾಳಿಗಳು ನಡೆದಿವೆ’ ಎಂದು ತಿರುಗೇಟು ನೀಡಿದರು.

‘ಸರ್ಕಾರ ಹೊಣೆ ಹೊರಲಿ’

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಕಾರಣವಾದ ‘ಗುಪ್ತಚರ ವೈಫಲ್ಯದ ಹೊಣೆಯನ್ನು ಕೇಂದ್ರ ಸರ್ಕಾರ ಹೊರಬೇಕೆಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಆಗ್ರಹಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಪಹಲ್ಗಾಮ್ ದಾಳಿಯ ನಂತರ ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸಿರುವುದು ಸರ್ಕಾರದ ವೈಫಲ್ಯದ ಸಂಕೇತ’ ಎಂದರು.

‘ಭಾರತದ ವಿದೇಶಾಂಗ ನೀತಿ ಸಂಪೂರ್ಣವಾಗಿ ಕುಸಿದಿದೆ. ಪ್ರಮುಖ ವಿಷಯಗಳಲ್ಲಿ ಜಾಗತಿಕವಾಗಿ ಭಾರತವು ಏಕಾಂಗಿಯಾಗಿದೆ. ಇನ್ನೊಂದೆಡೆ, ಚೀನಾವು ನಮ್ಮ ಭೂಮಿ ಮತ್ತು ಮಾರುಕಟ್ಟೆಯನ್ನು ಕಬಳಿಸುತ್ತಿದೆ. ಚೀನಾ ಹೆಚ್ಚು ಆಕ್ರಮಣಕಾರಿಯಾಗಿದೆ’ ಎಂದರು.

‘ಸಿಂಧೂರ’ ಚರ್ಚೆ: ರಾಜ್ಯಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

‘ಭದ್ರತಾ ಲೋಪ: ಶಾ ಹೊಣೆ ಹೊರಬೇಕು’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಕಾರಣವಾದ ‘ಭದ್ರತಾ ಲೋಪ’ದ ಹೊಣೆಯನ್ನು ಗೃಹ ಸಚಿವ ಅಮಿತ್ ಶಾ ಹೊರಬೇಕು ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.

ಆಪರೇಷನ್ ಸಿಂಧೂರ ಕುರಿತು ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ವಿಶೇಷ ಚರ್ಚೆಯಲ್ಲಿ ಮಾತನಾಡಿದ ಅವರು, ಪಹಲ್ಗಾಮ್ ದಾಳಿಗೆ ಭದ್ರತಾ ಲೋಪ ಕಾರಣ ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿ ಸರ್ಕಾರದ ಮೇಲೆ ವಾಗ್ದಾಳಿ ನಡೆಸಿದರು.

ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ಕೊನೆಗೊಳಿಸಲು ತಾವು ಮಧ್ಯಸ್ಥಿಕೆ ವಹಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡುತ್ತಿರುವ ಹೇಳಿಕೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಮೌನವನ್ನು ಖರ್ಗೆ ಪ್ರಶ್ನಿಸಿದರು.

ಭಯೋತ್ಪಾದನಾ ದಾಳಿಗಳನ್ನು ತಡೆಯುವಲ್ಲಿ ಸರ್ಕಾರ ಎಡವಿದ್ದು, ತನ್ನ ವೈಫಲ್ಯವನ್ನು ಒಪ್ಪಿಕೊಳ್ಳಬೇಕು ಎಂದು ಖರ್ಗೆ ಒತ್ತಾಯಿಸಿದರು. ಭದ್ರತಾ ಲೋಪಗಳ ಕುರಿತು ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ನೀಡಿದ್ದ ಹೇಳಿಕೆಯು ಗೃಹ ಸಚಿವರ ‘ಕುರ್ಚಿ ಉಳಿಸುವ’ ಗುರಿಯನ್ನು ಹೊಂದಿದೆಯೇ ಎಂದು ಪ್ರಶ್ನಿಸಿದರು.



ಕಾರ್ಗಿಲ್ ಯುದ್ಧದ ಬಳಿಕ ವರದಿ ಬಿಡುಗಡೆ ಮಾಡಿದಂತೆ, ಪಹಲ್ಗಾಮ್ ದಾಳಿ ಬಗ್ಗೆಯೂ ಸರ್ಕಾರ ವರದಿ ಬಿಡುಗಡೆ ಮಾಡಬೇಕು
ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯ ವಿರೋಧಪಕ್ಷದ ನಾಯಕ

‘ಪಹಲ್ಗಾಮ್‌ನಲ್ಲಿ ನಡೆದದ್ದು ದುರದೃಷ್ಟಕರ ಘಟನೆ. ಭದ್ರತಾ ಲೋಪದಿಂದ ದಾಳಿ ನಡೆದಿದೆ ಎಂಬುದನ್ನು ಸಿನ್ಹಾ ಸ್ವತಃ ಒಪ್ಪಿಕೊಂಡಿದ್ದಾರೆ. ಘಟನೆಯ ಸಂಪೂರ್ಣ ಹೊಣೆಯನ್ನು ಹೊರುವುದಾಗಿ ಅವರು ಹೇಳಿದ್ದಾರೆ. ಆದರೆ, ಭದ್ರತಾ ಲೋಪಕ್ಕೆ ಗೃಹ ಸಚಿವರು ಹೊಣೆಗಾರರಾಗಬೇಕೇ ಹೊರತು ಲೆಫ್ಟಿನೆಂಟ್ ಗವರ್ನರ್ ಅಲ್ಲ’ ಎಂದು ಖರ್ಗೆ ಹೇಳಿದರು.

‘ಉರಿ, ಪಠಾಣ್‌ಕೋಟ್, ಪುಲ್ವಾಮಾ ಬಳಿಕ ಈಗ ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿ ನಡೆದಿದೆ. ಈ ಎಲ್ಲಾ ದಾಳಿಗಳು ಗುಪ್ತಚರ ವೈಫಲ್ಯವನ್ನು ತೋರಿಸುತ್ತದೆ. ಇದಕ್ಕೆ ಯಾರು ಹೊಣೆ ಎಂದು ಗೃಹ ಸಚಿವರನ್ನು ಕೇಳಲು ಬಯಸುತ್ತೇನೆ. ಪದೇ ಪದೇ ಆಗುತ್ತಿರುವ ತಪ್ಪನ್ನು ಸರಿಪಡಿಸಲು ನೀವು ಏನು ಮಾಡಿದ್ದೀರಿ? ನೀವು ನಿಮ್ಮ ಹುದ್ದೆ ತ್ಯಜಿಸಿ’ ಎಂದು ಹರಿಹಾಯ್ದರು.

ಖರ್ಗೆ ಕ್ಷಮೆಯಾಚಿಸಿದ ನಡ್ಡಾ

ಸದನದ ನಾಯಕ ಜೆ.ಪಿ ನಡ್ಡಾ ಅವರು ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದು, ರಾಜ್ಯಸಭೆಯಲ್ಲಿ ಮಂಗಳವಾರ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ವಾದಕ್ಕೆ ಕಾರಣವಾಯಿತು. ಆ ಬಳಿಕ ನಡ್ಡಾ ತಮ್ಮ ಹೇಳಿಕೆ ವಾಪಸ್ ಪಡೆದು ಖರ್ಗೆ ಅವರ ಕ್ಷಮೆಯಾಚಿಸಿದರು.

ಆಪರೇಷನ್ ಸಿಂಧೂರ ಕುರಿತ ಚರ್ಚೆ ವೇಳೆ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ತಕ್ಷಣ ಪ್ರತಿಕ್ರಿಯಿಸಿದ ನಡ್ಡಾ, ‘ಖರ್ಗೆ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ’ ಎಂದು ತಿರುಗೇಟು ನೀಡಿದರು. ಇದು ವಿಪಕ್ಷಗಳ ಸದಸ್ಯರನ್ನು ಕೆರಳುವಂತೆ ಮಾಡಿತು. ಖರ್ಗೆ ಅವರು ಪ್ರಧಾನಿ ಬಗ್ಗೆ ಆಡಿದ ಮಾತುಗಳನ್ನು ಕಡತದಿಂದ ತೆಗೆದುಹಾಕುವಂತೆಯೂ ನಡ್ಡಾ ಆಗ್ರಹಿಸಿದರು.

‘ನಾನು ಅಪಾರ ಗೌರವ ನೀಡುತ್ತಿರುವ ಎನ್‌ಡಿಎ ಸಚಿವರಲ್ಲಿ ನಡ್ಡಾ ಒಬ್ಬರು. ಅವರು ನನ್ನ ಬಗ್ಗೆ ಅಂತಹ ಹೇಳಿಕೆ ನೀಡಿರುವುದು ನಾಚಿಕೆಗೇಡಿನ ವಿಷಯ’ ಎಂದು ಖರ್ಗೆ ಹೇಳಿದರು.

ತಕ್ಷಣ ಎದ್ದು ನಿಂತ ನಡ್ಡಾ, ‘ನನ್ನ ಮಾತುಗಳನ್ನು ಈಗಾಗಲೇ ಹಿಂದಕ್ಕೆ ಪಡೆದುಕೊಂಡಿದ್ದೇನೆ. ನನ್ನ ಹೇಳಿಕೆಯಿಂದ ಅವರಿಗೆ (ಖರ್ಗೆ) ನೋವಾಗಿದ್ದರೆ, ಕ್ಷಮೆಯಾಚಿಸುವೆ. ಖರ್ಗೆ ಅವರು ಪ್ರಧಾನಿ ವಿರುದ್ಧ ಟೀಕೆ ಮಾಡುವಾಗ ಮಿತಿಯನ್ನು ಮೀರಿದ್ದಾರೆ. ಅದನ್ನು ಕಡತದಿಂದ ತೆಗೆದುಹಾಕಬೇಕು’ ಎಂದರು.

ಪಹಲ್ಗಾಮ್ ಉಗ್ರರ ಹತ್ಯೆ: ಶಾ

ಒಂದನೇ ಪುಟದಿಂದ...

ಉಗ್ರರ ಉಪಸ್ಥಿತಿ ಬಗ್ಗೆ ನಮಗೆ ಜುಲೈ 22ರಂದು ಖಚಿತ ಮಾಹಿತಿ ದೊರೆಯಿತು. ಆ ಬಳಿಕ ಕಾರ್ಯಾಚರಣೆ ನಡೆಸಲಾಯಿತು ಎಂದು ಅವರು ವಿವರ ನೀಡಿದರು.

‘ಪಹಲ್ಗಾಮ್ ದಾಳಿಯೊಂದಿಗೆ ಈ ಉಗ್ರರು ಸಂಬಂಧ ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಅವರಿಗೆ ಆಹಾರ ಮತ್ತು ಆಶ್ರಯ ನೀಡಿದ್ದ ಜನರನ್ನು ಮೊದಲೇ ಬಂಧಿಸಲಾಗಿತ್ತು. ಶ್ರೀನಗರಕ್ಕೆ ಶವಗಳನ್ನು ತಂದ ನಂತರ ಅವರಿಗೆ ಆಶ್ರಯ ನೀಡಿದವರಿಗೆ ತೋರಿಸಲಾಯಿತು. ಈ ಮೂವರು ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾಗಿರುವ ಕುರಿತು ಅವರು ಮಾಹಿತಿ ನೀಡಿದರು’ ಎಂದರು.

ಹೆಚ್ಚಿನ ದೃಢೀಕರಣಕ್ಕಾಗಿ ವಿಶೇಷ ವಿಮಾನದಲ್ಲಿ ಎಂ–9 ಹಾಗೂ ಎಕೆ–47 ರೈಫಲ್‌ಗಳನ್ನು ಚಂಡೀಗಢದ ಕೇಂದ್ರ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕೊಂಡೊಯ್ದು ಪರೀಕ್ಷೆ ನಡೆಸಲಾಯಿತು. ಉಗ್ರರ ದಾಳಿಯ ಕಾರ್ಟ್ರಿಜ್‌ಗಳ ಎಫ್‌ಎಸ್‌ಎಲ್ ತಾಂತ್ರಿಕ ವಿವರದೊಡನೆ ಉಗ್ರರ ರೈಫಲ್‌ಗಳ ತಾಂತ್ರಿಕ ವಿವರ ತುಲನೆ ಮಾಡಲಾಯಿತು. ದಾಳಿ ನಡೆಸಿದವರು ಈ ಉಗ್ರರೇ ಎನ್ನುವುದು ಖಚಿತವಾಯಿತು. ನನ್ನ ಬಳಿ ಬ್ಯಾಲಿಸ್ಟಿಕ್ ವರದಿ ಇದೆ. ಇದನ್ನು ಆರು ಬ್ಯಾಲಿಸ್ಟಿಕ್ ತಜ್ಞರು ದೃಢಪಡಿಸಿದ್ದಾರೆ. ಬೆಳಿಗ್ಗೆ 4.46ಕ್ಕೆ ವಿಡಿಯೊ ಕರೆ ಮಾಡಿದ ಅವರು, ಇವು ಪಹಲ್ಗಾಮ್ ದಾಳಿಯಲ್ಲಿ ಬಳಸಲಾದ ಗುಂಡುಗಳು ಎಂಬುದನ್ನು ಖಚಿತಪಡಿಸಿದರು’ ಎಂದು ಶಾ ಹೇಳಿದರು.

ಪಹಲ್ಗಾಮ್ ದಾಳಿಯ ಎರಡು ದಿನಗಳ ನಂತರ, ಪ್ರಧಾನಿ ಮೋದಿ ಅವರು ಬಿಹಾರಕ್ಕೆ ಭೇಟಿ ನೀಡಿದ್ದನ್ನು ಶಾ ಸಮರ್ಥಿಸಿಕೊಂಡರು. ‘ಮೋದಿ ಅವರ ಭಾಷಣವು ವಿರೋಧ ಪಕ್ಷಗಳು ಹೇಳುವಂತೆ ಚುನಾವಣಾ ಭಾಷಣವಲ್ಲ, ಬದಲಾಗಿ ಭಯೋತ್ಪಾದನೆಯ ವಿರುದ್ಧ ಹೋರಾಡುವ 140 ಕೋಟಿ ಭಾರತೀಯರ ಸಂಕಲ್ಪದ ಪ್ರತಿಬಿಂಬ’ ಎಂದು ವ್ಯಾಖ್ಯಾನಿಸಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ: ಮಾಜಿ ಪ್ರಧಾನಿಗಳಾದ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಮತ್ತು ಮನಮೋಹನ್ ಸಿಂಗ್ ವಿರುದ್ಧ ವಾಗ್ದಾಳಿ ನಡೆಸಿದ ಶಾ, ಅವರ ನೀತಿಗಳಿಂದಾಗಿ ಪಾಕಿಸ್ತಾನ ಹಾಗೂ ಚೀನಾಕ್ಕೆ ಇನ್ನಷ್ಟು ಬಲ ಬಂತು ಎಂದರು.

1948ರಲ್ಲಿ ಪಾಕ್ ಆಕ್ರಮಿತ ಕಾಶ್ಮೀರವನ್ನು ಮರಳಿ ವಶಪಡಿಸಿಕೊಳ್ಳಲು ಭದ್ರತಾ ಪಡೆಗಳು ಸಜ್ಜಾಗಿದ್ದವು. ಆಗ ನೆಹರೂ ಅವರು ಏಕಾಏಕಿ ಕದನ ವಿರಾಮ ಘೋಷಿಸಿದ್ದರು. 1971ರಲ್ಲಿ ಇಂದಿರಾ ಅವರು ಪಿಒಕೆಯನ್ನು ವಾಪಸ್ ಪಡೆಯಲಿಲ್ಲ. ಮನಮೋಹನ್ ಸಿಂಗ್ ಕಾಲದಲ್ಲಿ 27 ಉಗ್ರರ ದಾಳಿಗಳು ನಡೆದಿದ್ದವು ಎಂದ ಅವರು, ‘ಕಾಂಗ್ರೆಸ್ ಸರ್ಕಾರ ಮಾಡಿದ್ದೇನು? ಅವರು ಪಾಕಿಸ್ತಾನಕ್ಕೆ ಕೇವಲ ದಾಖಲೆಗಳನ್ನಷ್ಟೇ ಕಳುಹಿಸಿದ್ದಾರೆ. ಪೋಟಾವನ್ನು ವಿರೋಧಿಸುವವರು ನರೇಂದ್ರ ಮೋದಿ ಅವರ ಭಯೋತ್ಪಾದನಾ ವಿರೋಧಿ ನೀತಿಗಳನ್ನು ಎಂದಿಗೂ ಮೆಚ್ಚುವುದಿಲ್ಲ’ ಎಂದರು.

‘ಟ್ರಂಪ್ ಸುಳ್ಳುಗಾರನೆಂದು ಮೋದಿ ಹೇಳಲಿ’

ಒಂದನೇ ಪುಟದಿಂದ...

ಸರ್ಕಾರದ ವಿರುದ್ಧ ರಾಹುಲ್ ಹರಿಹಾಯ್ದ ಪರಿ ಇಲ್ಲಿದೆ:

- ಲೋಕಸಭೆಯಲ್ಲಿ ಚೀನಾ ಮತ್ತು ಪಾಕಿಸ್ತಾನದ ಬಗ್ಗೆ ನಾನು ಹೇಳಿದ್ದನ್ನು ನೀವು ಕೇಳಿದ್ದರೆ, ನೀವು ಆ ಐದು ವಿಮಾನಗಳನ್ನು ಕಳೆದುಕೊಳ್ಳುತ್ತಿರಲಿಲ್ಲ
- ಭಾರತ ಎದುರಿಸುತ್ತಿರುವ ಅತಿದೊಡ್ಡ ಭದ್ರತಾ ಸವಾಲು ಪಾಕಿಸ್ತಾನ ಮತ್ತು ಚೀನಾವನ್ನು ಪ್ರತ್ಯೇಕವಾಗಿ ಇಡುವುದು. ಚೀನಾ ಮತ್ತು ಪಾಕಿಸ್ತಾನ ಒಟ್ಟಾಗಿವೆ. ನಮ್ಮ ಸರ್ಕಾರವು ಆರಂಭದಲ್ಲಿ ಪಾಕ್ ವಿರುದ್ಧ ಹೋರಾಡುತ್ತಿದ್ದೇವೆ ಎಂದು ಭಾವಿಸಿತ್ತು. ಆ ಬಳಿಕ ಎರಡೂ ದೇಶಗಳ ವಿರುದ್ಧ ಹೋರಾಟ ಮಾಡುತ್ತಿದ್ದೇವೆ ಎಂದು ಅರಿತುಕೊಂಡಿತು. ಸಂಘರ್ಷದ ಸಮಯದಲ್ಲಿ ಚೀನಿಯರು ಯುದ್ಧಭೂಮಿಯ ನಿರ್ಣಾಯಕ ಮಾಹಿತಿ ಮತ್ತು ಉಪಗ್ರಹದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಪಾಕ್‌ಗೆ ನೀಡುತ್ತಿದ್ದರು
- ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಪಾಕ್ ಜನರಲ್ ಅಸಿಮ್ ಮುನೀರ್ ಅವರನ್ನು ತಮ್ಮ ಕಚೇರಿಗೆ ಆಹ್ವಾನಿಸಿದರು. ಆದರೆ, ಮೋದಿ ಈ ಬಗ್ಗೆ ಏನನ್ನೂ ಹೇಳಿಲ್ಲ. ಪಹಲ್ಗಾಮ್ ದಾಳಿಯ ಮುಖ್ಯ ಸಂಚುಕೋರ ಟ್ರಂಪ್ ಅವರೊಂದಿಗೆ ಊಟ ಮಾಡುವುದು ನಮ್ಮ ಸರ್ಕಾರಕ್ಕೆ ಸಾಮಾನ್ಯ ವಿಷಯವಾಗಿದೆ
- ಪಹಲ್ಗಾಮ್ ಘಟನೆಯ ನಂತರ ಒಂದೇ ಒಂದು ದೇಶವೂ ಪಾಕಿಸ್ತಾನವನ್ನು ಖಂಡಿಸಿಲ್ಲ. ಅಂದರೆ ಜಗತ್ತು ನಮ್ಮನ್ನು ಪಾಕ್ ಜೊತೆ ಸಮೀಕರಿಸುತ್ತಿದೆ ಎಂದರ್ಥ
- ನೀವು ಭಾರತೀಯ ಸಶಸ್ತ್ರ ಪಡೆಗಳನ್ನು ಬಳಸಲು ಬಯಸಿದರೆ, ನಿಮಗೆ ಶೇ 100ರಷ್ಟು ರಾಜಕೀಯ ಇಚ್ಛಾಶಕ್ತಿ ಇರಬೇಕು. ಅವರಿಗೆ ಕಾರ್ಯಾಚರಣೆಯ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು

ಮೋದಿ- ಸಚಿವ ಸೋಮಣ್ಣ ಭೇಟಿ

ನವದೆಹಲಿ: ರೈಲ್ವೆ ಮತ್ತು ಜಲಶಕ್ತಿ ಖಾತೆಯ ರಾಜ್ಯ ಸಚಿವ ವಿ.ಸೋಮಣ್ಣ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಸತ್ ಭವನದಲ್ಲಿ ಮಂಗಳವಾರ ಭೇಟಿ ಮಾಡಿ ಸಮಾಲೋಚಿಸಿದರು.

ಕಳೆದ ಒಂದು ವರ್ಷದಲ್ಲಿ ರೈಲ್ವೆ ಮತ್ತು ಜಲಶಕ್ತಿ ಇಲಾಖೆಗಳ ಮೂಲಕ ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ತಾವು ಕೈಗೊಂಡ ಕೆಲವು ಪ್ರಮುಖ ಅಭಿವೃದ್ಧಿ ಕಾರ್ಯಗಳ ಸಮಗ್ರ ಚಿತ್ರಣವನ್ನು ಸೋಮಣ್ಣ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಈ ಪುಸ್ತಕವನ್ನು ಮೋದಿ ಬಿಡುಗಡೆ ಮಾಡಿದರು.



ಸೋಮಣ್ಣ ಅವರ ಪುಸ್ತಕವನ್ನು ಮೋದಿ ಬಿಡುಗಡೆ ಮಾಡಿದರು.

ಎನ್‌ಐಎ ತನಿಖೆ

ಶ್ರೀನಗರ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿಯ ಶಂಕಿತ ರೂವಾರಿ ಮತ್ತು ಇತರ ಇಬ್ಬರನ್ನು ಹತ್ಯೆಗೈದ ಬಗ್ಗೆ ಎನ್‌ಐಎ ತಂಡವು ಮಂಗಳವಾರ ತನಿಖೆ ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದರು.

ಎನ್‌ಐಎ ತಂಡವು ಪೊಲೀಸ್ ನಿಯಂತ್ರಣ ಕೊಠಡಿಗೆ ಬಂದು ಮೂವರು ಭಯೋತ್ಪಾದಕರ ಮೃತದೇಹಗಳ ಗುರುತನ್ನು ಪರಿಶೀಲಿಸಿತು, ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿತು ಎಂದು ಮಾಹಿತಿ ನೀಡಿದರು. ಈ ಪ್ರದೇಶದಲ್ಲಿ ಉಗ್ರರ ಮತ್ತೊಂದು ಗುಂಪು ಅಡಗಿ ಕುಳಿತ ಗುಪ್ತಚರ ಮಾಹಿತಿ ಲಭ್ಯವಾಗಿರುವ ಕಾರಣ ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ.

ಪಾಕ್ ಉಗ್ರರ ಮಟ್ಟಹಾಕಲು ಸದಾ ಸಿದ್ಧ: ರಾಜನಾಥ್ ಸಿಂಗ್

ನವದೆಹಲಿ (ಪಿಟಿಐ): ತನ್ನ ನೆಲದಲ್ಲಿ ಉಗ್ರರ ವಿಷಯದಲ್ಲಿ ಪಾಕಿಸ್ತಾನಕ್ಕೆ ಯಾವ ಕ್ರಮವನ್ನೂ ಕೈಗೊಳ್ಳಲು ಆಗದೇ ಇದ್ದಲ್ಲಿ ಭಾರತವೇ ಆ ಕೆಲಸ ಮಾಡಲು ಸಿದ್ಧ. ಭಾರತದ ಸೇನಾಪಡೆಗಳಿಗೆ ಆ ಸಾಮರ್ಥ್ಯವಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂಗಳವಾರ ಹೇಳಿದರು.

‘ಆಪರೇಷನ್ ಸಿಂಧೂರ’ ಕುರಿತು ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, ‘ಸದ್ಯಕ್ಕೆ ಆಪರೇಷನ್ ಸಿಂಧೂರ ಕಾರ್ಯಾಚರಣೆಗೆ ಅಲ್ಪ ವಿರಾಮ ನೀಡಲಾಗಿದೆ. ಪಾಕಿಸ್ತಾನ ಮತ್ತೆ ಭಯೋತ್ಪಾದನಾ ಚಟುವಟಿಕೆಯಲ್ಲಿ ತೊಡಗಿದರೆ ಕಾರ್ಯಾಚರಣೆ ಪ್ರಾರಂಭವಾಗಲಿದೆ’ ಎಂದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ; ಆಗಸ್ಟ್ 12ರಿಂದ ಅರ್ಜಿಗಳ ವಿಚಾರಣೆ-ಸುಪ್ರೀಂ ಕೋರ್ಟ್

‘ಸಾಮೂಹಿಕವಾಗಿ ಹೊರಗಿಟ್ಟರೆ, ಮಧ್ಯಪ್ರವೇಶ’

ನವದೆಹಲಿ (ಪಿಟಿಐ): ‘ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯಲ್ಲಿ ಮತದಾರರನ್ನು ಸಾಮೂಹಿಕವಾಗಿ ದೊಡ್ಡ ಮಟ್ಟದಲ್ಲಿ ಹೊರಗಿಡುವ ಪ್ರಯತ್ನ ನಡೆದರೆ, ನ್ಯಾಯಾಲಯವು ಮಧ್ಯಪ್ರವೇಶಿಸಲಿದೆ. ಚುನಾವಣಾ ಆಯೋಗದ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ಆಗಸ್ಟ್ 12 ಹಾಗೂ 13ರಂದು ನಡೆಸಲಾಗುವುದು’ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಆಯೋಗದ ಕ್ರಮವನ್ನು ಪ್ರಶ್ನಿಸಿರುವ ಅರ್ಜಿದಾರರು ಆಗಸ್ಟ್ 8ರ ಒಳಗಾಗಿ ಲಿಖಿತ ಅಭಿಪ್ರಾಯ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠವು ತಿಳಿಸಿದೆ.

‘ಆಗಸ್ಟ್ 1ರಂದು ಪ್ರಕಟವಾಗಲಿರುವ ಮತದಾರರ ಪಟ್ಟಿಯಲ್ಲಿ ಜನರು ಹೊರಗುಳಿಯುವ ಸಾಧ್ಯತೆಯಿದ್ದು, ಅವರು ಮತದಾನ ಮಾಡುವ ಅಮೂಲ್ಯ ಹಕ್ಕನ್ನು ಕಳೆದುಕೊಳ್ಳಲಿದ್ದಾರೆ’ ಎಂದು ಅರ್ಜಿದಾರರ ಪರ ಹಾಜರಾದ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ಪ್ರಶಾಂತ್ ಭೂಷಣ್ ಕಳವಳ ವ್ಯಕ್ತಪಡಿಸಿದರು.

‘ಎಸ್‌ಐಆರ್ ಪ್ರಕ್ರಿಯೆ ವೇಳೆ ದಾಖಲೆಗಳನ್ನು ಸಲ್ಲಿಸದ 65 ಲಕ್ಷ ಮತದಾರರನ್ನು ತೆಗೆದುಹಾಕಲಾಗಿದೆ ಎಂದು ಚುನಾವಣಾ ಆಯೋಗವು ತಿಳಿಸಿದೆ. ಇದರಲ್ಲಿ ಕೆಲವರು ಶಾಶ್ವತವಾಗಿ ವಲಸೆ ಹೋಗಿದ್ದು, ಉಳಿದವರು ಸತ್ತಿದ್ದಾರೆ. ಪಟ್ಟಿಯಿಂದ ಹೊರಗುಳಿದವರು ಹೊಸದಾಗಿ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಆಯೋಗವು ತಿಳಿಸಿದೆ’ ಎಂದು ಪ್ರಶಾಂತ್ ಭೂಷಣ್ ನ್ಯಾಯಪೀಠದ ಗಮನಸೆಳೆದರು.

ಇದಕ್ಕೆ ಉತ್ತರಿಸಿದ ನ್ಯಾಯಮೂರ್ತಿ ಸೂರ್ಯಕಾಂತ್, ‘ಚುನಾವಣಾ ಆಯೋಗವು ಕಾನೂನನ್ನು ಪಾಲಿಸಲಿದೆ. ಒಂದೊಮ್ಮೆ ತಪ್ಪು ಮಾಡಿದರೆ, ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರಬಹುದು’ ಎಂದರು.

‘ಕರಡು ಪಟ್ಟಿಯಲ್ಲಿ 65 ಲಕ್ಷ ಮತದಾರರನ್ನು ಹೊರಗಿಟ್ಟಿರುವ ನಿಮ್ಮ ಆತಂಕವನ್ನು ಅರ್ಥಮಾಡಿಕೊಳ್ಳುತ್ತೇವೆ. ಆಯೋಗವು ಪಟ್ಟಿಯಲ್ಲಿ ತಿದ್ದುಪಡಿ ಮಾಡುತ್ತಿದ್ದು, ನ್ಯಾಯಾಂಗ ಪ್ರಾಧಿಕಾರವಾಗಿ ಅವಲೋಕಿಸಲಿದ್ದೇವೆ. ನೀವು ಬದುಕಿರುವ 15 ಜನರನ್ನು ಕರೆತನ್ನಿ, ಮುಂದಿನದನ್ನು ನಾವು ಪರಿಗಣಿಸಲಿದ್ದೇವೆ. ಒಂದೊಮ್ಮೆ ಸಾಮೂಹಿಕವಾಗಿ ಮತದಾರರನ್ನು ಹೊರಗಿಟ್ಟರೆ ನಾವು ಕೂಡಲೇ ಮಧ್ಯಪ್ರವೇಶಿಸಲಿದ್ದೇವೆ’ ಎಂದು ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ತಿಳಿಸಿದರು.

‘ಪಟ್ಟಿಯಿಂದ ಬಿಟ್ಟಿರುವ 65 ಲಕ್ಷ ಮಂದಿ ಯಾರು ಎನ್ನುವುದು ಆಯೋಗಕ್ಕೆ ಗೊತ್ತಿದೆ. ಪಟ್ಟಿಯಲ್ಲಿ ಅವರ ಹೆಸರು ಪ್ರಕಟಿಸಿದರೆ ಯಾರಿಗೂ ಸಮಸ್ಯೆಯಿಲ್ಲ’ ಎಂದು ಆರ್‌ಜೆಡಿ ಸಂಸದ ಮನೋಜ್ ಝಾ ಪರ ಹಾಜರಾದ ವಕೀಲ ಕಪಿಲ್ ಸಿಬಲ್ ತಿಳಿಸಿದರು. ‘ಪಟ್ಟಿಯಲ್ಲಿ ಎದ್ದುಕಾಣುವ ಲೋಪ ಕಂಡುಬಂದರೆ, ನಮ್ಮ ಗಮನಕ್ಕೆ ತರಬಹುದು’ ಎಂದು ನ್ಯಾಯಮೂರ್ತಿ ಕಾಂತ್ ತಿಳಿಸಿದರು.

ರಾಷ್ಟ್ರಪತಿ ಎತ್ತಿದ ಪ್ರಶ್ನೆಗಳ ವಿಚಾರಣೆ ಆಗಸ್ಟ್ 19ರಿಂದ

ನವದೆಹಲಿ (ಪಿಟಿಐ): ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ಕಾಲಮಿತಿ ನಿಗದಿಪಡಿಸಬಹುದೇ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಲ್ಲೇಖಿಸಿರುವ ಸಾಂವಿಧಾನಿಕ ಪ್ರಶ್ನೆಗಳ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಆಗಸ್ಟ್ 19ರಂದು ಪ್ರಾರಂಭಿಸಲಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಗಸ್ಟ್ 12ರೊಳಗೆ ಈ ವಿಷಯದ ಕುರಿತು ತಮ್ಮ ಪ್ರತಿಪಾದನೆಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠ ತಿಳಿಸಿದೆ.



ರಾಷ್ಟ್ರಪತಿಗಳ ಉಲ್ಲೇಖಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಆಕ್ಷೇಪಣೆಗಳನ್ನು ಸಲ್ಲಿಸಿರುವ ಕೇರಳ ಮತ್ತು ತಮಿಳುನಾಡು ರಾಜ್ಯಗಳ ವಾದವನ್ನು ಆಗಸ್ಟ್ 19ರಂದು ಮೊದಲ ಒಂದು ಗಂಟೆ ವಿಚಾರಣೆ ನಡೆಸುವುದಾಗಿ ಪೀಠ ತಿಳಿಸಿದೆ.

ರಾಷ್ಟ್ರಪತಿಯವರ ಉಲ್ಲೇಖವನ್ನು ಬೆಂಬಲಿಸುವ ಕೇಂದ್ರ ಮತ್ತು ರಾಜ್ಯಗಳ ಪರವಾಗಿ ಆಗಸ್ಟ್ 19, 20, 21 ಮತ್ತು 26ರಂದು ವಿಚಾರಣೆ ನಡೆಸಲಾಗುವುದು. ಈ ಉಲ್ಲೇಖವನ್ನು ವಿರೋಧಿಸುವವರ ವಿಚಾರಣೆಯನ್ನು ಆಗಸ್ಟ್ 28, ಸೆಪ್ಟೆಂಬರ್ 2, 3 ಮತ್ತು 9ರಂದು ನಡೆಸಲಾಗುವುದು ಎಂದು ಪೀಠ ಹೇಳಿದೆ. ಅಲ್ಲದೆ ಇತರೆ ಪ್ರತಿವಾದಿಗಳಿದ್ದರೆ ಸೆಪ್ಟೆಂಬರ್ 10ರಂದು ವಿಚಾರಣೆ ನಡೆಸಲಾಗುವುದು ಎಂದು ತಿಳಿಸಿದೆ.

ಆಸ್ತಿ ನೋಂದಣಿ: ಜಿಪಿಎ ವಂಚನೆಗೆ ಕಡಿವಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ ಇಲ್ಲದೇ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಆಧಾರದಲ್ಲಿ ನಡೆಯುತ್ತಿದ್ದ ಆಸ್ತಿ ವ್ಯವಹಾರ, ಜಿಪಿಎ ದುರ್ಬಳಕೆಗೆ ಕಡಿವಾಣ ಬೀಳಲಿದೆ. ಜಿಪಿಎ ಆಧಾರಿತ ಆಸ್ತಿ ವರ್ಗಾವಣೆ ವಹಿವಾಟುಗಳಿಗೂ ಇನ್ನು ಮುಂದೆ ನೋಂದಣಿ ಕಡ್ಡಾಯವಾಗಲಿದೆ.



ರಾಜ್ಯ ವಿಧಾನಮಂಡಲ ಅಂಗೀಕರಿಸಿದ್ದ ಸ್ಥಿರಾಸ್ತಿ ನೋಂದಣಿ ಹಾಗೂ ಡಿಜಿಟಲ್ ವಹಿವಾಟಿಗೆ ಸಂಬಂಧಿಸಿದಂತೆ ಕರ್ನಾಟಕ ನೋಂದಣಿ ಕಾಯ್ದೆಗಳ (ತಿದ್ದುಪಡಿ) ಎರಡು ಮಸೂದೆಗಳಿಗೆ ರಾಷ್ಟ್ರಪತಿ ಅನುಮೋದನೆ ಸಿಕ್ಕಿದ್ದು, ಹೊಸ ಕಾನೂನು ಜಾರಿಗೆ ಬಂದಿದೆ.

ಭೂರಹಿತರಿಗೆ ಸರ್ಕಾರ ಮಂಜೂರು ಮಾಡುವ ನಿವೇಶನ, ಮನೆ, ಜಮೀನು, ಗೃಹ ನಿರ್ಮಾಣ ಮಂಡಳಿ, ನಗರಾಭಿವೃದ್ಧಿ ಪ್ರಾಧಿಕಾರಗಳು ನಿರ್ಮಿಸುವ ಬಡಾವಣೆಗಳಲ್ಲಿನ ನಿವೇಶನ, ಮನೆಗಳ ನೋಂದಣಿಯನ್ನೂ ಕಡ್ಡಾಯಗೊಳಿಸಲಾಗಿದೆ. ಇದುವರೆಗೆ ಹಕ್ಕುಪತ್ರಗಳ ಆಧಾರದಲ್ಲೇ ಹೆಚ್ಚಿನ ಪ್ರಕ್ರಿಯೆಗಳು ನಡೆಯುತ್ತಿದ್ದವು.

ಮತ್ತೊಂದು ತಿದ್ದುಪಡಿ ಕಾಯ್ದೆ ಪ್ರಕಾರ ಸ್ವತ್ತು ಮತ್ತು ಇತರ ನೋಂದಣಿಗಳಲ್ಲಿ ಡಿಜಿಟಲ್ ಸಹಿ, ಡಿಜಿಟಲ್ ಇ-ಸ್ಟಾಂಪ್ ಬಳಕೆ ಜಾರಿ ಕಡ್ಡಾಯವಾಗಲಿದೆ. ಈ ಹಿಂದಿನಂತೆ ಅಂಟಿಸುವ ಅಥವಾ ಮುದ್ರೆ ಹಾಕುವ ಸ್ಟಾಂಪ್‌ಗಳ ಬಳಕೆಯನ್ನು ನಿಲ್ಲಿಸ ಲಾಗುತ್ತದೆ. ಇ-ಸ್ಟಾಂಪ್ ದುರುಪಯೋಗವನ್ನು ತಡೆಯಲು ಸ್ಟಾಂಪ್ ಮೊತ್ತವನ್ನು ವಿದ್ಯುನ್ಮಾನ ಪಾವತಿ ಮಾಡಬೇಕಿದೆ. ಸಿಬ್ಬಂದಿ ಮೂಲಕ (ಮ್ಯಾನ್ಯುವಲ್) ಸ್ಟಾಂಪ್ ವಿತರಿಸುವುದು ಸಂಪೂರ್ಣ ಸ್ಥಗಿತವಾಗಲಿದೆ.

ಡಿಜಿಟಲ್ ಸಹಿ ದುರುಪಯೋಗ ಆಗದಂತೆ ಮಾಡಲು ಜಿಲ್ಲಾಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರದ ಅಧಿಕಾರಿಯ ಸಹಿಯನ್ನು ಆಧಾರ್‌ಗೆ ಜೋಡಣೆ ಮಾಡಲಾಗಿರುತ್ತದೆ. ಸಹಿ ದೃಢೀಕರಣಗೊಂಡರೆ ಮಾತ್ರ ಸಹಿ ಸಾಧ್ಯ. ಡಿಜಿಟಲ್ ಸಹಿಯಲ್ಲಿ ಬಯೋಮೆಟ್ರಿಕ್ ಕೂಡ ಇರುತ್ತದೆ. ಎರಡೂ ಕಾಯ್ದೆ ಜಾರಿ ಕುರಿತು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ಪರರನ್ನು ಗೌರವಿಸುವುದನ್ನು ಕಲಿಯದಿದ್ದರೆ ನಾವೆಂದೂ ದೊಡ್ಡವರಾಗುವುದಿಲ್ಲ.

–**ಸರ್ದಾರ್ ವಲ್ಲಭಭಾಯಿ ಪಟೇಲ್**

ಸಂಪಾದಕೀಯ

ಮೈಸೂರಿನಲ್ಲಿ ಡ್ರಗ್ಸ್ ಜಾಲ ನಿರ್ಲಕ್ಷ್ಯ ಸಲ್ಲ, ಎಚ್ಚರ ಅಗತ್ಯ

ಮಹಾರಾಷ್ಟ್ರ ಪೊಲೀಸರ ಕಾರ್ಯಾಚರಣೆಯ ಮೂಲಕ ಮೈಸೂರಿನಲ್ಲಿ ಬೆಳಕಿಗೆ ಬಂದಿರುವ ಮಾದಕವಸ್ತು ತಯಾರಿಕೆ ಹಾಗೂ ಮಾರಾಟ ಜಾಲ ಗಾಬರಿಹುಟ್ಟಿಸುವಂತಿದೆ. ಈ ಜಾಲದ ಬಗ್ಗೆ ಕರ್ನಾಟಕ ಪೊಲೀಸ್ ಇಲಾಖೆ ಹಾಗೂ ಗುಪ್ತಚರ ಇಲಾಖೆಗೆ ಮಾಹಿತಿ ಇರಲಿಲ್ಲ ಎನ್ನುವುದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಗುಪ್ತಚರ ವ್ಯವಸ್ಥೆ ಎಷ್ಟರಮಟ್ಟಿಗೆ ಜಾಗೃತವಾಗಿದೆ ಎನ್ನುವುದಕ್ಕೆ ನಿದರ್ಶನದಂತಿದೆ. ಮಾದಕವಸ್ತುಗಳ ಜಾಲವೊಂದನ್ನು ಬಯಲು ಮಾಡಲು ಮಹಾರಾಷ್ಟ್ರ ಪೊಲೀಸರು ಸುಮಾರು ಒಂದು ಸಾವಿರ ಕಿ.ಮೀ ದೂರದಿಂದ ಮೈಸೂರಿಗೆ ಬಂದಿದ್ದು, ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಮಾದಕವಸ್ತು ತಯಾರಿಕಾ ಕೇಂದ್ರದ ಮೇಲೆ ದಾಳಿ ನಡೆಸಿದ್ದಾರೆ. ಪಕ್ಕದ ರಾಜ್ಯದ ಪೊಲೀಸರಿಂದ ವಿಷಯ ತಿಳಿಯುವವರೆಗೂ, ನಗರದ ಹೃದಯ ಭಾಗದಲ್ಲಿ ಏನು ನಡೆಯುತ್ತಿದೆ ಎನ್ನುವುದು ಸ್ಥಳೀಯ ಪೊಲೀಸರಿಗೆ ತಿಳಿಯದಿರುವುದು ಮುಜುಗರಕ್ಕೆ ಕಾರಣವಾಗಬೇಕಾದ ಸಂಗತಿ. ಮೈಸೂರು, ರಾಜ್ಯದ ಯಾವುದೋ ಮೂಲೆಯಲ್ಲಿರುವ ನಗರವಲ್ಲ. ರಾಜ್ಯದ ಸಾಂಸ್ಕೃತಿಕ ರಾಜಧಾನಿ ಎನ್ನುವ ಹೆಗ್ಗಳಿಕೆಯ ಈ ನಗರ, ನಾಡಿನ ಪ್ರಮುಖ ಪ್ರವಾಸಿ ಕೇಂದ್ರವೂ ಹೌದು. ಶತಮಾನ ಕಂಡಿರುವ ಮೈಸೂರು ವಿಶ್ವವಿದ್ಯಾಲಯದ ಜೊತೆಗೆ, ದೇಶ ವಿದೇಶಗಳಿಂದ ಸಾವಿರಾರು ವಿದ್ಯಾರ್ಥಿಗಳನ್ನು ಆಕರ್ಷಿಸುವ ಖಾಸಗಿ ವಿದ್ಯಾಸಂಸ್ಥೆಗಳ ನೆಲೆಯೂ ಆಗಿದೆ. ರಾಜಧಾನಿ ಬೆಂಗಳೂರಿಗೆ ಸಮೀಪವೂ ಇರುವ ನಗರದಲ್ಲಿ ವ್ಯವಸ್ಥಿತ ಅಪರಾಧದಲ್ಲಿ ತೊಡಗಿರುವ ಮಾದಕವಸ್ತುಗಳ ಜಾಲ ಸಕ್ರಿಯವಾಗಿರುವುದು ಸ್ಥಳೀಯ ಪೊಲೀಸರ ಸ್ಪಷ್ಟ ವೈಫಲ್ಯಕ್ಕೆ ಸಂಕೇತದಂತಿದೆ.



ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಬೃಹತ್ ಡ್ರಗ್ಸ್ ಜಾಲ ಬೆಳಕಿಗೆ ಬಂದಿದೆ. ಈ ಜಾಲ ಬಲಗೊಳ್ಳಲಿಕ್ಕೂ, ಪೊಲೀಸ್ ಇಲಾಖೆ ಹಾಗೂ ಗುಪ್ತಚರ ವ್ಯವಸ್ಥೆಯ ದೌರ್ಬಲ್ಯಕ್ಕೂ ಸಂಬಂಧವಿದೆ.

ಪೊಲೀಸರು ವಶಪಡಿಸಿಕೊಂಡಿರುವ 'ಎಂಡಿಎಂಎ' ಹೆಸರಿನ ಮಾದಕವಸ್ತು ಒಂದು ಸಂಶ್ಲೇಷಿತ ಔಷಧವಾಗಿದ್ದು, ಚಿತ್ತಭ್ರಾಂತಿಯನ್ನು ಉಂಟು ಮಾಡುವುದಕ್ಕೆ ಹೆಸರುವಾಸಿಯಾಗಿದೆ. ಇದರ ದೀರ್ಘಕಾಲೀನ ಬಳಕೆಯು ಮೆದುಳಿಗೆ ತೀವ್ರ ಹಾನಿ ಉಂಟುಮಾಡಬಹುದು; ಜ್ಞಾಪಕಶಕ್ತಿ ನಷ್ಟ ಹಾಗೂ ಗಂಭೀರ ಮಾನಸಿಕ ಸಮಸ್ಯೆಗಳಿಗೆ ಕಾರಣ ಆಗಬಹುದು. 11 ಕೆ.ಜಿ.ಯಷ್ಟು ಎಂಡಿಎಂಎ ಹಾಗೂ 50 ಕೆ.ಜಿಯಷ್ಟು ಮಾದಕವಸ್ತು ಉತ್ಪಾದಿಸಬಹುದಾದ ಕಚ್ಚಾವಸ್ತುಗಳನ್ನು ಪೊಲೀಸರ ದಾಳಿಯಲ್ಲಿ ವಶಪಡಿಸಿಕೊಳ್ಳಲಾಗಿದೆ. ಇದು ಸಾಮಾನ್ಯ ದಂಧೆಯಾಗಿರದೆ, ವ್ಯವಸ್ಥಿತವಾಗಿ ರೂಪುಗೊಂಡ ಬಹು ದೊಡ್ಡ ಜಾಲವಾಗಿದೆ. ರಾಜ್ಯದೊಳಗೆ ಹಾಗೂ ಹೊರಗೆ ಸಕ್ರಿಯವಾಗಿರುವ ಈ ಜಾಲ ಪೊಲೀಸರ ಕಣ್ತಪ್ಪಿಸಿ ದೀರ್ಘ ಕಾಲದಿಂದ ಕಾರ್ಯ ನಿರ್ವಹಿಸುತ್ತಿರುವ ಸಾಧ್ಯತೆಗಳಿವೆ. ಕಾನೂನು ಮತ್ತು ಸುವ್ಯವಸ್ಥೆಯ ನಿರ್ಲಕ್ಷ್ಯದ ಹೊರತಾಗಿ ಮೈಸೂರಿನಂಥ ನಗರದಲ್ಲಿ ಬೃಹತ್ ಜಾಲವೊಂದು ಕಾರ್ಯ ನಿರ್ವಹಿಸುವುದು ಸಾಧ್ಯವೇ ಇಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ, ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರನ್ನು ಅಮಾನತುಗೊಳಿಸಲಾಗಿದೆ. ಇಷ್ಟಕ್ಕೆ ಪೊಲೀಸ್ ಇಲಾಖೆಯ ಹೊಣೆಗಾರಿಕೆ ಮುಗಿಯುವುದಿಲ್ಲ. ನಗರ ಪೊಲೀಸ್ ಆಯುಕ್ತರು ಹಾಗೂ ಉಪ ಪೊಲೀಸ್ ಆಯುಕ್ತರು ಕೂಡ ಗಂಭೀರ ಲೋಪದ ಹೊಣೆ ಹೊರಬೇಕಾಗಿದೆ.

'ಡ್ರಗ್ಸ್ ಫ್ರೀ ಕರ್ನಾಟಕ' ಆ್ಯಪ್‌ನಂತಹ ರಚನಾತ್ಮಕ ಕ್ರಮಗಳು ರಾಜ್ಯದಲ್ಲಿ ಜಾರಿಯಲ್ಲಿವೆ. ಆದರೆ, ಮಾದಕವಸ್ತುಗಳ ತಡೆಗಟ್ಟುವಿಕೆಯ ಪ್ರಯತ್ನಗಳು ಕಟ್ಟುನಿಟ್ಟಾಗಿ ಜಾರಿಗೆ ಬಾರದೆ ಹೋದರೆ ಯಾವ ಕಾರ್ಯಕ್ರಮದಿಂದಲೂ ಉಪಯೋಗವಿಲ್ಲ. ಕಟ್ಟುನಿಟ್ಟಾದ ಮೇಲ್ವಿಚಾರಣೆ ಹಾಗೂ ವಿವಿಧ ಇಲಾಖೆಗಳ ನಡುವಣ ಸಮನ್ವಯ ಸಾಧಿಸುವಿಕೆಯ ಜೊತೆಗೆ, ಸಮುದಾಯ ಜಾಗೃತಿ ಕಾರ್ಯಕ್ರಮಗಳ ಮೂಲಕ ಮಾದಕವಸ್ತುಗಳ ವಿರುದ್ಧದ ಹೋರಾಟದಲ್ಲಿ ಯಶಸ್ಸು ಗಳಿಸಬಹುದಾಗಿದೆ. ಪೊಲೀಸರು ಎಚ್ಚರವಾಗಿದ್ದರಷ್ಟೇ ಸಾಲದು; ಚುನಾಯಿತ ಪ್ರತಿನಿಧಿಗಳು ಹಾಗೂ ಜನಸಾಮಾನ್ಯರು ಕೂಡ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಜಾಗರೂಕತೆಯಿಂದ ಇರಬೇಕು. ಅಪರಾಧ ಪ್ರಕರಣಗಳ ಹೆಚ್ಚಳದಲ್ಲಿ ಸಾಮಾಜಿಕ ಉದಾಸೀನದ ಪಾತ್ರವೂ ಇರುತ್ತದೆ. ಪರಂಪರೆ, ಕಲೆ ಮತ್ತು ಶಿಕ್ಷಣಕ್ಕೆ ಹೆಸರಾದ 'ಸಾಂಸ್ಕೃತಿಕ ನಗರಿ'ಯು ಡ್ರಗ್ಸ್ ದಂಧೆಯ ಕೇಂದ್ರ ಆಗಬಾರದು. ಸಣ್ಣ ನಿರ್ಲಕ್ಷ್ಯ ಕೂಡ ನಗರದ ವರ್ಚಸ್ಸಿಗೆ ದೊಡ್ಡ ಗಾಯ ಮಾಡಬಹುದು. ಮೈಸೂರಿನಲ್ಲಿ ಡ್ರಗ್ಸ್ ಜಾಲ ಸಕ್ರಿಯವಾಗಿರುವ ಬಗ್ಗೆ ಗೃಹ ಸಚಿವ ಜಿ. ಪರಮೇಶ್ವರ ಕಳವಳ ವ್ಯಕ್ತಪಡಿಸಿದ್ದಾರೆ. ಅವರ ಕಾಳಜಿ ಇಷ್ಟಕ್ಕೆ ಸೀಮಿತವಾಗಬಾರದು. ಮಾದಕವಸ್ತುಗಳ ವ್ಯಸನಕ್ಕೆ ಯುವಜನ ತುತ್ತಾಗದಂತೆ ಮಾಡಲು ಸಾಧ್ಯವಿರುವ ಎಲ್ಲ ಕ್ರಮಗಳನ್ನೂ ಸರ್ಕಾರ ಕೈಗೊಳ್ಳಬೇಕಾಗಿದೆ. ಪೊಲೀಸ್ ಇಲಾಖೆ ಹಾಗೂ ಗುಪ್ತಚರ ವ್ಯವಸ್ಥೆ ಸಾರ್ವಜನಿಕ ವಿಶ್ವಾಸಾರ್ಹತೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು ಅಗತ್ಯ.

ಜಾಲತಾಣ

ಮಹಿಳೆಯರಿಗೆ ಗೌರವ ನೀಡಿ



ರಮ್ಯಾ ಅವರ ವಿರುದ್ಧ ಬಳಸಿರುವ ಪದಗಳು ಖಂಡನೀಯ. ಯಾವ ಮಹಿಳೆಯ ವಿರುದ್ಧವೂ ಆ ರೀತಿ ಮಾತನಾಡಬಾರದು. ಅದನ್ನು ನಾವು ಸಹಿಸಬಾರದು. ಮಹಿಳೆಯರನ್ನು ತಾಯಿಯಾಗಿ, ಅಕ್ಕನಾಗಿ, ಮಗಳಾಗಿ, ಮಡದಿಯಾಗಿ ಮತ್ತು ಮೊಟ್ಟಮೊದಲು ಒಬ್ಬ ವ್ಯಕ್ತಿಯಾಗಿ ಗೌರವಿಸುವುದು ತುಂಬಾ ಮುಖ್ಯ.

ಗೀತಾ ಶಿವರಾಜ್‌ಕುಮಾರ್, ಶಿವರಾಜ್‌ಕುಮಾರ್ 'ಎಕ್ಸ್'ನಿಂದ

ಕಿಡಿನುಡಿ



ಬಾಟ್ಲಾ ಹೌಸ್ ಭಯೋತ್ಪಾದಕರಿಗಾಗಿ ಸೋನಿಯಾ ಗಾಂಧಿ ಕಣ್ಣೀರು ಹಾಕಿದ್ದರು. ನಿಜಕ್ಕೂ ಅವರು ಶೋಕಿಸಬೇಕಾದದ್ದು ಆ ಭಯೋತ್ಪಾದಕರಿಗಾಗಿ ಅಲ್ಲ, ಹುತಾತ್ಮರಾದ ಪೊಲೀಸ್ ಇನ್‌ಸ್ಪೆಕ್ಟರ್ ಮೋಹನ್ ಶರ್ಮಾಗಾಗಿ.

ಅಮಿತ್ ಶಾ, ಗೃಹ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 30-7-2000

● ಮಧ್ಯ ರೈಲ್ವೆ: ರಾಜ್ಯದ ಕಾಮಗಾರಿಗಳಿಗೆ ಕೇಂದ್ರ ಆದ್ಯತೆ

ಬೀದರ್, ಜುಲೈ 29– ದಕ್ಷಿಣ ಮಧ್ಯ ರೈಲ್ವೆಯಿಂದ ಕರ್ನಾಟಕದಲ್ಲಿ ಕೈಗೆತ್ತಿಕೊಂಡಿರುವ ಎಲ್ಲ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಆದ್ಯತೆ ನೀಡಲಾಗುತ್ತಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ಬಂಗಾರು ಲಕ್ಷ್ಮಣ ತಿಳಿಸಿದರು.

116 ಕಿ.ಮೀ. ಉದ್ದದ ಬೀದರ್– ಕಲ್ಬುರ್ಗಿ ರೈಲ್ವೆ ಮಾರ್ಗ ನಿರ್ಮಾಣ ಕಾಮಗಾರಿಗೆ ಇಂದು ಇಲ್ಲಿ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

● ಗಡಿ ವಿವಾದ: ಪ್ರಧಾನಿ ಮಧ್ಯಸ್ಥಿಕೆಗೆ ಒಲವು

ಮುಂಬೈ, ಜುಲೈ 29 (ಪಿಟಿಐ)– ಕರ್ನಾಟಕದೊಂದಿಗಿನ ಗಡಿ ಸಮಸ್ಯೆ ಇತ್ಯರ್ಥಗೊಳಿಸುವ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸುವಂತೆ ಮಹಾರಾಷ್ಟ್ರ ಸರ್ಕಾರ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಕೇಳಿಕೊಳ್ಳಲಿದೆ.

ಮುಖ್ಯಮಂತ್ರಿ ವಿಲಾಸರಾವ್ ದೇಶ್‌ಮುಖ್ ಇಂದು ಇಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

75 ವರ್ಷಗಳ ಹಿಂದೆ

ಭಾನುವಾರ, 30-7-1950

● ಕಾವೇರಿ ನದಿಯಲ್ಲಿ ಹುಚ್ಚು ಹುಚ್ಚು ಪ್ರವಾಹ


ಬೆಂಗಳೂರು, ಜುಲೈ 29– ಅನಾವೃಷ್ಟಿಯ ಮುಸುಕಿನಿಂದ ಹೊರಬಿದ್ದ ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿ ಮತ್ತು ಕಪಿಲ ನಿನ್ನೆಯಿಂದ ತಮ್ಮ ಮುಂದೆ ಅತಿವೃಷ್ಟಿಯ ತೆರೆಯನ್ನೆಳೆದು ನಿಂತಿವೆ.

ಬತ್ತಿಹೋದ ಕನ್ನಂಬಾಡಿಯಿಂದ ಉಂಟಾಗಿದ್ದ ಜನತೆಯ ಕೋಪವನ್ನು ಶಮನ ಮಾಡಲಿರಬೇಕು. ಕೃಷ್ಣರಾಜಕಟ್ಟೆಯ ಎಲ್ಲಾ ಬಾಗಿಲುಗಳನ್ನು ತೆಗೆಸಿ ಬೃಂದಾವನವನ್ನು ಮುಳುಗಿಸಿ, ದಾರಿಯುದ್ದಕ್ಕಿರುವ ಸೇತುವೆಗಳ ಮಟ್ಟಕ್ಕೆ ಹರಿಯುತ್ತಾ, ಅಲ್ಲಲ್ಲಿ ಸಂಚಾರಕ್ಕೆ ಅಡ್ಡಿ ತಂದು, ಪ್ರಾಣ ರಕ್ಷಣೆಗಾಗಿ ಓರ್ವನನ್ನು ಈಚಲು ಮರಕ್ಕೇರಿಸಿ– 1924ರ ಹುಚ್ಚು ಪ್ರವಾಹವನ್ನು ಜ್ಞಾಪಕಕ್ಕೆ ತರುತ್ತಿದೆ.

● ಆಗಸ್ಟ್ 1ರಿಂದ ಅರ್ಧ ಔನ್ಸ್ ಹೆಚ್ಚು ಆಹಾರ

ಬೆಂಗಳೂರು, ಜುಲೈ 29– ಆಗಸ್ಟ್ 1ನೇ ತಾರೀಕಿನಿಂದ ಸಂಸ್ಥಾನದ ಎಲ್ಲಾ ರೇಷನ್‌ದಾರರಿಗೂ ಅರ್ಧ ಔನ್ಸ್ ಹೆಚ್ಚಿಗೆ ಆಹಾರ ದೊರೆಯಲಿದೆ.

ಎಷ್ಟು ಕಷ್ಟವೋ ಹೋಲಿಕೆ ಎಂಬುದು!



ಅನುಸಂಧಾನ

ರವೀಂದ್ರ ಭಟ್ಟ

ಮಹಾನ್ ನಾಯಕರೊಂದಿಗೆ ತಮ್ಮ ಇಷ್ಟದ ಮುಖಂಡರನ್ನು ಹೋಲಿಸಿ ಹೊಗಳುವುದು ನಮ್ಮ ರಾಜಕೀಯ ವ್ಯಕ್ತಿಗಳಿಗೆ ಚಾಳಿಯೇ ಆಗಿಬಿಟ್ಟಿದೆ. ತಮ್ಮ ನಾಯಕರು ಇಂದ್ರ, ಚಂದ್ರ, ಮಹೇಂದ್ರ ಎಂದೆಲ್ಲ ಹೊಗಳುವುದು, ಚಾಣಕ್ಯ ಎಂದೆಲ್ಲ ಅಟ್ಟಕ್ಕೇರಿಸಿ ಆ ಮಹಾತ್ಮರಿಗೆ ಇರುವ ಘನತೆ, ಗೌರವ ಕಡಿಮೆ ಮಾಡುವವರಿಗೆ ಏನನ್ನೋಣ? ಇದನ್ನು ತಡೆಯಲು ಏನು ಮಾಡೋಣ?

ಈ ಹಿಂದೆ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಪತ್ನಿ ಅಮೃತಾ ಫಡಣವೀಸ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು 'ರಾಷ್ಟ್ರಪಿತ' ಎಂದು ಕರೆದಿದ್ದರು. ಕವಿ ಸಿದ್ಧಲಿಂಗಯ್ಯ ಅವರು ಯಡಿಯೂರಪ್ಪ ಅವರನ್ನು 'ಅಭಿನವ ಬಸವಣ್ಣ' ಎಂದು ಬಣ್ಣಿಸಿದ್ದರು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತ ತಮ್ಮ ತಂದೆ ಮಿಗಿಲು ಎಂದು ಹೇಳುವ ಮೂಲಕ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. 'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿಗೆ ಮಾಡಿದ ಕೆಲಸಗಳಿಗಿಂತ ಹೆಚ್ಚು ಕೆಲಸಗಳನ್ನು ನನ್ನ ತಂದೆ ಸಿದ್ದರಾಮಯ್ಯ ಅವರು ಮೈಸೂರಿಗೆ ಮಾಡಿದ್ದಾರೆ' ಎಂದು ಹೇಳುವ ಮೂಲಕ ಯತೀಂದ್ರ ವಿವಾದದ ಕಿಚ್ಚು ಹೊತ್ತಿಸಿದ್ದಾರೆ. ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ 'ನಾಲ್ವಡಿ ಅವರು ಬರೀ ಮೈಸೂರಿಗಷ್ಟೇ ಒಳ್ಳೆಯದು ಮಾಡಿದ್ದರು. ಸಿದ್ದರಾಮಯ್ಯ ಇಡೀ ಕರ್ನಾಟಕಕ್ಕೆ ಒಳ್ಳೆಯದು ಮಾಡಿದ್ದಾರೆ' ಎಂದು ಮತ್ತಷ್ಟು ನಗೆಪಾಟಲಿಗೆ ಈಡಾಗಿದ್ದಾರೆ. ಸಿದ್ದರಾಮಯ್ಯ ಅವರನ್ನು ದೇವರಾಜ ಅರಸು ಅವರಿಗೆ ಹೋಲಿಸುವ ಕೆಲಸವನ್ನು ಅವರ ಹಿಂಬಾಲಕರು ಬಹಳ ಕಾಲದಿಂದಲೂ ಮಾಡುತ್ತಿದ್ದರು. ಈಗ ಅವರ ಪುತ್ರ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತ ತಮ್ಮ ತಂದೆ ಮೇಲು ಎಂದು ಹೇಳಿಕೊಂಡಿದ್ದಾರೆ.

ಈ ನೆಲದ ಯಾವುದೇ ಮಹಾತ್ಮರೊಂದಿಗೆ ಯಾರನ್ನೂ ಹೋಲಿಸುವುದು ತರವಲ್ಲ. ಸಿನಿಮಾ ಕ್ಷೇತ್ರದಲ್ಲಿ ಜೂನಿಯರ್ ರಾಜ್‌ಕುಮಾರ್, ಜೂನಿಯರ್ ವಿಷ್ಣುವರ್ಧನ್ ಇದ್ದ ಹಾಗೆ ರಾಜಕೀಯದಲ್ಲಿಯೂ ಯಾರನ್ನೇ ಆಗಲಿ ಮಹಾತ್ಮರೊಂದಿಗೆ ಹೋಲಿಸಿದರೆ ಅವರು ಜೂನಿಯರ್ ಆಗಿರುತ್ತಾರೆಯೇ ವಿನಾ ಒರಿಜಿನಲ್ ಆಗುವುದಿಲ್ಲ.

ಒಂದು ಕಾಲೇಜಿನಲ್ಲಿ ಒಬ್ಬ ಹುಡುಗ ಕಿಶೋರ್ ಕುಮಾರ್ ತರಹವೇ ಹಾಡುತ್ತಿದ್ದ. ಅವನನ್ನು ಎಲ್ಲರೂ 'ಜೂನಿಯರ್ ಕಿಶೋರ್ ಕುಮಾರ್' ಎಂದೇ ಕರೆಯುತ್ತಿದ್ದರು. ಒಮ್ಮೆ ಆ ಕಾಲೇಜಿನ ವಾರ್ಷಿಕೋತ್ಸವಕ್ಕೆ ಸ್ವತಃ ಕಿಶೋರ್ ಕುಮಾರ್ ಅವರೇ ಬಂದರು. ಅವರ ಮುಂದೆ ಈತ ಹಾಡಿದ. ಅವನ ಹಾಡನ್ನು ಮೆಚ್ಚಿದ ಕಿಶೋರ್ ಕುಮಾರ್ 'ನೀನು ನನ್ನ ಹಾಗೆ ಚೆನ್ನಾಗಿ ಹಾಡುತ್ತೀಯ. ನೀನು ನನ್ನ ಹಾಗೆ ಹಾಡುವುದು ಮುಖ್ಯವಲ್ಲ. ನೀನು ನಿನ್ನ ಹಾಗೆ ನಿನ್ನದೇ ಶೈಲಿಯಲ್ಲಿ ಹಾಡಿದರೆ ಸಂಗೀತ ಕ್ಷೇತ್ರದಲ್ಲಿ ಉಳಿಯುತ್ತೀಯ. ಇಲ್ಲವಾದರೆ ಇತಿಹಾಸ ನಿನ್ನನ್ನು ಮರೆತು ಬಿಡುತ್ತದೆ. ನೀನು ಯಾವಾಗಲೂ ಜೂನಿಯರ್ ಕಿಶೋರ್ ಕುಮಾರ್ ಆಗಿಯೇ ಇರುತ್ತೀಯ. ಅನುಕರಣೆ ಬಿಡು. ಸ್ವಂತಿಕೆ ಬೆಳೆಸಿಕೊ' ಎಂದು ಹೇಳಿದ್ದರು. ಅದೇ ಮಾತನ್ನು ರಾಜಕಾರಣಿಗಳಿಗೂ ಹೇಳಬೇಕು. ಸಿದ್ದರಾಮಯ್ಯ ಸಿದ್ದರಾಮಯ್ಯ ಆಗಿರಬೇಕೇ ವಿನಾ ಅವರು ದೇವರಾಜ ಅರಸರೂ ಆಗಬೇಕಿಲ್ಲ, ನಾಲ್ವಡಿ ಕೃಷ್ಣರಾಜ ಒಡೆಯರ್ ಕೂಡ ಆಗಬೇಕಿಲ್ಲ. ಬಸವಣ್ಣ, ಬುದ್ಧ, ಅಂಬೇಡ್ಕರ್, ಗಾಂಧೀಜಿ ಮುಂತಾದ ಮಹಾತ್ಮರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಾ ಈಗಿನ ಕಾಲದ ಅಗತ್ಯಕ್ಕೆ ತಕ್ಕಂತೆ ಸೇವೆ ಸಲ್ಲಿಸಿ ತಮ್ಮದೇ ಛಾಪು ಮೂಡಿಸಬೇಕೇ ವಿನಾ ಡೂಪ್ಲಿಕೇಟ್ ಆಗಬಾರದು. ಇನ್ನು ಸಿದ್ದರಾಮಯ್ಯ ಅವರನ್ನು ನಾಲ್ವಡಿ ಅವರಿಗೆ ಹೋಲಿಸುವುದಂತೂ ಹುಚ್ಚುತನದ ಪರಮಾವಧಿ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 'ಗೃಹಜ್ಯೋತಿ' ಯೋಜನೆಯನ್ನು ಜಾರಿ ಮಾಡಿರಬಹುದು. 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಿರಬಹುದು. ಅವೆಲ್ಲ ಸರ್ಕಾರದ ಯೋಜನೆಗಳೇ ವಿನಾ ಸಿದ್ದರಾಮಯ್ಯ ಅವರ ವೈಯಕ್ತಿಕ ಯೋಜನೆಗಳಲ್ಲ. ಗೃಹಜ್ಯೋತಿ ಜಾರಿಗೊಳಿಸಿದ್ದಕ್ಕೆ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸೋಣ. ಏನೆಲ್ಲಾ ಟೀಕೆ ಟಿಪ್ಪಣಿ ಜೊತೆಗೆ, ಸಂಕಷ್ಟಗಳ ನಡುವೆ ಈ ಯೋಜನೆ ಮುಂದುವರಿಸುತ್ತಿರುವುದಕ್ಕೆ ಶಹಬ್ಬಾಸ್ ಎನ್ನೋಣ. ಹಾಗಂತ ಅವರನ್ನು 'ಮನೆ ಮನೆ ದೀಪ, ಕೃಷ್ಣರಾಜ ಭೂಪ' ಎಂದು ಕರೆಸಿಕೊಂಡ ನಾಲ್ವಡಿ ಅವರ ಜೊತೆಗೆ ಹೋಲಿಸುವುದು ತರವಲ್ಲ.

ಇಡೀ ಏಷ್ಯಾದಲ್ಲಿಯೇ ಮೊಟ್ಟಮೊದಲ ಬಾರಿಗೆ ವಿದ್ಯುತ್ ಉತ್ಪಾದನೆ ಆರಂಭವಾಗಿದ್ದು 1902ರಲ್ಲಿ, ಶಿವನಸಮುದ್ರದಲ್ಲಿ. ನಾಲ್ವಡಿ ಅವರು ತಮ್ಮ ಹನ್ನೊಂದನೇ ವರ್ಷದಲ್ಲಿ ಮೈಸೂರು ಮಹಾರಾಜರಾಗಿ ಪಟ್ಟಕ್ಕೆ ಬಂದಿದ್ದರೂ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದ್ದು 1902ರ ಆಗಸ್ಟ್ 8ರಂದು. ಅದೇ ವರ್ಷ ವಿದ್ಯುತ್ ಉತ್ಪಾದನೆಯೂ ಆರಂಭವಾಯಿತು. ಹೀಗೆ ಉತ್ಪಾದನೆಯಾದ ವಿದ್ಯುತ್ ಅನ್ನು ಅವರು ತಮ್ಮ ಮನೆಗೆ ಹಾಕಿಕೊಳ್ಳಲಿಲ್ಲ. ರಾಜ್ಯದಲ್ಲಿ ಪ್ರಥಮ ಬಾರಿಗೆ ಉತ್ಪಾದನೆಯಾದ ವಿದ್ಯುತ್ ಮೈಸೂರು ಅರಮನೆ ಬೆಳಗಿಸಲು ಬಳಕೆಯಾಗಲಿಲ್ಲ. ಬೆಂಗಳೂರು ಅರಮನೆಯೂ ಝಗಮಗಿಸಲಿಲ್ಲ. ಮೊದಲು ವಿದ್ಯುತ್ ಸರಬರಾಜಾಗಿದ್ದು ಕೋಲಾರದ ಚಿನ್ನದ ಗಣಿಗೆ. ಚಿನ್ನದ ಅದಿರು ತೆಗೆಯುವುದಕ್ಕೆ ಬಳಸಲಾಯಿತು. ನಂತರ ವಿದ್ಯುತ್ ಬೆಂಗಳೂರು ನಗರಕ್ಕೆ ಬಂತು. ಆಮೇಲಷ್ಟೆ ಅದು ಮೈಸೂರು ಅರಮನೆಗೆ ಬಂದಿದ್ದು. ಆ ನಂತರ ಹಳ್ಳಿ ಹಳ್ಳಿಗೂ ವಿದ್ಯುತ್ ದೀಪ ಬಂತು. ಅದಕ್ಕೇ ಮೈಸೂರು ರಾಜ್ಯದ ಜನರು ಕೃಷ್ಣರಾಜ ಒಡೆಯರ್ ಅವರನ್ನು 'ಮನೆ ಮನೆ ದೀಪ ಕೃಷ್ಣರಾಜ ಭೂಪ' ಎಂದು ಕರೆದರು. ಆಗಷ್ಟೇ ಪಟ್ಟಕ್ಕೆ ಏರಿ ಯೌವನದ ಹುರುಪಿನಲ್ಲಿದ್ದ ಮಹಾರಾಜ, ತನ್ನ ಅರಮನೆಗೆ ವಿದ್ಯುತ್ ದೀಪವನ್ನು ಮೊದಲು ಹಾಕಿಸಿಕೊಂಡಿದ್ದರೆ ಆಕ್ಷೇಪಿಸುವವರು ಯಾರೂ ಇರಲಿಲ್ಲ. ಆದರೆ, ನಾಲ್ವಡಿ ಅವರು ಹಾಗೆ ಮಾಡಲಿಲ್ಲ.

> ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಹೋಲಿಸುವ ಮೂಲಕ ಸಿದ್ದರಾಮಯ್ಯ ಅವರ ಘನತೆಯನ್ನು ಹೆಚ್ಚಿಸುವುದು ಸಾಧ್ಯವೆ? ಇಷ್ಟಕ್ಕೂ ಒಬ್ಬರನ್ನು ಇನ್ನೊಬ್ಬರೊಂದಿಗೆ ಯಾಕೆ ಹೋಲಿಸಬೇಕು? ಇಂಥ ಹೋಲಿಕೆಗಳಿಂದ ಹೋಲಿಕೆಗೆ ಒಳಗಾದ ವ್ಯಕ್ತಿಯ ಹಿರಿಮೆ ಕುಗ್ಗುವುದೇ ಹೊರತು, ಹೆಚ್ಚಾಗುವುದಿಲ್ಲ.

ಕನ್ನಂಬಾಡಿ ಕಟ್ಟೆಯ ನಿರ್ಮಾಣ ಕಾರ್ಯ ಆರಂಭವಾಗಿದ್ದು 1911ರಲ್ಲಿ. ಕಾಮಗಾರಿ ಪೂರ್ಣವಾಗಿದ್ದು 1931ರಲ್ಲಿ. 124 ಅಡಿ ನೀರು ಶೇಖರಿಸಿಕೊಳ್ಳಲು 130 ಅಡಿ ಎತ್ತರದ ಅಣೆಕಟ್ಟು ನಿರ್ಮಾಣ ಮಾಡಬೇಕಿತ್ತು. ಅದರ ಅಂದಾಜು ವೆಚ್ಚ ಆಗಿನ ಕಾಲಕ್ಕೆ ₹2.75 ಕೋಟಿ. ಆಗ ಮೈಸೂರು ಸಂಸ್ಥಾನದ ವಾರ್ಷಿಕ ಆದಾಯ ಇದ್ದಿದ್ದು ₹2.32 ಕೋಟಿ. ಅಂದರೆ ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣಕ್ಕೆ ಮೈಸೂರು ಮಹಾರಾಜರ ಬಳಿ ಹಣ ಇರಲಿಲ್ಲ. ಹಾಗಂತ ರಾಜ್ಯದ ಜನರಿಗೆ ಒಳ್ಳೆಯದಾಗುವ ಅಣೆಕಟ್ಟು ಯೋಜನೆಯನ್ನು ಕೈಬಿಡುವುದೂ ಸಾಧ್ಯ ಇರಲಿಲ್ಲ. ಅದಕ್ಕೆ ನಾಲ್ವಡಿ ಅವರು ಅರಮನೆಯ ರಾಜರ ಖಾಸಗಿ ಭಂಡಾರದಲ್ಲಿ ಇದ್ದ ವಜ್ರ ವೈಢೂರ್ಯ, ಚಿನ್ನದ ಆಭರಣ ಮತ್ತು ಬೆಳ್ಳಿ ನಾಣ್ಯಗಳನ್ನು ತೆಗೆದುಕೊಂಡು ಮುಂಬೈಗೆ ಹೋಗಿ ಅವನ್ನು ಮಾರಾಟ ಮಾಡಿ, ಬಂದ ಹಣವನ್ನು ಅಣೆಕಟ್ಟು ನಿರ್ಮಾಣಕ್ಕೆ ನೀಡಿದರು. ಅರಮನೆಯ ಖಾಸಗಿ ಭಂಡಾರದಲ್ಲಿ ಸುಮಾರು ನಾಲ್ಕು ಮೂಟೆ ಆಭರಣಗಳು ಇದ್ದವು. ಅದೆಲ್ಲವನ್ನೂ ಅಣೆಕಟ್ಟೆ ನಿರ್ಮಾಣಕ್ಕೆ ನೀಡಲಾಯಿತು. ರಾಜ್ಯದ ಒಳಿತಿನ ಯೋಜನೆಗೆ ಸ್ವಂತ ಹಣವನ್ನು ಹೀಗೆ ಉಪಯೋಗಿಸುವ ರಾಜಕಾರಣಿಗಳನ್ನು ಈಗ ಊಹಿಸಲು ಸಾಧ್ಯವಿದೆಯೇ? ರಾಜ್ಯದ ಬಜೆಟ್ ಗಾತ್ರಕ್ಕಿಂತ ಹೆಚ್ಚಿನ ಹಣವನ್ನು ಒಂದು ಯೋಜನೆಗೆ ವೆಚ್ಚ ಮಾಡುವ ದುಸ್ಸಾಹಸಕ್ಕೆ ಈಗ ಯಾರಾದರೂ ಇಳಿಯಬಹುದೇ?

2013ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಿದ್ದರಾಮಯ್ಯ ಮೊಟ್ಟಮೊದಲ ಸಚಿವ ಸಂಪುಟ ಸಭೆಯಲ್ಲಿಯೇ 'ಅನ್ನಭಾಗ್ಯ' ಯೋಜನೆಯನ್ನು ಪ್ರಕಟಿಸಿದರು. ಆ ಯೋಜನೆ ಈಗಲೂ ಚಾಲ್ತಿಯಲ್ಲಿದೆ. ಆದರೆ, ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣ ಮಾಡಿ ಲಕ್ಷಾಂತರ ರೈತರ ಬಾಳಿನಲ್ಲಿ ಬೆಳಕು ಮೂಡಿಸಿದ ನಾಲ್ವಡಿ ಅವರ ಜೊತೆಗೆ ಇದನ್ನು ಹೋಲಿಸಲು ಸಾಧ್ಯವಿಲ್ಲ.

ಮೈಸೂರಿಗೆ ಹಲವಾರು ಐಡೆಂಟಿಟಿಗಳಿವೆ. ಅವುಗಳಲ್ಲಿ ಮೈಸೂರು ಮಹಾರಾಜರ ಆಡಳಿತ ಕೂಡಾ ಒಂದು. ಅದಕ್ಕಾಗಿಯೇ ಮಹಾತ್ಮ ಗಾಂಧೀಜಿ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು 'ರಾಜ ಋಷಿ' ಎಂದು ಕರೆದಿದ್ದರು. ಮೈಸೂರು ರಾಜ್ಯವನ್ನೇ ಅವರು ರಾಮರಾಜ್ಯ ಎಂದು ಹೆಸರಿಸಿದ್ದರು. 'ಭಾರತದ ಎಲ್ಲ ರಾಜಮಹಾರಾಜರು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತೆಯೇ ಆಡಳಿತ ನಡೆಸಿದ್ದರೆ ಭಾರತಕ್ಕೆ ಸ್ವಾತಂತ್ರ್ಯವೇ ಬೇಕಾಗಿರಲಿಲ್ಲ' ಎಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಹೇಳಿದ್ದರು. ಅಂತಹ ಅಪರೂಪದ ಆದರ್ಶ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಮೈಸೂರಿನ ರಾಜರು ಯುದ್ಧಕ್ಕೆ ಪ್ರಸಿದ್ಧರಲ್ಲ. ಅವರು ಯುದ್ಧ ಮಾಡಿದ್ದು ಕಡಿಮೆ. ಅವರ ಗಮನ ಏನಿದ್ದರೂ ಒಳ್ಳೆಯ ಆಡಳಿತ ನೀಡುವುದಕ್ಕಷ್ಟೇ ಸೀಮಿತವಾಗಿತ್ತು. ಆಗ ಇದ್ದಿದ್ದು ಪ್ರಜಾಪ್ರಭುತ್ವ ಅಲ್ಲ. ರಾಜಪ್ರಭುತ್ವ. ಆದರೆ, ಅವರು ಪ್ರಜೆಗಳ ಹಿತಕ್ಕಾಗಿ ಆಡಳಿತ ನಡೆಸಿದರು. ಈಗ ಪ್ರಜಾಪ್ರಭುತ್ವ ಎಂದು ಹೇಳುವ ಆಡಳಿತ ವ್ಯವಸ್ಥೆ ಇದೆ. ಆದರೆ, ಪ್ರಜೆಗಳಿಗೆ ಅನುಕೂಲವಾಗುವ ಆಡಳಿತ ಮಾಡಲಾಗುತ್ತಿದೆಯೇ ಎನ್ನುವುದು ನಾವೆಲ್ಲರೂ ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿದೆ.

1881ರಲ್ಲಿ ಚಾಮರಾಜೇಂದ್ರ ಒಡೆಯರ್ ಕಾಲದಲ್ಲಿಯೇ 'ಪ್ರಜಾಪ್ರತಿನಿಧಿ ಸಭೆ' ಆರಂಭವಾಗಿತ್ತು. 1907ರಲ್ಲಿ ಕೃಷ್ಣರಾಜ ಒಡೆಯರ್ ಅವರು ನ್ಯಾಯವಿಧಾಯಕ ಸಭೆಯನ್ನು ಆರಂಭಿಸಿ, ಜನಸಾಮಾನ್ಯರೂ ಆಡಳಿತದಲ್ಲಿ ಭಾಗಿಯಾಗುವಂತೆ ಮಾಡಿದರು. 'ಪ್ರಜಾಪ್ರತಿನಿಧಿ ಸಭೆ' ಆರಂಭವಾದಾಗಿನಿಂದಲೂ ಅದರ ಕಲಾಪಗಳು ಇಂಗ್ಲಿಷ್‌ನಲ್ಲಿಯೇ ನಡೆಯುತ್ತಿದ್ದವು. ನಾಲ್ವಡಿ ಅವರು ಕಲಾಪವನ್ನು ಕನ್ನಡದಲ್ಲಿ ನಡೆಯುವಂತೆ ಮಾಡಿದರು. ಪ್ರಪಂಚದ ಮುಂದುವರಿದ ದೇಶಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ನೀಡಬೇಕು ಎಂಬ ಚಳವಳಿ ನಡೆಯುತ್ತಿದ್ದ ಕಾಲದಲ್ಲಿ, 1923ರಲ್ಲಿಯೇ ಮೈಸೂರು ರಾಜ್ಯದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ನೀಡಲಾಗಿತ್ತು. ಎಲ್ಲ ರಂಗದಲ್ಲಿಯೂ ಎಲ್ಲ ಜನಾಂಗದ ಜನರು ಇರಬೇಕು ಎಂದು ಪ್ರತಿಪಾದಿಸುತ್ತಿದ್ದ ಕೃಷ್ಣರಾಜ ಒಡೆಯರ್ ಅವರು ಹಿಂದುಳಿದ ವರ್ಗ, ದಲಿತರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಆದ್ಯತೆ ನೀಡಿದ್ದರು. ಇಡೀ ಭಾರತದಲ್ಲಿಯೇ ಮೊದಲ ಬಾರಿಗೆ ಹಿಂದುಳಿದ ವರ್ಗಗಳ ಆಯೋಗ (ಮಿಲ್ಲರ್ ಆಯೋಗ) ರಚಿಸಿದವರು ಅವರು. ಪರಿಶಿಷ್ಟರ ವಿದ್ಯಾಭ್ಯಾಸಕ್ಕೆ ಉಚಿತ ಶಿಕ್ಷಣ ವ್ಯವಸ್ಥೆ ಮಾಡಿದ್ದ ಅವರು ಪರಿಶಿಷ್ಟರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಪ್ರೋತ್ಸಾಹಧನವನ್ನೂ ನೀಡುತ್ತಿದ್ದರು. ಗಾಂಧೀಜಿ ಅವರು ಹರಿಜನೋದ್ಧಾರ ಕಾರ್ಯಕ್ರಮ ಆರಂಭಿಸುವುದಕ್ಕೆ ಮೊದಲೇ ಮೈಸೂರಿನಲ್ಲಿ ಅದು ಆರಂಭವಾಗಿತ್ತು. ಇತಿಹಾಸವನ್ನು ಅರಿತು ಮಾತನಾಡಿದರೆ, ಹೋಲಿಕೆ ಮಾಡುವಾಗ ವಿವೇಕವನ್ನು ಬಳಸಿದರೆ, ಯತೀಂದ್ರ ಮತೀಂದ್ರ ಕೂಡ ಆಗಬಹುದು.

ವಾಚಕರ ವಾಣಿ

ಪಠ್ಯದಲ್ಲಿ ಖಗೋಳ ವಿಜ್ಞಾನ ಸೇರಿಸಿ

ಪ್ರಧಾನಿ ನರೇಂದ್ರ ಮೋದಿ ಅವರು, 'ಮನದ ಮಾತು' ಮಾಸಿಕ ಕಾರ್ಯಕ್ರಮದಲ್ಲಿ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಸುರಕ್ಷಿತವಾಗಿ ಹಿಂದಿರುಗಿದ್ದನ್ನು ಶ್ಲಾಘಿಸಿದ್ದಾರೆ. ಮಕ್ಕಳಲ್ಲಿ ಬಾಹ್ಯಾಕಾಶ ಕ್ಷೇತ್ರವು ಕುತೂಹಲ ಮೂಡಿಸುತ್ತಿದೆ ಎಂದು ಹೇಳಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಜ್ಞಾನ ಪಠ್ಯದಲ್ಲಿ ಖಗೋಳ ವಿಜ್ಞಾನ ವಿಷಯವನ್ನು ಸೇರ್ಪಡೆಗೊಳಿಸಿದರೆ, ಮಕ್ಕಳಲ್ಲಿ ಮೂಲ ವಿಜ್ಞಾನ ಹಾಗೂ ಬಾಹ್ಯಾಕಾಶ ಕುರಿತು ಕುತೂಹಲ ಹೆಚ್ಚಲಿದೆ. ಭವಿಷ್ಯದಲ್ಲಿ ವಿಜ್ಞಾನಿಗಳಾಗುವ ಅವರ ಆಸೆಗೆ ದೀವಿಗೆಯಾಗಲಿದೆ.

ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ

ಮಾದಕ ವಸ್ತುಗಳಿಗೆ ಕಡಿವಾಣ ಹಾಕಿ

ಮೈಸೂರಿನಲ್ಲಿ ಮಾದಕ ವಸ್ತುಗಳ ತಯಾರಿಕಾ ಘಟಕ ಪತ್ತೆಯಾಗಿರುವುದು ಆತಂಕಕಾರಿ. ರಾಜ್ಯದ ಹಲವು ನಗರಗಳು ಮಾದಕ ವ್ಯಸನಿಗಳ ಕೇಂದ್ರಗಳಾಗುತ್ತಿರುವುದು ದುರದೃಷ್ಟಕರ. ಈ ದಂಧೆಯ ಹಿಂದೆ ವಿದೇಶಿ ಪೆಡ್ಲರ್‌ಗಳು ಮತ್ತು ಸ್ಥಳೀಯ ವಿತರಕರ ಜಾಲ ಇರುವುದು ಚಿದಂಬರ ರಹಸ್ಯವಾಗಿ ಉಳಿದಿಲ್ಲ. ಒಂದು ಕಾಲದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಹೆಸರಾಗಿದ್ದ ಮೈಸೂರು, ಧಾರವಾಡ, ಮತ್ತು ಕರಾವಳಿ ತೀರದ ಊರುಗಳಲ್ಲಿ ಈ ಜಾಲ ಸಕ್ರಿಯವಾಗಿದೆ. ಇದನ್ನು ಪತ್ತೆ ಹಚ್ಚುವಲ್ಲಿ ಪೊಲೀಸರ ವೈಫಲ್ಯ ಎದ್ದು ಕಾಣುತ್ತದೆ.

ಡಿ.ಎಂ. ನದಾಫ್, ಅಫಜಲಪುರ

ಪರಿಷತ್ತು ಬೀದಿಗೆ ಬರಬಾರದು

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಸರ್ವಾಧಿಕಾರಿ ಧೋರಣೆ ವಿರೋಧಿಸಿ ಪರಿಷತ್‌ನ ಇಬ್ಬರು ಪದಾಧಿಕಾರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಕಸಾಪದಲ್ಲಿ 2023–24ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ನಡೆಯುತ್ತಿರುವ ಪರಿಶೀಲನೆಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ. ಅಧ್ಯಕ್ಷರು 'ನಾನಾ– ನೀನಾ' ಹಟಕ್ಕೆ ಬಿದ್ದು ಕನ್ನಡಿಗರ ಸ್ವತ್ತಾದ ಕಸಾಪವನ್ನು ಕೋರ್ಟ್‌ಗೆ ಎಳೆದಾಡುವುದು ಹಾಗೂ ಪರಿಷತ್ತಿನ ಹಣವನ್ನು ದಾವೆಗಳಿಗೆ ಖರ್ಚು ಮಾಡುವುದು ಸರಿಯಲ್ಲ. ಕಸಾಪ ಸಭ್ಯರ ಸಂಸ್ಥೆ. ಹಲವರ ವಿರೋಧ ಕಟ್ಟಿಕೊಂಡು ಯಾರಾದರೂ ಏನು ಸೇವೆ ಮಾಡುವುದಿದೆ?

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಯೂರಿಯಾ ಸಮರ್ಪಕ ಬಳಕೆ ಹೇಗೆ?

ರಾಜ್ಯದಲ್ಲಿ ಯೂರಿಯಾ ರಸಗೊಬ್ಬರದ ಕೊರತೆಯ ಬಗ್ಗೆ ಪ್ರತಿದಿನ ಆಡಳಿತ ಪಕ್ಷ ಹಾಗೂ ವಿಪಕ್ಷದ ನಾಯಕರು ಪರಸ್ಪರ ಆರೋಪ– ಪ್ರತ್ಯಾರೋಪದಲ್ಲಿ ತೊಡಗುವುದು ಸಾಮಾನ್ಯವಾಗಿದೆ. ಆದರೆ, ರೈತರು ಯೂರಿಯಾವನ್ನು ಸಮರ್ಪಕವಾಗಿ ಬಳಕೆ ಮಾಡುವ ಮೂಲಕ ಕೊರತೆಯನ್ನು ತಗ್ಗಿಸಬಹುದಾಗಿದೆ. 10 ಕೆ.ಜಿ ಯೂರಿಯಾಕ್ಕೆ 100 ಕೆ.ಜಿ ತಿಪ್ಪೆಗೊಬ್ಬರ ಮಿಶ್ರ ಮಾಡಿ ಬಳಸಬಹುದು. 10 ಕೆ.ಜಿ ಯೂರಿಯಾಕ್ಕೆ 100 ಕೆ.ಜಿ ಕೆರೆಯ ಮಣ್ಣಿನ ಜೊತೆ ಬೆರೆಸಿ ಸ್ವಲ್ಪ ನೀರು ಚುಮುಕಿಸಿ ಹದ ಮಾಡಿ ಬಳಸಬಹುದು. ಅರ್ಧ ಕೆ.ಜಿ ಕೋಲ್ಟಾರ್ ಅನ್ನು ಒಂದು ಲೀಟರ್ ಸೀಮೆಎಣ್ಣೆಯಲ್ಲಿ ಕರಗಿಸಿ ಅದನ್ನು 50 ಕೆ.ಜಿ ಯೂರಿಯಾಕ್ಕೆ ಲೇಪನ ಮಾಡಿದ ನಂತರ, 15 ಕೆ.ಜಿ ಬೇವಿನ ಹಿಂಡಿ ಲೇಪಿಸಿ ಬಳಕೆ ಮಾಡಬಹುದು.

ಜೈವಿಕ ಗೊಬ್ಬರ ಬಳಸುವ ಮೂಲಕ ಶೇ 25ರಷ್ಟು ಯೂರಿಯಾ ಬಳಕೆಯನ್ನು ತಗ್ಗಿಸಬಹುದು. ನಾಟಿ ಅಥವಾ ಬಿತ್ತನೆ ಸಮಯದಲ್ಲಿ ಡಿಎಪಿ/ ಕಾಂಪ್ಲೆಕ್ಸ್ ರಸಗೊಬ್ಬರ ಬಳಸಬಹುದು. ಯೂರಿಯಾವನ್ನು ಮೇಲು ಗೊಬ್ಬರವಾಗಿ ಬಳಸಬಹುದು. ನೆಲಗಡಲೆ, ತೊಗರಿ, ದ್ವಿದಳಧಾನ್ಯ ಬೆಳೆಗಳಿಗೆ ಯೂರಿಯಾ ಕೊಡಬಾರದು. ಇದಕ್ಕೆ ಬದಲಾಗಿ ಡಿಎಪಿ ಗೊಬ್ಬರ ಬಳಸಬೇಕು. ಬೆಳೆಗಳಿಗೆ ಕೃಷಿ ತಜ್ಞರ ಶಿಫಾರಸಿಗಿಂತಲೂ ಹೆಚ್ಚಿನ ಪ್ರಮಾಣದ ಯೂರಿಯಾ ಕೊಡಬಾರದು.

ಎಚ್.ಆರ್. ಪ್ರಕಾಶ್, ಮಂಡ್ಯ

ಅತ್ತವರಿಗಷ್ಟೇ ಹಾಲು ಕುಡಿಸಬೇಡಿ

ದೇವನಹಳ್ಳಿ ತಾಲ್ಲೂಕಿನ ರೈತರ ಜಮೀನಿನ ಭೂಸ್ವಾಧೀನದ ಅಂತಿಮ ಅಧಿಸೂಚನೆಯನ್ನು ಸರ್ಕಾರ ಕೈಬಿಟ್ಟಿದೆ. ಈ ನಿರ್ಧಾರವು ನಿರ್ದಿಷ್ಟ ಹೋರಾಟಕ್ಕಷ್ಟೇ ಸೀಮಿತವಾಗಿದೆ. ಒಂದರ್ಥದಲ್ಲಿ ಇದು ಅತ್ತವರಿಗಷ್ಟೇ ಹಾಲು ಕುಡಿಸಿದಂತಾಗಿದೆ!

ರಾಜ್ಯದ ವಿವಿಧೆಡೆ ಕೈಗಾರಿಕಾ ಉದ್ದೇಶಕ್ಕೆ ಭೂಮಿ ನೀಡಲು ರೈತರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದರೂ, ಸಣ್ಣ ರೈತರ ಅಸಹಾಯಕ ಸ್ಥಿತಿಯನ್ನೇ ಬಂಡವಾಳ ಮಾಡಿಕೊಂಡಿರುವ ಸರ್ಕಾರ, ಅವರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತದ ನಿರ್ಧಾರಗಳ ಫಲವು ಕೇಳದೆ ಇರುವವರಿಗೂ ಸಿಗುವಂತಾಗಬೇಕು.

ಜಿ. ಬೈರೇಗೌಡ, ನೆಲಮಂಗಲ

ನಾಲ್ವಡಿ ಕೃಷ್ಣರಾಜರಿಗೆ ಅವರೇ ಸಾಟಿ

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರು, ತಮ್ಮ ತಂದೆಯವರ ಸಾಧನೆಯನ್ನು ಹೊಗಳುವ ಭರದಲ್ಲಿ ಮೈಸೂರಿನ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತಲೂ ಸಿದ್ದರಾಮಯ್ಯನವರ ಕೊಡುಗೆ ಹೆಚ್ಚಿದೆ ಎಂಬ ಮಾತುಗಳನ್ನಾಡಿದ್ದಾರೆ. ಇದು ಯಾರೂ ಒಪ್ಪುವಂತಹ ಮಾತಲ್ಲ. ಆಡಳಿತದಲ್ಲಾಗಲಿ, ದಾರ್ಶನಿಕತೆಯಲ್ಲಾಗಲಿ, ಅಭಿವೃದ್ಧಿ ಕಾರ್ಯದಲ್ಲಾಗಲಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಜೊತೆ ಸಮೀಕರಿಸಿ ನೋಡಬಹುದಾದ ಯಾವೊಬ್ಬ ರಾಜಕಾರಣಿಯೂ ದೇಶದಲ್ಲಿ ಇಲ್ಲ. ಅವರಿಗೆ ಅವರೇ ಸಾಟಿ.

ದರ್ಶನ್ ಚಂದ್ರ ಎಂ.ಪಿ., ಚಾಮರಾಜನಗರ

ಚುರುಮುರಿ



ಗೊಬ್ಬರದ ಗೋಳು

● ಮಣ್ಣೆ ರಾಜು

ರಸಗೊಬ್ಬರ ಸಿಗದೆ ಚಟ್ನಿಹಳ್ಳಿ ರೈತರು ಕಂಗಾಲಾಗಿ ಕುಳಿತಿದ್ದರು.

'ಗೊಬ್ಬರದ ಗೋಳು ಮುಗಿತೇನ್ರಲಾ?...' ತಿಮ್ಮಜ್ಜ ಕೋಲೂರಿಕೊಂಡು ಬಂದ.

'ಇಲ್ಲಜ್ಜ, ಕೇಂದ್ರ, ರಾಜ್ಯದವರು ಒಬ್ಬರ ಮೇಲೊಬ್ಬರು ಗೊಬ್ಬರ ಎರಚಾಡಿಕೊಳ್ತಿದ್ದಾರೆ' ಅಂದ ಶಿವಲಿಂಗ.

ಕೆಂಪೀರ ರಗ್ಗು ಹೊದ್ದುಕೊಂಡು ಬಂದ. 'ಯಾಕಲಾ ಜೂಗುರುಸ್ತಿದ್ದಿ?' ತಿಮ್ಮಜ್ಜ ಕೇಳಿದ.

'ಜ್ವರ ಕಣಜ್ಜಾ, ಅಹ್ಹಾಹ್ಹಾ...' ಗಡಗಡ ನಡುಗಿದ.

'ಸೀಮೆಗೊಬ್ಬರ ಹಾಕಿ ಬೆಳೆದ ಊಟ ತಿಂದರೆ ಇಲ್ಲದ ಕಾಯಿಲೆ ವಕ್ಕರಿಸಿಕೊಳ್ತವೆ. ಯಾರ ತಿಪ್ಪೆಯಲ್ಲೂ ಮೂರು ಮಂಕರಿ ಗೊಬ್ಬರ ಇಲ್ಲ. ನಿಮ್ಮ ವಯಸ್ಸಿನಲ್ಲಿ ನಾನು ಕೊಟ್ಟಿಗೆ ಗೊಬ್ಬರದ ಜೊತೆಗೆ ಸೊಪ್ಪು–ಸೆದೆ ಸೇರಿಸಿ ತಿಪ್ಪೆಯಲ್ಲಿ ಬಣವೆ ಗಾತ್ರದ ಗೊಬ್ಬರದ ಗುಡ್ಡೆ ಮಾಡ್ತಿದ್ದೆ' ತಿಮ್ಮಜ್ಜ ಕೊಚ್ಚಿಕೊಂಡ.

'ನಿಮ್ಮ ಕಾಲದಲ್ಲಿ ಮನೆ ತುಂಬಾ ಮಕ್ಕಳು, ಕೊಟ್ಟಿಗೆ ತುಂಬಾ ದನಕರು ಇರ್ತಿದ್ವು. ಈಗ ಆರತಿಗೊಂದು, ಕೀರುತಿಗೊಂದು ಮಕ್ಕಳು, ಡೇರಿಗೆ ಹಾಲು ಹಾಕಲು ಕೊಟ್ಟಿಗೆಗೊಂದು ಹಸು ಅಷ್ಟೇ. ಕಾಸು ಕೊಟ್ಟರೂ ಕೊಟ್ಟಿಗೆ ಗೊಬ್ಬರ ಸಿಗ್ತಿಲ್ಲ' ಮಲ್ಲಪ್ಪ ಇರೋ ವಿಚಾರ ಹೇಳಿದ.

'ವ್ಯವಸಾಯವ ಸುಲಭ ಮಾಡಿಕೊಂಡಿದ್ದೀರಿ. ಟ್ರ್ಯಾಕ್ಟರ್‌ನಲ್ಲಿ ನೆಲ ಕೆರೆದು, ಬೀಜ ಉದುರಿಸಿ, ಸೀಮೆಗೊಬ್ಬರ ಎರಚಿ ಬಂದರೆ ಮುಗಿದೋಯ್ತು, ಉಗುರುಕಣ್ಣು ಮಣ್ಣಾಗಲ್ಲ...'

'ಮನೆ ತುಂಬಾ ಜನ ಇದ್ರೇನೇ ವ್ಯವಸಾಯ. ಕಾಲೇಜು ಕಲಿಯಲು ಪಟ್ಟಣಕ್ಕೆ ಹೋಗುವ ಮಕ್ಕಳು ವಾಪಸ್ ವ್ಯವಸಾಯಕ್ಕೆ ಬರೋದಿಲ್ಲ. ನೇಗಿಲಿಗೆ ಎತ್ತು ಹೂಡಿ ದಿನವೆಲ್ಲಾ ಹೊಲ ಉಳುವ ಕಾಲವಲ್ಲ ಇದು. ವ್ಯವಸಾಯದ ಕಲ್ಚರ್, ಟೇಸ್ಟ್ ಬದಲಾಗಿದೆ. ಮಕ್ಕಳು ಜಂಕ್‌ಫುಡ್‌ಗೆ ಆಸೆ ಪಡುವಂತೆ ನಮ್ಮ ಜಮೀನುಗಳೂ ರಸಗೊಬ್ಬರದ ರುಚಿ ಕೇಳುತ್ತಿವೆ!' ಅಂದ ಸಿದ್ಧಲಿಂಗ.

'ಮಕ್ಕಳನ್ನೂ ಕೆಡಿಸಿ, ಭೂಮಿಯನ್ನೂ ಕುಲಗೆಡಿಸಿದ್ದೀರಿ, ಏನಾದ್ರೂ ಮಾಡಿಕೊಳ್ರೀ...' ಎಂದು ರೇಗಿ ತಿಮ್ಮಜ್ಜ ಹೊರಟ.

ಸಂಗತ

ಜಾತಿ ಸಮೀಕ್ಷೆ: ಸಮಾನತೆಯತ್ತ ಹೆಜ್ಜೆ...

ಜಾತಿಗಳ ಬಗ್ಗೆ ಸ್ಪಷ್ಟ ಅಂಕಿಅಂಶಗಳೇ ದೊರೆಯದೆ ಹೋದರೆ, ಜಾತಿ ಕಾರಣದಿಂದಾಗಿ ಬಾಧೆಗೆ ಒಳಗಾದವರ ನೋವಿಗೆ ಸ್ಪಂದಿಸುವುದು ಹೇಗೆ ಸಾಧ್ಯ?

● ರಾಘವೇಂದ್ರ ಕೆ. ತೊಗರ್ಸಿ

ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಮತ್ತೆ ನಡೆಸಲು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಜ್ಜಾಗುತ್ತಿದೆ. ಆ ಕೆಲಸ ಆರಂಭ ಆಗುವ ಮುನ್ನವೇ ಆಕ್ಷೇಪಗಳೂ ವ್ಯಕ್ತವಾಗುತ್ತಿವೆ. ಕೇಂದ್ರ ಸರ್ಕಾರವೇ ಜಾತಿ ಜನಗಣತಿ ಮಾಡಲು ಉದ್ದೇಶಿಸಿರುವಾಗ ರಾಜ್ಯದ ಸಮೀಕ್ಷೆಯ ಅಗತ್ಯ ಏನಿದೆ ಎನ್ನುವುದು ಆಕ್ಷೇಪಕ್ಕೆ ಕಾರಣಗಳಲ್ಲೊಂದು. ಉದ್ದೇಶಿತ ಸಮೀಕ್ಷೆ, ಜಾತಿ ಜಾತಿಗಳ ನಡುವೆ ಅನಗತ್ಯ ಬಿರುಕು ಹುಟ್ಟಿಸುತ್ತದೆ ಎಂದೂ ಕೆಲವರು ಹೇಳುತ್ತಿದ್ದಾರೆ. ಈ ಆಕ್ಷೇಪಗಳ ಜೊತೆಗೇ, ಜಾತಿಗಳ ಶಕ್ತಿಯನ್ನು ಸಾಬೀತುಪಡಿಸುವ ತಾಲೀಮು ಕೂಡ ನಡೆಯುತ್ತಿದೆ. ಸಮುದಾಯದ ಒಳಪಂಗಡಗಳನ್ನು ಉಳಿಸಿಕೊಂಡು ತಮ್ಮ ಜಾತಿಯನ್ನು ಏಕಛತ್ರಿಯಡಿ ತರುವ ನಿಟ್ಟಿನಲ್ಲಿ ಕೆಲವು ಸ್ವಾಮೀಜಿಗಳು ಪ್ರಯತ್ನ ನಡೆಸುತ್ತಿದ್ದಾರೆ.

ವಾಸ್ತವದಲ್ಲಿ, ಕೇಂದ್ರ ಸರ್ಕಾರ ಉದ್ದೇಶಿಸಿರುವ ಜನಗಣತಿಯೂ ರಾಜ್ಯ ನಡೆಸುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯೂ ಬೇರೆ ಬೇರೆ. ಮೂಲ ಸೌಕರ್ಯ ಒದಗಿಸುವ ಸರ್ಕಾರದ ಯೋಜನೆಗಳು ಇನ್ನೂ ತಲುಪದ ಅತಿ ಹಿಂದುಳಿದ ಜಾತಿ, ಬುಡಕಟ್ಟು, ಸಮುದಾಯಗಳನ್ನು ಗುರುತಿಸಿ, ಆ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ದೃಷ್ಟಿಯಲ್ಲಿ ಸಮೀಕ್ಷೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ನಡೆಸಲಿರುವ ಸಮೀಕ್ಷೆಗೆ ವಿಶೇಷ ಮಹತ್ವವಿದೆ.

ರಾಜ್ಯವೊಂದು ಸಮೀಕ್ಷೆ ಮಾಡುವುದು ಕಾನೂನಿನ ಉಲ್ಲಂಘನೆಯೂ ಅಲ್ಲ; ಕೇಂದ್ರದ ಜಾತಿಗಣತಿಯ ವಿರುದ್ಧವೂ ಆಗುವುದಿಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ ಜಾತಿ ಕುರಿತು ಅಧ್ಯಯನ, ಅಭಿವೃದ್ಧಿ, ಯೋಜನೆ ರೂಪಿಸುವ ವಿಷಯದಲ್ಲಿ ಕೇಂದ್ರದಷ್ಟೇ ಅಧಿಕಾರ ಮತ್ತು ಜವಾಬ್ದಾರಿ ರಾಜ್ಯಕ್ಕೂ ಇದೆ. ಹೀಗಿದ್ದರೂ, ಸಮೀಕ್ಷೆಯನ್ನು ವಿರೋಧಿಸುವುದು ರಾಜ್ಯದ ಕಾನೂನಾತ್ಮಕ ಹಕ್ಕನ್ನು ವಿರೋಧಿಸಿದಂತೆ ಆಗುತ್ತದೆ. ಜೊತೆಗೆ ನಿರ್ಲಕ್ಷಿತ ಸಮುದಾಯಗಳ ಬಗೆಗಿನ ಕಾಳಜಿಯನ್ನು ನಿರ್ಲಕ್ಷಿಸಿದಂತೆ ಆಗುತ್ತದೆ. ಈ ವಿರೋಧವನ್ನು, 'ಸಾಮಾಜಿಕ ನ್ಯಾಯದ ವಿರೋಧಿಗಳು, ಸಾಮಾಜಿಕ ಪರಾವಲಂಬಿ ಜೀವಿಗಳು ಮಾಡುತ್ತಿರುವ ಅಡ್ಡಿ' ಎಂದು ಅರ್ಥೈಸುವ ಪ್ರತಿರೋಧದ ವಿಮರ್ಶೆಯೂ ಮತ್ತೊಂದು ಮಗ್ಗುಲಿನಿಂದ ಕೇಳುತ್ತಿದೆ.

ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪರ ಹಾಗೂ ವಿರುದ್ಧ ಅಭಿಪ್ರಾಯಗಳ ನಡುವೆ, ಸೌಲಭ್ಯ ವಂಚಿತ ಸಮುದಾಯಗಳ ಹಿತಾಸಕ್ತಿಯ ಬಗ್ಗೆ ಯೋಚಿಸಿದಾಗ ಸಮೀಕ್ಷೆಯ ಅಗತ್ಯ ಅರಿವಾಗುತ್ತದೆ. ಸರ್ಕಾರದ ಲೆಕ್ಕಕ್ಕೇ ಸಿಗದ ಸೂಕ್ಷ್ಮ– ಅತಿಸೂಕ್ಷ್ಮ ಜಾತಿ, ಬುಡಕಟ್ಟು ಸಮುದಾಯ, ಅಲೆಮಾರಿಗಳ ಕುರಿತು ನಿಖರ ಅಂಕಿಅಂಶಗಳು ಯಾವ ವಿಶ್ವವಿದ್ಯಾಲಯ, ಆಯೋಗ, ನಿಗಮಗಳ ಬಳಿಯೂ ಇಲ್ಲ. ಭಾರತ, ಎಲ್ಲ ಜಾತಿ ಸಮುದಾಯಗಳ ದೇಶ ಎನ್ನುವುದನ್ನು ಸಂವಿಧಾನ ಸ್ಪಷ್ಟವಾಗಿ ಹೇಳಿದೆ. ಹೀಗಿರುವಾಗ, ಹಲವು ಜಾತಿಯವರು ಇರುವ ದೇಶದೊಳಗೆ ಆ ಎಲ್ಲ ಜಾತಿಗಳ ದತ್ತಾಂಶ ಇರುವುದು ಅಗತ್ಯ. ಆ ಮಾಹಿತಿ ಸಂಗ್ರಹಿಸಲು ಸಮೀಕ್ಷೆಯನ್ನು ಹೊರತುಪಡಿಸಿದ ಅನ್ಯಮಾರ್ಗ ಇಲ್ಲ.



ಉದ್ದೇಶಿತ ಸಮೀಕ್ಷೆ, ರಾಜ್ಯದ ಎಲ್ಲ ಜಾತಿ, ಬುಡಕಟ್ಟುಗಳ ಪ್ರಮಾಣ, ಲಿಂಗ, ವಯಸ್ಸು ಸೇರಿದಂತೆ ಅವರ ಶಿಕ್ಷಣ, ಉದ್ಯೋಗ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯ ವಿವರವನ್ನು ನೀಡಬೇಕು.

ಸಣ್ಣಪುಟ್ಟ ಜಾತಿ ಸಮುದಾಯಗಳು, ಸಂಖ್ಯಾಬಲ ಇಲ್ಲದ ಬುಡಕಟ್ಟು ಸಮುದಾಯಗಳು, ಧಾರ್ಮಿಕ ಅಲ್ಪಸಂಖ್ಯಾತರು, ಅರೆಅಲೆಮಾರಿಗಳು, ಭೂರಹಿತರು, ಗೇಣಿದಾರರು, ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ– ಪಂಗಡಗಳು, ಅರೆಉದ್ಯೋಗದಲ್ಲಿರುವ ಸಮುದಾಯಗಳ ಸಂಪೂರ್ಣ ಮಾಹಿತಿಯನ್ನು ಸಮೀಕ್ಷೆ ನೀಡುವಂತಾಗಬೇಕು. ಈ ಆಶಯದಲ್ಲಿ ಸಮೀಕ್ಷೆ ನಡೆಸಿದ್ದೇ ಆದರೆ, ಅದು ವಸ್ತುಸ್ಥಿತಿಯನ್ನು ಪ್ರತಿಫಲಿಸುವ ಮೊದಲ ಅಧಿಕೃತ ದಾಖಲೆಯಾಗುತ್ತದೆ. ಈ ಸಂಶೋಧನಾ ಮಾದರಿಯಲ್ಲಿಯೇ ಸಮೀಕ್ಷೆಯನ್ನು ರೂಪಿಸಬೇಕಿದೆ. ಸರ್ಕಾರ ಈ ತನಕ ಅನೇಕ ಸಮುದಾಯಗಳನ್ನು ತಲುಪಲು ಏಕೆ ಸಾಧ್ಯವಾಗಿಲ್ಲ ಎನ್ನುವುದಕ್ಕೆ ಸಮೀಕ್ಷೆ ಉತ್ತರ ನೀಡುವಂತೆ ಆಗಬೇಕು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಏಳೂವರೆ ದಶಕಗಳ ನಂತರವೂ, ಸೌಲಭ್ಯ ವಂಚಿತ ಸಮುದಾಯಗಳ ಸ್ಥಿತಿಯ ಬಗ್ಗೆ ಮರುಕಪಡುವುದಕ್ಕಿಂತ, ಅದಕ್ಕೆ ಕಾರಣ ಕಂಡುಕೊಳ್ಳಲು ಸಮೀಕ್ಷೆಯ ಅಗತ್ಯವಿದೆ. ಜಾತಿ ಅಥವಾ ಪಂಗಡಗಳ ಸಂಖ್ಯಾಬಲದ ಅನುಸಾರ ಯೋಜನೆಗಳನ್ನು ರೂಪಿಸಬೇಕಿದೆ. ಕುಲಕಸುಬು ಆಧಾರಿತ ಸಮುದಾಯಗಳಿಗೆ ಕೌಶಲ ಕಲಿಸುವ ಹಾಗೂ ಆಧುನಿಕ ಸೌಲಭ್ಯ ನೀಡುವ ಕೆಲಸವೂ ಆಗಬೇಕು ಎನ್ನುವುದಾದರೆ, ಅದಕ್ಕೆ ಕುಲಶಾಸ್ತ್ರೀಯ ಮಾದರಿಯ ಸಮೀಕ್ಷೆಯೇ ಪರಿಹಾರ. ಈ ಹಿನ್ನೆಲೆಯಲ್ಲಿ ಸಮೀಕ್ಷೆಯನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು.

ಈ ಹಿಂದೆ ಕಾಂತರಾಜ ಆಯೋಗದ ಸಮೀಕ್ಷಾ ವರದಿಯ ಲೋಪಗಳು ಈಗ ಎಚ್ಚರದ ಕಣ್ಣಾಗಬೇಕು. ಜಾತಿ ಸಮೀಕ್ಷೆಯ ಬಗ್ಗೆ ಪ್ರಶ್ನೆ, ಅನುಮಾನ ಇರುವವರು ಮಾಡಬೇಕಾದುದು, ಸಮೀಕ್ಷೆ ವಸ್ತುನಿಷ್ಠ ಮತ್ತು ಪಾರದರ್ಶಕವಾಗಿ ನಡೆಯುವಂತೆ ಸರ್ಕಾರವನ್ನು ಆಗ್ರಹಿಸುವುದು. ಸಮೀಕ್ಷೆ ವಸ್ತುನಿಷ್ಠವಾಗಿ ನಡೆದಾಗ, ಮೀಸಲು ವರ್ಗೀಕರಣಕ್ಕೂ ವೈಜ್ಞಾನಿಕ ನ್ಯಾಯಮಾರ್ಗ ಸಿಗುತ್ತದೆ. ಜಾತಿಬಾಧೆಗೆ ಒಳಗಾದವರ ಏಳಿಗೆಗೆ ಜಾತಿ ಸಮೀಕ್ಷೆ ವರವಾಗಲಿ.

ಜಾತಿ ಸಮೀಕ್ಷೆ ವಿಷಯದಲ್ಲಿ ತೆಲಂಗಾಣ ಅಪರೂಪದ ಮಾದರಿಯನ್ನು ರೂಪಿಸಿಕೊಟ್ಟಿದೆ. ದೇಶದ ಮೊದಲ ಜಾತಿ ಸಮೀಕ್ಷೆಯನ್ನು ಅಧಿಕೃತಗೊಳಿಸಿದ ರಾಜ್ಯವೂ ಅದಾಗಿದೆ. ತೆಲಂಗಾಣದಲ್ಲಿ ಆದುದು ಕರ್ನಾಟಕದಲ್ಲಿ ಏಕೆ ಸಾಧ್ಯವಿಲ್ಲ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ವಿಶ್ವ ಚೆಸ್‌ನಲ್ಲಿ ಭಾರತದ 'ಪ್ರಮೀಳೆ'ಯರ ಪ್ರಾಬಲ್ಯ

38 ವರ್ಷ ವಯಸ್ಸಿನ ಕೋನೇರು ಹಂಪಿ, 34 ವರ್ಷ ವಯಸ್ಸಿನ ದ್ರೋಣವಲ್ಲಿ ಹಾರಿಕಾ ಅವರ ಬಳಿಕವೂ ದೇಶದ ಚೆಸ್ ಭವಿಷ್ಯ ಉಜ್ವಲವಾಗಿರಲಿದೆ ಎಂಬ ಭರವಸೆಯನ್ನು ಯುವ ಆಟಗಾರ್ತಿಯರಾದ ದಿವ್ಯಾ ದೇಶಮುಖ್, ವೈಶಾಲಿ ಆರ್., ವಂತಿಕಾ ಅಗರವಾಲ್ ಅವರು ಮೂಡಿಸಿದ್ದಾರೆ. ಮಹಿಳಾ ವಿಶ್ವಕಪ್ ಗೆದ್ದ ಭಾರತದ ಮೊದಲ ಆಟಗಾರ್ತಿಯಾಗಿ ದಿವ್ಯಾ ಇತಿಹಾಸ ನಿರ್ಮಿಸಿದ್ದಾರೆ

• ನಾಗೇಶ್ ಶೆಣೈ

ಎರಡು ವರ್ಷಗಳ ಹಿಂದೆ–2023ರ ಜೂನ್‌ನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ದ್ರೋಣವಲ್ಲಿ ಹಾರಿಕಾ ಅವರು ಸುದ್ದಿಸಂಸ್ಥೆಯ ಜೊತೆ ಸಂದರ್ಶನದಲ್ಲಿ ದೇಶದ ಮಹಿಳಾ ಚೆಸ್ ಸ್ಥಿತಿಗತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಭಾರತದ ಚೆಸ್‌ನಲ್ಲಿ ಪುರುಷರ ವಿಭಾಗದ ಸಾಧನೆ ಮತ್ತು ಮಹಿಳಾ ವಿಭಾಗದ ಸಾಧನೆಯ ನಡುವೆ ದೊಡ್ಡ ಕಂದರ ಏರ್ಪಟ್ಟಿದೆ, ಈ ನಿರ್ವಾತವನ್ನು ತುಂಬಬೇಕಾಗಿದೆ ಎಂದಿದ್ದರು. ಯುವತಾರೆಗಳಾದ ಅರ್ಜುನ್ ಇರಿಗೇಶಿ, ಪ್ರಜ್ಞಾನಂದ ರಮೇಶಬಾಬು, ಗುಕೇಶ್ ದೊಮ್ಮರಾಜು ಅವರು ಓಪನ್ ವಿಭಾಗದಲ್ಲಿ ದೊಡ್ಡ ಸಾಧನೆಗಳಿಂದ ವಿಶ್ವದ ಗಮನಸೆಳೆದಿದ್ದರು. ಮಹಿಳಾ ವಿಭಾಗದಲ್ಲಿ ಆ ಮಟ್ಟದ ಯುವ ಆಟಗಾರ್ತಿಯರು ಮೂಡಿಬರುತ್ತಿಲ್ಲ ಎಂಬುದು ಅವರ ಹೇಳಿಕೆಯ ಮರ್ಮವಾಗಿತ್ತು.

ಆದರೆ, ಈ ಅಲ್ಪ ಅಂತರದಲ್ಲೇ ಹಾರಿಕಾ ಅವರ ಆತಂಕ ದೂರಮಾಡುವ ರೀತಿಯಲ್ಲಿ ಯುವ ಆಟಗಾರ್ತಿಯರು ಪ್ರವರ್ಧಮಾನಕ್ಕೆ ಬಂದಿದ್ದಾರೆ, ಪ್ರಮುಖ ಟೂರ್ನಿಗಳಲ್ಲಿ ಮಿಂಚುತ್ತಿದ್ದಾರೆ. ವೈಶಾಲಿ ರಮೇಶಬಾಬು (ಪ್ರಜ್ಞಾನಂದ ಅವರ ಅಕ್ಕ), ದಿವ್ಯಾ ದೇಶಮುಖ್, ವಂತಿಕಾ ಅಗರವಾಲ್, ಸವಿತಾಶ್ರೀ ಮೊದಲಾದ ಆಟಗಾರ್ತಿಯರು ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ.


ವಂತಿಕಾ ಅಗರವಾಲ್

ಜಾರ್ಜಿಯಾದ ಬಟುಮಿಯಲ್ಲಿ ನಡೆದ ವಿಶ್ವಕಪ್‌ನಲ್ಲಿ ದಿವ್ಯಾ ಅವರು ಚಾಂಪಿಯನ್ ಕಿರೀಟ ಧರಿಸಿರುವುದು ಮಹಿಳಾ ವಿಭಾಗದಲ್ಲೂ ಭಾರತ ಪ್ರಬಲವಾಗುತ್ತಿದೆ ಎನ್ನುವುದನ್ನು ವಿಶ್ವ ಒಪ್ಪಿಕೊಳ್ಳುವಂತಾಗಿದೆ. ಚೀನಾದ ಆಟಗಾರ್ತಿಯರು ಸೆಮಿಫೈನಲ್‌ನಲ್ಲಿ ಹೊರಬಿದ್ದಾಗಲೇ ಭಾರತಕ್ಕೆ ಈ ಪ್ರತಿಷ್ಠಿತ ಕಿರೀಟ ಖಚಿತವಾಗಿತ್ತು.

2022ರ ಮಹಾಬಲಿಪುರಂ ಒಲಿಂಪಿಯಾಡ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತ ಮಹಿಳೆಯರ ತಂಡ, ಎರಡು ವರ್ಷಗಳ ನಂತರ ಹಂಗರಿಯ ಬುಡಾಪೆಸ್ಟ್ ಒಲಿಂಪಿಯಾಡ್‌ನಲ್ಲಿ ಅದನ್ನು ಚಿನ್ನಕ್ಕೆ ಪರಿವರ್ತಿಸಿತು. ಓಪನ್ ವಿಭಾಗದಲ್ಲೂ ಭಾರತ ಚಾಂಪಿಯನ್ ಆಗಿದ್ದು ಚೆಸ್ ಜಗತ್ತು ಭಾರತದತ್ತ ಗಮನಿಸುವಂತೆ ಮಾಡಿತು.

ಗಮನಾರ್ಹ ಎಂದರೆ, ಮಹಿಳಾ ತಂಡದ ಯಶಸ್ಸಿನಲ್ಲಿ ಯುವ ಆಟಗಾರ್ತಿಯರ ಪಾತ್ರ ನಿರ್ಣಾಯಕವಾಗಿತ್ತು. ನಾಗ್ಪುರದ ದಿವ್ಯಾ ದೇಶಮುಖ್, ನೋಯ್ಡಾದ ವಂತಿಕಾ ಅಗರವಾಲ್ ಅವರು ಒಂದೂ ಪಂದ್ಯ ಸೋಲಲಿಲ್ಲ. ಮೊದಲ ಬಾರಿ ಭಾರತ ಚಿನ್ನ ಗೆಲ್ಲಲು ಇವರ ಆಟವೇ ನಿರ್ಣಾಯಕವಾಯಿತು. ಇಬ್ಬರೂ ತಮ್ಮ ಅಮೋಘ ಆಟಕ್ಕಾಗಿ ವೈಯಕ್ತಿಕ ಚಿನ್ನದ ಪದಕಗಳನ್ನು (ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಬೋರ್ಡ್) ಗೆದ್ದರು. ದಿವ್ಯಾ 11 ಸುತ್ತುಗಳಿಂದ 9.5 ಅಂಕ ಗಳಿಸಿದ್ದು ಅಮೋಘ ಸಾಧನೆ. 9 ಪಂದ್ಯಗಳನ್ನು ಆಡಿದ ವಂತಿಕಾ 7.5 ಅಂಕ ಕಲೆಹಾಕಿದ್ದು ಕಡಿಮೆಯೇನೂ ಅಲ್ಲ. ಹಾರಿಕಾ, ವೈಶಾಲಿ ಅವರು ಕೆಲವು ಪಂದ್ಯಗಳಲ್ಲಿ ಹಿನ್ನಡೆ ಕಂಡರೂ ಅದನ್ನು ದಿವ್ಯಾ ಮತ್ತು ವಂತಿಕಾ ಸರಿದೂಗಿಸಿದ್ದರು. ಅನುಭವಿ ಆಟಗಾರ್ತಿ ಹಂಪಿ ಆ ಒಲಿಂಪಿಯಾಡ್‌ನಲ್ಲಿ ಆಡಿರಲಿಲ್ಲ.


ಹಾರಿಕಾ

23 ವರ್ಷ ವಯಸ್ಸಿನ ವಂತಿಕಾ 2023ರಲ್ಲಿ ಮೆನೋರ್ಕಾ (ಸ್ಪೇನ್) ಟೂರ್ನಿ, ನಾರ್ವೆಯ ಟೂರ್ನಿಗಳಲ್ಲಿ ವಿಜೇತರಾಗಿ ಅಷ್ಟರಲ್ಲೇ ಛಾಪು ಮೂಡಿಸಿದ್ದರು.

24 ವರ್ಷ ವಯಸ್ಸಿನ ವೈಶಾಲಿ ಅವರು ಭಾರತದ ಗ್ರ್ಯಾಂಡ್‌ಮಾಸ್ಟರ್ ಆದ ಮೂರನೇ ಆಟಗಾರ್ತಿ ಎನಿಸಿದರು. 2024ರ ಮಹಿಳಾ ಗ್ರ್ಯಾಂಡ್ ಸ್ವಿಸ್ ಟೂರ್ ಚಾಂಪಿಯನ್ ಆಗುವ ಮೂಲಕ ಅವರು ಎಂಟು ಮಂದಿಗಷ್ಟೇ ಅವಕಾಶವಿರುವ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲೂ ಆಡಿದ್ದರು. 2024ರ ವಿಶ್ವ ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕವನ್ನೂ ಗೆದ್ದುಕೊಂಡಿದ್ದರು. ಬಟುಮಿ ವಿಶ್ವಕಪ್‌ನಲ್ಲೂ ಅವರು ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದರು.

ಈಗ ದಿವ್ಯಾ ದೇಶಮುಖ್ ವಿಶ್ವಕಪ್ ಚಾಂಪಿಯನ್ ಆಗುವ ಜೊತೆಯಲ್ಲೇ ದೇಶದ 88ನೇ ಗ್ರ್ಯಾಂಡ್‌ಮಾಸ್ಟರ್ ಹಾಗೂ ಈ ಬಿರುದು ಪಡೆದ ದೇಶದ ನಾಲ್ಕನೇ ಆಟಗಾರ್ತಿಯಾಗಿದ್ದಾರೆ.

ಹಾಲಿ ವಿಶ್ವಕಪ್‌ನಲ್ಲೂ ಭಾರತದ ಆಟಗಾರ್ತಿಯರ ಆಟ ಮೆಚ್ಚುವಂತೆ ಇತ್ತು. 19 ವರ್ಷ ವಯಸ್ಸಿನ ದಿವ್ಯಾ ಜೊತೆ 38ರ ವಯಸ್ಸಿನಲ್ಲೂ ಹಂಪಿ ಫೈನಲ್ ತಲುಪಿದರು. ಈ ಹಿಂದೆ ಭಾರತದ ಯಾವುದೇ ಆಟಗಾರ್ತಿ ಈ ಹಂತ ತಲುಪಿರಲಿಲ್ಲ.


ವೈಶಾಲಿ ಆರ್.

ವಂತಿಕಾ ಅಗರವಾಲ್ ಮೂರನೇ ಸುತ್ತಿನಲ್ಲಿ ಹೊರಬೀಳುವ ಮೊದಲು ತಮಗಿಂತ ಮೇಲಿನ ಕ್ರಮಾಂಕದ ಆಟಗಾರ್ತಿಯರನ್ನು ಮಣಿಸಿದ್ದರು. ಮಾಜಿ ವಿಶ್ವ ಚಾಂಪಿಯನ್ ಅನ್ನಾ ಉಶೇನಿನಾ (ಉಕ್ರೇನ್) ಅವರನ್ನು ಸೋಲಿಸಿದ್ದು, ಇದರಲ್ಲಿ ಗಮನಾರ್ಹ. ಅವರು ಮೂರನೇ ಸುತ್ತಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ಹಾಗೂ ಮೂರು ಬಾರಿಯ ವಿಶ್ವ ಬ್ಲಿಟ್ಜ್ ಚಾಂಪಿಯನ್ ಕ್ಯಾತರಿನಾ ಲಾಗ್ನೊ (ರಷ್ಯಾ) ಅವರನ್ನು ಮೊದಲ ಕ್ಲಾಸಿಕಲ್ ಆಟದಲ್ಲಿ ಸೋಲಿಸಿದ್ದು ಟೂರ್ನಿಯ ಅನಿರೀಕ್ಷಿತಗಳಲ್ಲಿ ಒಂದೆನಿಸಿತ್ತು. ಆದರೆ ಎರಡನೇ ಆಟ ಮತ್ತು ಟೈಬ್ರೇಕರ್‌ನಲ್ಲಿ ಸೋತರು.

ದಿವ್ಯಾ ಅವರಂತೂ ವಿಶ್ವಕಪ್‌ನಲ್ಲಿ 'ಜೈಂಟ್ ಕಿಲ್ಲರ್' ಎನಿಸಿದರು. ತಮಗಿಂತ ಪ್ರಬಲ ಕ್ರಮಾಂಕದ ಆಟಗಾರ್ತಿಯರನ್ನು ಮಣಿಸಿ ಹಂಪಿ ಅವರಿಗಿಂತ ಮೊದಲೇ ಫೈನಲ್‌ಗೇರಿದರು. ಅವರು ಫೈನಲ್‌ಗೇರುವ ಹಾದಿಯಲ್ಲಿ ಮಾಜಿ ವಿಶ್ವ ಚಾಂಪಿಯನ್ ತಾನ್ ಝೊಂಗ್‌ಯಿ (ಸೆಮಿಫೈನಲ್), ಹಾರಿಕಾ (ಕ್ವಾರ್ಟರ್‌ಫೈನಲ್), ಚೀನಾದ ಝು ಜಿನೆರ್ (ಪ್ರೀಕ್ವಾರ್ಟರ್‌ಫೈನಲ್) ಅವರನ್ನು ಮಣಿಸಿದ್ದರು.

2026ರ ಕ್ಯಾಂಡಿಡೇಟ್ಸ್ ಟೂರ್ನಿಗೆ ಹಂಪಿ ಮತ್ತು ದಿವ್ಯಾ ಅರ್ಹತೆ ಪಡೆದಿದ್ದಾರೆ. ಹೀಗಾಗಿ ನಿರೀಕ್ಷೆಗಳು ಗರಿಗೆದರಿವೆ. ಭಾರತದ ಇತರ ಆಟಗಾರ್ತಿಯರಿಗೂ ಎಂಟು ಮಂದಿ ಮಾತ್ರ ಆಡುವ ಈ ಟೂರ್ನಿಯಲ್ಲಿ ಸ್ಥಾನ ಪಡೆಯಲು ಅವಕಾಶವಿದೆ.

ಹಂಪಿ ಯಶಸ್ಸಿನ ಓಟ

ಯುವತಾರೆಗಳ ನಡುವೆ ಹಿರಿಯ ಆಟಗಾರ್ತಿ ಹಂಪಿ ಅವರ ಸಾಧನೆ ಮುಂದುವರಿದೇ ಇದೆ. ಮಹಿಳಾ ವಿಶ್ವ ಕಪ್ ಮತ್ತು ವಿಶ್ವ ಚಾಂಪಿಯನ್ ಹೊರತುಪಡಿಸಿ ಉಳಿದೆಲ್ಲಾ ಪ್ರಮುಖ ಪ್ರಶಸ್ತಿಗಳನ್ನು ಅವರು ಗೆದ್ದುಕೊಂಡಿದ್ದಾರೆ. ಅವರು ಹಾಲಿ ವಿಶ್ವ ರ್‍ಯಾಪಿಡ್ ಚಾಂಪಿಯನ್ ಸಹ. ವಿಶ್ವಕಪ್ ಕೂಡ ಹಂಪಿ ಅವರಿಗೆ ಸ್ವಲ್ಪದರಲ್ಲೇ ಕೈತಪ್ಪಿದೆ.

2002ರಲ್ಲಿ ಅವರು ದೇಶದ ಏಳನೇ ಗ್ರ್ಯಾಂಡ್‌ಮಾಸ್ಟರ್ ಆಗಿದ್ದರು. ಆಂಧ್ರಪ್ರದೇಶದ ಗುಡಿವಾಡದ ಆಟಗಾರ್ತಿ ಭಾರತದ ಮೊದಲ ಮಹಿಳಾ ದಿಗ್ಗಜ ಆಟಗಾರ್ತಿಯಾಗಿ ಗುರುತಿಸಿಕೊಂಡವರು.

'ಜೆನ್ ಝೀ' ಯುಗದ ನವತಾರೆ ದಿವ್ಯಾ

• ಗಿರೀಶ ದೊಡ್ಡಮನಿ

ಅಪ್ಪ, ಅಮ್ಮ ಇಬ್ಬರೂ ವೈದ್ಯರು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ಶೈಕ್ಷಣಿಕವಾಗಿ ಉನ್ನತ ಸಾಧನೆ ಮಾಡಿದವರು. ಕ್ರೀಡೆಗಳನ್ನು ಹವ್ಯಾಸಕ್ಕಾಗಿಯಷ್ಟೇ ಆಡಿದವರು. ಆದರೆ, ಅವರ ಮಗಳನ್ನು ನಾಲ್ಕನೆಯ ವಯಸ್ಸಿಗೇ ಚೆಸ್ ಆಕರ್ಷಿಸಿತು. ಆ ಬಾಲೆಯ ಪುಟ್ಟ ಕೈಬೆರಳುಗಳು ಮತ್ತು ಮಸ್ತಿಷ್ಕದ ನಡುವಿನ ಜೊತೆಯಾಟ ಆಗಲೇ ಚುರುಕಾಗಿತ್ತು. ಚೆಸ್ ಎಂದರೆ 'ಬುದ್ಧಿವಂತರ ಆಟ' ಮತ್ತು 'ವಿದ್ಯಾಭ್ಯಾಸಕ್ಕೂ ಪೂರಕ' ಆಗಿರುವುದರಿಂದ ವೈದ್ಯ ದಂಪತಿ ತಮ್ಮ ಮಗಳ ಹವ್ಯಾಸಕ್ಕೆ ಪ್ರೋತ್ಸಾಹದ ನೀರೆರೆದರು. ಒಂದೊಂದೇ ಸಾಧನೆ ಮಾಡುತ್ತ ನಡೆದ ಮಗಳ ಸಾಮರ್ಥ್ಯ ಮನಗಂಡ ಅವರು ಆಕೆಯನ್ನು ವೃತ್ತಿಪರ ಚೆಸ್ ಆಟಗಾರ್ತಿಯನ್ನಾಗಿ ರೂಪಿಸಲು ನಿರ್ಧರಿಸಿದರು. ಅವರ ಅಂದಿನ ತೀರ್ಮಾನಕ್ಕೆ ಪ್ರತಿಫಲವಾಗಿ ವಿಶ್ವಕಪ್ ಒಲಿದಿದೆ.

ಆ ಬಾಲೆಯೇ ದಿವ್ಯಾ ದೇಶಮುಖ್. ಮಹಾರಾಷ್ಟ್ರದ ನಾಗ್ಪುರದ ನಮ್ರತಾ ದೇಶಮುಖ್ ಮತ್ತು ಜಿತೇಂದ್ರ ದೇಶಮುಖ್ ದಂಪತಿಯ ಪುತ್ರಿ. ಏಳು ವರ್ಷದವಳಾಗಿದ್ದಾಗಲೇ ರಾಷ್ಟ್ರೀಯ ಚಾಂಪಿಯನ್ ಆಗಿದ್ದು ದಿವ್ಯಾ ಜೀವನದ ಮಹತ್ವದ ತಿರುವು. ಶ್ರೀನಾಥ್ ನಾರಾಯಣನ್ ಅವರಿಂದ ತರಬೇತಿ ಪಡೆಯುತ್ತ ಬೆಳೆದ ದಿವ್ಯಾ ಡರ್ಬನ್‌ನಲ್ಲಿ ನಡೆದ 10 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್ ಕಿರೀಟ ಕೂಡ ತಮ್ಮದಾಗಿಸಿಕೊಂಡವರು.

ಇತ್ತ ತಮಿಳುನಾಡಿನಲ್ಲಿ ಹದಿಹರೆಯದ ಚೆಸ್ ಆಟಗಾರರು ಪ್ರಖರವಾಗಿ ಬೆಳಗುತ್ತಿದ್ದರೆ, ಅತ್ತ ಮಹಾರಾಷ್ಟ್ರದ ಹೆಸರು ಕೂಡ ಮಿಂಚುವಂತೆ ಮಾಡಿದವರು ದಿವ್ಯಾ. 'ಜನರೇಷನ್ ಝೀ' ಎಂದರೆ, ಇಂದಿನ ನವಪೀಳಿಗೆಯ ಹುಡುಗ, ಹುಡುಗಿಯರದ್ದು ವಿಭಿನ್ನ ಜೀವನಶೈಲಿ. ಎಲ್ಲ ಕೆಲಸಗಳಲ್ಲಿಯೂ ವೇಗ ಮತ್ತು ಆಕ್ರಮಣಶೀಲತೆಯನ್ನು ಇಷ್ಟಪಡುವವರೇ ಹೆಚ್ಚು. ದಿವ್ಯಾ ಕೂಡ ಆರಂಭದಲ್ಲಿ ಹಾಗೆಯೇ ಇದ್ದರು. ಚೆಸ್ ಪ್ರೀತಿ ಹೆಚ್ಚಾದಂತೆ ಪ್ರಬುದ್ಧರಾಗಿ ಬೆಳೆದರು. 19ನೇ ವಯಸ್ಸಿಗೆ ಮಹಿಳೆಯರ ಫಿಡೆ ಚೆಸ್ ವಿಶ್ವಕಪ್ ಚಾಂಪಿಯನ್ ಆದರು.

ಬಟುಮಿಯಲ್ಲಿ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ ಅವರ ಗೆಲುವಿನ ಹಾದಿ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಚೆಸ್ ಕ್ರೀಡೆಯಲ್ಲಿ ಅನುಭವಿಯಾದಷ್ಟೂ ಬುದ್ಧಿಮತ್ತೆ ಮತ್ತು ಕೌಶಲ ಪಕ್ವವಾಗುತ್ತದೆ. ಚುರುಕುತನ ದುಪ್ಪಟ್ಟಾಗುತ್ತದೆ. ತಾಳ್ಮೆ ಮತ್ತು ಆಕ್ರಮಣಶೀಲ ನಡೆಗಳನ್ನು ಪ್ರಯೋಗಿಸುವ ಔಚಿತ್ಯಗಳು ಕರಗತವಾಗುತ್ತವೆ. ಈ ಎಲ್ಲದರಲ್ಲೂ ಕೋನೇರು ಹಂಪಿ ಅವರದ್ದು ಉತ್ಕೃಷ್ಟ ಆಟ. ಅವರು ದಶಕಗಳಿಂದ ಈ ಆಟದಲ್ಲಿ ಹೆಸರು ಮಾಡಿದವರು. ಆಂಧ್ರಪ್ರದೇಶದ ಹಂಪಿ ಅವರು 2002ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಆದಾಗ ದಿವ್ಯಾ ಇನ್ನೂ ಜನಿಸಿರಲೇ ಇಲ್ಲ. ತಾಳ್ಮೆಯೇ ಮೂರ್ತಿವೆತ್ತಂತೆ ಇರುವ ಹಂಪಿ ಎದುರಿನ ಫೈನಲ್‌ನಲ್ಲಿ ಎರಡು ಕ್ಲಾಸಿಕಲ್ ಪಂದ್ಯಗಳನ್ನು ಸಮಬಲಗೊಳಿಸಿಕೊಂಡಿದ್ದೇ ದಿವ್ಯಾ ಅವರ ಅಮೋಘ ಸಾಧನೆ. ಟೈಬ್ರೇಕರ್‌ನಲ್ಲಿಯೂ ಮೇಲುಗೈ ಸಾಧಿಸಿದ್ದು ಅಸಾಮಾನ್ಯ ಸಾಧನೆ.

ಈ ವಿಶ್ವಕಪ್ ಜೊತೆಗೆ ದಿವ್ಯಾ ಅವರು ಗ್ರ್ಯಾಂಡ್‌ಮಾಸ್ಟರ್ ಗೌರವವನ್ನೂ ಗಿಟ್ಟಿಸಿದ್ದಾರೆ. ಮುಂಬರುವ ಕ್ಯಾಂಡಿಡೇಟ್ ಚೆಸ್‌ನಲ್ಲಿಯೂ ಆಡಲಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಭಾರತದ ಮಹಿಳಾ ಚೆಸ್ ರಂಗದಲ್ಲಿ ಹಂಪಿ, ಹಾರಿಕಾ ಮತ್ತಿತರರು ತಮ್ಮ ವೃತ್ತಿಜೀವನದ ಸಂಧ್ಯಾಕಾಲಕ್ಕೆ ಸರಿಯುತ್ತಿರುವ ಹೊತ್ತಿನಲ್ಲಿ ದಿವ್ಯಾ ಹೊರಹೊಮ್ಮಿರುವುದು ಹೊಸ ಭರವಸೆ ಮೂಡಿಸಿದೆ.



ರಾಷ್ಟ್ರೀಯ

ಮೇಧಾ ಪಾಟ್ಕರ್ ವಿರುದ್ಧದ ಶಿಕ್ಷೆ ಎತ್ತಿಹಿಡಿದ ಹೈಕೋರ್ಟ್


ಮೇಧಾ ಪಾಟ್ಕರ್

ನವದೆಹಲಿ (ಪಿಟಿಐ): ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅವರಿಗೆ ಮಾನಹಾನಿ ಪ್ರಕರಣದಲ್ಲಿ ವಿಧಿಸಿದ್ದ ಶಿಕ್ಷೆಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ಎತ್ತಿಹಿಡಿದಿದೆ.

ನ್ಯಾಯಮೂರ್ತಿ ಶಾಲಿಂದರ್ ಕೌರ್ ಅವರು, 'ವಿಚಾರಣಾ ನ್ಯಾಯಾಲಯದ ತೀರ್ಪಿನಲ್ಲಿ ಯಾವುದೇ ದೋಷಗಳು ಕಂಡು ಬರುತ್ತಿಲ್ಲ. ಸಾಕ್ಷ್ಯಗಳನ್ನು ಪರಿಗಣಿಸಿ, ಕಾನೂನನ್ನು ಅನ್ವಯಿಸಿ ಅಪರಾಧ ನಿರ್ಣಯ ಮಾಡಲಾಗಿದೆ. ಹೀಗಾಗಿ ಹೈಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯ ಇಲ್ಲ' ಎಂದು ಹೇಳಿದರು.

ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು 23 ವರ್ಷಗಳ ಹಿಂದೆ ಮೇಧಾ ಅವರ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಿದ್ದರು.

'ಉತ್ತಮ ವರ್ತನೆ' ಆಧಾರದಲ್ಲಿ ಮೇಧಾ ಅವರನ್ನು 'ಪ್ರೊಬೇಷನ್' ಅವಧಿಯಲ್ಲಿ ಇರಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯದ ಷರತ್ತುಗಳನ್ನು ಹೈಕೋರ್ಟ್ ಮಾರ್ಪಡಿಸಿದೆ. ಪ್ರತಿ ಮೂರು ತಿಂಗಳಿಗೆ ಒಮ್ಮೆ ವಿಚಾರಣಾ ನ್ಯಾಯಾಲಯದ ಎದುರು ದೈಹಿಕವಾಗಿ ಅಥವಾ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗುವಂತೆ ಸೂಚಿಸಿದೆ.

19 ವರ್ಷಗಳ ಬಳಿಕ ಮೂವರು ಅಪರಾಧಿಗಳ ಖುಲಾಸೆ



ಅಹಮದಾಬಾದ್: ಗೋಧ್ರಾ ಗಲಭೆ ಪ್ರಕರಣದಲ್ಲಿ 5 ವರ್ಷ ಜೈಲುಶಿಕ್ಷೆಗೆ ಒಳಗಾಗಿದ್ದ ಮೂವರು ಅಪರಾಧಿಗಳನ್ನು ಗುಜರಾತ್ ಹೈಕೋರ್ಟ್ ಖುಲಾಸೆಗೊಳಿಸಿದೆ.

ವಿಚಾರಣಾ ನ್ಯಾಯಾಲಯವು 'ಸಾಕ್ಷಿಗಳನ್ನು ಪರಿಗಣಿಸುವಲ್ಲಿ ತಪ್ಪು ಮಾಡಿದೆ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಕೆಳ ನ್ಯಾಯಾಲಯದಿಂದ ಶಿಕ್ಷೆ ಪ್ರಕಟಗೊಂಡ 19 ವರ್ಷಗಳ ಬಳಿಕ ತೀರ್ಪು ನೀಡಿದೆ.

'ವಿಶ್ವಾಸಾರ್ಹ ಹಾಗೂ ದೃಢೀಕರಿಸುವ ಪುರಾವೆ ಆಧರಿಸಿ ಶಿಕ್ಷೆಯನ್ನು ಪ್ರಕಟಿಸಿಲ್ಲ. ವಿಚಾರಣೆ ವೇಳೆ ಅಪರಾಧಿಗಳ ಗುರುತು ಕೂಡ ಸಾಬೀತಾಗಿಲ್ಲ. ಕಾನೂನಿಗೆ ವಿರುದ್ಧವಾಗಿ ಅಪರಾಧಿಗಳು ಒಂದೆಡೆ ಸೇರಿದ್ದರೆ ಎಂಬುದು ಕೂಡ ಸಾಬೀತಾಗಿಲ್ಲ. ಅವರೆಲ್ಲರೂ ಬೆಂಕಿ ಹಚ್ಚಿ, ಗಲಭೆ ನಡೆಸುವ ಉದ್ದೇಶ ಹೊಂದಿದ್ದರೆ ಎಂಬುದನ್ನು ಕೂಡ ಸಾಬೀತು ಪಡಿಸಿಲ್ಲ. ಖಾಸಗಿ ಆಸ್ತಿಗಳಿಗೆ ಬೆಂಕಿ ಹಚ್ಚಿ, ನಾಶಪಡಿಸುವ ಗುರಿ ಹೊಂದಿದ್ದರೆ ಎಂಬುದನ್ನೂ ವಿಚಾರಣೆ ವೇಳೆ ದೃಢಪಡಿಸಿಲ್ಲ' ಎಂದು ನ್ಯಾಯಮೂರ್ತಿ ಗೀತಾ ಗೋಪಿ ಪ್ರಕಟಿಸಿದ ತೀರ್ಪಿನಲ್ಲಿ ತಿಳಿಸಿದ್ದಾರೆ.

ಗೋಧ್ರಾದಲ್ಲಿ 59 ಮಂದಿ ಕರಸೇವಕರನ್ನು ಬೆಂಕಿ ಹಚ್ಚಿ ಸುಟ್ಟುಹಾಕಿದ ಬಳಿಕ ಆನಂದ್ ಜಿಲ್ಲೆಯ ಲೋಟಿಯಾ ಬಗೋದ್‌ನಲ್ಲಿ 2002ರ ಮಾರ್ಚ್ 1ರಂದು ಶಸ್ತ್ರಸಜ್ಜಿತ 9 ಜನರ ಗುಂಪು ಬೆಂಕಿ ಹಚ್ಚಿದ ಆರೋಪಕ್ಕೆ ಗುರಿಯಾಗಿದ್ದರು.

ಮೇಘಸ್ಫೋಟ: ಐವರ ಸಾವು


ಹಿಮಾಚಲ ಪ್ರದೇಶದ ಮಂಡಿ ಪಟ್ಟಣದಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿ ಮಂಗಳವಾರ ರಕ್ಷಣಾ ಕಾರ್ಯ ನಡೆಸಿದರು –ಪಿಟಿಐ ಚಿತ್ರ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಮಂಡಿ ಪಟ್ಟಣದಲ್ಲಿ ಸೋಮವಾರ ರಾತ್ರಿ ಸಂಭವಿಸಿದ ಮೇಘಸ್ಫೋಟದಿಂದ ಪ್ರವಾಹ ಉಂಟಾಗಿದ್ದು, ಐವರು ಮೃತಪಟ್ಟಿದ್ದಾರೆ.

ಮಂಡಿ ಪ್ರದೇಶದಲ್ಲಿ ಸೋಮವಾರ ಸಂಜೆ 19.8 ಸೆಂ.ಮೀ. ಮಳೆಯಾಗಿದೆ. ನಗರದ ಸುಕತಿ ನಾಲೆಯು (ಚರಂಡಿ) ಸುಮಾರು ಐದು ಕಿ.ಮೀ. ವ್ಯಾಪ್ತಿಯ ಪ್ರದೇಶಗಳಲ್ಲಿ ಅವಶೇಷಗಳ ಗುಡ್ಡಗಳನ್ನೇ ಸೃಷ್ಟಿಸಿದೆ. ಜೈಲ್ ರಸ್ತೆ, ಸೈನಿ ಮೊಹಲ್ಲಾ ಮತ್ತು ವಲಯ ಆಸ್ಪತ್ರೆ ಪ್ರದೇಶದ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದರು. ಘಟನೆಯಲ್ಲಿ ಮಹಿಳೆಯೊಬ್ಬರು ನಾಪತ್ತೆಯಾಗಿದ್ದಾರೆ. 20ಕ್ಕೂ ಹೆಚ್ಚು ವಾಹನಗಳು ಮಣ್ಣಿನಲ್ಲಿ ಮುಚ್ಚಿಹೋಗಿದ್ದು, ಅನೇಕ ಮನೆಗಳಿಗೆ ನೀರು ನುಗ್ಗಿದೆ. 15–20 ಮಂದಿಯನ್ನು ರಕ್ಷಿಸಲಾಗಿದೆ ಎಂದು ಮಂಡಿ ಉಪ ಆಯುಕ್ತ ಅಪೂರ್ವ ದೇವಗನ್ ತಿಳಿಸಿದ್ದಾರೆ. ನವದೆಹಲಿಯಲ್ಲಿಯೂ ಬುಧವಾರ ಜೋರು ಮಳೆ ಬೀಳುವ ಸಾಧ್ಯತೆ ಇದ್ದು, 'ರೆಡ್ ಅಲರ್ಟ್' ಘೋಷಿಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಒಬ್ಬ ವ್ಯಕ್ತಿಯು ಪೊಲೀಸರೊಂದಿಗೆ ಮನೆಯೊಂದರೊಳಗೆ ಪ್ರವೇಶ ಮಾಡುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ವಾಸ್ತವ ಘಟನೆಯ ವಿಡಿಯೊ ಎಂದು ಪ್ರತಿಪಾದಿಸಲಾಗುತ್ತಿದೆ. ಒಬ್ಬ ಮುಸ್ಲಿಂ ವ್ಯಕ್ತಿಯು ಹಿಂದೂ ಎಂದು ಹೇಳಿಕೊಂಡು ಮಹಿಳೆಯೊಬ್ಬರೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದ. ಆತ ಮಹಿಳೆಯ ಮನೆಯಲ್ಲಿ ಇರುವಾಗ ಆ ಮಹಿಳೆಯ ಗಂಡ ಮತ್ತು ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ. ವಿಡಿಯೊ ವಾಸ್ತವ ಘಟನೆಗೆ ಸಂಬಂಧಿಸಿದ್ದಲ್ಲ.



ವಿಡಿಯೊದ ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಫೇಸ್‌ಬುಕ್‌ನಲ್ಲಿ ಮೊಂಟಿ ದೀಪಕ್ ಶರ್ಮ ಎನ್ನುವ ವ್ಯಕ್ತಿ ಅಂಥದ್ದೇ ವಿಡಿಯೊ ಅನ್ನು ಹಂಚಿಕೊಂಡಿರುವುದು ಕಂಡಿತು. 'ಇದು ಕಾಲ್ಪನಿಕ ವಿಡಿಯೊ ಆಗಿದ್ದು, ಮನರಂಜನೆಯ ಉದ್ದೇಶದಿಂದ ರೂಪಿಸಲಾಗಿದೆ. ಯಾವುದೇ ವೃತ್ತಿ ಅಥವಾ ಸಮುದಾಯವನ್ನು ಅವಮಾನಿಸಲಾಗಿಲ್ಲ' ಎಂದು ಅದರ ಅಡಿಬರಹದಲ್ಲಿ ಉಲ್ಲೇಖಿಸಿದ್ದರು. ದೀಪಕ್ ಅವರೇ ಸೃಷ್ಟಿಸಿದ ವಿಡಿಯೊ ಅದಾಗಿದ್ದು, ವಿಡಿಯೊದಲ್ಲಿ ಗಂಡನ ಪಾತ್ರವನ್ನು ಅವರೇ ನಿರ್ವಹಿಸಿದ್ದಾರೆ. ತಾವೇ ರೂಪಿಸಿದ ಇಂಥ ಹಲವು ವಿಡಿಯೊಗಳಲ್ಲಿ ದೀಪಕ್ ಶರ್ಮ ಅವರು ಪೊಲೀಸ್ ಅಧಿಕಾರಿಯಾಗಿಯೂ ಕಾಣಿಸಿಕೊಂಡಿದ್ದಾರೆ. ಅವರ ಅಂಥ ಹಲವು ವಿಡಿಯೊಗಳನ್ನು ಆಧರಿಸಿ ಈ ಹಿಂದೆಯೂ ಸುಳ್ಳು ಸುದ್ದಿಗಳು ಹರಿದಾಡಿದ್ದವು. ವ್ಯಕ್ತಿಯೊಬ್ಬ ಮನರಂಜನೆಗಾಗಿ ರೂಪಿಸಿದ ವಿಡಿಯೊ ಅನ್ನು ವಾಸ್ತವ ಘಟನೆಯ ವಿಡಿಯೊ ಎಂದು ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು 'ಫ್ಯಾಕ್ಟ್‌ಲಿ' ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಎಟುಕದ್ದೂ ಸುಖವೇ


ವಾಸುದೇವ ನಾಡಿಗ್

ಬಾಲ್ಕನಿಯಲ್ಲಿ ಜಾಲರಿ ಇರುವ ಕಾರಣ ಹೊರಗೆ ಹಾರಾಡುವ ಪಾರಿವಾಳಗಳು ಒಳಗೆ ಬರಲು ಸಾಧ್ಯವಿಲ್ಲ. ಅಲ್ಲಲ್ಲೇ ಪರ್ರನೆ ಹಾರಿ ಸುಸ್ತಾದಾಗ ಗುರ್ ಗುರ್ ಅಂತ ಗಂಟಲ ಶಬ್ದ ಮಾಡುತ್ತ ಪಕ್ಕದ ಮನೆಯ ಕಿಟಕಿ ಸಜ್ಜೆಯ ಮೇಲೆ ಕೂಡುತ್ತಿದ್ದವು. ಅವು ಹಾರಾಡುವಾಗ ಬೀಳಿಸುತಿದ್ದ ಪುಕ್ಕಗಳು ಎಲ್ಲೆಂದರಲ್ಲೇ ಬಿದ್ದು ಜಾಲರಿಯ ಮೇಲೂ ಅಂಟಿಕೊಳ್ಳುತ್ತಿದ್ದವು.

ಈ ಬದಿಯಲ್ಲಿ ಬಾಲ್ಕನಿಯ ಒಳಗೇ ಎರಡು ಬೆಕ್ಕುಗಳ ಓಡಾಟ. ನಿದ್ದೆ, ಕೂತೇ ತೂಕಡಿಕೆ. ಆಚೆ ಪಾರಿವಾಳಗಳ ಮೇಲೆ ಎರಗಲು ಕುಕ್ಕರಗಾಲಲ್ಲಿ ಕೂತರೂ ಅವು ಸಿಗವು. ಜಾಲರಿಯ ಈಚೆಗೇ ಹೊಂಚುಹಾಕುವ ಭಂಗಿಯ ನಾಟಕ. ಕಣ್ಣುಗಳಲ್ಲಿ ಅದೇ ಕಾತರ ಮತ್ತು ಹೊರಗೆ ಹೋಗದ ನಿರಾಶೆ. ಪಾರಿವಾಳಗಳೂ ನಿರಾಳ. ಈ ಬೆಕ್ಕುಗಳು ಹೊರಗೆ ಬಾರವು ಎಂದು ಗೊತ್ತಿತ್ತು. ಹಾಗಾಗಿಯೇ ಧೈರ್ಯದಿಂದ ಹತ್ತಿರ ಬಂದು ಹಾರಿ ಹೋಗಿ ಕೈಗೆಟಕುವ ಅಳತೆ ದೂರದಲ್ಲೇ ಕೂತಿರುತ್ತಿದ್ದವು. ಆಗಾಗ ಹೊರಗೇ ಓಡಾಡುವ ನಾಲ್ಕಾರು ತುಂಟ ಬೆಕ್ಕುಗಳು ಹೊಂಚು ಹಾಕಿ ಎಗರುತ್ತಿದ್ದರೂ ಚಾಲಾಕಿ ಪಾರಿವಾಳಗಳು ಸಿಗವು.

ಎಲ್ಲಕ್ಕೂ ಸಾಕ್ಷಿ, ಬಾಲ್ಕನಿಯ ಒಳಗೆ ಇರುವ ಎರಡು ಬೆಕ್ಕುಗಳು. ಹೊರಗಿನ ಆ ತುಂಟ ಬೆಕ್ಕುಗಳ ಜಗಳ, ಕಿರುಚಾಟ ಮತ್ತು ಪಾರಿವಾಳಗಳ ವಯ್ಯಾರ ಎಲ್ಲವೂ ಈ ಎರಡು ಬೆಕ್ಕುಗಳಿಗೆ ಒಂದು ಸೋಜಿಗ. ಜತೆಗೆ ನೋಡುತ್ತ ಕಾಲ ಕಳೆಯಲು ಇರುವಂಥ ಒಂದು ದೃಶ್ಯ ಅದಾಗಿತ್ತು. ನಿರುಪದ್ರವಿಯಾದ ಎರಡು ಬೆಕ್ಕುಗಳ ಪಾಲಿಗೆ ಹೊರಗಿನ ಲೋಕ ಕೇವಲ ನೋಟವಷ್ಟೇ, ಅನುಭವವಲ್ಲ. ಇದು ನಿತ್ಯನಿರಂತರ ದಿನಚರಿಯೇ.

ಸಣ್ಣ ಜಾಲರಿಯ ಆಚೆ ಅಂಟಿಕೊಂಡ ಪಾರಿವಾಳದ ಪುಕ್ಕಗಳನ್ನು ಈ ಬೆಕ್ಕುಗಳು ಒಳಗಿನಿಂದಲೇ ಪಂಜಿನಿಂದ ಕೆರೆಯುತ್ತ ಪಡೆಯಲು ಹವಣಿಸುತ್ತಿದ್ದವು; ಆದರೆ ಸಿಗದು. ಬರೀ ವಾಸನೆಯ ಮೂಲಕವೇ ಪುಳಕಗೊಳ್ಳಬೇಕಿತ್ತು. ಅದು ಬೇಕೇ ಬೇಕು ಎಂಬ ಹಟ ಇದ್ದರೂ, ಸಿಗದೇ ಇದ್ದರೂ ನಷ್ಟವಿಲ್ಲ; ಬೆಚ್ಚಗಿನ ಮನೆ, ನಿಯಮಿತ ಊಟ, ಹಾಸಿಗೆ ಎಲ್ಲವೂ ಇದ್ದಾಗ ಹರಸಾಹಸ ಅನಗತ್ಯ.

ಹೊರಗಿನವುಗಳಿಗೆ ಒಳಗಿನ ಜೀವಗಳ ಸೋಜಿಗ, ಒಳಗಿನವುಗಳಿಗೆ ಹೊರಗಿನ ಬಾಳು ರೋಮಾಂಚಕ; ಇದ್ದುದರ ಬಗ್ಗೆ ಸಮಾಧಾನ ಇರದ ಜೀವಗಳು ಇರದುದರ ಬಗ್ಗೆ ಕೊರಗುವ ಹಾಗೆ. ಇಲ್ಲೂ ಹಾಗೇ; ಕೈಗೆ ಎಟುಕದ ಸಂಗತಿಗಳಿಗೆ ಕೊರಗುತ್ತಾ, ಬೇರೆಯವರ ಬಾಳಿನ ಜೊತೆಗೆ ಹೋಲಿಸುತ್ತ ಆಯುಷ್ಯ ಸವೆದೇ ಹೋಗುತ್ತದೆ. ಹೊರಗೆ ಕಾಣುವ ಪಾರಿವಾಳದ ಪುಕ್ಕ ತನ್ನದಲ್ಲ ಎಂಬ ಸಮಾಧಾನಕರ ನಿಲುವು ಮತ್ತು ಒಳಗಿನ ಈ ಎರಡು ಬೆಕ್ಕುಗಳು ತಮಗೇನೂ ಮಾಡವು ಎಂಬ ನಂಬಿಕೆ ಬಾಳನ್ನು ಮುನ್ನಡೆಸಬಲ್ಲದು.

ಸಿಗದ ವಸ್ತುವಿನ ಬಗೆಗಿನ ಸಮಾಧಾನದ ವರ್ತನೆ ಮತ್ತು ತನ್ನ ಸುತ್ತ ಇರುವ ಜೀವಗಳು ಅಪಾಯ ಮಾಡಲಾರವು ಎಂಬ ದೃಢ ನಂಬಿಕೆ ಲೋಕವನ್ನು ಕಾಯುವ ಹಾಗೆ, ಒಳಗಿನ ಬೆಕ್ಕುಗಳು ಮತ್ತು ಪಾರಿವಾಳದ ಜೀವನ.

ಗುಂಡಣ್ಣ



ಪದಬಂಧ 6119


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
3.ಕಾಡಿಗೆ ಸಂಬಂಧಿಸಿದ್ದು (2)
4.ಇದು ಮುಖ್ಯವಾದದುದು (3)
5.ಆನೆಯ ಮರಿ ಇಲ್ಲಿದೆ (3)
7.ಕಮ್ಮಾರನ ಕೈ! (2)
8.ರಭಸವಾಗಿ ಹರಿಯುತಿರುವ ದ್ರವ! (2)
10.ಪುಸ್ತಕದ ಮೇಲಿರಿಸಿದ ತಲೆ (3)
11.ಹರಸುತಲಿದ್ದಾಗ ಕಾಣಿಸಿದ ಆಕಳು (2)
13.ಕಾದಲನ ಹತ್ತಿರ ಕಳೆದ ವೇಳೆ (2)
14.ಹರನನ್ನು ಒಲಿಸಿಕೊಂಡಿರುವ ಶೂರ! (3)
15.ಒಳ್ಳೆಯ ದಾರಿಯಿದು (3)
16.ಪಯೋಧರದಲ್ಲಿರುವ ಕೈವಲ್ಯ ಕಾಣುತ್ತಿದೆಯೆ? (2)
17.ಪ್ರಾಣವಾಯು ಇಲ್ಲಿದೆ (5)

ಮೇಲಿಂದ ಕೆಳಕ್ಕೆ

2.ಹೆದರಿಕೆಯನ್ನುಂಟುಮಾಡುವುದು (4)
3.ವರ ಪಡೆದಿರುವ ಬೇಡ (4)
4.ಪ್ರೇಮಿಗಳ ಹುಸಿ ಜಗಳ (6)
6.ನಿರಾಶೆ ಹೊಂದಿದವನು ಕೊನೆಗೆ ರಥ ಹತ್ತಿದ್ದಾನಲ್ಲಾ! (6)
7.ಜಗಳಕ್ಕೊಂದು ಪರ್ಯಾಯ ಪದ (3)
9.ಸರಿಯಾದ ಕಾಲವಿದು (3)
12.ದೇವತೆ ಮತ್ತು ರಾಕ್ಷಸರು ಒಟ್ಟಾಗಿದ್ದಾರಲ್ಲಾ! (4)
13.ಪಿತೂರಿ ಕೆಲಸ ನಡೆಯುವ ಸ್ಥಳ (4)



6118ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಯಂಕರ 3.ಮರೀಚಿಕೆ 5.ನಿಯಮ 7.ವರ್ತಕ 9.ಅಂಬಿಗ 10.ರಸಿಕ 11.ಅಂಗದ 15.ಕಡುಮೋಹ 16.ವರಮಾನ

ಮೇಲಿಂದ ಕೆಳಕ್ಕೆ:
1.ಭಗಿನಿ 2.ರಫ್ತು 3.ಮದುವಣಿಗ 4.ಕೆನೆ 6.ಯಥಾಪ್ರಕಾರ 8.ಕಸ್ತೂರಿಮೃಗ 9.ಅಂತಃಕಲಹ 12.ದಶನ 13.ಸಂಕ 14.ಭಾವ

ಸುಡೊಕು 6503

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9	2		3	1		6	8
4					7	3		9
		3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

6502 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಜುಲೈ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಷಷ್ಠಿ ಗಂ. 26-42 **ನಕ್ಷತ್ರ:** ಹಸ್ತ ಗಂ. 21-53 **ಯೋಗ:** ಸಿದ್ಧ ಗಂ. 27-40 ಕರಣ: ಕೌಲವ ಗಂ. 13-41, ಕರ್ಕಾಟಕ ಮಾಸದ 13 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 3 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 01-30, **ಸೂರ್ಯೋದಯ:** 06-19 **ಸೂರ್ಯಾಸ್ತ:** 06-55, **ಮುಸ್ಲಿಂ ದಿನಾಂಕ:** 04 ಸಫರ್, ಅದೃಷ್ಟ ಸಂಖ್ಯೆ: 3, 5

ಮೇಷ: ಯೋಚನೆಯಂತೆ ಕೆಲಸ ನೆರವೇರಲು ಪೂರ್ವತಯಾರಿಗೆ ಸಭೆ ಕರೆದು ಅಭಿಪ್ರಾಯ ಸಂಗ್ರಹಿಸಿಕೊಳ್ಳುವುದು ಉತ್ತಮ. ಸಭೆಯಲ್ಲಿ ಮಾತನಾಡುವಾಗ ದಾಕ್ಷಿಣ್ಯ ಮಾಡಿಕೊಳ್ಳದೆ ಬುದ್ಧಿವಂತಿಕೆಯಿಂದ ಮಾತನಾಡಿರಿ.

ವೃಷಭ: ವೃತ್ತಿಯ ಪರಿಧಿಯೊಳಗಿನ ವ್ಯಕ್ತಿಗಳ ಮೇಲೆ ಎಷ್ಟೇ ಎಚ್ಚರವಹಿಸಿ ನಂಬಿದರೂ ಕಡಿಮೆಯಾಗುತ್ತದೆ. ವೃತ್ತಿ ಸಂಬಂಧಿ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಲು ಸ್ನೇಹಿತನ ಮೊರೆ ಹೋಗಬೇಕಾಗುವುದು.

ಮಿಥುನ: ಕುಟುಂಬದಲ್ಲಿ ನಡೆಯುವ ಶುಭಕಾರ್ಯಗಳು ಸಂಭ್ರಮವನ್ನು ಉಂಟುಮಾಡುತ್ತವೆ. ಬ್ಯಾಂಕ್ ಸಂಬಂಧಿತ ಕೆಲಸಗಳು ಸಮಯಕ್ಕೆ ಸರಿಯಾಗಿ ಆಗದೆಯೇ ಇರಬಹುದು. ಜಾರಿಕೆಯ ಸಾಧ್ಯತೆಗಳಿವೆ. ಎಚ್ಚರವಿರಲಿ.

ಕರ್ಕಾಟಕ: ಇನ್ನೊಬ್ಬರೊಂದಿಗೆ ಮಾತನಾಡುವಾಗ ತುಂಬಾ ಅಳೆದು ತೂಗಿ ಮಾತನಾಡುವ ಪ್ರವೃತ್ತಿಯು ಎದುರಿನ ವ್ಯಕ್ತಿಗಳಿಗೆ ದೂರವಿಟ್ಟಿದ್ದಾರೆ ಎಂಬ ಭಾವನೆ ತರಬಹುದು. ವ್ಯಕ್ತಿತ್ವವನ್ನು ಚೆನ್ನಾಗಿ ರೂಪಿಸಿಕೊಳ್ಳಿ.

ಸಿಂಹ: ಯಾವುದೋ ಸಂಶೋಧನೆಯಲ್ಲಿ ತೊಡಗಿರುವ ರಾಸಾಯನಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಸುಡುವ ವಸ್ತುಗಳ ಬಗ್ಗೆ ಜಾಗ್ರತೆ ಇರಲಿ. ಕೆಲಸಗಳು ಸತತ ಪ್ರಯತ್ನದಿಂದ ಆಗುತ್ತದೆ. ಚರ್ಮವ್ಯಾಧಿ ಕಾಡಬಹುದು.

ಕನ್ಯಾ: ಮಾಡುವ ಸಹಾಯವು ಮುಂದಿನ ಜೀವನಕ್ಕೆ ಸಹಕಾರಿಯಾಗಲಿದೆ. ಇಷ್ಟ ಕ್ಷೇತ್ರದಲ್ಲಿ ಹೊಸ ಉದ್ಯೋಗ ಪಡೆಯುವವರಿಗೆ ಕೆಲಸ ದೊರೆಯುತ್ತದೆ. ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಅನುಕೂಲವಾಗಲಿದೆ.

ತುಲಾ: ಯಾರದೆಂದು ಗೊತ್ತಿರದ ಅಪರಾಧಗಳನ್ನು ಬೆಳಕಿಗೆ ತರಲುಹೋಗಿ ಅಪರಾಧಿ ಎನ್ನುವ ಪದವಿ ತಲೆ ಏರುವ ಸಾಧ್ಯತೆ ಇದೆ. ಸಾಲಗಳನ್ನು ಇತ್ಯರ್ಥ ಮಾಡದ ಹೊರತು ನಿದ್ರಾದೇವಿ ಸಲಹುವುದಿಲ್ಲ.

ವೃಶ್ಚಿಕ: ಸಣ್ಣ ಕಿಚ್ಚಿನಿಂದ ದೊಡ್ಡ ಬೆಂಕಿ ಹೊತ್ತುವಂತೆ ಸಣ್ಣ ಜಗಳಗಳೇ ಮುಂದೆ ದೊಡ್ಡ ಮನಸ್ತಾಪಗಳಿಗೆ ಕಾರಣವಾಗಬಹುದು. ದಿನಸಿ ಅಂಗಡಿಯ ಮಾಲೀಕರಿಗೆ ಗುಣಮಟ್ಟದ ವಸ್ತು ಪೂರೈಸುವುದೇ ಕಷ್ಟವಾಗುವುದು.


ಧನು: ಶೂರತ್ವ ಪ್ರದರ್ಶನ ಬರಿಯ ಕನ್ನಡಿಯ ಮುಂದಾಗದೆ ಅಧಿಕಾರಿಗಳ ಮುಂದೆ ತೋರಿಸಿದಲ್ಲಿ ಕೆಲಸಗಳು ಮುಂದುವರಿಯಬಹುದು. ಸ್ವಂತ ತೀರ್ಮಾನದ ಔಷಧಿಯು ಅಡ್ಡಪರಿಣಾಮ ಬೀರಬಹುದು.

ಮಕರ: ಹಾಸ್ಯ ವ್ಯಕ್ತಿತ್ವವನ್ನು ಅನುಭವಿಸಿ ಸಾಥ್ ಕೊಡುವ ಯೋಗ್ಯ ವ್ಯಕ್ತಿಯೊಂದಿಗೆ ಆನಂದ ದಿನವನ್ನು ಕಳೆಯುವಿರಿ. ನಿರ್ವಾಹಕರಿಗೆ ಅದ್ದೂರಿಯಾದ ಕಾರ್ಯಕ್ರಮ ನಿರ್ವಹಿಸುವ ಜವಾಬ್ದಾರಿ ಸಿಗಬಹುದು.

ಕುಂಭ: ದೇಹಾಲಸ್ಯವು ವಿಶೇಷವಾಗಿ ವಿದ್ಯಾರ್ಥಿಗಳನ್ನು ಕಾಡಲಿದೆ. ಆಲಸಿಯಾಗದಿರಿ. ಕೆಲವು ಶೋಕಿ ಎನ್ನಿಸುವ ಅಭ್ಯಾಸಗಳು ಇತರಿಗೆ ಅಡ್ಡಿಯಾಗುವಂತಿದ್ದಲ್ಲಿ ಆ ಅಭ್ಯಾಸವನ್ನು ಕೈಬಿಡುವ ಕಾರ್ಯವನ್ನು ಮಾಡಿ.

ಮೀನ: ಅರ್ಹತೆಗೆ ತಕ್ಕಂತಹ ಕೆಲಸವಿಲ್ಲವೆಂದು ಕೊರಗುತ್ತಿರುವವರು ಬೇಕಾದಂಥ ಉದ್ಯೋಗಾವಕಾಶವನ್ನು ಹುಡುಕುವಿರಿ. ಪ್ರಕೃತಿಯ ವಿಸ್ಮಯ ರೂಪು–ರೇಷೆಗಳಿಗೆ ಮಾರುಹೋಗುವಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,680
ಇಂದಿನ ಅಂತ್ಯ: 24,821
ದಿನದ ಕನಿಷ್ಠ: 24,598
140

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹465
12 ಕ್ಕೆ ₹65
ಮೈಸೂರು: 100 ಕ್ಕೆ ₹460

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಳೆಯ ವಹಿವಾಟು ದರ) (10 ಕೆ.ಜಿ)

ಶೇಂಗಾ (ರಿಫೈನ್ಡ್)	₹1425 (1430)
ಸೋಯಾ (ರಿಫೈನ್ಡ್)	₹1235 (1230)
ಸೂರ್ಯಕಾಂತಿ (ರಿಫೈನ್ಡ್)	₹1365 (1360)
ಪಾಮೋಲಿನ್	₹1200 (1195)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹207
ಆರ್‌ಎಸ್‌ಎಸ್-5	₹201
ಗುಡ್ ಲಾಟ್	₹185

ಮುಂಬೈ ಧಾರಣೆ (ಶೇಂಗಾ)
29-07-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1435 (1440)
ಒಂದು ವಾರದ ಡೆಲಿವರಿ	1430 (1435)
ಪಾಮ್ ವಾರದ ಡೆಲಿವರಿ	1198 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1270)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,850 (97,900)
ಬೆಳ್ಳಿ ಕೆ.ಜಿಗೆ	1,13,200 (1,13,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಣ್ಣ ಸಾಲಕ್ಕೆ ಬ್ಯಾಂಕ್‌ಗಳ ಹಿಂದೇಟು

ರೆಪೊ ದರ ತಗ್ಗಿಸಿ, ಬೇಡಿಕೆ ಉತ್ತೇಜಿಸುವ ಆರ್‌ಬಿಐ ಆಸೆಗೆ ತಣ್ಣೀರು?

ಮುಂಬೈ (ರಾಯಿಟರ್ಸ್): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಕಡಿಮೆ ಮಾಡಿರುವುದರ ಪ್ರಯೋಜನವು ಎಲ್ಲರನ್ನೂ ತಲುಪಲು ಆರಂಭವಾಗುತ್ತಿರುವ ಹೊತ್ತಿನಲ್ಲಿ ಬ್ಯಾಂಕ್‌ಗಳು ಸಣ್ಣ ಮೊತ್ತದ ಸಾಲವನ್ನು ನೀಡಲು ಹಿಂದೇಟು ಹಾಕುತ್ತಿವೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ವಿವಿಧ ಉತ್ಪನ್ನಗಳ ಬೇಡಿಕೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು ಎಂಬ ಆತಂಕ ಉಂಟಾಗಿದೆ.

ರೆಪೊ ದರವನ್ನು ತಗ್ಗಿಸುವುದಷ್ಟೇ ಅಲ್ಲದೆ, ಹಣಕಾಸು ವ್ಯವಸ್ಥೆಯಲ್ಲಿ ನಗದು ಲಭ್ಯತೆಯನ್ನು ಹೆಚ್ಚಿಸುವ ಇತರ ಕೆಲವು ಕ್ರಮಗಳನ್ನೂ ಆರ್‌ಬಿಐ ಈಚೆಗೆ ತೆಗೆದುಕೊಂಡಿದೆ. ಈ ಮೂಲಕ ಹೂಡಿಕೆ ಹಾಗೂ ಬೇಡಿಕೆ ಹೆಚ್ಚಿಸುವ ಉದ್ದೇಶವು ಆರ್‌ಬಿಐಗೆ ಇದೆ.

ಆದರೆ, ಅನುತ್ಪಾದಕ ಸಾಲಗಳ ಸಂಖ್ಯೆ ಹೆಚ್ಚಬಾರದು ಎಂಬ ಉದ್ದೇಶದಿಂದ ಬ್ಯಾಂಕ್‌ಗಳು ವೈಯಕ್ತಿಕ ಸಾಲ, ಕ್ರೆಡಿಟ್ ಕಾರ್ಡ್ ಸಾಲ ನೀಡುವಿಕೆಗೆ ಹೆಚ್ಚು ಉತ್ಸಾಹ ತೋರಿಸುತ್ತಿಲ್ಲ. ಮನೆಬಳಕೆಯ ಉಪಕರಣ, ಕಾರುಗಳ ಖರೀದಿಗೆ ನೀಡುವ ಸಾಲವನ್ನು ಮಂಜೂರು ಮಾಡುವಾಗಲೂ ಅವು ಹೆಚ್ಚು ಉಮೇದು ತೋರಿಸುತ್ತಿಲ್ಲ.

ಮುಖ್ಯಾಂಶಗಳು
- ಜೂನ್ ತ್ರೈಮಾಸಿಕದಲ್ಲಿ ಎನ್‌ಪಿಎ ಏರಿಕೆ
- ಹೊಸ ಸಾಲ ನೀಡುವಾಗ ಎಚ್ಚರಿಕೆಯ ಹೆಜ್ಜೆ

ಈ ವಲಯಗಳಿಗೆ ನೀಡುವ ಸಾಲದ ಬೆಳವಣಿಗೆ ಪ್ರಮಾಣವು ಮೇ ತಿಂಗಳಲ್ಲಿ ಒಂದಂಕಿಗೆ ತಗ್ಗಿದೆ. ಎನ್‌ಪಿಎ ಪ್ರಮಾಣ ಹೆಚ್ಚಾಗುತ್ತಿರುವ ಬಗ್ಗೆ ಖಾಸಗಿ ವಲಯದ ಪ್ರಮುಖ ಬ್ಯಾಂಕ್‌ಗಳಾದ ಎಚ್‌ಡಿಎಫ್‌ಸಿ, ಐಸಿಐಸಿಐ, ಆಕ್ಸಿಸ್ ಮತ್ತು ಕೋಟಕ್ ಮಹೀಂದ್ರ ತಮ್ಮ ಏಪ್ರಿಲ್–ಜೂನ್ ಅವಧಿಯ ಹಣಕಾಸಿನ ಫಲಿತಾಂಶದಲ್ಲಿ ಹೇಳಿವೆ. ಪ್ರಮುಖ ಎನ್‌ಬಿಎಫ್‌ಸಿ ಬಜಾಜ್ ಫೈನಾನ್ಸ್ ಕೂಡ ಎನ್‌ಪಿಎ ಹೆಚ್ಚಾಗುತ್ತಿರುವುದನ್ನು ಹೇಳಿದೆ.

ಸಣ್ಣ ಮೊತ್ತದ ವೈಯಕ್ತಿಕ ಸಾಲ ಪಡೆಯುವುದು ಹೆಚ್ಚಾ-



ಗುತ್ತಿರುವ ಬಗ್ಗೆ ಕಳವಳ ವ್ಯಕ್ತವಾದ ನಂತರ ಆರ್‌ಬಿಐ 2023ರಲ್ಲಿ, ಈ ಬಗೆಯ ಸಾಲಗಳಿಗೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸಿತ್ತು. ಆದರೆ ಈ ವರ್ಷದ ಆರಂಭದಲ್ಲಿ ನಿಯಮಗಳನ್ನು ಸಡಿಲಿಸಲಾಗಿದೆ.

2023ರ ಮಾರ್ಚ್‌ನಲ್ಲಿ ಇದ್ದ ಸ್ಥಿತಿಗೆ ಹೋಲಿಸಿದರೆ ಈ ವರ್ಷದ ಮಾರ್ಚ್‌ನಲ್ಲಿ, 90 ದಿನಗಳಿಗೂ ಹೆಚ್ಚಿನ ಅವಧಿಯಿಂದ ಬಾಕಿ ಇರುವ ಕ್ರೆಡಿಟ್ ಕಾರ್ಡ್ ಸಾಲದ ಮೊತ್ತವು ಎರಡು ಪಟ್ಟಿಗಿಂತ ಹೆಚ್ಚಾಗಿದೆ ಎಂಬುದನ್ನು ಸಿಆರ್‌ಐಎಫ್ ಹೈ ಮಾರ್ಕ್ ವರದಿಯು ಹೇಳಿದೆ.

'ಅಡಮಾನದ ಭದ್ರತೆ ಇಲ್ಲದ ಸಣ್ಣ ಸಾಲಗಳ ವಿಚಾರದಲ್ಲಿ (ಅಂದರೆ, ಕ್ರೆಡಿಟ್ ಕಾರ್ಡ್ ಸಾಲ ಮತ್ತು ವೈಯಕ್ತಿಕ ಸಾಲ) ಸಾಲ ನೀಡುವ ಕಂಪನಿಗಳು ಬಹಳ ಎಚ್ಚರಿಕೆಯ ಹೆಜ್ಜೆ ಇರಿಸುತ್ತಿವೆ' ಎಂದು ಸಿಆರ್‌ಐಎಫ್ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ನಿರ್ದೇಶಕ ಸಚಿನ್ ಸೇಠ್ ಹೇಳಿದ್ದಾರೆ.

ವ್ಯಕ್ತಿಗಳಿಗೆ ವಾಣಿಜ್ಯ ಉದ್ದೇಶದ ವಾಹನ ಖರೀದಿಸಲು ನೀಡುವ ಸಾಲಗಳಲ್ಲಿ ಮರುಪಾವತಿ ಆಗದೆ ಇರುವುದು ಹೆಚ್ಚುತ್ತಿದೆ ಎಂದು ಕೋಟಕ್ ಮಹೀಂದ್ರ ಬ್ಯಾಂಕ್ ಕಳೆದ ವಾರ ಹೇಳಿದೆ. ಈ ಬಗೆಯ ಸಾಲ ನೀಡಿಕೆಗೆ ಅನುಸರಿಸುವ ನಿಯಮಗಳನ್ನು ಅದು ಬಿಗಿಗೊಳಿಸಿದೆ.

ದೇಶದ ಕೌಟುಂಬಿಕ ಸಾಲದ ಮಟ್ಟವು ಈಚಿನ ವರ್ಷಗಳಲ್ಲಿ ಹೆಚ್ಚಳ ಕಂಡಿದೆ ಎಂಬುದನ್ನು ಆರ್‌ಬಿಐ ಸಿದ್ಧಪಡಿಸಿರುವ ಹಣಕಾಸು ಸ್ಥಿರತೆ ವರದಿಯು ಹೇಳಿದೆ. ಕಡಿಮೆ ಕ್ರೆಡಿಟ್ ಅಂಕ ಹೊಂದಿರುವವರು ಸಾಲವನ್ನು ಹೆಚ್ಚು ಪಡೆದುಕೊಳ್ಳುವುದರ ಮೇಲೆ ನಿಗಾ ಇರಿಸಬೇಕಿದೆ ಎಂದೂ ಆರ್‌ಬಿಐ ಹೇಳಿದೆ.

ಸಾಲ ನೀಡುವ ಕಂಪನಿಗಳು ತಾವು ಪರಿಗಣಿಸುವ ಕ್ರೆಡಿಟ್ ಅಂಕದ ಮಟ್ಟವನ್ನು ಹೆಚ್ಚಿಸಿವೆ, ಈಗಾಗಲೇ ಒಂದು ಸಾಲ ಇರುವವರಿಗೆ ಹೊಸದಾಗಿ ಸಾಲ ನೀಡಲು ಹಿಂದೇಟು ಹಾಕುತ್ತಿವೆ, ಅಡಮಾನ ಸಾಲಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ ಎಂದು ಫಿನ್‌ಟೆಕ್ ಕಂಪನಿ ಅಧಿಕಾರಿಯೊಬ್ಬರು ಹೇಳಿದರು.

'ಸಾಲ ಮರುಪಾವತಿ ಸಾಮರ್ಥ್ಯವು ಯಾವ ಪ್ರಮಾಣದಲ್ಲಿ ಹೆಚ್ಚಳ ಕಾಣುತ್ತಿದೆಯೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಾಲ ಬೆಳೆಯುತ್ತಿದೆ' ಎಂದು ಬರ್ನ್‌ಸ್ಟೀನ್ ಸಂಸ್ಥೆಯ ಹಿರಿಯ ವಿಶ್ಲೇಷಕ ಪ್ರಣವ್ ಜಿ. ಹೇಳಿದ್ದಾರೆ.

ಸ್ಮಾರ್ಟ್‌ಫೋನ್: ಭಾರತ ಮುಂದು

ನವದೆಹಲಿ (ಪಿಟಿಐ): ಅಮೆರಿಕಕ್ಕೆ ರವಾನೆ ಆಗುವ ಸ್ಮಾರ್ಟ್‌ಫೋನ್‌ಗಳ ಅತಿದೊಡ್ಡ ತಯಾರಿಕಾ ಕೇಂದ್ರ ಎಂಬ ಹೆಸರನ್ನು ಭಾರತವು ಚೀನಾದಿಂದ ಕಿತ್ತುಕೊಂಡಿದೆ. 2025ರ ಎರಡನೆಯ ತ್ರೈಮಾಸಿಕದಲ್ಲಿ ಈ ಬದಲಾವಣೆ ಆಗಿದೆ.

ತೆರಿಗೆ ಸಂಬಂಧಿತ ಮಾತುಕತೆಗಳು ನಡೆಯುತ್ತಿರುವ ಹೊತ್ತಿನಲ್ಲಿ ಚೀನಾದಿಂದ ಅಮೆರಿಕಕ್ಕೆ ರವಾನೆ ಆಗುವ ಸ್ಮಾರ್ಟ್‌ಫೋನ್‌ಗಳ ಸಂಖ್ಯೆ ಕಡಿಮೆ ಆಗಿದೆ ಎಂದು ಕ್ಯಾನಲಿಸ್ ಸಂಸ್ಥೆ ನಡೆಸಿರುವ ವಿಶ್ಲೇಷಣೆಯು ಹೇಳಿದೆ.

ಅಡಿಕೆ ಧಾರಣೆ

ಸಾಗರ			
ರಾಶಿ	50170-52729	ಸರಕು	58859-88410
ಸಿಪ್ಪೆಗೋಟು	7269-20001	**ಸಿದ್ದಾಪುರ**	
ಶಿವಮೊಗ್ಗ		ಬಿಳಿಗೋಟು	24699-30459
ಬೆಟ್ಟೆ	53774-60919	ಚಾಲಿ	35699-43320
ಗೊರಬಲು	18010-33696	ಕೋಕ	16809-23489
ರಾಶಿ	46009-57599	ಕೆಂಪುಗೋಟು	21300-22600
		ರಾಶಿ	43969-48699

ತಟ್ಟಿಬೆಟ್ಟೆ	28800-32099
ಶಿರಸಿ	
ಬೆಟ್ಟೆ	28809-35699
ಬಿಳಿಗೋಟು	26090-35699
ಚಾಲಿ	38898-44199
ರಾಶಿ	43999-48699

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅಮೃತಾ ನಾಡಿಗ್, ಬೆಂಗಳೂರು

- **ಪ್ರಶ್ನೆ: ನನ್ನ ಮಗ ವಿದೇಶದಲ್ಲಿದ್ದಾನೆ. ಆತ ಕಳೆದ ವರ್ಷದ ಏಪ್ರಿಲ್‌ನಲ್ಲಿ ವಿದೇಶಕ್ಕೆ ಹೋಗಿದ್ದಾನೆ. ನಮ್ಮೊಂದಿಗಿದ್ದಾಗ ಆತ ನಮ್ಮ ಸಲಹೆಯ ಮೇರೆಗೆ ಅಂಚೆ ಇಲಾಖೆಯ ಪಿಪಿಎಫ್ ಖಾತೆ ತೆರೆದಿದ್ದ. ಈ ವರ್ಷದ ಪಾವತಿ ಬಾಕಿ ಇದೆ. ಕಳೆದ ಬಾರಿಯ ಮೊತ್ತವನ್ನು ಪಾವತಿಸಿ ಖಾತೆ ನಿಷ್ಕ್ರಿಯಗೊಳ್ಳದಂತೆ ಮುಂದುವರಿಸಿದ್ದೇವೆ. ನನ್ನ ಪ್ರಶ್ನೆ ಏನೆಂದರೆ, ಈಗಾಗಲೇ ಆತ ತೆರೆದಿರುವ ಖಾತೆಯನ್ನು ಏನು ಮಾಡಬೇಕು? ಅನಿವಾಸಿ ಭಾರತೀಯರಾಗಿದ್ದರೆ ಪಿಪಿಎಫ್ ಖಾತೆಯನ್ನು ಮುಚ್ಚಬೇಕು ಎನ್ನುವ ಅಭಿಪ್ರಾಯ ಇದೆ. ಈ ಮಾಹಿತಿ ಸರಿಯೇ? ಒಂದು ವೇಳೆ ಇನ್ನೂ ಮುಂದುವರಿಸುವ ಅವಕಾಶ ಇದ್ದರೆ ನಾವು ಯಾವ ಕ್ರಮ ಕೈಗೊಳ್ಳಬೇಕು?**

ಉತ್ತರ: ಪಬ್ಲಿಕ್ ಪ್ರಾವಿಡೆಂಟ್ ಫಂಡ್ (ಪಿಪಿಎಫ್), ಸಾರ್ವಜನಿಕರ ಉಳಿತಾಯ ಹೆಚ್ಚಿಸುವ ಉದ್ದೇಶದಿಂದ ಮಾಡಲಾದ ಯೋಜನೆ, ಅಂಚೆ ಕಚೇರಿ ಹಾಗೂ ಬಹುತೇಕ ಬ್ಯಾಂಕ್‌ಗಳಲ್ಲಿ ಈ ಹೂಡಿಕೆ ಉತ್ಪನ್ನ ಲಭ್ಯ. ಈ ಹೂಡಿಕೆಗಳು ಪಿಪಿಎಫ್ ನಿಯಮಾವಳಿಗಳಿಗೆ ಅನುಗುಣವಾಗಿ ಇರುತ್ತವೆ. ಖಾತೆ ತೆರೆಯುವಾಗ ಬಳಸುವ 'ಫಾರ್ಮ್-1'ರಲ್ಲಿ ಹೂಡಿಕೆದಾರರು ತಮ್ಮ ಬದಲಾದ ವಾಸಸ್ಥಿತಿಯನ್ನು (ರೆಸಿಡೆನ್ಷಿಯಲ್ ಸ್ಟೇಟಸ್) ಖಾತೆ ಇರುವ ಸಂಬಂಧಿತ ಕಚೇರಿಗೆ ತಿಳಿಸಬೇಕು.

ಪ್ರಸ್ತುತ ನಿಯಮಗಳ ಪ್ರಕಾರ ಹೊಸ ಖಾತೆಯನ್ನು ಭಾರತೀಯ ನಿವಾಸಿಗಳು ಮಾತ್ರ ತೆರೆಯಬಹುದಾಗಿದ್ದು, ಅನಿವಾಸಿ ಭಾರತೀಯರು ಹೊಸ ಖಾತೆ ತೆರೆಯಲು ಅವಕಾಶವಿಲ್ಲ. ಆದರೆ, ಖಾತೆ ತೆರೆದ ನಂತರ ಯಾವುದೇ ನಿವಾಸಿ ಭಾರತೀಯ, ಅನಿವಾಸಿ ಭಾರತೀಯನಾಗಿ ಬದಲಾದ ಸನ್ನಿವೇಶದಲ್ಲಿ, ಅದಾಗಲೇ ತೆರೆದಿರುವ ಖಾತೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶ ಇದೆ.

ನಿಮ್ಮ ವಿಚಾರದಲ್ಲಿ, ಈಗಾಗಲೇ ಖಾತೆ ತೆರೆದಿರುವ ಕಾರಣಕ್ಕೆ ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಹೀಗಾಗಿ ಖಾತೆಯನ್ನು ಅವಧಿಯ ಕೊನೆಯ ತನಕ (15 ವರ್ಷ) ಮುಂದುವರಿಸಲು ಸಾಧ್ಯ. ಆದರೆ ಮತ್ತೆ ಅದೇ ಖಾತೆಯನ್ನು ಹೆಚ್ಚಿನ ಅವಧಿಗೆ ಮುಂದುವರಿಸಲು ಅವಕಾಶ ಇಲ್ಲ. ನಿಮ್ಮ ಮಗ ಈಗಾಗಲೇ ಅನಿವಾಸಿ ಭಾರತೀಯ ಆಗಿರುವುದರಿಂದ ಖಾತೆ ಮುಂದುವರಿಸುವ ಉದ್ದೇಶ ಹೊಂದಿದ್ದರೆ, ಅವರ ಅನಿವಾಸಿ ಭಾರತೀಯ ಸಾಮಾನ್ಯ ಬ್ಯಾಂಕ್ ಖಾತೆಯಿಂದ (ಎನ್‌ಆರ್‌ಒ ಖಾತೆ) ಹೂಡಿಕೆ ಮಾಡಬೇಕು. ಈ ಬಗ್ಗೆ ಇರುವ ಮಾಹಿತಿಯನ್ನು ಬ್ಯಾಂಕಿಗೂ ನೀಡಬೇಕು.

ಮಲ್ಲು ಸಜ್ಜನ್, ಊರು ತಿಳಿಸಿಲ್ಲ

- **ಪ್ರಶ್ನೆ: ನನ್ನ ಮೊಬೈಲ್ ಕಳ್ಳತನ ಮಾಡಿ, ಸಾಲ ವಿತರಿಸುವ ಒಂದು ಖಾಸಗಿ ಸಂಸ್ಥೆಯಿಂದ ₹50,000 ಸಾಲವನ್ನು ಯಾರೋ ಅಪರಿಚಿತರು ನನ್ನ ಮೊಬೈಲ್ ಫೋನ್ ಹಾಗೂ ಮೊಬೈಲ್ ಸಂಖ್ಯೆಯನ್ನು ದುರುಪಯೋಗ ಮಾಡಿ ಆ್ಯಪ್ ಮೂಲಕ ಪಡೆದಿದ್ದಾರೆ. ಈ ಕುರಿತು ಎಫ್‌ಐಆರ್ ದಾಖಲಿಸಲಾಗಿದೆ. ಆದಾಗ್ಯೂ ಆ ಸಂಸ್ಥೆಯವರು ನನಗೆ ಹಣ ಕಟ್ಟುವಂತೆ ಪೀಡಿಸುತ್ತಿದ್ದಾರೆ ಮತ್ತು ನನ್ನ ಕ್ರೆಡಿಟ್ ಅಂಕವನ್ನು ಸಹ ಕಡಿಮೆ ಮಾಡಿದ್ದಾರೆ. ಈಗ ಕ್ರೆಡಿಟ್ ಅಂಕ ಹೆಚ್ಚಿಸಿಕೊಳ್ಳಲು ಏನು ಮಾಡಬೇಕು?**

ಉತ್ತರ: ಅಪರಿಚಿತ ವ್ಯಕ್ತಿಗಳು ಯಾರದೇ ಮಾಹಿತಿ ಕಸಿದು ಅಥವಾ ಅನುಮತಿಯಿಲ್ಲದೆ ಅವರ ಸಿಮ್ ಕಾರ್ಡ್‌ನಿಂದ ಡಿಜಿಟಲ್ ವೇದಿಕೆಗಳ ಮೂಲಕ ಸಾಲ ಪಡೆಯುವುದು ಅತ್ಯಂತ ಗಂಭೀರವಾದ ಆರ್ಥಿಕ ಅಪರಾಧ. ಇಂತಹ ಸಮಸ್ಯೆ ಎದುರಿಸುತ್ತಿರುವ ನೀವು ಮೊಬೈಲ್ ಕಳ್ಳತನವಾಗಿರುವ ಬಗ್ಗೆ ಹಾಗೂ ಅಪರಿಚಿತರು ನಿಮ್ಮ ಹೆಸರಲ್ಲಿ ಸಾಲ ಪಡೆದು ವಂಚಿಸಿರುವ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಈಗಾಗಲೇ ದೂರು ದಾಖಲಿಸಿರುವುದು ಸೂಕ್ತ ಕ್ರಮ. ಮಾತ್ರವಲ್ಲ, ಇದು ನೀವು ಕೈಗೊಳ್ಳುವ ಮುಂದಿನ ಕಾನೂನು ಪ್ರಕ್ರಿಯೆಗೆ ಹೆಚ್ಚಿನ ನೆರವು ನೀಡುತ್ತದೆ.

ಈ ಎಫ್‌ಐಆರ್‌ನ ಪ್ರತಿಯನ್ನು, ನಿಮ್ಮ ಗುರುತಿನ ದಾಖಲೆಗಳೊಂದಿಗೆ, ಸಂಬಂಧಿತ ಹಣಕಾಸು ಸಂಸ್ಥೆಗೆ ಕಳುಹಿಸಿ. ಅಪರಿಚಿತರು ನಿಮ್ಮ ಮಾಹಿತಿಯನ್ನು ದುರ್ಬಳಕೆ ಮಾಡಿ ಸಾಲ ಪಡೆದಿರುವ ಬಗ್ಗೆ, ನಿಮ್ಮ ಕೆವೈಸಿ ವಿವರವನ್ನು ಸಂಸ್ಥೆಯವರು ತಪ್ಪಾಗಿ ಪರಿಗಣಿಸಿರುವುದರ ಬಗ್ಗೆ ಮಾಹಿತಿ ನೀಡಿ. ನೀಡಿರುವ ಸಾಲವನ್ನು ನಿಮ್ಮ ಹೆಸರಿನಿಂದ ರದ್ದುಪಡಿಸಲು ಕೋರಿ. ಮಾತ್ರವಲ್ಲ ನಿಮ್ಮ ಕ್ರೆಡಿಟ್ ದಾಖಲೆಗಳಿಂದ ಅಪರಿಚಿತರು ಪಡೆದಿರುವ ಮಾಹಿತಿ ತೆಗೆದುಹಾಕಲು ವಿನಂತಿಸಿ. ಈ ದೂರನ್ನು ಸಂಬಂಧಿತ ಸಂಸ್ಥೆಯ ಗ್ರಾಹಕರ ಅಹವಾಲು ಸ್ವೀಕರಿಸುವ ಅಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಸಲ್ಲಿಸಿ ಅಥವಾ ಇಮೇಲ್ ಮುಖಾಂತರ ಸಲ್ಲಿಸಿ.

ಸಮಸ್ಯೆಗೆ ಯಾವುದೇ ಪ್ರತಿಕ್ರಿಯೆ ಬರದಿದ್ದರೆ, ನೀವು ಸಿಬಿಲ್ ವೆಬ್‌ಸೈಟ್‌ನಲ್ಲಿ ಗ್ರಾಹಕರಿಗೆ ಸಂಬಂಧಿಸಿದ ನಿಮ್ಮ ದೂರು ದಾಖಲಿಸಿ. ಮೇಲಾಗಿ ಈಗಾಗಲೇ ಸಲ್ಲಿಸಿರುವ ಮಾಹಿತಿಯನ್ನು ಸಿಬಿಲ್ ಸಂಸ್ಥೆಗೂ ಕಳುಹಿಸಿ. ಸಾಮಾನ್ಯವಾಗಿ ಇಂತಹ ಅಹವಾಲುಗಳಿಗೆ 30 ದಿನದೊಳಗೆ ಪ್ರತ್ಯುತ್ತರ ಅಥವಾ ಕೈಗೊಂಡ ಕ್ರಮದ ಬಗ್ಗೆ ಅವರಿಂದ ಪ್ರತಿಕ್ರಿಯೆ ಅಥವಾ ನಿರ್ಣಯ ಬರಬೇಕು. ಮೊಬೈಲ್ ಆ್ಯಪ್ ಮೂಲಕ ನಕಲಿ ಸಾಲ ನಿಮ್ಮ ಹೆಸರಲ್ಲಿ ದಾಖಲಾಗಿರುವ ಕಾರಣ, ಸಾಲ ಮಂಜೂರು ಮಾಡಿರುವ ಸಂಸ್ಥೆ ಎನ್‌ಬಿಎಫ್‌ಸಿ ಆಗಿದೆಯೇ ಅಥವಾ ಇನ್ನಾವುದೋ ಸಂಸ್ಥೆಯೊಡನೆ ಸಹಭಾಗಿತ್ವದ ಆಧಾರದಲ್ಲಿ ಸಾಲ ವಿತರಣೆ ಆಗಿದೆಯೆ ಎಂಬ ಬಗ್ಗೆ ಮಾಹಿತಿ ಪಡೆದು, ಭಾರತೀಯ ರಿಸರ್ವ್ ಬ್ಯಾಂಕ್‌ನ ದೂರು ನಿರ್ವಹಣಾ ವ್ಯವಸ್ಥೆಯ (https://cms.rbi.org.in) ಮೂಲಕವೂ ದೂರು ದಾಖಲಿಸಬಹುದು.

ಇನ್ನೂ ಹೆಚ್ಚಿನ ಕಾನೂನು ಅವಕಾಶಗಳು ನಿಮಗಿರಬಹುದು. ಅದಕ್ಕಾಗಿ ಈ ವಿಚಾರವಾಗಿ ನುರಿತ ವಕೀಲರನ್ನು ಸಂಪರ್ಕಿಸಿ ಸಲಹೆ ಪಡೆಯಿರಿ. ಇನ್ನು ನಿಮ್ಮ ಹೆಸರಲ್ಲಿ ಅಕ್ರಮವಾಗಿ ಪಡೆದ ಸಾಲ ವಾಪಸಿಗೆ ಸಂಬಂಧಿಸಿ ಬಲವಂತದ ಬಡ್ಡಿ ವಸೂಲಿ ಅಥವಾ ಬೆದರಿಕೆ ಇತ್ಯಾದಿ ಬಂದರೆ, ವಕೀಲರ ಸಲಹೆಯ ಮೇರೆಗೆ ನ್ಯಾಯಾಲಯದ ಮೂಲಕ ಪರಿಹಾರ ಕಂಡುಕೊಳ್ಳುವುದು ಅನಿವಾರ್ಯವಾದೀತು. ಈ ಎಲ್ಲ ಪ್ರಕ್ರಿಯೆಯಲ್ಲಿ ನಿಮ್ಮ ಎಲ್ಲ ದಾಖಲೆಗಳು ಹಾಗೂ ಸಂಪರ್ಕಗಳ ನಿಖರ ಮಾಹಿತಿ ಇಟ್ಟುಕೊಳ್ಳುವುದು ಅವಶ್ಯಕ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

'ಶೇ 11.3ರವರೆಗೆ ವೇತನ ಹೆಚ್ಚಳ'

ಮುಂಬೈ (ಪಿಟಿಐ): ದೇಶದ ಕಾರ್ಪೊರೇಟ್ ಕಂಪನಿಗಳು ಪ್ರಸಕ್ತ ಹಣಕಾಸು ವರ್ಷದಲ್ಲಿ ತಮ್ಮ ನೌಕರರ ವೇತನವನ್ನು ಶೇಕಡ 6.2ರಿಂದ ಶೇ 11.3ರವರೆಗೆ ಹೆಚ್ಚಿಸಬಹುದು ಎಂದು ಟೀಮ್‌ಲೀಸ್ ಸರ್ವಿಸಸ್‌ನ ವರದಿಯೊಂದು ಅಂದಾಜು ಮಾಡಿದೆ.

ಬೇರೆ ಬೇರೆ ಉದ್ಯಮ ವಲಯಗಳಲ್ಲಿ ಈ ಪ್ರಮಾಣದಲ್ಲಿ ವೇತನ ಹೆಚ್ಚಳ ಆಗಬಹುದು ಎಂದು ವರದಿಯು ಹೇಳಿದೆ. ಆದರೆ ಕೆಲವು ಬಗೆಯ ಉದ್ಯೋಗಿಗಳ ವೇತನದಲ್ಲಿ ಶೇ 13.8ರವರೆಗೂ ಏರಿಕೆ ಆಗಬಹುದು



ಎಂದು ಅದು ಹೇಳಿದೆ.

20 ನಗರಗಳ 23 ಉದ್ಯಮ ವಲಯಗಳ 1,308 ಕಂಪನಿಗಳಿಂದ ಮಾಹಿತಿ ಪಡೆದು ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಇ.ವಿ ಹಾಗೂ ಇ.ವಿ. ಸಂಬಂಧಿತ ಮೂಲಸೌಕರ್ಯ ವಲಯದ ಉದ್ದಿಮೆಗಳಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ (ಶೇ 11.3ರಷ್ಟು) ವೇತನ ಹೆಚ್ಚಳ ಆಗಬಹುದು ಎಂದು ವರದಿಯು ಅಂದಾಜಿಸಿದೆ.

ಗ್ರಾಹಕ ಬಳಕೆಯ ಉಪಕರಣಗಳು (ಶೇ 10.7ರಷ್ಟು), ರಿಟೇಲ್ (ಶೇ 10.7ರಷ್ಟು), ಎನ್‌ಬಿಎಫ್‌ಸಿ (ಶೇ 10.4ರಷ್ಟು) ವಲಯಗಳು ನಂತರದ ಸ್ಥಾನಗಳಲ್ಲಿ ಇವೆ.

ಸುರಕ್ಷತೆ: ಏರ್‌ಇಂಡಿಯಾದಿಂದ 51 ಲೋಪ

ನವದೆಹಲಿ(ರಾಯಿಟರ್ಸ್): ವಿಮಾನಗಳ ಸುರಕ್ಷತೆ ವಿಚಾರವಾಗಿ ಜುಲೈನಲ್ಲಿ ಏರ್ ಇಂಡಿಯಾ ಸಂಸ್ಥೆಯು 51 ಲೋಪಗಳನ್ನು ಎಸಗಿರುವುದು ಕಂಡುಬಂದಿದೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಹೇಳಿದೆ.



ಕೆಲ ಪೈಲಟ್‌ಗಳಿಗೆ ಅಗತ್ಯ ತರಬೇತಿ ಕೊರತೆ, ಅನುಮೋದನೆಯಿರದ ಸಿಮು ಲೇಟರ್‌ಗಳ ಬಳಕೆ, ಗುಣಮಟ್ಟವಿಲ್ಲದ ರೋಸ್ಟರ್ ಸಿಸ್ಟಮ್‌ಗಳ ಬಳಕೆ ಸೇರಿದಂತೆ ವಿವಿಧ ಲೋಪಗಳಿರುವುದು ಜುಲೈಗೆ ಸಂಬಂಧಿಸಿದ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದೆ ಎಂದು ಡಿಜಿಸಿಎ ಹೇಳಿದೆ.

ಸರ್ಕಾರ ಒದಗಿಸಿರುವ ವರದಿಯಲ್ಲಿನ ಅಂಶಗಳನ್ನು ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ.

ಕಳೆದ ತಿಂಗಳು ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾದ ವಿಮಾನ ಅವಘಡಕ್ಕೆ ಈ ವಾರ್ಷಿಕ ಲೆಕ್ಕಪರಿಶೋಧನೆ ಸಂಬಂಧವಿಲ್ಲದೇ ಇದ್ದರೂ, ಈ ಅಪಘಾತದ ನಂತರ ಸಂಸ್ಥೆಯನ್ನು ಮತ್ತಷ್ಟು ಪರಿಶೀಲನೆಗೆ ಒಳಪಡಿಸಲಾಗುತ್ತಿದೆ.

'ಲೆವೆಲ್–1'ಕ್ಕೆ ಸಂಬಂಧಿಸಿದ ಏಳು ಮಹತ್ವದ ಲೋಪದೋಷಗಳನ್ನು ಜುಲೈ 30ರ ಒಳಗಾಗಿ ಏರ್‌ಇಂಡಿಯಾ ನಿವಾರಿಸಬೇಕಿದೆ. ಇತರ 44 ಲೋಪಗಳನ್ನು ಆಗಸ್ಟ್ 23ರ ಒಳಗಾಗಿ ಸರಿಪಡಿಸಬೇಕಿದೆ ಎಂದು 11 ಪುಟಗಳ ವರದಿಯಲ್ಲಿ ಡಿಜಿಸಿಎ ಹೇಳಿದೆ.

'ಲೆಕ್ಕಪರಿಶೋಧನೆ ವೇಳೆ ಸಂಸ್ಥೆಯು ಸಂಪೂರ್ಣ ಪಾರದರ್ಶಕತೆಯಿಂದ ನಡೆದುಕೊಂಡಿದೆ. ಸಂಸ್ಥೆ ಕೈಗೊಂಡಿರುವ ಪರಿಹಾರ ಕ್ರಮಗಳನ್ನು ಒಳಗೊಂಡ ಪ್ರತಿಕ್ರಿಯೆ ಡಿಜಿಸಿಎಗೆ ನಿಗದಿತ ಸಮಯದೊಳಗೆ ಸಲ್ಲಿಸಲಾಗುವುದು' ಎಂದು ಏರ್ ಇಂಡಿಯಾ ತಿಳಿಸಿದ್ದಾಗಿ ರಾಯಿಟರ್ಸ್ ವರದಿ ಮಾಡಿದೆ.

ಟಾಟಾ ಸಮೂಹ ಒಡೆತನದ ಏರ್ ಇಂಡಿಯಾ, 34 ಬೋಯಿಂಗ್ 787, 23 ಬೋಯಿಂಗ್ 777 ವಿಮಾನಗಳಿವೆ ಎಂದು 'ಫ್ಲೈಟ್‌ರೇಡಾರ್24' ವೆಬ್‌ಸೈಟ್‌ನಲ್ಲಿ ಮಾಹಿತಿ ಇದೆ.

ಬುಕರ್ ಪ್ರಶಸ್ತಿಯ ಮೊದಲ ಸುತ್ತಿಗೆ ಕಿರಣ್ ದೇಸಾಯಿ ಕೃತಿ

ಲಂಡನ್(ಎಪಿ): ಹೆಸರಾಂತ ಲೇಖಕಿ ಕಿರಣ್ ದೇಸಾಯಿ ಅವರ ಇತ್ತೀಚಿನ ಕಾದಂಬರಿ 'ದಿ ಲೋನ್ಲಿನೆಸ್ ಆಫ್ ಸೋನಿಯಾ ಆ್ಯಂಡ್ ಸನಿ' ಕೃತಿಯು ಪ್ರತಿಷ್ಠಿತ ಬುಕರ್ ಪ್ರಶಸ್ತಿಯ ಮೊದಲ ಸುತ್ತಿಗೆ ಆಯ್ಕೆಯಾಗಿದೆ.



ಕಿರಣ್ ದೇಸಾಯಿ

ಅವರ 'ದಿ ಇನ್‌ಹೆರಿಟೆನ್ಸ್ ಆಫ್ ಲಾಸ್' ಕೃತಿಗೆ ಬುಕರ್ ಪ್ರಶಸ್ತಿ ಲಭಿಸಿ 19 ವರ್ಷಗಳ ನಂತರ ಅವರ ಮತ್ತೊಂದು ಕೃತಿಯು ಮತ್ತೆ ಸ್ಥಾನ ಪಡೆದಂತಾಗಿದೆ.

ಬುಕರ್ ಪ್ರೈಜ್ ಫೌಂಡೇಷನ್, ಈ ಬಗ್ಗೆ ಮಂಗಳವಾರ ಘೋಷಣೆ ಮಾಡಿದೆ. ಒಟ್ಟು ಒಂಬತ್ತು ದೇಶಗಳ ಏಳು ಜನ ಮಹಿಳೆಯರು ಹಾಗೂ ಆರು ಜನ ಪುರುಷರು ರಚಿಸಿರುವ ಕಾದಂಬರಿಗಳು ಪಟ್ಟಿಯಲ್ಲಿವೆ.

ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ: ಪತ್ತೆಯಾದ ಆಸ್ತಿ ವಿವರ

- **ಆರ್.ಜಯಣ್ಣ**
ಕಾರ್ಯಪಾಲಕ ಎಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಹಾಸನ ವಿಭಾಗ, ಹಾಸನ
₹5.59 ಕೋಟಿ ಮೌಲ್ಯದ 17 ನಿವೇಶನ, 8 ಮನೆ, 1 ಎಕರೆ 36 ಗುಂಟೆ ಕೃಷಿ ಜಮೀನು
₹69.35 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹6.28 ಕೋಟಿ ಆಸ್ತಿಯ ಒಟ್ಟು ಮೌಲ್ಯ

- **ಕೆ.ಓಂಪ್ರಕಾಶ್**
ಹಿರಿಯ ಸಹಾಯಕ ನಿರ್ದೇಶಕ, ತೋಟಗಾರಿಕೆ ವಿಭಾಗ, ಬಿಡಿಎ, ಬೆಂಗಳೂರು
₹4.78 ಕೋಟಿ ಮೌಲ್ಯದ 2 ನಿವೇಶನ, 2 ಮನೆ
₹1.47 ಕೋಟಿ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹6.26 ಕೋಟಿ ಆಸ್ತಿಯ ಒಟ್ಟು ಮೌಲ್ಯ

- **ಡಾ. ಜಿ.ವೆಂಕಟೇಶ್**
ತಾಲ್ಲೂಕು ವೈದ್ಯಾಧಿಕಾರಿ, ಹಿರಿಯೂರು, ಚಿತ್ರದುರ್ಗ
₹2.87 ಕೋಟಿ ಮೌಲ್ಯದ 5 ನಿವೇಶನ, 2 ಮನೆ, 3 ಎಕರೆ 5 ಗುಂಟೆ ಕೃಷಿ ಜಮೀನು
₹67.49 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹3.54 ಕೋಟಿ ಆಸ್ತಿಯ ಒಟ್ಟು ಮೌಲ್ಯ

- **ಎನ್.ವೆಂಕಟೇಶ್**
ತೆರಿಗೆ ಮೌಲ್ಯಮಾಪಕ, ಶೆಟ್ಟಿಹಳ್ಳಿ ಉಪವಿಭಾಗ, ಬಿಬಿಎಂಪಿ, ಬೆಂಗಳೂರು
₹2.25 ಕೋಟಿ ಮೌಲ್ಯದ 2 ನಿವೇಶನ, 3 ಮನೆ, 1 ತೋಟದ ಮನೆ, 6 ಎಕರೆ 17 ಗುಂಟೆ ಕೃಷಿ ಜಮೀನು
₹32.50 ಲಕ್ಷ ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು ಮತ್ತು ಗೃಹೋಪಯೋಗಿ ವಸ್ತುಗಳು
₹2.57 ಕೋಟಿ ಆಸ್ತಿಯ ಒಟ್ಟು ಮೌಲ್ಯ

ಶಾಸಕರ ಅಸಮಾಧಾನ, ಮುನಿಸು ತಣಿಸಲು ಶಾಸಕರ ಜೊತೆ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಉಸ್ತುವಾರಿ ಸಚಿವರ ಸಮ್ಮುಖ ಅಹವಾಲು ಆಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರ ಸಾವಿರ ಕೋಟಿಗೂ ಹೆಚ್ಚು ಮೊತ್ತದ ಅಭಿವೃದ್ಧಿ ಕಾಮಗಾರಿಗಳನ್ನು ಮಂಜೂರು ಮಾಡಿದೆ. ಈ ವಿಚಾರವನ್ನು ಮನೆ ಬಾಗಿಲಿಗೆ ತಲುಪಿಸುವ ಜೊತೆಗೆ ಫಲಾನುಭವಿಗಳ ಜೊತೆ ನಿರಂತರ ಸಂಪರ್ಕದಲ್ಲಿ ಇರಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರಿಗೆ ಕಿವಿಮಾತು ಹೇಳಿದ್ದಾರೆ.

ಸಚಿವರು ತಮ್ಮ ಮಾತಿಗೆ ಕಿಮ್ಮತ್ತು ನೀಡುವುದಿಲ್ಲ, ಅಭಿವೃದ್ಧಿ ಕೆಲಸಗಳಿಗೆ ನಿರೀಕ್ಷೆಯಂತೆ ಅನುದಾನ ಸಿಗುವುದಿಲ್ಲ ಎಂಬ ಕಾರಣಕ್ಕೆ ಅಸಮಾಧಾನಗೊಂಡಿರುವ ಶಾಸಕರ ಮುನಿಸು ತಣಿಸಲು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯನ್ನು ಪ್ರತಿನಿಧಿಸುವ ಸಚಿವರು ಮತ್ತು ಶಾಸಕರ ಜೊತೆ ಮಂಗಳವಾರದಿಂದ ಸಿದ್ದರಾಮಯ್ಯ ಅವರು ಸಭೆ ಆರಂಭಿಸಿದ್ದಾರೆ.

ಮೊದಲ ದಿನವಾದ ಮಂಗಳವಾರ ಅವರು ಮೈಸೂರು, ಚಾಮರಾಜನಗರ, ತುಮಕೂರು, ಕೊಡಗು, ಹಾಸನ ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಸಚಿವರು, ಆಯಾ ಜಿಲ್ಲೆಯನ್ನು ಪ್ರತಿನಿಧಿಸುವ ಸಚಿವರು ಮತ್ತು ಶಾಸಕರ ಜೊತೆ ಸಭೆ ನಡೆಸಿದರು.

'ಎಲ್ಲ ಕೆಡಿಪಿ ಸಭೆಗಳಲ್ಲಿ ಸಚಿವರು, ಶಾಸಕರು ಅರ್ಥಪೂರ್ಣವಾಗಿ



ಮೈಸೂರು ಜಿಲ್ಲೆಯ ಸಚಿವರು, ಶಾಸಕರ ಜೊತೆ ಸಿದ್ದರಾಮಯ್ಯ ಸಭೆ ನಡೆಸಿದರು

> **ಜಿಲ್ಲೆಗಳ ಸಮಸ್ಯೆಗಳು, ಅಭಿವೃದ್ಧಿ ಕಾರ್ಯಗಳ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿದ್ದೇವೆ. ಶಾಸಕರು ಪಟ್ಟಿ ಕೊಟ್ಟಿದ್ದಾರೆ. ಅದಕ್ಕೆ ಸ್ಪಂದಿಸುವ ಭರವಸೆಯನ್ನು ಅವರು ನೀಡಿದ್ದಾರೆ**
> **ಕೆ. ವೆಂಕಟೇಶ್,** ಪಶು ಸಂಗೋಪನಾ ಸಚಿವ

> **ಜಿಲ್ಲೆಯಲ್ಲಿನ ಸಣ್ಣಪುಟ್ಟ ಗೊಂದಲಗಳ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿದ್ದೇವೆ. ಅನುದಾನ ಮತ್ತು ಒಗ್ಗಟ್ಟಿನ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿದ್ದೇವೆ**
> **ಜಿ. ಪರಮೇಶ್ವರ**
> ತುಮಕೂರು ಉಸ್ತುವಾರಿ ಸಚಿವ

ಭಾಗವಹಿಸಬೇಕು. ಜನರ ಸಮಸ್ಯೆಗಳು, ಕಾಮಗಾರಿಗೆ ಇರುವ ತಾಂತ್ರಿಕ ತೊಂದರೆಗಳು, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ನಿಧಾನ ಧೋರಣೆ ಬಗ್ಗೆ ಈ ಸಭೆಗಳಲ್ಲಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಬೇಕು. ಜಿಲ್ಲೆಯಲ್ಲಿ ಪ್ರಮುಖವಾಗಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳ ಸ್ಥಿತಿಗತಿ, ಕೃಷಿ ಚಟುವಟಿಕೆ ಮತ್ತು ಬಿಡುಗಡೆಯಾಗಿರುವ ಅನುದಾನದಲ್ಲಿ ಖರ್ಚಾಗಿರುವ ಹಣದ ಪ್ರಮಾಣ, ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ ನಿಗದಿ ಮಾಡಬೇಕು' ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು.

ಕ್ಷೇತ್ರವಾರು ಬಿಡುಗಡೆಯಾಗಿರುವ ಅನುದಾನ, ಇಲಾಖಾವಾರು ಅನುದಾನ, ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳ ಜಾರಿಯ ಸ್ಥಿತಿಗತಿ, ಶಾಸಕರ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು, ಪ್ರಮುಖವಾಗಿ ಕ್ಷೇತ್ರಕ್ಕೆ ಆಗಬೇಕಾದ ಕೆಲಸಗಳಿಗೆ ಪ್ರಸ್ತಾವ ಸಲ್ಲಿಸುವ ಕುರಿತು ಮುಖ್ಯಮಂತ್ರಿ ಮಾಹಿತಿ ಪಡೆದುಕೊಂಡು ಸಲಹೆ, ಸೂಚನೆಗಳನ್ನು ನೀಡಿದರು.

ಪ್ರತ್ಯೇಕ ಸಭೆ ನಡೆಸಿದ ಡಿ.ಕೆ. ಶಿವಕುಮಾರ್

ಸಚಿವರು, ಶಾಸಕರ ಜೊತೆ ಮುಖ್ಯಮಂತ್ರಿ ನಡೆಸುತ್ತಿರುವ ಸಭೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಆಹ್ವಾನ ನೀಡದೇ ಇರುವುದು ಚರ್ಚೆಗೆ ಕಾರಣವಾಗಿದೆ.

ಮುಖ್ಯಮಂತ್ರಿ ಸಭೆ ನಡೆಸಿದ ವೇಳೆಯೇ, ಶಿವಕುಮಾರ್ ಅವರು ಬೆಂಗಳೂರಿಗೆ ಸಂಬಂಧಿಸಿದ ಎಲ್ಲ ಇಲಾಖೆಗಳ ಪ್ರಮುಖರ ಜತೆ ವಿಧಾನಸೌಧದಲ್ಲಿ ಪ್ರತ್ಯೇಕ ಸಭೆ ನಡೆಸಿದರು.

ಶಾಸಕರ ಜತೆಗಿನ ಸಭೆಗೆ ಆಮಂತ್ರಣ ಇಲ್ಲದಿರುವುದರ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅವರು (ಸಿದ್ದರಾಮಯ್ಯ) ತಮ್ಮ ಅಧಿಕಾರ ಬಳಸಿಕೊಂಡು ಶಾಸಕರ ಸಭೆ ಮಾಡುತ್ತಿದ್ದಾರೆ. ಅದರಲ್ಲಿ ತಪ್ಪೇನಿದೆ. ಈ ವಿಚಾರದಲ್ಲಿ ನನಗೆ ಏನು ಕಷ್ಟ ಆಗದಿದ್ದರೂ ನಿಮಗೆ (ಮಾಧ್ಯಮದವರಿಗೆ) ಏನು ಕಷ್ಟ' ಎಂದು ಪ್ರಶ್ನಿಸಿದರು.

'ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಶಾಸಕರನ್ನು ಭೇಟಿ ಮಾಡಿದ ಬಳಿಕ ಅನೇಕ ವಿಚಾರಗಳನ್ನು ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದಾರೆ. ಶಾಸಕರ ಅಹವಾಲು ಆಲಿಸಲು ಅವರು ಸಭೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ನನಗೆ ಯಾವುದೇ ಆಕ್ಷೇಪ ಇಲ್ಲ' ಎಂದರು.

ಪ್ರತ್ಯೇಕ ಸಭೆ ನಡೆಸಿದ ಬಗ್ಗೆ ಮಾತನಾಡಿದ ಅವರು, 'ಬೆಂಗಳೂರಿನ ಅಭಿವೃದ್ಧಿಗೆ ನಾವು ಪ್ರತ್ಯೇಕ ಕಾರ್ಯಸೂಚಿ ಹೊಂದಿದ್ದೇವೆ. ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬೇಕಿದೆ. ಹೀಗಾಗಿ, ನಾನು ಕೂಡಾ ಜನಪ್ರತಿನಿಧಿಗಳ ಜೊತೆ ಸಭೆ ನಡೆಸಿದ್ದೇನೆ' ಎಂದರು.

> **ಜಿಲ್ಲೆಯಲ್ಲಿ ಸಮಸ್ಯೆ ಏನೂ ಇಲ್ಲ. ಹೀಗಾಗಿ, ಸಮಸ್ಯೆ ಬಗೆಹರಿಸುವ ಪ್ರಶ್ನೆಯೇ ಬರುವುದಿಲ್ಲ. ಎಲ್ಲರೂ ಸಾಮರಸ್ಯದಿಂದ ಇದ್ದೇವೆ. ಮೈಸೂರಿಗೆ ಮುಖ್ಯಮಂತ್ರಿ ಹೆಚ್ಚಿನ ಅನುದಾನ ಕೊಟ್ಟಿದ್ದಾರೆ**
> **ಎಚ್.ಸಿ. ಮಹದೇವಪ್ಪ**
> ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ಆಗೊಂದು, ಈಗೊಂದು ಹಿಟ್ ಸಿನಿಮಾಗಳ ಹೊರತಾಗಿ ಈ ವರ್ಷ ಚಿತ್ರಮಂದಿರಗಳು ಜನರಿಲ್ಲದೇ ಬಿಕೋ ಎಂದಿದ್ದೇ ಹೆಚ್ಚು. ಆದರೆ ಜುಲೈ ಚಿತ್ರಮಂದಿರಗಳಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿದೆ. ಕನ್ನಡ, ಹಿಂದಿ, ತೆಲುಗು, ತಮಿಳು ಭಾಷೆಯ ಕೆಲ ಸಿನಿಮಾಗಳು ಯಶಸ್ವಿ ಪ್ರದರ್ಶನ ಕಾಣುತ್ತಿದ್ದು, ಬೇಡಿಕೆ ಇದ್ದರೂ ಸಿನಿಮಾಗಳ ಪ್ರದರ್ಶನಕ್ಕೆ ಚಿತ್ರಮಂದಿರಗಳೇ ಸಿಗುತ್ತಿಲ್ಲ ಎಂಬ ಸ್ಥಿತಿ ನಿರ್ಮಾಣಗೊಂಡಿದೆ!

ಜುಲೈ ಸಿನಿಮಾ
ಸುಗ್ಗಿ ಕಾಲ



ಮಾಹಿರ್

ಆ.1ಕ್ಕೆ 'ವೃತ್ತ' ತೆರೆಗೆ

ಲಿಖಿತ್ ಕುಮಾರ್ ನಿರ್ದೇಶನದ 'ವೃತ್ತ' ಸಿನಿಮಾ ಆ.1ರಂದು ತೆರೆಕಾಣುತ್ತಿದೆ. ಮಿಸ್ಟ್ರಿ ಥ್ರಿಲ್ಲರ್ ಜಾನರ್‌ನಲ್ಲಿರುವ ಈ ಸಿನಿಮಾ ಒಂದು ರಾತ್ರಿಯಲ್ಲಿ ನಡೆಯುವ ಘಟನಾವಳಿಗಳನ್ನು ಒಳಗೊಂಡಿದೆ.

ಈ ಚಿತ್ರದ ಮೂಲಕ ನಿರ್ದೇಶಕ ಲಿಖಿತ್ ಕುಮಾರ್ ನಿರ್ದೇಶಕನಾಗಿ ಮೊದಲ ಹೆಜ್ಜೆ ಇಟ್ಟಿದ್ದಾರೆ. 'ಸಿದ್ಧಾರ್ಥ್' ಎಂಬ ಪಾತ್ರದ ಸುತ್ತ ನಡೆಯುವ ಕಥೆ ಇದರಲ್ಲಿದ್ದು, ಸಿದ್ಧಾರ್ಥ್‌ಗೆ ಆತನ ಮನಃಸ್ಥಿತಿಯೇ ಶತ್ರು. ಒಂದು ರಾತ್ರಿ, ಒಂದು ಕರೆ ಹಾಗೂ ನಾಯಕ ದಾರಿಯಲ್ಲಿ ತೆಗೆದುಕೊಳ್ಳಬಹುದಾದ ರಾಂಗ್ ಟರ್ನ್‌ನಿಂದ ಏನೆಲ್ಲಾ ಸಂಭವಿಸಲಿದೆ ಎಂಬುವುದು ಚಿತ್ರದ ತಿರುಳು ಎಂದಿದೆ ಚಿತ್ರತಂಡ. ಮಾಹಿರ್ ಮೊಹಿಯುದ್ದೀನ್ 'ಸಿದ್ಧಾರ್ಥ್' ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಜಯಣ್ಣ ಫಿಲ್ಮ್ಸ್ ಚಿತ್ರದ ವಿತರಣೆ ಮಾಡುತ್ತಿದೆ.

'ಸಂಕಲನಕಾರನಾಗಿ ಚಿತ್ರರಂಗಕ್ಕೆ ಅಡಿಯಿಟ್ಟ ನಾನು ನಂತರ ಒಂದೆರಡು ಕಿರುಚಿತ್ರಗಳನ್ನೂ ನಿರ್ದೇಶಿಸಿದೆ. ಈಗಾಗಲೇ ಚಿತ್ರದ ಮೋಷನ್ ಪೋಸ್ಟರ್ ಹಾಗೂ 'ಅದು ಯಾವ ಮಾಯೆಯೋ..' ಎಂಬ ಹಾಡಿನ ಲಿರಿಕಲ್ ವೀಡಿಯೊ ಬಿಡುಗಡೆಯಾಗಿದೆ. ಚಿತ್ರವನ್ನು ವೀಕ್ಷಿಸಿದ ನಟ ನೀನಾಸಂ ಸತೀಶ್ ಅವರು ಚಿತ್ರದ ಕಾಂಟೆಂಟ್ ಮೆಚ್ಚಿ ತಮ್ಮ ಬ್ಯಾನರ್ ಮೂಲಕ ಪ್ರಸ್ತುತಪಡಿಸುತ್ತಿದ್ದಾರೆ' ಎಂದು ಲಿಖಿತ್ ಕುಮಾರ್ ಹೇಳಿದರು.

'ಸಾಕಷ್ಟು ನಿಗೂಢತೆಯನ್ನು ಹೊಂದಿರುವ ಮಿಸ್ಟ್ರಿ ಥ್ರಿಲ್ಲರ್ ಜಾನರ್‌ನ ಚಿತ್ರ ಇದಾಗಿದ್ದರೂ, ಅದರ ನಿರೂಪಣಾ ಶೈಲಿ ವಿಶಿಷ್ಟವಾಗಿದೆ' ಎನ್ನುತ್ತಾರೆ ಲಿಖಿತ್.

ಲಕ್ಷಯ್ ಆರ್ಟ್ಸ್ ಬ್ಯಾನರ್‌ನಡಿ ಟಿ. ಶಿವಕುಮಾರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಯೋಗೇಶ್‌ಗೌಡ ಕಥೆ, ಶಂಕರ ರಾಮನ್ ಸಂಭಾಷಣೆ ಚಿತ್ರಕ್ಕಿದೆ. ಲಿಖಿತ್ ಕುಮಾರ್ ಅವರೇ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಮಾಹಿರ್ ಜೊತೆ ಹರಿಣಿ ಸುಂದರರಾಜನ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸದ್ಯದಲ್ಲೇ ಚಿತ್ರದ ಟ್ರೇಲರ್ ಬಿಡುಗಡೆಯಾಗಲಿದ್ದು, ಗೌತಮ್ ಕೃಷ್ಣ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನ ಚಿತ್ರಕ್ಕಿದೆ.



ಎರಡು ವಾರಗಳ (ಜು.18) ಹಿಂದೆ ತೆರೆಕಂಡ ಬಾಲಿವುಡ್‌ನ 'ಸೈಯಾರಾ' ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನು ಮರಳಿ ಕರೆತಂದಿತ್ತು. ಅಹಾನ್ ಪಾಂಡೆ ಮತ್ತು ಅನೀತ್ ಪಡ್ಡಾ ನಟನೆಯ ಚಿತ್ರ ಬಿಡುಗಡೆಗೊಂಡ ನಾಲ್ಕು ದಿನಗಳಲ್ಲಿಯೇ ₹100 ಕೋಟಿ ಗಳಿಕೆ ಕಂಡಿತ್ತು. ಯುವ ಪ್ರೇಮಿಗಳ ಕಥೆಯನ್ನು ಹೊಂದಿರುವ ಮೋಹಿತ್ ಸೂರಿ ನಿರ್ದೇಶನದ ಈ ಚಿತ್ರ ರಾಜ್ಯದಲ್ಲಿ ₹10 ಕೋಟಿಗೂ ಅಧಿಕ ಹಣ ಬಾಚಿಕೊಂಡಿದೆ. ಸದ್ಯ ₹300 ಕೋಟಿ ಗಳಿಕೆ ಕಂಡಿರುವ ಚಿತ್ರ ಈಗಲೂ ಒಂದಷ್ಟು ಕಡೆ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ.

ಇದರೊಂದಿಗೆ ಕಳೆದ ವಾರ ತೆರೆ ಕಂಡ ರಾಜ್ ಬಿ.ಶೆಟ್ಟಿ ತಂಡದ 'ಸು ಫ್ರಂ ಸೋ' ಚಿತ್ರ ಭರ್ಜರಿಯಾಗಿ ಜನರನ್ನು ಚಿತ್ರಮಂದಿರಗಳತ್ತ ಕರೆತಂದಿದೆ. ಪ್ರೇಕ್ಷಕರಿಗೆ ಟಿಕೆಟ್ ಸಿಗದೆ ಬೆಳಿಗ್ಗೆ 6.30ರಿಂದಲೇ ಪ್ರದರ್ಶನ ಕಾಣುವಂತಾಯ್ತು. ವಾರಾಂತ್ಯ ಮಾತ್ರವಲ್ಲದೇ ವಾರದ ದಿನಗಳಲ್ಲಿಯೂ ಚಿತ್ರಪ್ರೇಮಿಗಳನ್ನು ಸೆಳೆಯುತ್ತಿದ್ದು, ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 10.30ರವರೆಗಿನ ಬಹುತೇಕ ಪ್ರದರ್ಶನಗಳು ಹೌಸ್‌ಫುಲ್. ಜೆ.ಪಿ.ತೂಮಿನಾಡು ನಿರ್ದೇಶನದ ಚಿತ್ರ ಉಳಿದೆಲ್ಲ ಭಾಷೆಯ ಚಿತ್ರಗಳನ್ನು ಹಿಂದಿಕ್ಕಿ ಗಳಿಕೆಯಲ್ಲಿ ನಾಗಾಲೋಟ ಮುಂದುವರಿಸಿದೆ. ಪ್ರದರ್ಶನಗಳ ಸಂಖ್ಯೆ ಏರುತ್ತಲೇ ಇದೆ. ಏಕಪರದೆ ಚಿತ್ರಮಂದಿರಗಳಿಗೂ ಈ ಸಿನಿಮಾ ವರವಾಗಿ ಪರಿಣಮಿಸಿದೆ. ಹೀಗಾಗಿ ಚಿತ್ರಮಂದಿರಗಳ ಮಾಲೀಕರು ಸಂತಸದಲ್ಲಿದ್ದಾರೆ.

ಕಳೆದ ವಾರ ತೆಲುಗು ಸೇರಿದಂತೆ ಬಹುಭಾಷೆಗಳಲ್ಲಿ ತೆರೆಕಂಡ ಪವನ್ ಕಲ್ಯಾಣ್ ಅಭಿನಯದ 'ಹರಿ ಹರ ವೀರ ಮಲ್ಲು ಭಾಗ–1' ಕೂಡ ಜನಮನ್ನಣೆ ಗಳಿಸುತ್ತಿದೆ. ಗಳಿಕೆಯಲ್ಲಿ ಈಗಾಗಲೇ ₹100 ಕೋಟಿ ಗಡಿ ದಾಟಿರುವ ಚಿತ್ರ ರಾಜ್ಯದಲ್ಲಿಯೂ ಪ್ರಬಲ ಪೈಪೋಟಿ ನೀಡುತ್ತಿದೆ. 'ಸು ಫ್ರಂ ಸೋ' ಬಿರುಗಾಳಿಯ ನಡುವೆಯೂ 'ವೀರ ಮಲ್ಲು' ಒಂದಷ್ಟು ಹೌಸ್‌ಫುಲ್ ಪ್ರದರ್ಶನಗಳನ್ನು ಕಾಣುತ್ತಿದೆ. ಬೆಂಗಳೂರೊಂದರಲ್ಲಿಯೇ ನೂರಕ್ಕೂ ಹೆಚ್ಚು ಪ್ರದರ್ಶನಗಳಿವೆ.

ವಿಜಯ್ ಸೇತುಪತಿ ಹಾಗೂ ನಿತ್ಯಾ ಮೆನನ್ ಇಬ್ಬರೂ ತಮ್ಮದೇ ಆದ ಅಭಿಮಾನಿ ಬಳಗ ಹೊಂದಿದ್ದಾರೆ. ಈ ಜೋಡಿ ಭಿನ್ನ ಸಿನಿಮಾಗಳ ಆಯ್ಕೆಯಿಂದಲೇ ಜನಪ್ರಿಯ. ಇವರ 'ತಲೈವನ್ ತಲೈವಿ' ಕೂಡ ಕಳೆದ ವಾರ ತೆರೆಕಂಡು ಒಂದಷ್ಟು ಸಿನಿರಸಿಕರನ್ನು ಚಿತ್ರಮಂದಿರಗಳತ್ತ ಸೆಳೆಯುತ್ತಿದೆ. ಚಿತ್ರಕ್ಕೆ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿದೆ. ಆದಾಗ್ಯೂ ಈ ಇಬ್ಬರ ಮೇಲಿನ ಅಭಿಮಾನದಿಂದ ಒಂದಷ್ಟು ಶೋಗಳು ಹೌಸ್‌ಫುಲ್ ಆಗುತ್ತಿವೆ.

ಇಷ್ಟೆಲ್ಲ ಸಿನಿಮಾಗಳ ಅಬ್ಬರದ ನಡುವೆ ತಮಿಳಿನಲ್ಲೊಂದು ಚಿತ್ರ ಸದ್ದಿಲ್ಲದೇ ಜನಪ್ರಿಯತೆ ಗಳಿಸುತ್ತಿದೆ. ಫಹಾದ್ ಫಾಸಿಲ್, ವಡಿವೇಲು ನಟನೆಯ 'ಮಾರೀಸನ್ (ಮಾರೀಚ)' ಚಿತ್ರ ಕೂಡ ಇಬ್ಬರು ಜನಪ್ರಿಯ ನಟರಿಂದಾಗಿ ಒಂದಷ್ಟು ಚಿತ್ರಮಂದಿರಗಳನ್ನು ಭರ್ತಿ ಮಾಡುತ್ತಿದೆ. ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದರೂ ಪ್ರಬಲ ಪೈಪೋಟಿಯಿಂದಾಗಿ ಈ ಚಿತ್ರ ಗಳಿಕೆಯಲ್ಲಿ ನಿರೀಕ್ಷಿತ ಮಟ್ಟ ತಲುಪಿಲ್ಲ.

'ಸದ್ಯ ಮಾಲ್, ಚಿತ್ರಮಂದಿರಗಳ ತುಂಬ ಜನ ತುಂಬಿ ತುಳುಕುತ್ತಿರುವುದು ನೋಡಲು ಖುಷಿಯಾಗುತ್ತಿದೆ. ಇದರಿಂದ ಅಲ್ಲಿನ ಸುತ್ತಮುತ್ತಲಿನ ವಹಿವಾಟುಗಳು ಚಿಗುರಿವೆ' ಎನ್ನುತ್ತಾರೆ ಶ್ರೀನಿವಾಸ ಚಿತ್ರಮಂದಿರದ ಮಾಲೀಕ ದೇವೇಂದ್ರರೆಡ್ಡಿ.



ನವೆಂಬರ್‌ನಲ್ಲಿ ಹುಲಿಬೀರ ತೆರೆಗೆ

ಉತ್ತರ ಕರ್ನಾಟಕದವರೇ ಸೇರಿ ನಿರ್ಮಾಣ ಮಾಡಿರುವ ಚಿತ್ರ 'ಹುಲಿಬೀರ' ನವೆಂಬರ್‌ನಲ್ಲಿ ತೆರೆಗೆ ಬರಲು ಸಜ್ಜಾಗಿದೆ.

ಈ ಹಿಂದೆ 'ರಂಗ್‌ಬಿರಂಗಿ' ಚಿತ್ರ ನಿರ್ದೇಶಿಸಿದ್ದ ಮದರಂಗಿ ಮಲ್ಲಿಕಾರ್ಜುನ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. 'ಯರ್ರಾಬಿರ್ರಿ' ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದ ಅಂಜನ್ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಚೈತ್ರ ತೋಟದ ನಾಯಕಿ ಪಾತ್ರ ನಿರ್ವಹಿಸಿದ್ದಾರೆ. ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಚಿತ್ರಕ್ಕೆ ವೀರ ಸಮರ್ಥ ಸಂಗೀತ ಸಂಯೋಜನೆ, ಸನಾತನ ಛಾಯಾಚಿತ್ರಗ್ರಹಣವಿದೆ.

ಸಾಯಿ ಸ್ಟಾರ್ ಸಿನಿಮಾಸ್ ಮೂಲಕ ದಾವಲ ಸಾಹೇಬ ಹುಣಶೀಮರದ, ಅಶೋಕ್ ಎನ್.ತುರುವೇಕೆರೆ ಹಾಗೂ ಸುಜಾತ ಗಿರೀಶ್ ಸೇರಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. 'ಇದು ನನ್ನ ನಿರ್ದೇಶನದ ಐದನೇ ಚಿತ್ರ. ನಾಲ್ಕು ವರ್ಷಗಳ ಹಿಂದೆಯೇ ಈ ಚಿತ್ರ ಪ್ರಾರಂಭವಾಗಿತ್ತು. 'ಹುಲಿಬೀರ' ನಾಯಕನ ಹೆಸರು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಲ್ಲದಕ್ಕೂ ಧೈರ್ಯದಿಂದ ಮುನ್ನುಗ್ಗುವ ಹುಡುಗರನ್ನು ಈ ರೀತಿ ಕರೆಯುತ್ತಾರೆ. ನಾಯಕ ಬೀರ ಹಳ್ಳಿಯ ಯಾವುದೇ ಸಮಸ್ಯೆ ಇರಲಿ ಮುಂದೆನಿಂತು ಕೆಲಸ ಮಾಡುತ್ತಾನೆ. ಹಳ್ಳಿಗಳಿಂದ ನಗರಕ್ಕೆ ಯುವಜನತೆಯ ವಲಸೆಯನ್ನು ಬೀರ ಹೇಗೆ ಬಗೆಹರಿಸುತ್ತಾನೆ ಎನ್ನುವುದೇ ಚಿತ್ರದ ಕಥೆ' ಎಂದಿದ್ದಾರೆ ಮದರಂಗಿ ಮಲ್ಲಿಕಾರ್ಜುನ.

ಬಾದಾಮಿ ಸುತ್ತಮುತ್ತಲ ಗ್ರಾಮಗಳಲ್ಲಿ ಎರಡು ಹಂತಗಳಲ್ಲಿ 51 ದಿನ ಈ ಚಿತ್ರದ ಚಿತ್ರೀಕರಣ ನಡೆದಿದೆ. ರಂಗಾಯಣ ರಘು ಅವರು ಗ್ರಾಮದ ಹಿರಿಯರಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರವೀಗ ಡಬ್ಬಿಂಗ್ ಹಂತದಲ್ಲಿದ್ದು ನವೆಂಬರ್ ವೇಳೆಗೆ ರಿಲೀಸ್ ಮಾಡುವ ಯೋಜನೆಯಿದೆ ಎಂದಿದೆ ಚಿತ್ರತಂಡ.

ಸಂಗೀತ ನಿರ್ದೇಶಕ ವೀರ್ ಸಮರ್ಥ ಮಾತನಾಡಿ 'ಚಿತ್ರದಲ್ಲಿ ಜನಪದ, ಮಣ್ಣಿನ ಸೊಗಡಿನ ನಾಲ್ಕು ಹಾಡುಗಳು ಇವೆ. ನಿರ್ದೇಶಕರೇ ಎರಡು ಹಾಡುಗಳನ್ನು, ಶಿವು ಬೆರ್ಗಿ, ನಾಗೇಂದ್ರ ಪ್ರಸಾದ್ ಒಂದೊಂದು ಹಾಡು ಬರೆದಿದ್ದಾರೆ. ಸರಿಗಮಪ ಖ್ಯಾತಿಯ ಶಿವಾನಿ ಹಾಡೊಂದಕ್ಕೆ ದನಿಯಾಗಿದ್ದಾರೆ' ಎಂದರು.

ಚಿಟಿಕೆ ಸುದ್ದಿ

ಎನ್‌ಕೌಂಟರ್: ಒಬ್ಬ ನಕ್ಸಲ್ ಹತ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಮತ್ತು ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ನಕ್ಸಲ್ ಹತನಾಗಿದ್ದಾನೆ. ಈ ವೇಳೆ ನಡೆದ ಕಚ್ಚಾ ಬಾಂಬ್ ಸ್ಫೋಟದಲ್ಲಿ ಮೂವರು ಭದ್ರತಾ ಸಿಬ್ಬಂದಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ವಿಶೇಷ ಕಾರ್ಯಪಡೆ (ಎಸ್‌ಟಿಎಫ್), ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆಗಳು (ಸಿಆರ್‌ಪಿಎಫ್) ಜಂಟಿಯಾಗಿ ಸೋಮವಾರದಿಂದ ನಕ್ಸಲ್ ವಿರೋಧಿ ಕಾರ್ಯಾಚರಣೆ ಹಮ್ಮಿಕೊಂಡಿದ್ದವು. ಸುಕ್ಮಾ ಮತ್ತು ದಂತೇವಾಡ ಜಿಲ್ಲೆಗಳ ಗಡಿ ಭಾಗದಲ್ಲಿ ಭದ್ರತಾ ಸಿಬ್ಬಂದಿ ಮತ್ತು ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆದಿದೆ.

'ಸಿಂಧೂರ', ಇಸ್ರೊ ಕುರಿತು ವಿಶೇಷ ಪಠ್ಯಕ್ರಮ

ನವದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ, ಆಪರೇಷನ್ ಸಿಂಧೂರ, ಚಂದ್ರಯಾನ, ಶುಭಾಂಶು ಶುಕ್ಲಾ ಬಾಹ್ಯಾಕಾಶ ಪಯಣ ಹಾಗೂ ಇಸ್ರೊದ ಇನ್ನಿತರ ಸಾಧನೆಗಳ ಕುರಿತಂತೆ ವಿಶೇಷ ಪಠ್ಯಕ್ರಮ ರಚಿಸಲು ಶಿಕ್ಷಣ ಸಚಿವಾಲಯ ಮುಂದಾಗಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಮುಂದಿನ ಶೈಕ್ಷಣಿಕ ವರ್ಷದಿಂದಲೇ ವಿದ್ಯಾರ್ಥಿಗಳಿಗೆ ಅಸ್ತಿತ್ವದಲ್ಲಿರುವ ಪಠ್ಯಕ್ರಮದ ಜತೆಗೆ ಪೂರಕ ಪಠ್ಯಕ್ರಮವಾಗಿ ಈ ವಿಚಾರಗಳನ್ನು ಪರಿಚಯಿಸಲಾಗುತ್ತದೆ. ಎನ್‌ಸಿಇಆರ್‌ಟಿ ಈ ಪಠ್ಯಕ್ರಮ ಸಿದ್ಧಪಡಿಸಲಿದೆ.

ರಾಜ್ಯ ಪಠ್ಯಕ್ರಮಗಳಲ್ಲೂ ಈ ಪೂರಕ ಪಠ್ಯಕ್ರಮಗಳ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗುವುದು ಎನ್ನಲಾಗಿದೆ.

ಮೇಘನಾದ್ ದೇಸಾಯಿ ನಿಧನ

ಲಂಡನ್ (ಪಿಟಿಐ): ಭಾರತ ಮೂಲದ ಬ್ರಿಟಿಷ್ ಅರ್ಥಶಾಸ್ತ್ರಜ್ಞ ಮೇಘನಾದ್ ದೇಸಾಯಿ (85) ಅವರು ಮಂಗಳವಾರ ನಿಧನರಾದರು.



ಅನಾರೋಗ್ಯ ದಿಂದ ಬಳಲುತ್ತಿದ್ದ ಅವರು ಗುರುಗ್ರಾಮದ ಆಸ್ಪತ್ರೆಯಲ್ಲಿ ನಿಧನರಾದರು ಎಂದು ಲಂಡನ್‌ನಲ್ಲಿರುವ ಅವರ ಕುಟುಂಬದ ಮೂಲಗಳು ತಿಳಿಸಿವೆ.

ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ದೇಸಾಯಿ ಅವರು 1965 ರಿಂದ 2003ರ ವರೆಗೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ (ಎಲ್‌ಎಸ್‌ಇ) ನಲ್ಲಿ ಬೋಧಕರಾಗಿದ್ದರು. ಅವರು ಬ್ರಿಟನ್ ಸಂಸತ್ತಿನ ಮೇಲ್ಮನೆ 'ಹೌಸ್ ಆಫ್ ಲಾರ್ಡ್ಸ್' ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು.

'ಭಾರತದ ಸಾಮರ್ಥ್ಯ ಪ್ರದರ್ಶನಕ್ಕೆ ವೇದಿಕೆ'

ನಾಸಾ–ಇಸ್ರೊ ಸಹಭಾಗಿತ್ವದ ಬಾಹ್ಯಾಕಾಶ ಕಾರ್ಯಕ್ರಮ • ಇಂದು ನಭಕ್ಕೆ 'ನಿಸಾರ್' ಉಪಗ್ರಹ

ಶ್ರೀಹರಿಕೋಟ(ಪಿಟಿಐ): ಇಸ್ರೊ ಹಾಗೂ ನಾಸಾ ಜಂಟಿಯಾಗಿ ಅನುಷ್ಠಾನಗೊಳಿಸುತ್ತಿರುವ 'ನಿಸಾರ್' ಕಾರ್ಯಕ್ರಮವು, ಬಾಹ್ಯಾಕಾಶ ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ಭಾರತದ ಸಾಮರ್ಥ್ಯಗಳನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸುವುದಕ್ಕೆ ವೇದಿಕೆಯಾಗಿದೆ ಎಂದು ಇಸ್ರೊದ ಮಾಜಿ ವಿಜ್ಞಾನಿ ರಾಧಾಕೃಷ್ಣ ಕವುಲೂರು ಹೇಳಿದ್ದಾರೆ.

ಈ ಬಾಹ್ಯಾಕಾಶ ಕಾರ್ಯಕ್ರಮ ಕುರಿತು ಮಾಹಿತಿ ನೀಡಿದ ರಾಧಾಕೃಷ್ಣ ಕವುಲೂರು, 'ನಿಸಾರ್' ಉಪಗ್ರಹ ಕಳುಹಿಸುವ ದತ್ತಾಂಶಗಳು ವಿಶ್ವದೆಲ್ಲೆಡೆ ಇರುವ ಅದರ ಬಳಕೆದಾರರಿಗೆ ಮುಕ್ತವಾಗಿ ಲಭ್ಯವಾಗಲಿದ್ದು, ಡೌನ್‌ಲೋಡ್ ಮಾಡಿಕೊಳ್ಳಬಹುದು' ಎಂದು ಹೇಳಿದರು.

'ಈ ಉಪಗ್ರಹದಲ್ಲಿ ಅಳವಡಿಸಲಾಗಿರುವ ಎಲ್–ಬ್ಯಾಂಡ್ ಅನ್ನು ನಾಸಾ ಒದಗಿಸಿದ್ದರೆ, ಎಸ್–ಬ್ಯಾಂಡ್ ಅನ್ನು ಇಸ್ರೊ ಒದಗಿಸಿದೆ. ಎಸ್–ಬ್ಯಾಂಡ್ ಅನ್ನು ಸಿಂಥೆಟಿಕ್ ಅಪರ್ಚರ್ ರೇಡಾರ್‌ನಲ್ಲಿ ಅಳವಡಿಸಲಾಗುತ್ತದೆ. ಇದರಿಂದ ಭೂಮಿಗೆ ಸಂಬಂಧಿಸಿದಂತೆ ವ್ಯಾಪಕ ದತ್ತಾಂಶ ಸಂಗ್ರಹ ಸಾಧ್ಯವಾಗಲಿದೆ' ಎಂದರು.

ಅವರು 'ನಿಸಾರ್' ಪ್ರಾಜೆಕ್ಟ್‌ನ ವ್ಯವಸ್ಥಾಪಕರೂ ಆಗಿದ್ದರು.


ಭೂ ವೀಕ್ಷಣೆ ಉದ್ದೇಶದಿಂದ ಉಪಗ್ರಹ ನಿರ್ಮಾಣ ಹಾಗೂ ಉಡ್ಡಯನಕ್ಕಾಗಿ ರೂಪಿಸಲಾಗಿರುವ ಬಾಹ್ಯಾಕಾಶ ಕಾರ್ಯಕ್ರಮವೇ 'ನಾಸಾ–ಇಸ್ರೊ ಸಿಂಥೆಟಿಕ್ ಅಪಾರ್ಚರ್ ರೇಡಾರ್'. ಇದರ ಸಂಕ್ಷಿಪ್ತರೂಪವೇ 'ನಿಸಾರ್'.

'ನಿಸಾರ್' ಉಪಗ್ರಹವನ್ನು ಶ್ರೀಹರಿಕೋಟದಿಂದ ಜುಲೈ 30ರಂದು ಸಂಜೆ 5.40ಕ್ಕೆ ಉಡ್ಡಯನ ಮಾಡಲು ಇಸ್ರೊ ಸಜ್ಜಾಗಿದ್ದು, ಕ್ಷಣಗಣನೆ ಆರಂಭವಾಗಿದೆ.

ದೇಶೀಯವಾಗಿಯೇ ಅಭಿವೃದ್ಧಿಪಡಿಸಿರುವ ಜಿಎಸ್‌ಎಲ್‌ವಿ–ಎಫ್16 ರಾಕೆಟ್ ಬಳಸಿ ಈ ಉಪಗ್ರಹವನ್ನು ಉಡ್ಡಯನ ಮಾಡಲಾಗುತ್ತದೆ ಎಂದು ಇಸ್ರೊ ಮೂಲಗಳು ಹೇಳಿವೆ.

ಎಲ್ಲಿ ಉಡ್ಡಯನ?

ಶ್ರೀಹರಿಕೋಟದಲ್ಲಿರುವ 2ನೇ ಉಡ್ಡಯನ ನೆಲೆಯಿಂದ ಉಪಗ್ರಹವನ್ನು ಉಡಾವಣೆ ಮಾಡಲಾಗುತ್ತದೆ. ಈ ನೆಲೆಯು ಚೆನ್ನೈನಿಂದ 135 ಕಿ.ಮೀ. ದೂರದಲ್ಲಿದೆ. ಉಡ್ಡಯನಗೊಂಡು 19 ನಿಮಿಷಗಳ ನಂತರ ಉಪಗ್ರಹವನ್ನು ನಿಗದಿತ ಕಕ್ಷೆಗೆ ಸೇರಿಸಲಾಗುತ್ತದೆ.



'ನಿಸಾರ್' ಉಪಗ್ರಹ

'ನಿಸಾರ್' ಕಾರ್ಯಕ್ರಮದಿಂದ ತಾಂತ್ರಿಕತೆ ವಿನಿಮಯ, ಭವಿಷ್ಯದ ಅಂತರಿಕ್ಷ ಅನ್ವೇಷಣೆ ಕುರಿತು ನಾಸಾ ಹಾಗೂ ಇಸ್ರೊ ನಡುವೆ ಮಾಹಿತಿ ಹಂಚಿಕೊಳ್ಳುವಿಕೆ ಸಾಧ್ಯವಾಗಲಿದೆ
ರಾಧಾಕೃಷ್ಣ ಕವುಲೂರು, ಇಸ್ರೊದ ಮಾಜಿ ವಿಜ್ಞಾನಿ

'ನಿಸಾರ್' ಉಪಗ್ರಹದ ಪ್ರಯೋಜನಗಳು

- ಅಂಟಾರ್ಕ್ಟಿಕಾ, ಉತ್ತರ ಧ್ರುವ ಹಾಗೂ ಸಮುದ್ರಗಳ ಕುರಿತು ವಿಸ್ತೃತ ದತ್ತಾಂಶ ರವಾನೆ
- ಇಸ್ರೊ ಈ ಮೊದಲು ಉಡ್ಡಯನ ಮಾಡಿರುವ ಉಪಗ್ರಹಗಳು (ರಿಸೋರ್ಸ್‌ಸ್ಯಾಟ್, ರಿಸ್ಯಾಟ್) ಭಾರತವನ್ನು ಕೇಂದ್ರೀಕರಿಸಿದ ಚಿತ್ರಗಳನ್ನು ಮಾತ್ರ ಕಳುಹಿಸುತ್ತವೆ. 'ನಿಸಾರ್' ಉಪಗ್ರಹವು ಇಡೀ ಭೂಮಂಡಲಕ್ಕೆ ಸಂಬಂಧಿಸಿದ ಚಿತ್ರ, ದತ್ತಾಂಶ ಕಳುಹಿಸಲಿದೆ
- ವಿವಿಧ ದೇಶಗಳು ಹಾಗೂ ಸಂಘಟನೆಗಳು ಈ ಉಪಗ್ರಹ ಕಳುಹಿಸುವ ದತ್ತಾಂಶ ಬಳಸಿಕೊಳ್ಳಬಹುದು
- ಕಾಲಗಳಲ್ಲಿನ ಬದಲಾವಣೆ, ಪರ್ವತಗಳ ಸ್ಥಳಾಂತರ, ಹಿಮಾಲಯ ಶ್ರೇಣಿ, ಅಂಟಾರ್ಕ್ಟಿಕಾದಂತಹ ಪ್ರದೇಶಗಳಲ್ಲಿ ಕಂಡುಬರುವ ನೀರ್ಗಲ್ಲುಗಳ ಚಲನೆಗಳ ಮೇಲೆ ಕಣ್ಣಾವಲಿಡಲು ನೆರವು

ವೈಶಿಷ್ಟ್ಯಗಳು

- 'ನಿಸಾರ್' ಉಪಗ್ರಹವು ಇಡೀ ಭೂಮಿಯನ್ನು 12 ದಿನಗಳಲ್ಲಿ ಸುತ್ತಿ, ದತ್ತಾಂಶ ಸಂಗ್ರಹಿಸಲಿದೆ
- ಉಪಗ್ರಹದ ಕಾರ್ಯಾಚರಣೆ ಅವಧಿ ಐದು ವರ್ಷ
- ಜಿಎಸ್‌ಎಲ್‌ವಿ–ಎಫ್16 ರಾಕೆಟ್ ಬಳಸಿ ಉಡ್ಡಯನ. ರಾಕೆಟ್‌ನ ಎತ್ತರ 51.7 ಮೀಟರ್

100 ಮಹಿಳೆಯರ ಪೈಕಿ ನಾಲ್ವರಷ್ಟೇ ಪವಿತ್ರ: ಪ್ರೇಮಾನಂದ ಮಹಾರಾಜ

ಪ್ರಜಾವಾಣಿ ವಾರ್ತೆ

ಲಖನೌ: ಹಿಂದೂ ಸಂತ ಪ್ರೇಮಾನಂದ ಮಹಾರಾಜ ಅವರು, ಆಧುನಿಕ ಸಮಾಜದ ಮಹಿಳೆ ಮತ್ತು ಪುರುಷರ ಪಾವಿತ್ರ್ಯ ಕುರಿತು ನೀಡಿದ್ದಾರೆ ಎನ್ನಲಾದ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ.



ಪ್ರೇಮಾನಂದ ಮಹಾರಾಜ

'ಇತ್ತೀಚಿನ ದಿನಗಳಲ್ಲಿ ನೂರು ಮಹಿಳೆಯರ ಪೈಕಿ ಇಬ್ಬರೋ ನಾಲ್ವರೋ ಮಾತ್ರ ಪವಿತ್ರರಾಗಿರುತ್ತಾರೆ ಮತ್ತು ಒಬ್ಬ ಪುರುಷನೊಟ್ಟಿಗಿನ ಸಂಬಂಧಕ್ಕೆ ಬದ್ಧರಾಗಿರುತ್ತಾರೆ. ಉಳಿದವರಿಗೆ ಬಾಯ್‌ಫ್ರೆಂಡ್ಸ್ ಇರುತ್ತಾರೆ' ಎಂದು ಪ್ರೇಮಾನಂದ ಹೇಳಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಒಬ್ಬ ಪುರುಷ ನಾಲ್ವರು ಮಹಿಳೆಯರೊಂದಿಗೆ ಲೈಂಗಿಕ ಸಂಬಂಧ ಬೆಳೆಸಿದಲ್ಲಿ, ಆತ ಪತ್ನಿಯೊಂದಿಗೆ ಸಂತೃಪ್ತಿ ಹೊಂದಲು ಸಾಧ್ಯವಿಲ್ಲ. ಹಲವರೊಂದಿಗಿನ ಸಂಭೋಗಕ್ಕೆ ಆತ ಒಗ್ಗಿಕೊಳ್ಳುತ್ತಾನೆ. ಅದೇ ರೀತಿ ನಾಲ್ವರು ಪುರುಷರೊಂದಿಗೆ ದೈಹಿಕ ಸಂಬಂಧ ಬೆಳೆಸಿದ ಮಹಿಳೆಯು, ಒಬ್ಬ ಪುರುಷನ ಸಾಂಗತ್ಯದಿಂದ ಸಂತೋಷವಾಗಿರಲಾರಳು' ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

ಕ್ರಿಕೆಟಿಗ ವಿರಾಟ್ ಕೊಹ್ಲಿ, ನಟಿ ಅನುಷ್ಕಾ ಶರ್ಮಾ ಸೇರಿದಂತೆ ಅನೇಕ ತಾರೆಯರು ವೃಂದಾವನದ ಸಂತ ಪ್ರೇಮಾನಂದ ಮಹಾರಾಜರ ಅನುಯಾಯಿಗಳಾಗಿದ್ದಾರೆ.

ಪ್ರೇಮಾನಂದ ಹೇಳಿಕೆಗೆ ಪರ–ವಿರೋಧ

ಪ್ರೇಮಾನಂದ ಮಹಾರಾಜ ಅವರ ಹೇಳಿಕೆಗೆ ಸಂತ ಸಮುದಾಯದಿಂದ ಪರ–ವಿರೋಧ ಅಭಿಪ್ರಾಯ ವ್ಯಕ್ತವಾಗಿದೆ. ಅಯೋಧ್ಯೆ ಮೂಲದ ಸಂತ ಮಹಾಂತ ರಾಘು ದಾಸ್ ಅವರು, 'ಪ್ರೇಮಾನಂದ ಮಹಾರಾಜ ಅವರು ಸತ್ಯವನ್ನೇ ಹೇಳಿದ್ದಾರೆ. ಅಶ್ಲೀಲತೆ ಹೆಚ್ಚಾಗಿದೆ. ಸಮಾಜ ಇದನ್ನು ಒಪ್ಪಿಕೊಳ್ಳುವುದಿಲ್ಲ' ಎಂದು ಹೇಳಿದ್ದಾರೆ.

ಅಯೋಧ್ಯೆ ಮೂಲದ ಮತ್ತೊಬ್ಬ ಸಂತ ಶಶಿಕಾಂತ್ ದಾಸ್ ಅವರು, 'ಪ್ರೇಮಾನಂದ ಅವರು ಗೌರವಾನ್ವಿತ ಸಂತರು. ಅವರು ಈ ರೀತಿಯ ಹೇಳಿಕೆ ನೀಡಬಾರದು. ಇಂಥ ಹೇಳಿಕೆಗಳು ಸಮಾಜದ ಮೇಲೆ ಪರಿಣಾಮ ಬೀರುತ್ತವೆ' ಎಂದು ಹೇಳಿದ್ದಾರೆ.

'ನೀಟ್: ಸಮಯದ ಅಭಾವ ಕುರಿತ ಪರಿಶೀಲನೆಗೆ ಸಮಿತಿ ರಚಿಸಿ'

ನವದೆಹಲಿ (ಪಿಟಿಐ): ತಾಂತ್ರಿಕ ಕಾರಣದಿಂದಾಗಿ ನೀಟ್ ಪರೀಕ್ಷೆಯಲ್ಲಿ ಸಮಯದ ಅಭಾವವನ್ನು ಎದುರಿಸಿರುವುದಾಗಿ ಕೆಲ ಅಭ್ಯರ್ಥಿಗಳು ಎತ್ತಿರುವ ಆಕ್ಷೇಪಕ್ಕೆ ಸಂಬಂಧಿಸಿ ಪರಿಶೀಲನೆ ನಡೆಸಲು ಸಮಿತಿಯನ್ನು ರಚಿಸುವಂತೆ ದೆಹಲಿ ಹೈಕೋರ್ಟ್ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ(ಎನ್‌ಟಿಎ) ನಿರ್ದೇಶನ ನೀಡಿದೆ.

'ಇಂತಹ ಪ್ರಕರಣಗಳಲ್ಲಿ ಸಿ.ಸಿ.ಟಿ.ವಿ ಎಲ್ಲ ದೃಶ್ಯಗಳನ್ನು ನ್ಯಾಯಾಲಯ ಪರೀಕ್ಷಿಸಲು ಸಾಧ್ಯವಿಲ್ಲ. ತಜ್ಞರಿಂದ ಪಾರದರ್ಶಕ ಮತ್ತು ನ್ಯಾಯಯುತವಾಗಿ ಪರಿಶೀಲನೆ ಮಾಡಿಸುವುದು ಅಗತ್ಯವಾಗಿರುತ್ತದೆ' ಎಂದು ನ್ಯಾಯಮೂರ್ತಿ ವಿಕಾಸ್ ಮಹಾಜನ್ ಅವರು ಹೇಳಿದ್ದಾರೆ.

ಸೂಕ್ತವಾದ ಪರೀಕ್ಷಾ ಸೂತ್ರಗಳನ್ನು ರೂಪಿಸಲು ಸ್ಥಾಯಿ ಸಮಿತಿಗೆ ಕೋರ್ಟ್ ಪೂರ್ಣ ಸ್ವಾತಂತ್ರ್ಯವನ್ನು ನೀಡಿತು.

ಸಕಾಲಕ್ಕೆ ಸಿಗದ ಚಿಕಿತ್ಸೆ: ವ್ಯಕ್ತಿ ಸಾವು

ಮೀರತ್ (ಪಿಟಿಐ): ಅಪಘಾತದಲ್ಲಿ ಗಾಯಗೊಂಡು ಇಲ್ಲಿನ ಆಸ್ಪತ್ರೆಗೆ ದಾಖಲಾಗಿದ್ದ ಸುನಿಲ್ (30) ಸಕಾಲದಲ್ಲಿ ಚಿಕಿತ್ಸೆ ದೊರೆಯದೆ ಮೃತಪಟ್ಟಿದ್ದಾರೆ.

ಕೆಲಸದ ವೇಳೆ ನಿದ್ದೆಗೆ ಜಾರಿದ್ದ ಇಬ್ಬರು ಕಿರಿಯ ವೈದ್ಯರನ್ನು ಸ್ಥಳೀಯಾಡಳಿತವು ಅಮಾನತುಗೊಳಿಸಿದೆ. ಈ ಕುರಿತ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ. ಆಸ್ಪತ್ರೆ, ಜಿಲ್ಲಾಡಳಿತ ಪ್ರತ್ಯೇಕ ತನಿಖೆಗೆ ಆದೇಶಿಸಿವೆ.

'ಸುನಿಲ್ ಭಾನುವಾರ ರಾತ್ರಿ 12.30ಕ್ಕೆ ಅಪಘಾತಕ್ಕೊಳಗಾಗಿದ್ದರು. ತಕ್ಷಣವೇ ಅವರನ್ನು ಇಲ್ಲಿನ ಲಾಲಾ ಲಜಪತ್‌ರಾಯ್ ಮೆಮೋರಿಯಲ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗೆ ಕರೆತರಲಾಗಿತ್ತು. ಅವರು ಸೋಮವಾರ ಬೆಳಿಗ್ಗೆ 8 ಗಂಟೆಗೆ ಮೃತಪಟ್ಟರು' ಎಂದು ಗ್ರಾಮದ ಜಗ್ಗಿ ಪ್ರಧಾನ್ ತಿಳಿಸಿದರು.

ಛತ್ತೀಸಗಢದಲ್ಲಿ ಕೇರಳದ ಕ್ರೈಸ್ತ ಸನ್ಯಾಸಿನಿಯರ ಸೆರೆ

'ಮತಾಂತರ: ಬಂಧಿತರ ಪಾತ್ರವಿಲ್ಲ'

ಮುಖ್ಯಾಂಶಗಳು

- ಬಂಧನ ಕ್ರಮ ಸಮರ್ಥಿಸಿಕೊಂಡ ಛತ್ತೀಸಗಢ ಸಿ.ಎಂ
- ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದಲ್ಲಿ ಪ್ರತ್ಯೇಕ ನಿಯೋಗ
- ಕಾರಾಗೃಹದಲ್ಲಿರುವ ಸನ್ಯಾಸಿನಿಯರ ಭೇಟಿ

ತಿರುವನಂತಪುರ/ನವದೆಹಲಿ (ಪಿಟಿಐ): 'ಛತ್ತೀಸಗಢದಲ್ಲಿ ಬಂಧಿತರಾಗಿರುವ ಕೇರಳದ ಇಬ್ಬರು ಕ್ಯಾಥೋಲಿಕ್ ಸನ್ಯಾಸಿನಿಯರು ಮಾನವ ಕಳ್ಳಸಾಗಣೆ ಮತ್ತು ಬಲವಂತದ ಮತಾಂತರದಲ್ಲಿ ಭಾಗಿಯಾಗಿಲ್ಲ' ಎಂದು ಕೇರಳ ಬಿಜೆಪಿ ಮಂಗಳವಾರ ಪ್ರತಿಪಾದಿಸಿದೆ.

ಸನ್ಯಾಸಿನಿಯರಾದ ಪ್ರೀತಿ ಮೇರಿ, ವಂದನಾ ಫ್ರಾನ್ಸಿಸ್ ಅವರನ್ನು ಬಂಧಿಸಿರುವ ಕ್ರಮವನ್ನು ಸಮರ್ಥಿಸಿಕೊಂಡು ಛತ್ತೀಸಗಢದ ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಅವರು ನೀಡಿದ ಹೇಳಿಕೆಗಳನ್ನು ಕೇರಳ ಬಿಜೆಪಿ ತಿರಸ್ಕರಿಸಿದೆ.

'ಮಾನವ ಕಳ್ಳಸಾಗಣೆ ಸೇರಿದಂತೆ ಬಲವಂತದ ಮತಾಂತರ ಪ್ರಯತ್ನದಲ್ಲಿ ಸನ್ಯಾಸಿನಿಯರು ಭಾಗಿಯಾಗಿಲ್ಲ. ಅವರನ್ನು ಸುರಕ್ಷಿತವಾಗಿ ಮನೆಗೆ ಕರೆತರಲು ಶ್ರಮಿಸಲಾಗುತ್ತಿದೆ' ಎಂದು ಕೇರಳ ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಹೇಳಿದರು.

ಬಜರಂಗ ದಳದ ವರ್ತನೆಗೆ ಖಂಡನೆ: 'ಸನ್ಯಾಸಿನಿಯರ ಜತೆಗೆ ಆಕ್ಷೇಪಾರ್ಹವಾಗಿ ನಡೆದುಕೊಂಡ ಬಜರಂಗ ದಳದ ಸದಸ್ಯರ ವರ್ತನೆ ಖಂಡನೀಯ. ಅವರ ವರ್ತನೆಯನ್ನು ಪಕ್ಷ ಸಹ ಖಂಡಿಸುತ್ತದೆ' ಎಂದು ಅವರು ಪ್ರತಿಕ್ರಿಯಿಸಿದರು.

'ಬಜರಂಗ ದಳ ಸ್ವತಂತ್ರ ಸಂಘಟನೆ ಮತ್ತು ಬಿಜೆಪಿ ಒಂದು ರಾಜಕೀಯ ಪಕ್ಷ. ಯಾರಾದರೂ ತಪ್ಪು ಮಾಡಿ, ನ್ಯಾಯದ ವಿರುದ್ಧ ಹೋದರೆ ಖಂಡಿತವಾಗಿಯೂ ಅವರಿಗೆ ಶಿಕ್ಷೆಯಾಗಲೇಬೇಕು' ಎಂದು ಅವರು ಸ್ಪಷ್ಟಪಡಿಸಿದರು.

ಛತ್ತೀಸಗಢಕ್ಕೆ ನಿಯೋಗ: ಸನ್ಯಾಸಿನಿಯರಿಗೆ ಸಹಾಯ ಮಾಡಲು ಕೇರಳ ಬಿಜೆಪಿಯ ನಿಯೋಗ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಸಂಸದರ ನಿಯೋಗ ಪ್ರತ್ಯೇಕವಾಗಿ ಮಂಗಳವಾರ ಛತ್ತೀಸಗಢ ತಲುಪಿವೆ.

ಬಿಜೆಪಿಯ ಕೇರಳ ಘಟಕದ ಪ್ರಧಾನ ಕಾರ್ಯದರ್ಶಿ ಅನೂಪ್ ಆ್ಯಂಟೊನಿ ಜೋಸೆಫ್ ನೇತೃತ್ವದ ತಂಡವು ಛತ್ತೀಸಗಢದ ಉಪಮುಖ್ಯಮಂತ್ರಿ ಹಾಗೂ ಗೃಹ ಸಚಿವರೂ ಆಗಿರುವ ವಿಜಯ್ ಶರ್ಮಾ ಅವರನ್ನು ಮಂಗಳವಾರ ಭೇಟಿ ಮಾಡಿ ಮಾತುಕತೆ ನಡೆಸಿತು.

ಸನ್ಯಾಸಿಗಳನ್ನು ಭೇಟಿ ಮಾಡಿದ ಯುಡಿಎಫ್: ಬೆನ್ನಿ ಬೆಹನ್ನನ್, ಫ್ರಾನ್ಸಿಸ್ ಜಾರ್ಜ್ ಮತ್ತು ಎನ್.ಕೆ.ಪ್ರೇಮಚಂದ್ರನ್ ಅವರನ್ನು ಒಳಗೊಂಡ ಯುಡಿಎಫ್ ಸಂಸದರ ನಿಯೋಗವು ಛತ್ತೀಸಗಢದ ದುರ್ಗ್‌ನಲ್ಲಿನ ಕೇಂದ್ರ ಕಾರಾಗೃಹದಲ್ಲಿ ಸನ್ಯಾಸಿಯರನ್ನು ಭೇಟಿ ಮಾಡಿತು.



'ಪ್ರಳಯ' ಕ್ಷಿಪಣಿಯ ಪರೀಕ್ಷೆ ಯಶಸ್ವಿಯಾಗಿ ನಡೆದಿದ್ದು, ರಕ್ಷಣಾ ಇಲಾಖೆಯು 'ಎಕ್ಸ್'ನಲ್ಲಿ ಅದರ ಈ ಫೋಟೊ ಪ್ರಕಟಿಸಿದೆ –ಪಿಟಿಐ ಚಿತ್ರ

'ಪ್ರಳಯ ಕ್ಷಿಪಣಿ ಪರೀಕ್ಷೆ ಯಶಸ್ವಿ'

ಬಾಲೇಶ್ವರ (ಪಿಟಿಐ): ಒಡಿಶಾದ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಿಂದ 'ಪ್ರಳಯ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ನಡೆಸಲಾಯಿತು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮಂಗಳವಾರ ತಿಳಿಸಿದೆ.

ಪರೀಕ್ಷೆ ಸಂದರ್ಭದಲ್ಲಿ ಕ್ಷಿಪಣಿಗಳು ಉದ್ದೇಶಿತ ಪಥವನ್ನು ನಿಖರವಾಗಿ ಅನುಸರಿಸಿದವು ಮತ್ತು ಗುರಿಯ ಬಗ್ಗೆ ಸ್ಪಷ್ಟತೆ ಹೊಂದಿದ್ದವು ಎಂದು ಡಿಆರ್‌ಡಿಒ ಹೇಳಿದೆ.

'ಕ್ಷಿಪಣಿ ವ್ಯವಸ್ಥೆಯ ದೀರ್ಘವ್ಯಾಪ್ತಿ, ಮಧ್ಯಮ ವ್ಯಾಪ್ತಿಯ ಸಾಮರ್ಥ್ಯ ಪರೀಕ್ಷೆಯ ಭಾಗವಾಗಿ ಜುಲೈ 28, 29ರಂದು 'ಪ್ರಳಯ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನಡೆಸಲಾಯಿತು' ಎಂದಿದೆ.

'ಲಾಡ್ಕಿ ಬಹೀಣ್' ₹4,800 ಕೋಟಿ ವಂಚನೆ'

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ 'ಮುಖ್ಯಮಂತ್ರಿ ಲಾಡ್ಕಿ ಬಹೀಣ್' ಯೋಜನೆಯಲ್ಲಿ ಅಕ್ರಮಗಳಾಗಿದ್ದು, ಸುಮಾರು ₹4,800 ಕೋಟಿ ವಂಚನೆ ನಡೆದಿದೆ ಎಂದು ಎನ್‌ಸಿಪಿ (ಎಸ್‌ಪಿ) ಸಂಸದೆ ಸುಪ್ರಿಯಾ ಸುಳೆ ಆರೋಪಿಸಿದ್ದಾರೆ.



ಸುಪ್ರಿಯಾ ಸುಳೆ

ಫಲಾನುಭವಿಗಳಿಗೆ ಹಣ ನೇರ ವರ್ಗಾವಣೆ ಆಗಿದೆಯೇ? ಎಂದಿರುವ ಅವರು ಈ ಕಾರ್ಯ ವಿಧಾನದ ಪಾರದರ್ಶಕತೆ ಪ್ರಶ್ನಿಸಿದ್ದಾರೆ.

ಪಿಚ್ ಕ್ಯುರೇಟರ್–ಗಂಭೀರ್ ವಾಗ್ವಾದ

ಕೆನಿಂಗ್ಟನ್ ಓವೆಲ್ ಮೈದಾನದಲ್ಲಿ ಭಾರತ ತಂಡದ ಆಟಗಾರರ ತಾಲೀಮು

ಲಂಡನ್ (ಪಿಟಿಐ): 'ನಾವು ಏನು ಮಾಡಬೇಕು ಎಂದು ನೀನು ಹೇಳಬೇಕಾಗಿಲ್ಲ..'

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಮಂಗಳವಾರ ಕೆನಿಂಗ್ಟನ್ ಓವಲ್ ಕ್ರೀಡಾಂಗಣದ ಪ್ರಧಾನ ಪಿಚ್ ಕ್ಯುರೇಟರ್ ಲೀ ಫೋರ್ಟಿಸ್ ಅವರ ಮೇಲೆಗರಂಆಗಿ ಹೇಳಿದ ಮಾತುಗಳಿವು.

ಇದೇ 31ರಿಂದ ಓವಲ್ ಕ್ರೀಡಾಂಗಣದಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಣ ಐದನೇ ಟೆಸ್ಟ್ ಪಂದ್ಯ ನಡೆಯಲಿದೆ. ಮ್ಯಾಂಚೆಸ್ಟರ್‌ನಲ್ಲಿ ಈಚೆಗೆ ನಡೆದಿದ್ದ ನಾಲ್ಕನೇ ಟೆಸ್ಟ್‌ನಲ್ಲಿ ಭಾರತ ತಂಡವು ಅಮೋಘ ಆಟವಾಡಿ ಸೋಲಿನಿಂದ ತಪ್ಪಿಸಿಕೊಂಡು ಪಂದ್ಯ ಡ್ರಾ ಮಾಡಿಕೊಂಡಿತ್ತು. ಇಂಗ್ಲೆಂಡ್ ಈ ಸರಣಿಯಲ್ಲಿ 2–1ರಿಂದ ಮುನ್ನಡೆಯಲಿದೆ. ಕೊನೆಯ ಪಂದ್ಯದಲ್ಲಿ ಗೆದ್ದು ಸರಣಿ ಸಮಬಲ ಮಾಡಿಕೊಳ್ಳುವ ಗುರಿ ಶುಭಮನ್ ಗಿಲ್ ಬಳಗಕ್ಕೆ ಇದೆ. ಪಂದ್ಯದ ಎರಡು ದಿನಗಳ ಮುನ್ನ ಅಭ್ಯಾಸಕ್ಕಾಗಿ ಗಂಭೀರ್ ಮತ್ತು ತಂಡದ ಆಟಗಾರರು ಕ್ರೀಡಾಂಗಣಕ್ಕೆ ಬಂದಾಗ ಗಂಭೀರ್ ಮತ್ತು ಫೋರ್ಟಿಸ್ ನಡುವೆ ಈ ಜಟಾಪಟಿ ನಡೆದಿದೆ.

'ಮೈದಾನ ಸಿಬ್ಬಂದಿಯೊಬ್ಬರು ನಮ್ಮ ಬಳಿ ಬಂದು ಪಿಚ್‌ನಿಂದ ಎರಡೂವರೆ ಮೀಟರ್ ದೂರ ನಿಲ್ಲಿ ಮತ್ತು ಹಗ್ಗದ ಆಚೆ ನಿಂತು ವಿಕೆಟ್ ನೋಡಿ ಎಂದರು. ಈ ರೀತಿ ನಾನಂತೂ ಎಲ್ಲಿಯೂ ಕಂಡಿಲ್ಲ' ಎಂದು ಬ್ಯಾಟಿಂಗ್ ಕೋಚ್ ಸೀತಾಂಶು ಕೋಟಕ್ ಸುದ್ದಿಗಾರರೊಂದಿಗೆ ಹೇಳಿದರು.

'ಈ ಸಂದರ್ಭದಲ್ಲಿ ಆಟಗಾರರು ಸ್ಪೈಕ್ಸ್ (ಮೊಳೆಗಳಿರುವ ಬೂಟುಗಳು) ಹಾಕಿರಲಿಲ್ಲ. ಜಾಗರ್ಸ್ ಮಾತ್ರ ಧರಿಸಿದ್ದೆವು. ಇದರಿಂದ ಪಿಚ್ ಮೇಲೆ ಹೋದರೂ ಯಾವುದೇ ಅಪಾಯ ವಾಗುತ್ತಿರಲಿಲ್ಲ. ಪಿಚ್ ಕ್ಯುರೇಟರ್‌ಗಳೊಂದಿಗೆ ವ್ಯವಹರಿಸುವುದು ತುಸು ಕಠಿಣವೇ. ಅವರು ತಮ್ಮ ಸ್ವಾಮ್ಯತ್ವ ಹೊಂದಿರುವುದು ತಪ್ಪಲ್ಲ. ಆದರೆ ಅದು ಅತಿ ಆಗಬಾರದು' ಎಂದು ಕೋಟಕ್ ಹೇಳಿದರು.

ಕ್ರೀಡಾಂಗಣದ ಸಿಬ್ಬಂದಿಯ ನಡವಳಿಕೆಯಿಂದ ಅಸಮಾಧಾನಗೊಂಡ ಗೌತಮ್ ಗಂಭೀರ್ ಅವರು ಆಕ್ರೋಶದಿಂದ ಪ್ರತಿಕ್ರಿಯಿಸಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ದೃಶ್ಯ ತುಣುಕುಗಳಲ್ಲಿ ಸ್ಪಷ್ಟವಾಗಿದೆ.

ಇದೇ ಸಂದರ್ಭದಲ್ಲಿ ಫೋರ್ಟಿಸ್, 'ಈ ಬಗ್ಗೆ ನಾನು ವರದಿ ನೀಡಬೇಕಾಗುತ್ತದೆ' ಎಂದರು.



ಲಂಡನ್‌ನ ಕೆನಿಂಗ್ಟನ್ ಓವಲ್ ಮೈದಾನದಲ್ಲಿ ಮಂಗಳವಾರ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಪ್ರಧಾನ ಪಿಚ್ ಕ್ಯುರೇಟರ್ ಲೀ ಫೋರ್ಟಿಸ್ ಮಧ್ಯೆ ವಾಗ್ವಾದ ನಡೆಯಿತು 'ಎಕ್ಸ್' ಚಿತ್ರ

ಅದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಗಂಭೀರ್, 'ಹೋಗಿ ಯಾರಿಗೆ ಬೇಕಾದರೂ ನಿಮಗೇನು ಬೇಕೋ ಆ ರೀತಿ ವರದಿ ಮಾಡಿಕೊಳ್ಳಿ' ಎಂದರು.

ಈ ಸಂದರ್ಭದಲ್ಲಿ ಕೋಟಕ್ ಅವರು ಮಧ್ಯಪ್ರವೇಶಿಸಿ ವಾತಾವರಣ ತಿಳಿಗೊಳಿಸಲು ಯತ್ನಿಸಿದರು. ಫೋರ್ಟಿಸ್ ಅವರನ್ನು ಇನ್ನೊಂದು ಬದಿಗೆ ಕರೆದೊಯ್ದು 'ನಾವು (ಪಿಚ್‌ಗೆ) ಯಾವುದೇ ರೀತಿಯ ಹಾನಿ ಮಾಡುವುದಿಲ್ಲ' ಎಂದು ಹೇಳಿದರು.

ಭಾರತ ತಂಡದ ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಮತ್ತು ಸಹ ಕೋಚ್ ರಿಯಾನ್ ಟೆನ್ ಡಾಶೆಟ್ ಅವರು ಈ ವಾಗ್ವಾದಕ್ಕೆ ಸಾಕ್ಷಿಯಾಗಿದ್ದರು.

ಅಭ್ಯಾಸಕ್ಕಾಗಿ ಇದ್ದ ಪಿಚ್ ಕುರಿತೂ ಗಂಭೀರ್ ಅವರು ಅಸಮಾಧಾನ ಗೊಂಡಿದ್ದರೆನ್ನಲಾಗಿದೆ.

ಮತ್ತೆ ಫೋರ್ಟಿಸ್ ಅವರತ್ತ ಮರಳಿದ ಗಂಭೀರ್, 'ನೀವು ಬರೀ ಮೈದಾನದ ಸಿಬ್ಬಂದಿಯಷ್ಟೇ. ಅದಕ್ಕಿಂತ ಹೆಚ್ಚುಗಾರಿಕೆ ಏನೂ ಇಲ್ಲ. ನೀವು ನಮಗೇನೂ ಹೇಳಬೇಕಿಲ್ಲ' ಎಂದರು.

ಇದರ ನಂತರ ಗಂಭೀರ್ ಬೇರೆ ದಿಕ್ಕಿಗೆ ಹೋದರು. ನೆಟ್ಸ್‌ನತ್ತ ಹೋಗಿ ಅಭ್ಯಾಸ ವೀಕ್ಷಿಸಿದರು.

ತಮ್ಮ ಕೋಣೆಗೆ ಹೋಗುವ ಹಾದಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಫೋರ್ಟಿಸ್, 'ಈ ಪಂದ್ಯ ಬಹಳ ಮಹತ್ವದ್ದಾಗಿದೆ. ಆದ್ದರಿಂದ ಅವರು (ಗಂಭೀರ್) ಸ್ವಲ್ಪ ಒತ್ತಡದಲ್ಲಿರಬೇಕು' ಎಂದರು.

ಭಾರತದ ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಅವರು ಮೊದಲಿಗೆ ಪಿಚ್‌ಗೆ ಬಂದು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಕೂಡ ಬೌಲಿಂಗ್ ನಡೆಸಿದರು. ವೇಗಿ ಅರ್ಷದೀಪ್ ಸಿಂಗ್ ಅವರ ಬೌಲಿಂಗ್ ಅಭ್ಯಾಸದ ಮೇಲೆ ಬೌಲಿಂಗ್ ಕೋಚ್ ಮಾರ್ಕೆಲ್ ನಿಗಾವಹಿಸಿದ್ದರು.

ಮಹಾರಾಣಿ ಟ್ರೋಫಿ ಕ್ರಿಕೆಟ್: ಆಟಗಾರ್ತಿಯರ ಬಿಡ್

ನಿಕಿ ಪ್ರಸಾದ್‌ಗೆ ಗರಿಷ್ಠ ಮೌಲ್ಯ

ಪ್ರಜಾವಾಣಿ ವಾರ್ತೆ



ನಿಕಿ ಪ್ರಸಾದ್

ಬೆಂಗಳೂರು: ಮಹಿಳೆಯರ ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ನಾಯಕಿಯಾಗಿದ್ದ ನಿಕಿ ಪ್ರಸಾದ್ ಅವರು ಇಲ್ಲಿ ನಡೆಯಲಿರುವ ಚೊಚ್ಚಲ ಕೆಎಸ್‌ಸಿಎ ಮಹಾರಾಣಿ ಟ್ರೋಫಿ ಟೂರ್ನಿಯಲ್ಲಿ ಅತಿ ಹೆಚ್ಚು ಮೌಲ್ಯ ಗಳಿಸಿದರು.

ಮಂಗಳವಾರ ಇಲ್ಲಿ ನಡೆದ ಆಟಗಾರ್ತಿಯರ ಹರಾಜು ಪ್ರಕ್ರಿಯೆಯಲ್ಲಿ ನಿಕಿ ಪ್ರಸಾದ್ ಅವರನ್ನು ₹3.70 ಲಕ್ಷಕ್ಕೆ ಬೆಂಗಳೂರು ಬ್ಲಾಸ್ಟರ್ಸ್ ಖರೀದಿಸಿತು.

ಟೂರ್ನಿಯಲ್ಲಿ ಭಾಗವಹಿಸುವ ಒಟ್ಟು ಐದು ತಂಡಗಳೂ ತಲಾ 16 ಆಟಗಾರ್ತಿಯರನ್ನು ಖರೀದಿಸಿದವು. ಪ್ರತಿ ಫ್ರ್ಯಾಂಚೈಸಿಯು ತಲಾ ₹10 ಲಕ್ಷದ ಪರ್ಸ್ ಹೊಂದಿದ್ದವು. ಆಗಸ್ಟ್ 4ರಿಂದ 10ರವರೆಗೆ ಮಹಾರಾಣಿ ಟ್ರೋಫಿ ಟೂರ್ನಿಯು ನಡೆಯಲಿದೆ. ಲೀಗ್ ಹಂತದ ಪಂದ್ಯಗಳು ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯಲಿವೆ. ಫೈನಲ್ ಪಂದ್ಯ (ಆ. 10) ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜನೆಯಾಗಲಿದೆ.

ಭಾರತ ತಂಡದಲ್ಲಿ ಆಡಿರುವ ಶುಭಾ ಸತೀಶ್ ಅವರನ್ನು ಮೈಸೂರು ವಾರಿಯರ್ಸ್ ತಂಡವು ₹3.10 ಲಕ್ಷ ಮತ್ತು ಮಿಥಿಲಾ ವಿನೋದ್ ಅವರನ್ನು ಶಿವಮೊಗ್ಗ ಲಯನ್ಸ್ ತಂಡವನ್ನು ₹3 ಲಕ್ಷಕ್ಕೆ ಖರೀದಿಸಿದವು.

ಉಳಿದಂತೆ; ಬೆಂಗಳೂರು ಬ್ಲಾಸ್ಟರ್ಸ್ ತಂಡವು ನಿಕಿ ಅವರಲ್ಲದೇ, ಅದಿತಿ ರಾಜೇಶ್ (₹1.50 ಲಕ್ಷ), ಕಂಡಿಕುಪ್ಪಾ ಕಾಶ್ವಿ (₹1.55 ಲಕ್ಷ), ಚಾಂದಸೀ ಕೃಷ್ಣಮೂರ್ತಿ (₹70 ಸಾವಿರ) ಮತ್ತು ಪುಷ್ಪಾ ಕಿರೇಸೂರ್ (₹40 ಸಾವಿರ) ಅವರನ್ನು ಸೇರ್ಪಡೆ ಮಾಡಿಕೊಂಡಿತು.

ಹುಬ್ಬಳ್ಳಿ ಟೈಗರ್ಸ್ ತಂಡವು; ಬಿ.ಜಿ. ತೇಜಸ್ವಿನಿ (₹1.50 ಲಕ್ಷ), ಭಾವಿಕಾ ರೆಡ್ಡಿ (₹ 1.10 ಲಕ್ಷ) ಹಾಗೂ ರಾಜೇಶ್ವರಿ ಗಾಯಕವಾಡ, ಶ್ರೇಯಾ ಚವ್ಹಾಣ ಮತ್ತು ಕೃಷಿಕಾ ರೆಡ್ಡಿ ಅವರಿಗೆ ತಲಾ ₹1 ಲಕ್ಷ ನೀಡಿತು.

ಮಂಗಳೂರು ಡ್ರ್ಯಾಗನ್ಸ್ ಫ್ರ್ಯಾಂಚೈಸಿಯು ಲಿಯಾಂಕಾ ಶೆಟ್ಟಿ (₹2.25 ಲಕ್ಷ), ಪ್ರತ್ಯೂಷಾ ಕುಮಾರ್ (₹1.80ಲಕ್ಷ) ಮತ್ತು ಸಿ.ಯು. ಇಂಚರಾ (₹1.55 ಲಕ್ಷ), ಕಾರ್ಣಿಕಾ ಕಾರ್ತಿಕ್ (₹1.25ಲಕ್ಷ) ಮತ್ತು ಪಿ. ಸಲೋನಿ (₹85 ಸಾವಿರ) ಅವರನ್ನು ಸೇರ್ಪಡೆ ಮಾಡಿಕೊಂಡಿತು.

ಮೈಸೂರು ವಾರಿಯರ್ಸ್ ತಂಡವು ಶುಭಾ ಸತೀಶ್ (₹3.10 ಲಕ್ಷ), ಎನ್.ಜಿ. ಪ್ರಕೃತಿ (₹1.20 ಲಕ್ಷ), ಎಂ. ಪೂಜಾ ಕುಮಾರಿ (₹1.05ಲಕ್ಷ), ಸಹನಾ ಎಸ್ ಪವಾರ್ (₹1ಲಕ್ಷ) ಮತ್ತು ರಚಿತಾ ಹತ್ವಾರ್ (₹85 ಸಾವಿರ) ಅವರನ್ನು ಖರೀದಿಸಿತು.

ಶಿವಮೊಗ್ಗ ಲಯನ್ಸ್ ತಂಡವು ಮಿಥಿಲಾ ವಿನೋದ್ (₹3 ಲಕ್ಷ), ಲಾವಣ್ಯ ಚಲನಾ (₹1.45 ಲಕ್ಷ), ರೋಶಿನಿ ಕಿರಣ್ (₹1.30ಲಕ್ಷ) ಮತ್ತು ಸೌಮ್ಯ ವರ್ಮಾ (₹1.05 ಲಕ್ಷ), ಶ್ರೀನಿಧಿ ಪಿ ರೈ (₹80 ಸಾವಿರ) ಅವರನ್ನು ಸೇರ್ಪಡೆ ಮಾಡಿಕೊಂಡಿತು.

ಚಾಂಪಿಯನ್...

ಪ್ರಜಾವಾಣಿ ಚಿತ್ರ



ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆ ಮೈದಾನದಲ್ಲಿ ಮಂಗಳವಾರ ನಡೆದ ಕಟೋನಿಯನ್ ಶೀಲ್ಡ್ ಟಿ–20 ಕ್ರಿಕೆಟ್ ಟೂರ್ನಿಯ 16 ವರ್ಷದೊಳಗಿನವರ ಮತ್ತು 14 ವರ್ಷದೊಳಗಿನವರ ಟೂರ್ನಿಯ ಪ್ರಶಸ್ತಿ ಗೆದ್ದ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆಯ ತಂಡಗಳ ಆಟಗಾರರು

ಚಿಟಿಕೆ ಸುದ್ದಿ

ಎಟಿಪಿ ಚಾಲೆಂಜರ್ ನಗಾಲ್ ಮುನ್ನಡೆ



ನವದೆಹಲಿ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಜರ್ಮನಿಯ ಹ್ಯಾಗೆನ್‌ನಲ್ಲಿ ನಡೆಯುತ್ತಿರುವ ಪ್ಲಾಟ್ಝ್‌ಮನ್ ಓಪನ್ ಟೂರ್ನಿಯಲ್ಲಿ ಮಂಗಳವಾರ ಎರಡನೇ ಸುತ್ತನ್ನು ತಲುಪಿದರು.

ವಿಶ್ವಕ್ರಮಾಂಕದಲ್ಲಿ 307ನೇ ಸ್ಥಾನದಲ್ಲಿರುವ ನಗಾಲ್, ಈ ಕ್ಲೇ ಅಂಕಣದ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ಪೇನ್‌ನ ಕಾರ್ಲೋಸ್ ಸ್ಯಾಂಚೆಸ್ ಜೋವರ್ ಅವರನ್ನು 6–2, 6–2 ರಿಂದ ಸೋಲಿಸಿದರು. ಅವರು ಬುಧವಾರ ನಡೆಯಲಿರುವ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ನೀಲ್ಸ್ ಮೆಕ್‌ಡೊನಾಲ್ಡ್ ಅವರನ್ನು ಎದುರಿಸಲಿದ್ದಾರೆ.

ವಾಂಖೆಡೆ ಕ್ರೀಡಾಂಗಣದ ಮ್ಯಾನೇಜರ್ ಸೆರೆ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಜೆರ್ಸಿಗಳನ್ನು ಕಳವು ಮಾಡಿದ ಆರೋಪದಲ್ಲಿ ವಾಂಖೆಡೆ ಕ್ರೀಡಾಂಗಣದ ವ್ಯವಸ್ಥಾಪಕನನ್ನು ಪೊಲೀಸರು ಬಂಧಿಸಿದ್ದಾರೆ.

ಐಪಿಎಲ್‌ನ ಒಟ್ಟು ₹ 6.52 ಲಕ್ಷ ಮೌಲ್ಯದ 261 ಜೆರ್ಸಿಗಳನ್ನು ಕಳವು ಮಾಡಿದ್ದ ಆರೋಪದ ಮೇಲೆ ಫಾರೂಕ್ ಅಸ್ಲಂ ಖಾನ್ ಎಂಬಾತನನ್ನು ಬಂಧಿಸಲಾಗಿದೆ. ಇದೀಗ ಜಾಮೀನು ಪಡೆದಿರುವ ಆರೋಪಿಯ ಬಿಡುಗಡೆಯಾಗಿದೆ. ಇಲ್ಲಿರುವ ಐಪಿಎಲ್ ಸಾಮಗ್ರಿಗಳ ಮಾರಾಟ ಮಳಿಗೆಯಿಂದ ಆರೋಪಿಯು ಕಳವು ಮಾಡಿದ್ದನೆನ್ನಲಾಗಿದೆ. ಈ ಬಗ್ಗೆ ಬಿಸಿಸಿಐ ಅಧಿಕಾರಿಗಳು ಮರಿನ್ ಡ್ರೈವ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ಆರೋಪಿಯಿಂದ ಸುಮಾರು 50 ಜೆರ್ಸಿಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಕೆಕೆಆರ್ ಹೆಡ್ ಕೋಚ್ ಹುದ್ದೆ ತೊರೆದ ಪಂಡಿತ್



ಕೋಲ್ಕತ್ತ (ಪಿಟಿಐ): ಚಂದ್ರಕಾಂತ ಪಂಡಿತ್ ಅವರು ಕೋಲ್ಕತ್ತ ನೈಟ್‌ರೈಡರ್ಸ್ ತಂಡದ ಹೆಡ್ ಕೋಚ್ ಸ್ಥಾನವನ್ನು ತೊರೆದಿರುವುದಾಗಿ ಫ್ರಾಂಚೈಸಿಯು ಮಂಗಳವಾರ ಪ್ರಕಟಿಸಿದೆ. ಎರಡು ವರ್ಷ ಅವರು ಹೆಡ್ ಕೋಚ್ ಆಗಿದ್ದರು.

2024ರಲ್ಲಿ ಪಂಡಿತ್ ಅವರ ಅವಧಿಯಲ್ಲಿ ಚಾಂಪಿಯನ್ ಆಗಿದ್ದ ಕೆಕೆಆರ್ ತಂಡ, ಈ ವರ್ಷದ ಐಪಿಎಲ್‌ನಲ್ಲಿ ಎಂಟನೇ ಸ್ಥಾನದೊಡನೆ ನಿರಾಸೆ ಅನುಭವಿಸಿತ್ತು. ಈ ಹಿಂದೆ ಒಮ್ಮೆ ಮಾತ್ರ ತಂಡ ಇಷ್ಟೊಂದು ಕೆಳಗಿನ ಸ್ಥಾನಕ್ಕೆ ಇಳಿದಿತ್ತು.

ತುಳಸಿರಾಮ್ ನಿಧನ



ಬೆಂಗಳೂರು: ರಾಜ್ಯ ಫುಟ್ಬಾಲ್ ಮಾಜಿ ಆಟಗಾರ ತುಳಸಿ ರಾಮ್ (78) ಅವರು ನಗರದ ಫಿಲೊಮಿನಾ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಅವರು ಫುಟ್ಬಾಲ್ ಕ್ಲಬ್‌ಗಳಾದ ಬೆಂಗಳೂರು ಮಾರ್ಸ್, ಎಂಆರ್‌ಸಿ ವೆಲ್ಲಿಂಗ್ಟನ್ ಆರ್ಮಿ ಸರ್ವಿಸಸ್ ಹಾಗೂ ಎಚ್‌ಎಂಟಿ ಎಫ್‌ಸಿ ಬೆಂಗಳೂರು ತಂಡಗಳ ಪರ ಆಡಿದ್ದರು.

1970ರ ದಶಕದಲ್ಲಿ ಸರ್ವಿಸಸ್ ತಂಡವನ್ನು ಪ್ರತಿನಿಧಿಸಿದ್ದ ಅವರು, ಸಂತೋಷ್ ಟ್ರೋಫಿ, ಡುರಾಂಡ್ ಕಪ್ ಟೂರ್ನಿಗಳಲ್ಲೂ ಆಡಿದ್ದರು.

ಪುರುಷರ ಎರಡೂ ವಿಭಾಗಗಳಲ್ಲಿ ತೇರ್ಗಡೆಯಾದ ಬೆಂಗಳೂರಿನ ತಿಲಕ್ ಶೆಟ್ಟಿ

ಮುಖ್ಯ ಸುತ್ತಿಗೆ ಅದಿತಿ, ಸಹರ್ಷ್

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡದ ಅದಿತಿ ಆಚಾರ್ಯ ಇಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ಸೀನಿಯರ್ ಮತ್ತು 19 ವರ್ಷದೊಳಗಿನ ಮಹಿಳೆಯರ ವಿಭಾಗದ ಮುಖ್ಯ ಸುತ್ತು ಪ್ರವೇಶಿಸಿದರು.

ಬೆಂಗಳೂರಿನ ತಿಲಕ್ ಬಿ.ಶೆಟ್ಟಿ ಪುರುಷರ ಎರಡೂ ವಿಭಾಗಗಳ ಮುಖ್ಯ ಸುತ್ತು ತಲುಪಿದರು. ದಕ್ಷಿಣ ಕನ್ನಡದ ಸಹರ್ಷ್ ಪ್ರಭು ಸೀನಿಯರ್ ಪುರುಷರ ಮುಖ್ಯ ಸುತ್ತಿಗೆ ಲಗ್ಗೆ ಇಟ್ಟರು.

ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಸಂಸ್ಥೆ ನಗರದ ಉರ್ವ ಕ್ರೀಡಾ ಸಂಕೀರ್ಣದಲ್ಲಿ ಆಯೋಜಿಸಿರುವ ಟೂರ್ನಿಯ ಮಹಿಳೆಯರ ಸೀನಿಯರ್ ವಿಭಾಗದ ಅರ್ಹತಾ ಹಂತದ ಕೊನೆಯ ಸುತ್ತಿನಲ್ಲಿ ಅದಿತಿ, ಬೆಂಗಳೂರಿನ ಕೀರ್ತನಾ ವಿರುದ್ಧ 15-7, 15-11ರಲ್ಲಿ ಗೆದ್ದರು. 19 ವರ್ಷದೊಳಗಿನವರ ವಿಭಾಗದಲ್ಲಿ ಬೆಂಗಳೂರಿನ ಸನಿಹಾ ಎದುರು 21-6, 21-4ರಲ್ಲಿ ಜಯ ಸಾಧಿಸಿದರು. ಬುಧವಾರ ಸೀನಿಯರ್ ವಿಭಾಗದಲ್ಲಿ ನಯನಿಕಾ ವಿರುದ್ಧ ಮತ್ತು 19 ವರ್ಷದೊಳಗಿನವರ ವಿಭಾಗದಲ್ಲಿ 9ನೇ ಶ್ರೇಯಾಂಕಿತೆ ಅನನ್ಯಶ್ರೀ ವಿರುದ್ಧ ಅದಿತಿ ಕಣಕ್ಕೆ ಇಳಿಯುವರು.





ದಕ್ಷಿಣ ಕನ್ನಡದ ಅದಿತಿ ಆಚಾರ್ಯ (ಎಡ) ಸಹರ್ಷ್ ಪ್ರಭು

19 ವರ್ಷದೊಳಗಿನವರ ವಿಭಾಗದಲ್ಲಿ ಮುಖ್ಯ ಸುತ್ತು ಪ್ರವೇಶಿಸಿದ ಹಾರ್ದಿಕ್ ಮೊಹಾಂತಿ ಎದುರು ಅರ್ಹತಾ ಹಂತದ ನಾಲ್ಕನೇ ಸುತ್ತಿನಲ್ಲಿ ಗೆದ್ದು ಸಹರ್ಷ್ ಸೀನಿಯರ್ ವಿಭಾಗದ ಮುಖ್ಯ ಸುತ್ತು ಪ್ರವೇಶಿಸಿದರು.

ಅರ್ಹತಾ ಹಂತದ ಕೊನೆಯ ಸುತ್ತಿನ ಫಲಿತಾಂಶಗಳು: ಮೈಸೂರಿನ ವಿಶಾಲ್‌ಗೆ ಬೆಂಗಳೂರಿನ ಪ್ರಣವ್ ವಿರುದ್ಧ ಜಯ. ಬೆಂಗಳೂರಿನ ತಿಲಕ್ ಶೆಟ್ಟಿಗೆ ಅತೀಕ್ಷ್ ವಿರುದ್ಧ, ಬೆಂಗಳೂರಿನ ಶ್ಯಾಮ್ ಬಿಂಡಿಗನವಿಲೆಗೆ ಶಮಂತ್ ವಿರುದ್ಧ, ಮೈಸೂರಿನ ಭುವನ್‌ಗೆ ವರುಣ್ ವಿರುದ್ಧ, ಬೆಂಗಳೂರಿನ ರಾಘವೇಂದ್ರಗೆ ಕೌಶಿಕ್ ವಿರುದ್ಧ, ದಕ್ಷಿಣ ಕನ್ನಡದ ಸಹರ್ಷ್‌ಗೆ ಹಾರ್ದಿಕ್ ಮೊಹಾಂತಿ ವಿರುದ್ಧ, ಬೆಂಗಳೂರಿನ ಪ್ರತೀಶ್‌ಗೆ ಕೊಡಗಿನ ಜೈದ್ ವಿರುದ್ಧ ಗೆಲುವು.

19 ವರ್ಷದೊಳಗಿನವರು: ಬೆಂಗಳೂರಿನ ತಿಲಕ್‌ಗೆ ಇಂದ್ರಜ್ ವಿರುದ್ಧ, ಬೆಂಗಳೂರಿನ ಶಿವರಾಜ್‌ಗೆ ಅದಿತ್ ವಿರುದ್ಧ, ಬೆಂಗಳೂರಿನ ವರುಣ್‌ಗೆ ಕೌಶಿಕ್ ಬೆಂಗ್ರೆ ವಿರುದ್ಧ, ಬೆಳಗಾವಿಯ ಮಹಿಮ್‌ಗೆ ತೋಷನ್ ವಿರುದ್ಧ, ಬೆಂಗಳೂರಿನ ಸ್ವಯಂಗೆ ವಿಸ್ಮಯ್ ವಿರುದ್ಧ, ಬೆಂಗಳೂರಿನ ಹಾರ್ದಿಕ್‌ಗೆ ಫಾಲಕ್ಷಯ್ಯ ವಿರುದ್ಧ, ಬೆಂಗಳೂರಿನ ಶ್ರೇಯಸ್‌ಗೆ ಕರನ್ಯ್ ವಿರುದ್ಧ ಬೆಂಗಳೂರಿನ ನೀಲೇಶ್‌ಗೆ ನಿಕೇತನ್ ವಿರುದ್ಧ ಜಯ.

ಸೀನಿಯರ್ ಮಹಿಳೆಯರು: ಬೆಂಗಳೂರಿನ ಬನಶ್ರೀ ಪಾಟೀಲಗೆ ಖುಷಿ ವಿರುದ್ಧ, ಅದಿತಿಗೆ ಬೆಂಗಳೂರಿನ ಕೀರ್ತನಾ ವಿರುದ್ಧ, ಬೆಂಗಳೂರಿನ ಅನ್ವಿತಾಗೆ ವಿಭಾ ವಿರುದ್ಧ, ಬೆಂಗಳೂರಿನ ಗೀತಾಂಜಲಿಗೆ ಹೇಮಿತಾ ವಿರುದ್ಧ, ಬೆಂಗಳೂರಿನ ಪ್ರಾಪ್ತಿಗೆ ರೀನಾ ವಿರುದ್ಧ, ಬೆಂಗಳೂರಿನ ಕಲಂದಿಕಾಗೆ ಸನಿಹಾ ವಿರುದ್ಧ, ಬೆಂಗಳೂರಿನ ನಮಿತಾಗೆ ಬಿಂದುಶ್ರೀ ವಿರುದ್ಧ, ಬೆಂಗಳೂರು ಗ್ರಾಮಾಂತರದ ದೀಪ್ತಿಕಾಗೆ ಸಾನ್ವಿ ವಿರುದ್ಧ ಗೆಲುವು.

ಎಎಫ್‌ಸಿ ಮಹಿಳಾ ಏಷ್ಯಾ ಕಪ್ ಪ್ರಬಲ ಗುಂಪಿನಲ್ಲಿ ಭಾರತ ತಂಡ

ನವದೆಹಲಿ (ಪಿಟಿಐ): ಭಾರತ ತಂಡವು ಮುಂದಿನ ವರ್ಷ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಪ್ರತಿಷ್ಠಿತ ಎಎಫ್‌ಸಿ ಮಹಿಳಾ ಏಷ್ಯಾ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಬಲ ಜಪಾನ್, ಮಾಜಿ ಚಾಂಪಿಯನ್ನರಾದ ಚೀನಾ ತೈಪೆ ಮತ್ತು ವಿಯೆಟ್ನಾಂ ಜೊತೆ 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿದೆ.

ಈ ಚಾಂಪಿಯನ್‌ಷಿಪ್‌ಗೆ ಡ್ರಾ ಸಮಾರಂಭ ಮಂಗಳವಾರ ಸಿಡ್ನಿಯ ಟೌನ್‌ಹಾಲ್‌ನಲ್ಲಿ ನಡೆಯಿತು. 12 ತಂಡಗಳು ಆಡುವ ಈ ಚಾಂಪಿಯನ್‌ಷಿಪ್ ಮಾರ್ಚ್ 1 ರಿಂದ 21ರವರೆಗೆ ನಡೆಯಲಿದೆ. ಭಾರತ ತಂಡದ ಮಿಡ್‌ಫೀಲ್ಡರ್ ಸಂಗೀತಾ ಬಾಸ್ಫೋರೆ ಅವರು ಡ್ರಾ ಸಮಾರಂಭದಲ್ಲಿ ಹಾಜರಿದ್ದರು.

ತಂಡಗಳನ್ನು ತಲಾ ನಾಲ್ಕರಂತೆ ಮೂರು ಗುಂಪುಗಳಲ್ಲಿ ವಿಂಗಡಿಸಲಾಗಿದೆ. 'ಬ್ಲೂ ಟೈಗ್ರೆಸ್' ತಂಡ ಮಾ. 4ರಂದು ಪರ್ತ್‌ನಲ್ಲಿ ನಡೆಯುವ ತನ್ನ ಮೊದಲ ಪಂದ್ಯದಲ್ಲಿ ವಿಯೆಟ್ನಾಂ ತಂಡವನ್ನು ಎದುರಿಸಲಿದೆ. ನಂತರ 7ರಂದು ಅಲ್ಲಿಯೇ ಜಪಾನ್ ತಂಡವನ್ನು, 10ರಂದು ಸಿಡ್ನಿ ಕ್ರೀಡಾಂಗಣದಲ್ಲಿ ಚೀನಾ ತೈಪೆ ತಂಡವನ್ನು ಎದುರಿಸಲಿದೆ.

ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯುತ್ತವೆ. ಸೆಮಿಫೈನಲ್ ತಲುಪುವ ನಾಲ್ಕು ತಂಡಗಳು ಬ್ರೆಜಿಲ್‌ನಲ್ಲಿ 2027ರಲ್ಲಿ ನಡೆಯಲಿರುವ ಫಿಫಾ ಮಹಿಳಾ ವಿಶ್ವಕಪ್‌ನಲ್ಲಿ ಆಡುವ ಅರ್ಹತೆ ಪಡೆಯುತ್ತವೆ. ಜಪಾನ್ ಈಗ ಫಿಫಾ ರ್‍ಯಾಂಕಿಂಗ್‌ನಲ್ಲಿ 7ನೇ ಸ್ಥಾನ ಪಡೆದು ಏಷ್ಯಾದ ತಂಡಗಳಲ್ಲಿ ಪ್ರಬಲ ಎನಿಸಿದೆ.

ಐಸಿಸಿ ಮಹಿಳಾ ಏಕದಿನ ರ‍್ಯಾಂಕಿಂಗ್: ಶಿವರ್ ಬ್ರಂಟ್‌ಗೆ ಮೊದಲ ಸ್ಥಾನ



ನ್ಯಾಟ್ ಶಿವರ್

ದುಬೈ (ಪಿಟಿಐ): ಇಂಗ್ಲೆಂಡ್ ತಂಡದ ನಾಯಕಿ ನ್ಯಾಟ್ ಶಿವರ್ ಬ್ರಂಟ್ ಅವರು ಐಸಿಸಿ ಏಕದಿನ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ ಭಾರತದ ಸ್ಮೃತಿ ಮಂದಾನ ಅವರನ್ನು ಹಿಂದೆಹಾಕಿ ಅಗ್ರಸ್ಥಾನಕ್ಕೇರಿದ್ದಾರೆ.

ಬ್ರಂಟ್ ಅವರು ಭಾರತದ ಎದುರು ಈಚೆಗೆ ನಡೆದ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ 160 ರನ್ ಗಳಿಸಿ ಗಮನಾರ್ಹ ಪ್ರದರ್ಶನ ತೋರಿದ್ದರು. ಅದರಿಂದಾಗಿ 2023ರ ನಂತರ ಅಗ್ರಸ್ಥಾನಕ್ಕೆ ಮರಳಿದ್ದಾರೆ. ಇದೇ ಸರಣಿಯಲ್ಲಿ 115 ರನ್ ಗಳಿಸಿದ್ದ ಭಾರತದ ತಾರಾ ಬ್ಯಾಟರ್ ಮಂದಾನ ಅವರಿಗೆ ಒಂದು ಸ್ಥಾನ ನಷ್ಟವಾಗಿದೆ. ಬ್ರಂಟ್ 731 ಹಾಗೂ ಮಂದಾನ 728 ರೇಟಿಂಗ್ ಅಂಕಗಳನ್ನು ಹೊಂದಿದ್ದಾರೆ.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ 10 ಸ್ಥಾನಗಳಷ್ಟು ಜಿಗಿತ ಕಂಡು, 11ನೇ ಕ್ರಮಾಂಕದಲ್ಲಿದ್ದಾರೆ. ಮಧ್ಯಮ ಕ್ರಮಾಂಕದ ಆಟಗಾರ್ತಿ ಜೆಮಿಮಾ ರಾಡ್ರಿಗಸ್ 13ನೇ ಸ್ಥಾನದಲ್ಲಿದ್ದಾರೆ. ಬೌಲರ್‌ಗಳ ವಿಭಾಗದಲ್ಲಿ ಸ್ಪಿನ್ನರ್ ದೀಪ್ತಿ ಶರ್ಮಾ ಅವರು ನಾಲ್ಕನೇ ಕ್ರಮಾಂಕದಲ್ಲಿ ಮುಂದುವರಿದಿದ್ದಾರೆ.

ಮಕಾವು ಓಪನ್: ಅನ್ಮೋಲ್, ತಸ್ನಿಮ್ ಮುಖ್ಯಸುತ್ತಿಗೆ

ಸಾತ್ವಿಕ್–ಚಿರಾಗ್ ಜೋಡಿ ಶುಭಾರಂಭ

ಮಕಾವು (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಂಗಳವಾರ ಆರಂಭವಾದ ಮಕಾವು ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಸಾತ್ವಿಕ್–ಚಿರಾಗ್ ಜೋಡಿಯು 21-13, 21-15ರಲ್ಲಿ ನೇರ ಗೇಮ್‌ಗಳಿಂದ ಮಲೇಷಿಯಾದ ಲೋ ಹ್ಯಾಂಗ್ ಯಿ ಮತ್ತು ಎನ್‌ಜಿ ಇಂಗ್ ಚಿಯೋಂಗ್ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು.

ಉದಯೋನ್ಮುಖ ಆಟಗಾರ್ತಿಯರಾದ ಅನ್ಮೋಲ್ ಖಾರ್ಬ್ ಮತ್ತು ತಸ್ನಿಮ್ ಮಿರ್ ಅವರು ಮಹಿಳೆಯರ ಸಿಂಗಲ್ಸ್‌ನ ಅರ್ಹತಾ ಸುತ್ತಿನಲ್ಲಿ ಗೆಲುವು ಸಾಧಿಸಿ, ಮುಖ್ಯ ಸುತ್ತಿಗೆ ಮುನ್ನಡೆದರು.

ಅನ್ಮೋಲ್ 21-11, 21-13ರಿಂದ ಅಜರ್‌ಬೈಜಾನ್‌ನ ಕೀಶಾ ಫಾತಿಮಾ ಅಜ್ಜಾಹ್ರಾ ಅವರನ್ನು ಸೋಲಿಸಿದರೆ, ತಸ್ನಿಮ್ 21-14 13-21 21-17ರಿಂದ ಥಾಯ್ಲೆಂಡ್‌ನ ಟಿಡಾಪ್ರೊನ್ ಕ್ಲೀಬೈಸನ್ ಅವರನ್ನು ಮಣಿಸಿದರು. ಅನ್ಮೋಲ್ ಅವರಿಗೆ ಮುಂದಿನ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಬುಸಾನನ್ ಒಂಗ್ಬಮ್ರುಂಗ್ಫಾನ್ (ಥಾಯ್ಲೆಂಡ್) ಎದುರಾಳಿಯಾಗಿದ್ದಾರೆ. ತಸ್ನಿಮ್ ಅವರು ಅಗ್ರ ಶ್ರೇಯಾಂಕದ ಚೆನ್ ಯು ಫೀ (ಚೀನಾ) ವಿರುದ್ಧ ಸೆಣಸಾಡುವರು.

ಮಹಿಳಾ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕಿತ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಆರಂಭಿಕ ಸುತ್ತಿನಲ್ಲೇ ಆಘಾತ ಅನುಭವಿಸಿತು. ಭಾರತದ ಜೋಡಿಯು 21-16, 20-22, 15-21ರಿಂದ ಚೀನಾ ತೈಪೆಯ ಲಿನ್ ಕ್ಸಿಯಾವೊ ಮಿನ್ ಮತ್ತು ಪೆಂಗ್ ಯು ವೀ ಅವರಿಗೆ ಮಣಿಯಿತು.



ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಪಿಟಿಐ ಸಂಗ್ರಹ ಚಿತ್ರ

ಬಿಡಬ್ಲ್ಯುಎಫ್ ರ‍್ಯಾಂಕಿಂಗ್: ಉನ್ನತಿ, ಲಕ್ಷ್ಯ ಸೇನ್‌ಗೆ ಬಡ್ತಿ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ, ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿಯು ಬಿಡಬ್ಲ್ಯುಎಫ್ ಪುರುಷರ ಡಬಲ್ಸ್ ರ‍್ಯಾಂಕಿಂಗ್‌ನಲ್ಲಿ ಅಗ್ರ 10ರೊಳಗೆ ಮರಳಿದ್ದಾರೆ.

ಕಳೆದ ವಾರ ನಡೆದ ಚೀನಾ ಓಪನ್ ಸೂಪರ್ 1000 ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದ ಈ ಜೋಡಿಯು, ಮೂರು ಸ್ಥಾನಗಳಷ್ಟು ಏರಿಕೆ ಕಂಡು 10ನೇ ಸ್ಥಾನದಲ್ಲಿದೆ

ವಿಶ್ವದ ಮಾಜಿ ಅಗ್ರಮಾನ್ಯ ಜೋಡಿಯಾಗಿರುವ ಸಾತ್ವಿಕ್–ಚಿರಾಗ್, ಈ ಋತುವಿನಲ್ಲಿ ಬಿಡಬ್ಲ್ಯುಎಫ್ ಟೂರ್ ಮಟ್ಟದ ನಾಲ್ಕು ಟೂರ್ನಿಗಳಲ್ಲಿ ಸೆಮಿಫೈನಲ್ ತಲುಪಿದ್ದಾರೆ.



ಉನ್ನತಿ ಹೂಡಾ

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಅಗ್ರಮಾನ್ಯ ಆಟಗಾರ ಲಕ್ಷ್ಯ ಸೇನ್ ಅವರು ಎರಡು ಸ್ಥಾನ ಬಡ್ತಿ ಪಡೆದಿದ್ದು, 17ನೇ ಕ್ರಮಾಂಕದಲ್ಲಿದ್ದಾರೆ. ಎಚ್.ಎಸ್. ಪ್ರಣಯ್ ಅವರಿಗೆ 33ನೇ ಸ್ಥಾನ ದೊರೆತಿದೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ 17 ವರ್ಷ ವಯಸ್ಸಿನ ಉನ್ನತಿ ಹೂಡಾ ಜೀವನಶ್ರೇಷ್ಠ 31ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಉನ್ನತಿ ಅವರು, ಚೀನಾ ಓಪನ್ ಟೂರ್ನಿಯ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪಿ.ವಿ. ಸಿಂಧು ಅವರನ್ನು ಮಣಿಸಿ ಗಮನ ಸೆಳೆದಿದ್ದರು. ಸಿಂಧು ಅವರು 15ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.


ವಿಶ್ವ ಈಜು ಚಾಂಪಿಯನ್‌ಷಿಪ್: ಎರಡನೇ ಪದಕ ಗೆದ್ದ ಅಮೆರಿಕದ ಸ್ಪರ್ಧಿ

ಈಜುತಾರೆ ಲೆಡೆಕಿಗೆ 22ನೇ ವಿಶ್ವ ಪ್ರಶಸ್ತಿ

ಸಿಂಗಪುರ (ಎಎಫ್‌ಪಿ): ಅಮೆರಿಕದ ಈಜುತಾರೆ ಕೇಟಿ ಲೆಡೆಕಿ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನಕ್ಕೆ ಕೊರಳೊಡ್ಡುವ ಜೊತೆಗೆ ತಮ್ಮ ವೃತ್ತಿಜೀವನದ 22ನೇ ವಿಶ್ವ ಪ್ರಶಸ್ತಿಯನ್ನು ಗೆದ್ದರು. ಈ ಮೂಲಕ ಸ್ವದೇಶದ ದಂತಕಥೆ ಮೈಕೆಲ್ ಫೆಲ್ಪ್ಸ್ ಅವರ ವಿಶ್ವದಾಖಲೆಗೆ ಹತ್ತಿರವಾದರು.

28 ವರ್ಷದ ಲೆಡೆಕಿ ಮಂಗಳವಾರ ನಡೆದ ಮಹಿಳೆಯರ 1,500 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 15 ನಿಮಿಷ 26.44 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ತನ್ನದೇ ಹೆಸರಿನಲ್ಲಿರುವ ವಿಶ್ವದಾಖಲೆಗೆ (15:20.48) ಕೇವಲ ಆರು ಸೆಕೆಂಡ್ ದೂರದಲ್ಲಿದ್ದರು.

ಮಾಜಿ ಈಜುತಾರೆ ಮೈಕೆಲ್ ಫೆಲ್ಪ್ಸ್ ಅವರು ವಿಶ್ವಮಟ್ಟದ ಸ್ಪರ್ಧೆಯಲ್ಲಿ ಒಟ್ಟು 26 ಚಿನ್ನದ ಪದಕ ಗೆದ್ದಿದ್ದಾರೆ. ಆ ದಾಖಲೆ ಮುರಿಯಲು ಲೆಡೆಕಿ ಅವರಿಗೆ ಇನ್ನು ಐದು ಸ್ವರ್ಣ ಬೇಕಿದೆ. ಒಲಿಂಪಿಕ್ಸ್‌ನಲ್ಲಿ ದಾಖಲೆಯ ಒಂಬತ್ತು ಚಿನ್ನವನ್ನು ಲೆಡೆಕಿ ಗೆದ್ದಿದ್ದಾರೆ.



ಚಿನ್ನ ಗೆದ್ದ ಕೇಟಿ ಲೆಡೆಕಿ ಎಎಫ್‌ಪಿ ಚಿತ್ರ

ವಿಶ್ವಮಟ್ಟದ 1,500 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಆರನೇ ಬಾರಿ ಲೆಡೆಕಿ ಚಿನ್ನಕ್ಕೆ ಮುತ್ತಿಕ್ಕಿದರು. ಇಟಲಿಯ ಸಿಮೋನಾ ಕ್ವಾಡರೆಲ್ಲಾ (15:31.79) ಬೆಳ್ಳಿ ಮತ್ತು ಮತ್ತು ಆಸ್ಟ್ರೇಲಿಯಾದ ಲ್ಯಾನಿ ಪಲ್ಲಿಸ್ಟರ್ (15:41.18) ಕಂಚು ಗೆದ್ದರು.

ಈ ಕೂಟದಲ್ಲಿ ಲೆಡೆಕಿಗೆ ಇದು ಎರಡನೇ ಪದಕವಾಗಿದೆ. ಭಾನುವಾರ ನಡೆದ 400 ಮೀಟರ್ ಫ್ರೀಸ್ಟೈಲ್‌ನಲ್ಲಿ ಅವರು ಕಂಚಿನ ಪದಕ ಗೆದ್ದಿದ್ದರು. ಕೆನಡಾದ ತಾರೆ ಸಮ್ಮರ್ ಮೆಕಿಂಟೋಷ್ ಚಿನ್ನದ ಸಾಧನೆ ಮೆರೆದಿದ್ದರು. 800 ಮೀಟರ್ ಫ್ರೀಸ್ಟೈಲ್‌ನಲ್ಲಿ ಮತ್ತೊಮ್ಮೆ ಲೆಡೆಕಿ ಮತ್ತು ಮೆಕಿಂಟೋಷ್ ಮುಖಾಮುಖಿ ಆಗಲಿದ್ದಾರೆ.

ಡೇವಿಡ್‌ಗೆ ಚಿನ್ನ: ಒಲಿಂಪಿಕ್ ಚಾಂಪಿಯನ್ ಡೇವಿಡ್ ಪೊಪೊವಿಸಿ ಅವರು ಪುರುಷರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ರುಮೇನಿಯಾದ 20 ವರ್ಷದ ತಾರೆ 1 ನಿಮಿಷ 43.53 ಸೆಕೆಂಡ್‌ಗಳಲ್ಲಿ ದಡ ಸೇರಿದರು. ಅವರಿಗೆ ಪ್ರಬಲ ಎದುರಾಳಿಯಾಗಿದ್ದ ಅಮೆರಿಕದ ಲ್ಯೂಕ್ ಹಾಬ್ಸನ್ (1:43.84) ಬೆಳ್ಳಿ ಗೆದ್ದರು. ಜಪಾನ್‌ನ 18 ವರ್ಷದ ತತ್ಸುಯಾ ಮುರಾಸಾ (1:44.54) ಕಂಚು ತಮ್ಮದಾಗಿಸಿಕೊಂಡರು.

ಆಸ್ಟ್ರೇಲಿಯಾದ ಕೈಲಿ ಮೆಕ್‌ಕೌನ್, ಮಹಿಳೆಯರ 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನದ ಸಾಧನೆ ಮಾಡಿದರು. ಅವರು ಕೇವಲ 0.03 ಸೆಕೆಂಡ್ ಅಂತರದಲ್ಲಿ ವಿಶ್ವದಾಖಲೆ ಅವಕಾಶ ತಪ್ಪಿಸಿಕೊಂಡರು.

24 ವರ್ಷದ ಮೆಕ್‌ಕೌನ್ ಅವರು 57.16 ಸೆಕೆಂಡುಗಳಲ್ಲಿ ಗುರಿ ತಲುಪಿ, ಚಾಂಪಿಯನ್‌ಷಿಪ್ ದಾಖಲೆ ಬರೆದರು. ವಿಶ್ವದಾಖಲೆ ಹೊಂದಿರುವ ಅಮೆರಿಕದ ರೇಗನ್ ಸ್ಮಿತ್ (57.35) ಮತ್ತು ಕ್ಯಾಥರೀನ್ ಬರ್ಕಾಫ್ (58.15) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಮಹಿಳೆಯರ 100 ಮೀಟರ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಜರ್ಮನಿಯ ಅನ್ನಾ ಎಲೆಂಡ್ಟ್ 1 ನಿಮಿಷ 05.19 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ, ಚಾಂಪಿಯನ್ ಆದರು. ಅಮೆರಿಕದ ಕೇಟ್ ಡಗ್ಲಾಸ್ (1:05.27) ಬೆಳ್ಳಿ ಮತ್ತು ಚೀನಾದ ಟ್ಯಾಂಗ್ ಕ್ವಿಯಾಂಟಿಂಗ್ (1:05.64) ಕಂಚು ಜಯಿಸಿದರು.

ದಕ್ಷಿಣ ಆಫ್ರಿಕಾದ ಪೀಟರ್ ಕೋಟ್ಸೆ (51.85ಸೆ) ಅವರು ಪುರುಷರ 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನದ ಸಾಧನೆ ಮೆರೆದರು.

ಭಾರತದ ಈಜುಪಟುಗಳಿಗೆ ನಿರಾಸೆ

ಸಿಂಗಪುರ (ಪಿಟಿಐ): ಭಾರತದ ಈಜುಪಟುಗಳು ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ಸತತ ಮೂರನೇ ದಿನವೂ ನಿರಾಸೆ ಮೂಡಿಸಿದರು. ಈತನಕ ಯಾರಿಗೂ ಹೀಟ್ಸ್ ಹಂತ ದಾಟಲು ಸಾಧ್ಯವಾಗಿಲ್ಲ.

ಭರವಸೆ ಮೂಡಿಸಿದ್ದ ಸಜನ್ ಪ್ರಕಾಶ್ 200 ಮೀಟರ್ ಬಟರ್‌ಫ್ಲೈ ಹೀಟ್ಸ್‌ನಲ್ಲಿ ಒಟ್ಟಾರೆ 24ನೇ ಸ್ಥಾನ ಗಳಿಸಿದರು. ಅಗ್ರ 16 ಸ್ಥಾನ ಪಡೆದವರು ಸೆಮಿಫೈನಲ್‌ಗೆ ಮುನ್ನಡೆದರು.

ಟೋಕಿಯೊ ಕೂಟಕ್ಕೆ ನೇರ ಒಲಿಂಪಿಕ್ ಅರ್ಹತೆ ಗಳಿಸಿದ ಭಾರತದ ಮೊದಲ ಈಜುಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ 31 ವರ್ಷದ ಸಜನ್ ಅವರು 1 ನಿಮಿಷ 59.33 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಆರ್ಯನ್ ನೆಹ್ರಾ, ಪುರುಷರ 800 ಮೀಟರ್ ಫ್ರೀಸ್ಟೈಲ್‌ನ ಹೀಟ್ಸ್‌ನಲ್ಲಿ 8 ನಿಮಿಷ 21.30 ಸೆಕೆಂಡುಗಳಲ್ಲಿ ಗುರಿ ಮುಟ್ಟಿ 23ನೇ ಸ್ಥಾನ ಪಡೆದರು. ಇಲ್ಲಿ ಅಗ್ರ ಎಂಟು ಮಂದಿ ಫೈನಲ್‌ಗೆ ಮುನ್ನಡೆದರು. ಪುರುಷರ 50 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಎಸ್.ಪಿ. ಲಿಖಿತ್ (28.45ಸೆ) 50ನೇ ಸ್ಥಾನ ಗಳಿಸಿದರು.

ಅನೀಶ್ವರ್ ಗೌತಮ್ ದ್ವಿಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನೀಶ್ವರ್ ಗೌತಮ್ (200;131ಎ, 4x31, 6x7) ಅವರ ಅಮೋಘ ದ್ವಿಶತಕದ ನೆರವಿನಿಂದ ಬೆಂಗಳೂರು ಸಿಟಿ ಇಲೆವೆನ್ ತಂಡವು ಶ್ರೀನಿವಾಸನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ 23 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳೂರು ವಲಯ ತಂಡದ ವಿರುದ್ಧ ಪ್ರಾಬಲ್ಯ ಸಾಧಿಸಿತು.

ಐಎಎಫ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲ ಇನಿಂಗ್ಸ್‌ನಲ್ಲಿ 42 ರನ್‌ಗಳ ಮುನ್ನಡೆ ಪಡೆದ ಬೆಂಗಳೂರು ತಂಡವು ಅನೀಶ್ವರ್ ಅವರ ಬ್ಯಾಟಿಂಗ್ ಬಲದಿಂದ ಎರಡನೇ ಇನಿಂಗ್ಸ್‌ನಲ್ಲಿ ಮೂರು ವಿಕೆಟ್‌ಗೆ 268 ರನ್ ಗಳಿಸಿತು. ಪಂದ್ಯ ಡ್ರಾನಲ್ಲಿ ಮುಕ್ತಾಯವಾಯಿತು. ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಬೆಂಗಳೂರು ತಂಡ ಮೂರು ಅಂಕ ಮತ್ತು ಮಂಗಳೂರು ತಂಡ 1 ಅಂಕ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಐಎಎಫ್ ಕ್ರೀಡಾಂಗಣ: ಮೊದಲ ಇನಿಂಗ್ಸ್: ಬೆಂಗಳೂರು ಸಿಟಿ ಇಲೆವೆನ್: 57.1 ಓವರ್‌ಗಳಲ್ಲಿ 218. ಮಂಗಳೂರು ವಲಯ: 51.3 ಓವರ್‌ಗಳಲ್ಲಿ 176. ಎರಡನೇ ಇನಿಂಗ್ಸ್: ಬೆಂಗಳೂರು ಸಿಟಿ ಇಲೆವೆನ್: 48 ಓವರ್‌ಗಳಲ್ಲಿ 3 ವಿಕೆಟ್‌ಗೆ 268 (ಅನೀಶ್ವರ್ ಗೌರಮ್ 200). ಫಲಿತಾಂಶ: ಪಂದ್ಯ ಡ್ರಾ.

ಆಲೂರು ಕ್ರೀಡಾಂಗಣ: ಮೊದಲ ಇನಿಂಗ್ಸ್: ಅಧ್ಯಕ್ಷರ ಇಲೆವೆನ್: 90 ಓವರ್‌ಗಳಲ್ಲಿ 4 ವಿಕೆಟ್‌ಗೆ 408 (ಸಂಜಯ್ ಅಶ್ವಿನ್ ಔಟಾಗದೇ 122, ಅರ್ಣವ್ ಭಾರದ್ವಾಜ್ ಔಟಾಗದೇ 95). ತುಮಕೂರು ವಲಯ: 49.5 ಓವರ್‌ಗಳಲ್ಲಿ 86. ಎರಡನೇ ಇನಿಂಗ್ಸ್: ಅಧ್ಯಕ್ಷರ ಇಲೆವೆನ್: 10 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 58. ಫಲಿತಾಂಶ: ಪಂದ್ಯ ಡ್ರಾ.

ಚಿನ್ನಸ್ವಾಮಿ ಕ್ರೀಡಾಂಗಣ: ಮೊದಲ ಇನಿಂಗ್ಸ್: ಮೈಸೂರು ವಲಯ: 51 ಓವರ್‌ಗಳಲ್ಲಿ 189. ಶಿವಮೊಗ್ಗ ವಲಯ: 63.2 ಓವರ್‌ಗಳಲ್ಲಿ 173. ಎರಡನೇ ಇನಿಂಗ್ಸ್: ಮೈಸೂರು ವಲಯ: 39 ಓವರ್‌ಗಳಲ್ಲಿ 2 ವಿಕೆಟ್‌ಗೆ 180. ಫಲಿತಾಂಶ: ಪಂದ್ಯ ಡ್ರಾ

ಆಲೂರು ಕ್ರೀಡಾಂಗಣ: ಮೊದಲ ಇನಿಂಗ್ಸ್: ಧಾರವಾಡ ವಲಯ: 88 ಓವರ್‌ಗಳಲ್ಲಿ 357 (ರಾಜೇಂದ್ರ ಡಿ. 106). ಬೆಂಗಳೂರು ವಲಯ: 89.4 ಓವರ್‌ಗಳಲ್ಲಿ 463 (ವಿಶಾಲ್ ಓನತ್ 203, ವರ್ಷಿಲ್ 113). ಫಲಿತಾಂಶ: ಪಂದ್ಯ ಡ್ರಾ



ಅನೀಶ್ವರ್ ಗೌತಮ್